"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ: 21ನೇ ಫೆಬ್ರವರಿ 2018
ಬುಧವಾರ.

## ವಿಷಯಾನುಕ್ರಮಣಿಕೆ


1. **ಪ್ರಶ್ನೋತ್ತರಗಳು**

**(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು.**

520– ಬಂಡೀಪುರ ಮತ್ತು ನಾಗರಹೊಳೆ ಅರಣ್ಯ ಸಂರಕ್ಷಣೆಯ ಬಗ್ಗೆ – –ಶ್ರೀ ಕೆ.ಟಿ.ಶ್ರೀಕಂಠೇಗೌಡ

869 – ಒಳಾಂಗಣ ಕ್ರೀಡಾಂಗಣದ ಪರಿಸ್ಥಿತಿ ಹದಗೆಟ್ಟಿರುವ ಬಗ್ಗೆ – – ಶ್ರೀ ಎಂ.ನಾರಾಯಣ ಸ್ವಾಮಿ

521 – ಕೆರೆಗಳ ಅಭಿವೃದ್ಧಿ ಬಗ್ಗೆ –ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ

833 – ಅತಿವೃಷ್ಟಿ ಹಾಗೂ ಅನಾವೃಷ್ಟಿಯ ನಿರ್ವಹಣೆಗೆ ಕೇಂದ್ರ ಸರ್ಕಾರದ ಅನುದಾನದ ಬಗ್ಗೆ– ಶ್ರೀ ಬಿ.ಜೆ.ಪುಟ್ಟಸ್ವಾಮಿ

895 – ಪಶ್ಚಿಮ ವಾಹಿನಿ ಯೋಜನೆಯ ಬಗ್ಗೆ –ಶ್ರೀ ಐವನ್ ಡಿ'ಸೋಜಾ

903 – ಕಲಬುರ್ಗಿಯಲ್ಲಿ ' ಕರ್ನಾಟಕ ಜರ್ಮನ್ ಟೆಕ್ನಿಕಲ್ ಟ್ರೈನಿಂಗ್ ಇನ್ಸ್‌ಟಿಟ್ಯೂಟ್' ಸ್ಥಾಪಿಸುವ ಬಗ್ಗೆ– ಶ್ರೀ ಅಮರನಾಥ್ ಪಾಟೀಲ್

844 – ಕಾವೇರಿ ನೀರಾವರಿ ನಿಗಮ ಕುರಿತು–ಶ್ರೀ ರಮೇಶ್ ಬಾಬು

838 – ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಬೆಣ್ಣೆತೊರೆ ನೀರಾವರಿ ಯೋಜನೆಯ ಬಗ್ಗೆ – ಶ್ರೀ ಜಿ.ಜಿ.ಪಾಟೀಲ್

843 – ಸಾಮಾಜಿಕ ಪರಿಣಾಮ ನಿರ್ಧರಣೆಯ ಬಗ್ಗೆ – ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ

835– ಕೊಟಬಾಗಿ ಏತ ನೀರಾವರಿ ಯೋಜನೆ ಬಗ್ಗೆ –ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ

882 – ಹಾವೇರಿ ಜಿಲ್ಲೆ ಸವಣೂರು ತಾಲ್ಲೂಕು ತಹಶೀಲ್ದಾರರ ಕಾರ್ಯಾಲಯದ ಬಗ್ಗೆ –ಶ್ರೀ ಸೋಮಣ್ಣ ಮ.ಬೇವಿನಮರದ

125 – ಕಾರ್ಮಿಕ ಬಂಧು " ಸ್ವಯಂ ಸೇವಕರ" ನ್ನು ನೇಮಕ ಮಾಡಿಕೊಳ್ಳುವ ಬಗ್ಗೆ –ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ

96– ಖಾಸಗಿ ವಲಯದ ಉದ್ದಿಮೆಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ಬಗ್ಗೆ –ಕ್ಯಾಪ್ಟನ್ ಗಣೇಶ್ ಕಾರ್ಣಿಕ್

**(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**


"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**2. ಸಭಾಪತಿಯವರ ಅನುಮತಿ ಮೇರೆಗೆ ಚರ್ಚಿಸಲ್ಪಟ್ಟ ವಿಷಯಗಳು**

ಅ) ವಸತಿ ಶಾಲೆ ಪ್ರವೇಶ ಪರೀಕ್ಷೆಗೆ ಹೈಕೋರ್ಟ್ ತಡೆ ನೀಡಿರುವ ಬಗ್ಗೆ
- ಶ್ರೀ ಡಿ.ಎಸ್. ವೀರಯ್ಯ
- ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು)

ಆ) ಶೌಚಗುಂಡಿ ಮತ್ತು ತ್ಯಾಜ್ಯ ಸಂಗ್ರಹ ಟ್ಯಾಂಕ್ ಸ್ವಚ್ಛಗೊಳಿಸುವಾಗ ಕಾರ್ಮಿಕರು ಸಾವಿಗೀಡಾಗುತ್ತಿರುವ ಬಗ್ಗೆ
- ಡಾ॥ ಜಯಮಾಲ ರಾಮಚಂದ್ರ
- ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು)

ಇ) ವಿಜಯಪುರ ಮಹಾನಗರ ಪಾಲಿಕೆಯ ದೀರ್ಘಾವಧಿ ಲೀಜ್ ಆಸ್ತಿಗಳನ್ನು ಗುತ್ತಿಗೆ ಹಾಕುವಲ್ಲಿ ವಿಳಂಬ ನೀತಿ ಆಗುತ್ತಿರುವ ಬಗ್ಗೆ
- ಶ್ರೀ ಬಸನಗೌಡ ರಾ. ಪಾಟೀಲ್ (ಯತ್ನಾಳ್)
- ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು)

ಈ) ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗದ ಅರ್ಹತೆಯುಳ್ಳ ಪದವಿ ಪೂರ್ವ ಕಾಲೇಜು ಉಪನ್ಯಾಸಕರುಗಳು ಬಡ್ತಿ ಇಲ್ಲದೇ ನಿವೃತ್ತರಾಗುತ್ತಿರುವ ಬಗ್ಗೆ.
- ಶ್ರೀ ಕೆ.ಟಿ. ಶ್ರೀಕಂಠೇಗೌಡ
- ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)

**3. ಸಭಾಪತಿಯವರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರುಗಳಿಂದ ಉತ್ತರ.**

**ಅ)** ರಾಜ್ಯದ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹುದ್ದೆ ನೇಮಕಾತಿ ಪ್ರಕ್ರಿಯೆಯಲ್ಲಿ ವಿಳಂಬವಾಗಿರುವ ಬಗ್ಗೆ.
- ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು)

ಆ) ಪದವಿ ಪೂರ್ವ ಕಾಲೇಜಿನ ಸಿಬ್ಬಂದಿಗಳಿಗೆ ಬೇಸಿಗೆ ರಜೆ 15 ದಿನ ರಜೆ ಕಡಿತ, ಮೇ 15 ರಿಂದಲೇ ತರಗತಿ ಆರಂಭ ವಿಷಯದ ಬಗ್ಗೆ
- ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು)

ಇ) ಮಾನ್ಯ ಸದಸ್ಯರುಗಳ ಎರಡನೆ ಪಿ.ಎ. ಗಳಿಗೆ ವೇತನ ಬಿಡುಗಡೆ ಮಾಡುವ ಬಗ್ಗೆ
- ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು)

4. ವರದಿಯನ್ನೊಪ್ಪಿಸುವುದು.

5. ವಿತ್ತೀಯ ಕಾರ್ಯಕಲಾಪ

**2017-18ನೇ ಸಾಲಿನ ಪೂರಕ ಅಂದಾಜುಗಳ (ಮೂರನೇ ಕಂತು) ಮಂಡನೆ**

**6. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ 2017
- ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)
- ಶ್ರೀ ರಾಮಚಂದ್ರ ಗೌಡ
- ಶ್ರೀ ಶರಣಪ್ಪ ಮಟ್ಟೂರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

– ಶ್ರೀ ಕೆ.ಟಿ. ಶ್ರೀಕಂಠೇಗೌಡ
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್
– ಶ್ರೀ ಕೆ.ಬಿ. ಶಾಣಪ್ಪ
– ಶ್ರೀ ಪುಟ್ಟಣ್ಣ
– ಶ್ರೀ ಅಪ್ಪಾಜಿ ಗೌಡ
– ಶ್ರೀ ಎಸ್.ವಿ. ಸಂಕನೂರ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**7. ಪ್ರಕಟಣೆ**

ಅ) ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿ
ಆ) ವಿಧಾನ ಸಭೆಯಿಂದ ಅಂಗೀಕೃತವಾಗಿ ಬಂದಂತಹ ವಿಧೇಯಕಗಳ ಮಂಡನೆ
ಇ)ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಾವಳಿಗಳ ನಿಯಮಗಳಿಗೆ ಮಧ್ಯಂತರ ವರದಿಯಲ್ಲಿ ಸಮಿತಿಯು ಮಾಡಿರುವ ತಿದ್ದುಪಡಿಗಳ ಬಗ್ಗೆ

– ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)
– ಶ್ರೀ ಶರಣಪ್ಪ ಮಟ್ಟೂರ
– ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ

**8. ನಿಯಮ 330ರ ಮೇರೆಗೆ ನಡೆದ ಚರ್ಚೆ**

**ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಸಹಾಯಕ ಉಪನ್ಯಾಸಕರ ಹುದ್ದೆಗಳ ನೇಮಕಾತಿಯಲ್ಲಿ ಆಗಿರುವ ಅನ್ಯಾಯದ ಬಗ್ಗೆ –**

– ಶ್ರೀ ಪುಟ್ಟಣ್ಣ
– ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು)
– ಕ್ಯಾಪ್ಟನ್ ಗಣೇಶ್ ಕಾರ್ಣಿಕ್
– ಶ್ರೀ ಕೆ.ಟಿ. ಶ್ರೀಕಂಠೇಗೌಡ

9. ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾರ್ಪಣಾ ಪ್ರಸ್ತಾವದ ಬಗ್ಗೆ ಮುಂದುವರೆದ ಚರ್ಚೆ

– ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)

10. ಪ್ರಕಟಣೆ

ವಿಧಾನ ಸಭೆಯಿಂದ ಅಂಗೀಕೃತವಾಗಿ ಬಂದಂತಹ ವಿಧೇಯಕಗಳ ಮಂಡನೆ

– – – –

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

159/21-2-2018/ಡಿಎಸ್-ಎಂಡಿ/11.20

**ಕರ್ನಾಟಕ ವಿಧಾನ ಪರಿಷತ್ತು**

***ಬುಧವಾರ, 21ನೇ ಫೆಬ್ರವರಿ 2018***

***ಸದನವು ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ***

***ಬೆಳಗ್ಗೆ 11 ಗಂಟೆ 22 ನಿಮಿಷಕ್ಕೆ ಸಮಾವೇಶಗೊಂಡಿತು.***

***ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು***

***ಪೀಠದಲ್ಲಿ ಉಪಸ್ಥಿತರಿದ್ದರು.***

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**01 ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು**

**ಪ್ರಶ್ನೆ ಸಂಖ್ಯೆ:516**

**ಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ, ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಕಾಲಾವಕಾಶವನ್ನು ಕೇಳಿದ್ದಾರೆ. ಕಾಲಾವಕಾಶವನ್ನು ಏಕೆ ಕೇಳಿದ್ದಾರೆ ಎಂಬುದನ್ನು ಮಾನ್ಯ ಸಚಿವರು ಹೇಳುತ್ತಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಸಂಬಂಧಪಟ್ಟಂಥ ವಿವರಗಳನ್ನು ತರಿಸುವುದಕ್ಕೆ ಬರೆದಿದ್ದೇವೆ. ಕೆಲವು ಕಡೆಯಿಂದ ಬಂದಿದೆ, ಕೆಲವು ಕಡೆಯಿಂದ ಬಂದಿಲ್ಲ. ನಾವು ಕಳೆದ ಎಂಟು ದಿವಸಗಳಿಂದ ಬಹಳ ಪ್ರಯತ್ನ ಮಾಡುತ್ತಿದ್ದೇವೆ. ಅಗತ್ಯವಿರುವ ಎಲ್ಲಾ ಮಾಹಿತಿಗಳು ಬರದಿರುವುದರಿಂದ ಕಾಲಾವಕಾಶವನ್ನು ಕೇಳಿದ್ದೇವೆ.

**ಸಭಾಪತಿಯವರು:-** ತಾವು ಸಮಯವನ್ನು ಕೇಳಿದ್ದೀರಿ. ಸಮಯ ತೆಗೆದುಕೊಂಡು ಉತ್ತರಗಳನ್ನು ಸಂಗ್ರಹ ಮಾಡಿ ಗೌರವಾನ್ವಿತ ಸದಸ್ಯರಿಗೆ ಕಳುಹಿಸಿಕೊಡಬೇಕು. I cannot force the Minister to reply now.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಬಗ್ಗೆ ನನಗೆ ಅತ್ಯಂತ ಗೌರವವಿದೆ. ಆದರೆ ನನಗೆ ಅರ್ಥವಾಗುವುದಿಲ್ಲ. ನಾನು ಏನು ಕೇಳುತ್ತಿಲ್ಲ. ರಾಜ್ಯದಲ್ಲಿ ಎಷ್ಟು

ಸ್ಮಶಾನಗಳಿವೆ; ರಾಜ್ಯದಲ್ಲಿ ಸ್ಮಶಾನಗಳು ಇಲ್ಲದಿರುವ ಕಡೆ ಏನು ಮಾಡಿದ್ದೀರಿ ಎಂದು ನಾನು ಪ್ರಶ್ನೆ ಕೇಳಿದ್ದೇನೆ, ಅಷ್ಟೇ.

**Mr.CHAIRMAN:-** I cannot force the Minister to answer without the answer book on his table.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಾವೀಗ 21ನೇ ಶತಮಾನದಲ್ಲಿದ್ದೇವೆ. ನಾನೇನಾದರೂ ದೊಡ್ಡ ಪ್ರಶ್ನೆಯನ್ನು ಕೇಳಿಲ್ಲ. ಸ್ಮಶಾನಗಳು ಎಷ್ಟಿವೆ, ಏನು ವೆಚ್ಚ ಮಾಡಿದ್ದೀರಿ ಎಂದು ಪ್ರಶ್ನೆ ಕೇಳಿದ್ದೇನೆ.

**ಸಭಾಪತಿಯವರು:-** ನಾನು ಗೌರವಾನ್ವಿತ ಸಚಿವರಿಗೆ ಹೇಳುತ್ತಿದ್ದೇನೆ, ಆದಷ್ಟು ಬೇಗ ಮಾಹಿತಿ ಸಂಗ್ರಹ ಮಾಡಿ ಮಾನ್ಯ ಸದಸ್ಯರಿಗೆ ಕಳುಹಿಸಿಕೊಡಬೇಕು.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ನಾವು ಆ ಕೆಲಸವನ್ನೇ ಮಾಡುತ್ತೇವೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ನಾನು ಸಲಹೆ ಕೊಡುವುದೇನೆಂದರೆ, ಪ್ರಶ್ನೆಗಳಿಗೆ 10 ದಿವಸ ಮುಂಚಿತವಾಗಿ ನೋಟಿಸ್ ಕೊಡಬೇಕೆಂದು ನಿಯಮಾವಳಿಗಳಲ್ಲಿ ಇದೆ. 10 ದಿವಸಗಳಲ್ಲಿ ಉತ್ತರ ಕೊಡದಿದ್ದರೆ ಯಾವುದೇ ಇಲಾಖೆ ಇರಲಿ ಆ ಇಲಾಖೆಯ ಮೇಲೆ ಕ್ರಮ ಜರುಗಿಸಬೇಕು. ಒಂದೆರಡು ಇಲಾಖೆಗಳ ಮೇಲೆ ಕ್ರಮ ಜರುಗಿಸಿದರೆ ಈ ರೀತಿ ಆಗುವುದಿಲ್ಲ. ಏಕೆಂದರೆ ಆಡಳಿತ ಪಕ್ಷ ಇರಲಿ, ವಿರೋಧ ಪಕ್ಷ ಇರಲಿ, ಮಾಹಿತಿಗಳನ್ನು ಕೇಳತಕ್ಕಂಥದ್ದು ನಮ್ಮ ಹಕ್ಕು. ಬೇಕಾದರೆ ಒಂದು ತಿಂಗಳು ಮುಂಚೆಯೇ ನೋಟಿಸ್ ಕೊಡುತ್ತೇವೆ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಕೊಡಬೇಕೆಂದು compulsion ಮಾಡಬೇಕು. You have to add it in the Rules and Procedure, so that they must give answer.

**ಸಭಾಪತಿಯವರು:-** ಈಗ ನಾವು ನಿಯಮಾವಳಿಗಳಿಗೆ ತಿದ್ದುಪಡಿ ಮಾಡುತ್ತಿದ್ದೇವೆ. ಪ್ರಶ್ನೆಗಳನ್ನು ತೆಗೆದುಕೊಳ್ಳುವುದಕ್ಕೆ ಸಮಯವನ್ನು ಇನ್ನು ವಿಸ್ತರಣೆ ಮಾಡುತ್ತಿದ್ದೇವೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಆಯಿತು.

ಚುಕ್ಕೆ ಪ್ರಶ್ನೆ ಸಂಖ್ಯೆ: 520

ಉತ್ತರ ಲಗತ್ತಿಸಲಾಗಿದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನನಗೆ ಏನೇನು ಸಮಾಧಾನವಾಗಿಲ್ಲ. ನಮಗೆ ಇರುವುದೊಂದೇ ಪಶ್ಚಿಮ ಘಟ್ಟ. ದೊಡ್ಡ ಪ್ರಮಾಣದಲ್ಲಿ ಮಳೆ ತರುವ ಕಾಡನ್ನು ಉಳಿಸಿಕೊಳ್ಳಬೇಕೇನ್ನುವ ಕಾಳಜಿ ಎಲ್ಲರದ್ದೂ ಆಗಿದೆ. ನಾನು ಕಳೆದ ವರ್ಷವೂ ಈ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆ, ಮತ್ತೆ ಈಗ ಕೇಳಿದ್ದೇನೆ. ಆದರೆ ಕೊಟ್ಟಿರುವ ಉತ್ತರದಲ್ಲಿ ಏನೂ ಬದಲಾವಣೆಯಾಗಿಲ್ಲ ಮತ್ತು ಸುಧಾರಣೆಯೂ ಆಗಿಲ್ಲ. ಉದಾಹರಣೆಗೆ ಹೇಳುವುದಾದರೆ, ಈಗ ಉಪ ವಲಯ ಅರಣ್ಯಾಧಿಕಾರಿಗಳ ಒಟ್ಟು ಹುದ್ದೆ ನಮ್ಮ ಬಂಡೀಪುರದಲ್ಲಿರತಕ್ಕಂಥದ್ದು ಮತ್ತು ನಾಗರಹೊಳೆಯಲ್ಲಿರತಕ್ಕಂಥದ್ದು, ಬಂಡೀಪುರದಲ್ಲಿ 30 ಹುದ್ದೆ ಇವೆ, 13 ಜನರು ಕೆಲಸ ಮಾಡುತ್ತಿದ್ದಾರೆ, 17 ಹುದ್ದೆಗಳು ಖಾಲಿ ಇವೆ. ನಾಗರಹೊಳೆಯಲ್ಲಿ 38 ಹುದ್ದೆಗಳಿವೆ. 9 ಜನರು ಮಾತ್ರ ಕೆಲಸ ಮಾಡುತ್ತಿದ್ದಾರೆ, 29 ಹುದ್ದೆಗಳು ಖಾಲಿ ಇವೆ. ಹುದ್ದೆಗಳಲ್ಲಿ 223 ಹುದ್ದೆಗಳು ಖಾಲಿ ಇವೆ. ಹುದ್ದೆಗಳನ್ನು ಹೆಚ್ಚಿಸಬೇಕು ಮತ್ತು ಶೇಕಡ 50 ರಷ್ಟು ಹುದ್ದೆಗಳು ಖಾಲಿ ಇರುವುದರಿಂದ ನೇಮಕಾತಿ ಮಾಡಿಕೊಳ್ಳಬೇಕು. ಉಪ ವಲಯ ಅರಣ್ಯಾಧಿಕಾರಿ ಹುದ್ದೆ 143 ಮತ್ತು ಅರಣ್ಯ ರಕ್ಷಕ ಹುದ್ದೆ 119 ಒಟ್ಟು 262 ಹುದ್ದೆಗಳಿಗೆ ಮಂಜೂರಾತಿ ಸಿಕ್ಕಿದ್ದು ನೇಮಕಾತಿ ಮಾಡಿಕೊಳ್ಳುತ್ತೇವೆಂದು ಲಿಖಿತ ಉತ್ತರದಲ್ಲಿ ಕೊಟ್ಟಿದ್ದಾರೆ. ಕಳೆದ ಸಲವೂ ಇದೇ ಉತ್ತರವನ್ನು ಕೊಟ್ಟಿದ್ದರು. ಈಗ ಇನ್ನೇನು ಬೇಸಿಗೆ ಪ್ರಾರಂಭವಾಗುತ್ತಿದೆ. ಅರಣ್ಯ ಸಂರಕ್ಷಣೆ ಮಾಡಿಕೊಳ್ಳಬೇಕು. ಬೆಂಕಿಯಿಂದ ಕಾಪಾಡಿಕೊಳ್ಳಬೇಕಾಗಿದೆ. ಈ ಅರಣ್ಯ ಉಳಿಸುವುದಕ್ಕೆ ಅಧಿಕಾರಿಗಳು, ನೌಕರರು ಇಲ್ಲ ಎಂದ ಮೇಲೆ ಅರಣ್ಯವನ್ನು ಕಾಪಾಡುವುದು ಹೇಗೆ? ಮಾನ್ಯ ಸಚಿವರಿಗೆ ಆಶ್ಚರ್ಯವಾಗಬಹುದು. ಈ ವಲಯದಲ್ಲಿ ಮೂರ್ನಾಲ್ಕು ಹುಲಿಗಳು ಸತ್ತಿವೆ. ಕಾಡು ಪ್ರಾಣಿಗಳು ಸಾಯುತ್ತಿವೆ. ನಮ್ಮ ಭಾಗದಲ್ಲಿ ಹೇಳುವವರು, ಕೇಳುವವರು ಇಲ್ಲ. ಇದು ಹುಲಿ ಸಂರಕ್ಷಿತ ಅಭಯಾರಣ್ಯಗಳಾಗಿವೆ. ನನಗೆ ನಿರ್ದಿಷ್ಟವಾಗಿ ಎಷ್ಟು ದಿನಗಳಲ್ಲಿ ಈ ನೇಮಕಾತಿ ಪ್ರಕ್ರಿಯೆಯನ್ನು ಮುಗಿಸುತ್ತಾರೆ? ಈ ಕಾಡನ್ನು ಪಶ್ಚಿಮ ಘಟ್ಟವನ್ನು ಉಳಿಸಿಕೊಳ್ಳುವುದಕ್ಕೆ ಏನು ಕೆಲಸ ಮಾಡುತ್ತಾರೆ? ಸಕಾರತ್ಮಾಕವಾದ, ನಿರ್ದಿಷ್ಟವಾದ ಉತ್ತರವನ್ನು ಮಾನ್ಯ ಸಚಿವರು ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಟಿ.ಬಿ.ಜಯಚಂದ್ರ(ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವ್ಯಕ್ತಪಡಿಸುತ್ತಿರುವ ಕಳಕಳಿಗೆ ನಮ್ಮ ಸಹಮತಿ ಕೂಡ ಇದೆ. ಪಶ್ಚಿಮ ಘಟ್ಟದ ಅರಣ್ಯವನ್ನು ಉಳಿಸಿಕೊಳ್ಳಬೇಕಾಗುವ ಸಂದರ್ಭದಲ್ಲಿ ಅದಕ್ಕೆ ಯಾವ್ಯಾವ ಹುದ್ದೆಗಳು ಖಾಲಿ ಇವೆ ಆ ಹುದ್ದೆಗಳನ್ನು ಭರ್ತಿ ಮಾಡಲೇಬೇಕಾದ ಜವಾಬ್ದಾರಿ ಇದೆ. ಆದ್ಯತೆ ಮೇಲೆ ಭರ್ತಿ ಮಾಡಲೇಬೇಕು. ಕಳೆದ ಬಾರಿಯೂ ಇದೇ ಪ್ರಶ್ನೆಯನ್ನು ಕೇಳಿದ್ದರೂ ಕೂಡ ಇದೇ ಉತ್ತರವನ್ನು ಕೊಟ್ಟಿರುವಂಥದ್ದು. ಈ ಉತ್ತರದಲ್ಲಿ ಸ್ವಲ್ಪ ಬದಲಾವಣೆ ಇದೆ. ಈಗ ಒಂದು ಹುದ್ದೆ ಸೃಷ್ಟಿಯಾಗಬೇಕಾದರೆ ತಮಗೆಲ್ಲರಿಗೂ ಗೊತ್ತಿರುವಂತೆ ಆರ್ಥಿಕ ಇಲಾಖೆಯ ಅನುಮೋದನೆ, ಡಿಪಿಎಆರ್ ಅನುಮೋದನೆ ಬೇಕಾಗುತ್ತದೆ. 2018-19ನೇ ಸಾಲಿಗೆ ಉಪ ವಲಯ ಅರಣ್ಯಾಧಿಕಾರಿ 143 ಹುದ್ದೆ, ಅರಣ್ಯ ರಕ್ಷಕ 119 ಹುದ್ದೆ, ಒಟ್ಟು 262

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹುದ್ದೆಗಳನ್ನು ಸೃಷ್ಟಿ ಮಾಡಿದ್ದೇವೆ. 262 ಹುದ್ದೆಗಳನ್ನು ತುಂಬಲು ಮಂಜೂರಾತಿಯನ್ನು ಈಗಾಗಲೇ ಸರ್ಕಾರ ಅನುಮತಿಯನ್ನು ನೀಡಿದ್ದು, ಈಗ ಆದ್ಯತೆ ಮೇಲೆ ಬಂಡೀಪುರ, ನಾಗರಹೊಳೆ ಮತ್ತು ರಾಷ್ಟ್ರೀಯ ಉದ್ಯಾನಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡಬೇಕೆನ್ನುವ ತೀರ್ಮಾನ ಮಾಡಿದ್ದೇವೆ. ಈಗ 2019-20 ರಿಂದ 2023-24 ರವರೆಗೆ ಈಗಾಗಲೇ ಇಷ್ಟಿಷ್ಟು ಹುದ್ದೆಗಳನ್ನು ಸೃಷ್ಟಿ ಮಾಡಬೇಕೆನ್ನುವುದರ ಬಗ್ಗೆ ಕೂಡ ಸರ್ಕಾರ ನಿರ್ಧಾರ ತೆಗೆದುಕೊಂಡಿದ್ದು, ಒಟ್ಟಾರೆ 3085 ಹುದ್ದೆಗಳನ್ನು ಹೊಸದಾಗಿ ಸೃಜಿಸಿ, ಭರ್ತಿ ಮಾಡಲು ಸರ್ಕಾರವು ಅನುಮತಿ ನೀಡಿದೆ. ಇದು ಹಂತ ಹಂತವಾಗಿ ಆಗಬೇಕಾಗುತ್ತದೆ. ಈಗ ಪ್ರಕ್ರಿಯೆ ಪ್ರಾರಂಭವಾಗಿದೆ. ಹುದ್ದೆಗಳನ್ನು ಭರ್ತಿ ಮಾಡಬೇಕೆನ್ನುವ ಕಳಕಳಿ ನಮಗೂ ಕೂಡ ಇದೆ. ಮಾನ್ಯ ಸದಸ್ಯರು ಹೇಳಿರುವುದೆಲ್ಲಾ ಸತ್ಯವಾಗಿದೆ. ಹುದ್ದೆಗಳಿಲ್ಲದೆ ಅರಣ್ಯಗಳನ್ನು ರಕ್ಷಣೆ ಮಾಡತಕ್ಕಂಥದ್ದು ಬಹಳ ಕಷ್ಟದ ಕೆಲಸವಾಗಿದೆ. ಆ ಕಾರಣಕೋಸ್ಕರ ಈ ಹುದ್ದೆಗಳನ್ನೆಲ್ಲಾ ಭರ್ತಿ ಮಾಡುವ ಕೆಲಸ ಮಾಡುತ್ತಿದ್ದೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಸರ್ಕಾರಕ್ಕೆ ಕಳಕಳಿ ಇದೆ ಎಂದು ಹೇಳುತ್ತಿದ್ದೀರಿ, ಕಳಕಳಿ ಇದ್ದಾಗ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ತೊಂದರೆ ಏನು?

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಬಸವರಾಜ ಹೊರಟ್ಟಿಯವರು ಕೂಡ ಸಚಿವರಾಗಿ ಕೆಲಸ ಮಾಡಿದ್ದಾರೆ. ಹುದ್ದೆಗಳನ್ನು ಸೃಷ್ಟಿಯಾಗಬೇಕೆಂದರೆ ಆರ್ಥಿಕ ಇಲಾಖೆಯ ಅನುಮೋದನೆ ಬೇಕು. ಆ ಎಲ್ಲಾ ಪ್ರಕ್ರಿಯೆ ಮುಗಿದು ಈಗ ಅಂತಿಮ ಹಂತದಲ್ಲಿರುವಂತಹ ಸಂದರ್ಭದಲ್ಲಿ.....

**Sri RAMACHANDRA GOWDA:-** Sir, I want to know whether the Government is different and the Finance Department is different?

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಸರ್ಕಾರ ಕೆಲಸ ಮಾಡುವಾಗ ಹಣಕಾಸಿನ ಲಭ್ಯತೆಯನ್ನು ಕೂಡ ನೋಡಬೇಕಾಗುತ್ತದೆ.

**Sri RAMACHANDRA GOWDA:-** Finance Department is a part of the Government or not?

**Sri T.B.JAYACHANDRA:-** Yes, it is a part of the Government.

**Sri RAMACHANDRA GOWDA:-** Then what is the problem?

**Sri T.B.JAYACHANDRA:-** So, can you ignore it?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri RAMACHANDRA GOWDA:-** It is the responsibility of the Government to take the concurrence of the Finance Department. You cannot drew away your responsibility of the Finance Department.

**ಸಭಾಪತಿಯವರು:-** ಈಗ ಆ ಚರ್ಚೆ ಬೇಡ. ಅವರು ಪಶ್ಚಿಮ ಘಟ್ಟದ ಕಾಡಿನ ಬಗ್ಗೆ ಹೇಳುತ್ತಿದ್ದಾರೆ. (ಮುಂದು)

160/21.02.2018/ಬಿಕೆಪಿ/ಎಂಡಿ/11-30

**ಸಭಾಪತಿಯವರು:-** ಈಗ ಈ ವಿಷಯವಾಗಿ ಚರ್ಚೆ ಬೇಡ.

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟಿ:-** ಮಾನ್ಯ ಸಭಾಪತಿಯವರೇ, ಚರ್ಚೆ ಬೇಡವೆಂದು ಹೇಳುತ್ತೀರಿ. ಪ್ರತಿಯೊಂದು ವಿಷಯಕ್ಕೂ ಸಹ ಹಣಕಾಸು, ಹಣಕಾಸು ಎಂದು ಹೇಳುತ್ತಾರೆ. ಯಾವುದೇ ಒಂದು ಇಲಾಖೆಗೆ ಹೋಗಿ ಕೇಳಿದರೆ ಅವರೇ ಒಂದು ಕಾನೂನು ಮಾಡಿಕೊಂಡು ಕಾನೂನಿನ ವಿಷಯವನ್ನು ಹೇಳುತ್ತಾರೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಈ ಒಂದು ಪ್ರಕ್ರಿಯೆ ಶ್ರೀಯುತ ಬಸವರಾಜ ಹೊರಟ್ಟಿಯವರು ಇದ್ದಂತಹ ಸಮಯದಲ್ಲಿಯೇ ಪ್ರಾರಂಭವಾಗಿದ್ದರೆ, ಈ ಸಮಸ್ಯೆ ಬರುತ್ತಿರಲಿಲ್ಲ. ಇದನ್ನು ಅವರು ಗಮನಿಸಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನನಗಿಂತ ಮೊದಲು ಇದ್ದರು. 1978 ರಲ್ಲಿಯೇ ಅವರು ಇದ್ದರು. ಆಗಲೇ ಪ್ರಾರಂಭ ಮಾಡಿದ್ದರೆ ಇನ್ನೂ ಕಡಿಮೆಯಾಗುತ್ತಿತ್ತು. ಏನೇ ಇದ್ದರೂ ಸಹ ಸರ್ಕಾರ ಎಂದರೆ ಐಎಎಸ್ ಅಧಿಕಾರಿಗಳ ಸರ್ಕಾರ ಎಂದು ಹೇಳಲಿಕ್ಕೆ ಬಯಸುತ್ತೇನೆ. ಇವರ ಸರ್ಕಾರ ಅಲ್ಲ.

**ಸಭಾಪತಿಯವರು:** ಆಯಿತು ಬಿಡಿ. ಪ್ರಕ್ರಿಯೆ ಮುಂದುವರಿದಿದೆ, ಆದಷ್ಟು ಬೇಗ ಮಾಡುತ್ತೇವೆಂದು ಸಚಿವರು ಹೇಳುತ್ತಿದ್ದಾರೆ. ಶ್ರೀಯುತ ಶ್ರೀಕಂಠೇಗೌಡರವರ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಯಾವಾಗ ಮಾಡುತ್ತೀರಿ ಎಂದವರು ಪ್ರಶ್ನೆಯನ್ನು ಕೇಳಿದ್ದಾರೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಾನು ಉತ್ತರವನ್ನು ಕೊಟ್ಟಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಕಳೆದ ಐದು ವರ್ಷಗಳಿಂದ ಅರಣ್ಯ ಇಲಾಖೆಯಲ್ಲಿ ಎಷ್ಟು ಹುದ್ದೆಗಳನ್ನು ತುಂಬಿದ್ದೀರಿ ಎನ್ನುವ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡಬೇಕು.

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೇ, 2019–20ನೇ ಸಾಲಿನಿಂದ 2023–24ನೇ ಸಾಲಿನವರೆಗೂ ಕೂಡ ಯಾವ್ಯಾವ ವರ್ಷಗಳಲ್ಲಿ ಯಾವ್ಯಾವ ಹುದ್ದೆಗಳನ್ನು ತುಂಬಬೇಕೆನ್ನುವುದಕ್ಕೆ ಒಂದು ಟಾರ್ಗೆಟ್ ಸಹ ಕೊಟ್ಟಿದ್ದೇವೆ. ಮುಂದೆ ಆ ಪ್ರಕಾರ ನಡೆಯಲೇ ಬೇಕು, ಆ ಪ್ರಕಾರ ನಡೆಯುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮೊನ್ನೆ ಇಡೀ ಮಡಿಕೇರಿಯ ಜನರು ಮೈಸೂರಿಗೆ ಬಂದು ಒಂದು ದೊಡ್ಡ ಗಲಾಟೆ ಮಾಡಿದರು. ಏಕೆ ಗಲಾಟೆ ಮಾಡಿದರು ಎಂದರೆ, 'ನೀವು ಅಲ್ಲಿ ರೈಲ್ವೆ ಹಳಿ ಹಾಕುತ್ತೀರಿ, ಹೈವೇ ಮಾಡಲಿಕ್ಕೆ ಹೊರಟ್ಟಿದ್ದೀರಿ, ಇತ್ಯಾದಿಯಾಗಿ ನಮ್ಮ ಅರಣ್ಯವನ್ನು ನಾಶ ಮಾಡುತ್ತಿದ್ದೀರಿ' ಎಂದವರು ಹೇಳುತ್ತಿದ್ದಾರೆ. ನನ್ನ ಕಾಳಜಿ ಏನೆಂದರೆ, ಅಲ್ಲಿ ಕಾಡು ಪ್ರಾಣಿಗಳು ಸಾಯುತ್ತಿವೆ. ಅದನ್ನು ಕೇಳುವವರು, ಹೇಳುವವರು ಯಾರು ಇಲ್ಲ. ಕಳೆದ ವರ್ಷ ಎಷ್ಟು ಸಾವಿರ ಎಕರೆ ಅರಣ್ಯ ಬೆಂಕಿಗೆ ಆಹುತಿಯಾಯಿತು ಎಂದು ನಾನು ಬೇರೆ ಹೇಳಬೇಕಾಗಿಲ್ಲ. ಕಳೆದ 4–5 ವರ್ಷಗಳಲ್ಲಿ ಅರಣ್ಯ ಇಲಾಖೆಯಲ್ಲಿ ನೇಮಕಾತಿಯನ್ನೇ ಮಾಡಿಲ್ಲ.

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೇ, ತುಮಕೂರು ಜಿಲ್ಲೆಯವರಾದ ನಾವುಗಳು ಮೊದಲು ಕಾಡು ಪ್ರಾಣಿಗಳನ್ನು ತುಮಕೂರು ಜಿಲ್ಲೆಯಲ್ಲಿ ನೋಡಿಯೇ ಇರಲಿಲ್ಲ. ಯಾರಾದರೂ ಆನೆಗಳನ್ನು ಸಾಕಿದ್ದನ್ನು ಮಾತ್ರ ನೋಡುತ್ತಿದ್ದೆವು. ಈಗ ನಿರಂತರವಾಗಿ ಯಾವಾಗೆಂದರೆ ಆಗಲೇ ಕಾಡು ಪ್ರಾಣಿಗಳು ಊರಿಗೆ ಬರುತ್ತಿವೆ, ಚಿರತೆಗಳಂತೂ ಬಹಳಷ್ಟು ಬಾರಿ ಬರುತ್ತಿವೆ. ಆ ಕಾರಣಕ್ಕೋಸ್ಕರವೇ ಹುದ್ದೆಗಳನ್ನು ತುಂಬಲೇ ಬೇಕಾಗುತ್ತದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಎಷ್ಟು ದಿವಸಗಳಲ್ಲಿ ಹುದ್ದೆಗಳನ್ನು ತುಂಬುತ್ತಾರೆಂದು ಹೇಳಬೇಕು.

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೇ, Already we have a target. ಇನ್ನು ಐದು ವರ್ಷಗಳಲ್ಲಿ ಅಂದರೆ ಯಾವ್ಯಾವ ವರ್ಷಗಳಲ್ಲಿ ಎಷ್ಟು ಹುದ್ದೆಗಳನ್ನು ತುಂಬಬೇಕು, ಯಾವ ಪ್ರಕಾರ ತುಂಬಬೇಕೆಂದು ಹೇಳಿ, ಈಗಾಗಲೇ ಟಾರ್ಗೆಟ್ ಮಾಡಿದ್ದು, ಸರ್ಕಾರ ಅದಕ್ಕೆ ಅನುಮತಿ ನೀಡಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಬೇರೆ ಬೇರೆ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಇವೆ. ಆದರೆ ಅರಣ್ಯ ಇಲಾಖೆಯಲ್ಲಿ 50% ಹುದ್ದೆಗಳು ಖಾಲಿ ಇವೆ. ಈ ರೀತಿ 50% ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ನೀವು ಅರಣ್ಯವನ್ನು ಹೇಗೆ ರಕ್ಷಣೆ ಮಾಡುತ್ತೀರಿ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಅದಕ್ಕೋಸ್ಕರವೇ ಮಾನ್ಯ ಸದಸ್ಯರ ಕಳಕಳಿಯನ್ನು ಒಪ್ಪಿಕೊಂಡಿದ್ದು, ಅವರ ಕಳಕಳಿಗೆ ನಮ್ಮ ಸಹಮತ ಇದೆ.

**ಸಭಾಪತಿಯವರು:-** ಪ್ರಶ್ನೆ ಸಂಖ್ಯೆ 506 ಶ್ರೀ ವಿ.ಸೋಮಣ್ಣ ರವರದ್ದಾಗಿದ್ದು, ಅವರು ಸದನಕ್ಕೆ ಗೈರು ಹಾಜರಾಗಿರುತ್ತಾರೆ.

**ಪ್ರಶ್ನೆ ಸಂಖ್ಯೆ: 869**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನನ್ನ ಮೊದಲನೆಯ ಪ್ರಶ್ನೆ ಏನೆಂದರೆ, ಬೆಂಗಳೂರಿನಲ್ಲಿರುವ ಒಳಾಂಗಣ ಕ್ರೀಡಾಂಗಣದ ವ್ಯವಸ್ಥೆ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವುದಾಗಿದೆ. ಎರಡನೆಯ ಪ್ರಶ್ನೆ ಒಳಾಂಗಣ ಕ್ರೀಡಾಂಗಣವನ್ನು ವಾಣಿಜ್ಯ ಚಟುವಟಿಕೆಗಳಿಗೆ ಬಾಡಿಗೆಗೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎನ್ನುವುದಾಗಿದ್ದು, ಮೂರನೆಯ ಪ್ರಶ್ನೆ ಬಂದಿದ್ದಲ್ಲಿ, ಅದರಿಂದ ಬರುವ ಆದಾಯವನ್ನು ಕ್ರೀಡಾಂಗಣದ ಅಭಿವೃದ್ಧಿಗೆ ಉಪಯೋಗಿಸಲಾಗುತ್ತಿದೆಯೇ ಎನ್ನುವುದಾಗಿದೆ. ಅದಕ್ಕೆ ಉತ್ತರವಾಗಿ 'ಬೆಂಗಳೂರಿನ ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣ ಹಾಗೂ ಕೋರಮಂಗಲ ಒಳಾಂಗಣ ಕ್ರೀಡಾಂಗಣಗಳನ್ನು 2017-18ನೇ ಸಾಲಿನಲ್ಲಿ ಉನ್ನತೀಕರಿಸಲಾಗಿದ್ದು, ಉನ್ನತ ಕ್ರೀಡಾ ಸೌಲಭ್ಯಗಳನ್ನು ಕಲ್ಪಿಸಲಾಗಿದೆ' ಎಂದು ಉತ್ತರ ಕೊಟ್ಟಿದ್ದಾರೆ.

ಮಾನ್ಯ ಸಭಾಪತಿಯವರೇ, ಈ ಒಳಾಂಗಣ ಕ್ರೀಡಾಂಗಣದಲ್ಲಿ ಹಾಕಿರುವಂತಹ wooden flooring ಆಗಿರಬಹುದು, ಮತ್ತೊಂದು ಆಗಿರಬಹುದು. ಇದನ್ನು ವಾಣಿಜ್ಯ ಚಟುವಟಿಕೆಗಳಿಗೆ ಕೊಡುವುದರಿಂದ ಎಲ್ಲವೂ ಕೂಡ ಹಾಳಾಗಿ, ಕ್ರೀಡಾಪಟುಗಳು ಯಾವುದೇ ರೀತಿಯ ಕ್ರೀಡಾ ಚಟುವಟಿಕೆಗಳನ್ನು ಮಾಡಲಿಕ್ಕೆ ಅಲ್ಲಿ ಆಗುತ್ತಿಲ್ಲ. ಅಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಕ್ರೀಡಾಂಗಣವನ್ನು ಮಾಡಿದ್ದರೂ ಕೂಡ ಕ್ರೀಡಾ ಪಟುಗಳಿಗೆ ಅದನ್ನು ಉಪಯೋಗ ಮಾಡಲಿಕ್ಕೆ ಆಗದೇ ವಾಣಿಜ್ಯ ಚಟುವಟಿಕೆಗಳಿಗೆ ಪ್ರತಿ ವರ್ಷ ಪೂರ್ತಿ ಬಾಡಿಗೆಗೆ ಕೊಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುತ್ತಿರುವಂತಹ ನಮ್ಮ ಕ್ರೀಡಾಪಟುಗಳಿಗೆ ಉತ್ತಮವಾದಂತಹ ಪ್ರತಿಭೆ ಇದ್ದರೂ ಕೂಡ ಅವರಿಗೆ ಈ ನಿಟ್ಟಿನಲ್ಲಿ ಅಭ್ಯಾಸ ಮಾಡುವುದಕ್ಕೆ ಎಲ್ಲಿಯೂ ಜಾಗ ಇರುವುದಿಲ್ಲ.

ಆದ್ದರಿಂದ, ಈ ಸರ್ಕಾರ ಈ ಜಾಗವನ್ನು ವಾಣಿಜ್ಯ ಚಟುವಟಿಕೆಗಳಿಗೆ ಬಾಡಿಗೆ ಕೊಡುವುದನ್ನು ನಿಲ್ಲಿಸಿ, ನಮ್ಮ ಕ್ರೀಡಾಪಟುಗಳಿಗೆ ಅಲ್ಲಿ ಅಭ್ಯಾಸ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳಲಿಕ್ಕೆ ಬಯಸುತ್ತೇನೆ. ಮತ್ತೆ, ವಾಣಿಜ್ಯ ಚಟುವಟಿಕೆಗಳಿಗೆ ಬಾಡಿಗೆ ಕೊಟ್ಟಿದ್ದು, ಅದರಿಂದ ಬರತಕ್ಕಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆದಾಯವನ್ನು ಕ್ರೀಡಾಂಗಣದ ಅಭಿವೃದ್ಧಿಗೆ ಉಪಯೋಗಿಸಲಾಗುತ್ತಿದೆಯೇ ಎಂದು ಪ್ರಶ್ನೆಯನ್ನು ಕೇಳಲಾಗಿದೆ. ಅಲ್ಲಿ ಲಕ್ಷಾಂತರ ರೂಪಾಯಿಗಳ ಬಾಡಿಗೆಯನ್ನು ತೆಗೆದುಕೊಳ್ಳಲಾಗುತ್ತಿದೆ. ಆದರೆ, ಅಲ್ಲಿನ wooden flooring ಹಾಳಾಗಿದ್ದು, ಅದನ್ನೂ ಸಹ ಸರಿ ಮಾಡುತ್ತಿಲ್ಲ. ಇನ್ನು ಕ್ರೀಡಾ ಚಟುವಟಿಕೆಗಳಿಗೆ ಸಂಬಂಧಪಟ್ಟ ಸಲಕರಣೆಗಳಿಗೆ ಎಲ್ಲಿಂದ ಹಣವನ್ನು ಕೊಡುತ್ತಾರೆ? ದಯಮಾಡಿ, ಈ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ಕೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಯು.ಟಿ.ಖಾದರ್(ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಸಚಿವರು) ಶ್ರೀ ಪ್ರಮೋದ್ ಮಧ್ವರಾಜ್, ಮೀನುಗಾರಿಕೆ, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಯುತ ನಾರಾಯಣಸ್ವಾಮಿಯವರು ಬೆಂಗಳೂರಿನ ಶ್ರೀ ಕಂಠೀರವ ಒಳಾಂಗಣ ಕ್ರೀಡಾಂಗಣವನ್ನು ವಾಣಿಜ್ಯ ಚಟುವಟಿಕೆಗಳಿಗೆ ಬಾಡಿಗೆಗೆ ಕೊಡಬಾರದು, ಅದನ್ನು ನಿಲ್ಲಿಸಬೇಕೆಂದು ಹೇಳುತ್ತಿದ್ದಾರೆ. ನಿಲ್ಲಿಸುವಂತಹ ಪ್ರಶ್ನೆ ಉದ್ಭವವಾಗುವುದೇ ಇಲ್ಲ. ಏಕೆಂದರೆ, ನಾವು ವಾಣಿಜ್ಯ ಚಟುವಟಿಕೆಗೆ ಬಾಡಿಗೆಗೆ ಕೊಟ್ಟಿರುವುದಿಲ್ಲ ಮತ್ತು ಕೊಡುವುದಿಲ್ಲ. ಮತ್ತೆ, ಈಗಾಗಲೇ ಈ ಕ್ರೀಡಾಂಗಣ ಅತ್ಯುತ್ತಮ ಕ್ರೀಡಾಂಗಣವಾಗಿದ್ದು, ಏಷ್ಯಾ ಖಂಡದಲ್ಲಿಯೇ ಇವತ್ತು ಹೆಸರು ಪಡೆದಿದೆ. ಏಕೆಂದರೆ, ಏಷ್ಯಾ ಮಟ್ಟದ ಜೂನಿಯರ್ ಮತ್ತು ಸೀನಿಯರ್ ಮಟ್ಟದ *FIBA Basket Ball Tournment* ನ್ನು ಅಲ್ಲಿ ಏರ್ಪಡಿಸಲಾಗಿತ್ತು. ಆ ಸಂದರ್ಭದಲ್ಲಿ ಎಲ್ಲರೂ ಅತ್ಯಂತ ಸಂತೋಷಪಟ್ಟಿದ್ದಾರೆ. ಕಳೆದ ಒಂದು ವರ್ಷದ ಹಿಂದೆ ಸುಮಾರು 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದು, ಒಂದು ಐತಿಹಾಸಿಕ ಮಟ್ಟದ ಮತ್ತು ಅಂತರರಾಷ್ಟ್ರೀಯ ಮಟ್ಟದ ಒಂದು ಒಳಾಂಗಣ ಕ್ರೀಡಾಂಗಣವನ್ನಾಗಿ ಅದನ್ನು ಮಾರ್ಪಡಿಸಲಾಗಿದೆ. ಹೀಗಾಗಿ, ಅದನ್ನು ವಾಣಿಜ್ಯ ಚಟುವಟಿಕೆಗಳಿಗೆ ಬಾಡಿಗೆ ಕೊಡುವಂತಹ ಪ್ರಶ್ನೆ ಬರುವುದಿಲ್ಲ. ಮತ್ತೆ ಯಾವುದೇ ಕಾರಣಕ್ಕೂ ಅದನ್ನು ಬಾಡಿಗೆಗೆ ಕೊಡುವುದಿಲ್ಲ. ಕ್ರೀಡಾಂಗಣಕ್ಕೆ ಬಂದಂತಹ ಅನುದಾನವನ್ನು ಕೇವಲ ಕ್ರೀಡಾ ಚಟುವಟಿಕೆಗಳಿಗೆ ಮಾತ್ರ ಕೊಡುವುದರ ಮೂಲಕ ಆ ಹಣವನ್ನು ಖರ್ಚು ಮಾಡಲಾಗುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಈ ಒಳಾಂಗಣ ಕ್ರೀಡಾಂಗಣದಲ್ಲಿನ ಜಾಗವನ್ನು ಯಾವುದೇ ವಾಣಿಜ್ಯ ಚಟುವಟಿಕೆಗೆ ಬಾಡಿಗೆಗೆ ಕೊಡಲಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಆದರೆ, ಅಲ್ಲಿ ಇವತ್ತಿಗೂ ಕೂಡ ಸಾಕಷ್ಟು exhibitions ನಿರಂತರವಾಗಿ ನಡೆಯುತ್ತಿದೆ. ಹಲವು ಇಲಾಖೆಗಳಿಗೆ ಸಂಬಂಧಪಟ್ಟಂತೆ ಅಲ್ಲಿ exhibitions ಮಾಡುತ್ತಿರುವುದನ್ನು ಸಾರ್ವಜನಿಕವಾಗಿ ಹೇಳಲಾಗುತ್ತಿದೆ. ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ exhibitions ನಡೆಯುತ್ತಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸದಸ್ಯರು ಈ ಬಗ್ಗೆ ಆಪಾದನೆ ಮಾಡುತ್ತಿದ್ದು, ಅದಕ್ಕೆ ಸಚಿವರು ಉತ್ತರ ಹೇಳಬೇಕು.

**ಶ್ರೀ ಯು.ಟಿ.ಖಾದರ್:-** ಮಾನ್ಯ ಸಭಾಪತಿಯವರೇ, ನಾನು ಈ ಬಗ್ಗೆ ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ, ಸರ್ಕಾರ ಅಲ್ಲಿನ ಜಾಗವನ್ನು ವಾಣಿಜ್ಯ ಚಟುವಟಿಕೆಗೆ ಕೊಡುವಂತಹ ಪ್ರಶ್ನೆ ಇಲ್ಲ. ಅಲ್ಲಿ ಯಾವ ಒಂದು exhibitions ನಡೆಯುತ್ತಿದೆ ಎಂದು ಸದಸ್ಯರು ಹೇಳಬೇಕು. ನನಗೆ ಬಹುಶ: ಆಶ್ಚರ್ಯವಾಗುತ್ತದೆ. ಏಕೆಂದರೆ, ಆ ಜಾಗ ಎಲ್ಲರಿಗೂ ಕಾಣುವಂತಹ ಜಾಗ. ಆದ್ದರಿಂದ, ಆ ರೀತಿಯಲ್ಲಿ ಅಲ್ಲಿ ನಡೆಯುತ್ತಿದ್ದು, ಅದಕ್ಕೆ ಸಾಕ್ಷಿ ಒದಗಿಸಿದಲ್ಲಿ ಖಂಡಿತವಾಗಿಯೂ ಸಹ ನಾವು ಕ್ರಮ ಕೈಗೊಳ್ಳುತ್ತೇವೆ. ಅಲ್ಲಿ ಅಂತಹ ಯಾವುದೇ ವಿಚಾರ ಇರುವುದಿಲ್ಲ.

**ಸಭಾಪತಿಯವರು:-** ಪ್ರಶ್ನೆ ಸಂಖ್ಯೆ 890 ಶ್ರೀ ಭಾನುಪ್ರಕಾಶ್ ರವರದ್ದಾಗಿದ್ದು, ಅವರು ಸದನಕ್ಕೆ ಗೈರು ಹಾಜರಾಗಿರುತ್ತಾರೆ.

**ಪ್ರಶ್ನೆ ಸಂಖ್ಯೆ: 521**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ದುರಾದೃಷ್ಟ ಏನೆಂದರೆ, ಬೀದರ್ ಜಿಲ್ಲೆಯಲ್ಲಿ ಎಷ್ಟು ಕರೆಗಳಿವೆ, ಎಷ್ಟು ನೀರು ಸಂಗ್ರಹವಾಗಿದೆ, ಏನು ಖರ್ಚು-ವೆಚ್ಚ ಮಾಡಲಾಗುತ್ತದೆ ಎನ್ನುವುದಕ್ಕೆ ಸಮರ್ಪಕವಾದ ಉತ್ತರವನ್ನು ಕೊಟ್ಟಿರುವುದಿಲ್ಲ. ಕೆರೆ ಹೂಳು ತೆಗೆಯುವುದು ಎಷ್ಟಾಗಿದೆ, ಎಷ್ಟು ಕೆರೆಗೆ ನೀರು ತುಂಬಿದೆ, ಅಭಿವೃದ್ಧಿ ಎಷ್ಟಾಗಿದೆ ಎನ್ನುವುದಕ್ಕೆ ಸಚಿವರು random ಆಗಿ ಅನುಬಂಧ-2 ರಲ್ಲಿ ವಿವರಗಳನ್ನು ನೀಡಲಾಗಿದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಯಾವ್ಯಾವ ಕೆರೆಯಲ್ಲಿ ಎಷ್ಟೆಷ್ಟು ನೀರು ಇದೆ, ಅದರ ಆಯಕಟ್ಟು ಎಷ್ಟು, ಮತ್ತು ಎಷ್ಟು ನೀರಾವರಿಯಾಗುತ್ತಿದೆ ಎನ್ನುವ ವಿವರ ಬೇಕಾಗಿದೆ.

ಮಾನ್ಯ ಸಭಾಪತಿಯವರೇ, ಔರಾದ ತಾಲ್ಲೂಕಿನಲ್ಲಿ 34 ಕೆರೆಗಳಿವೆ. ಆದರೆ, ಅವುಗಳ ಪೈಕಿ 24 ಕೆರೆಗಳಿಗೆ ಇವತ್ತಿನವರೆಗೂ ಅವರು ಕೊಟ್ಟಿರುವ ಅಂಕಿ-ಅಂಶಗಳ ಪ್ರಕಾರ ನೀರು ತುಂಬಿರುವುದಿಲ್ಲ. ಬಸವಕಲ್ಯಾಣ ತಾಲ್ಲೂಕಿನಲ್ಲಿ 24 ಸಣ್ಣ ನೀರಾವರಿ ಕೆರೆಗಳಿವೆ. ಅವುಗಳ ಪೈಕಿ 18 ಕೆರೆಗಳಿಗೆ ನೀರನ್ನು ತುಂಬಿರುವುದಿಲ್ಲ. ಬಾಲ್ಕಿ ತಾಲ್ಲೂಕಿನಲ್ಲಿ 14 ಕೆರೆಗಳಿವೆ. ಅವುಗಳ ಪೈಕಿ 12 ಕೆರೆಗಳಿಗೆ ನೀರನ್ನು ತುಂಬಿರುವುದಿಲ್ಲ. ಅಂದರೆ ರೈತರಿಗೆ ನೀರನ್ನು ಬಿಟ್ಟಿರುವುದಿಲ್ಲ. ಬೀದರ್ ತಾಲ್ಲೂಕಿನಲ್ಲಿ 33 ಕೆರೆಗಳಿವೆ, ಅವುಗಳ ಪೈಕಿ 29 ಕೆರೆಗಳಿಂದ ರೈತರಿಗೆ ನೀರನ್ನು ಬಿಟ್ಟಿರುವುದಿಲ್ಲ. ಹುಮ್ನಾಬಾದ್ ತಾಲ್ಲೂಕಿನಲ್ಲಿ 15

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆರೆಗಳಿವೆ. ಅವುಗಳ ಪೈಕಿ 14 ಕೆರೆಗಳಿಂದ ರೈತರಿಗೆ ನೀರನ್ನು ಬಿಟ್ಟಿರುವುದಿಲ್ಲ. ಅಂದರೆ ಈ ಇಲಾಖೆ ಏನು ಕೆಲಸ ಮಾಡುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ.

**ಸಭಾಪತಿಯವರು:-** ನಿಮ್ಮ ಪ್ರಶ್ನೆ ಏನು, ಈ ಬಗ್ಗೆ ಏನು ಮಾಡಬೇಕೆಂದು ಸಚಿವರಿಗೆ ಕೇಳಿ.

**ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿ ನಿರ್ವಹಣೆ ಮಾಡಿದಂತಹ ಕೆರೆಗಳಿಂದ ರೈತರಿಗೆ ನೀರು ಕೊಟ್ಟಿರುವುದಿಲ್ಲ. ಒಂದು ಹನಿಯೂ ಸಹ ನೀರಾವರಿಯಾಗಿಲ್ಲವೆಂದು ಸರ್ಕಾರವೇ ಅಂಕಿ-ಅಂಶಗಳನ್ನು ಕೊಟ್ಟಿದೆ. ಇದಕ್ಕೆ ಕಾರಣವೇನು ಮತ್ತು ಇದನ್ನು ಮುಂದೆ ಇವರು ಏನು ಮಾಡಲಿಕ್ಕೆ ಹೊರಟಿದ್ದಾರೆ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು. ಈ ಕೆರೆಗಳು ಹೀಗೆಯೇ ಇರುತ್ತವೆಯೋ ಅಥವಾ ರೈತರ ಜಮೀನುಗಳಿಗೆ ನೀರು ಕೊಡಲಿಕ್ಕೆ ಪ್ರಾರಂಭಿಸಿದ ಕೆರೆಗಳಿಂದ ರೈತರಿಗೆ ಫಲ ಸಿಗುತ್ತದೋ ಇಲ್ಲವೋ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಯುತ ರಘುನಾಥ್‌ರಾವ್ ಮಲ್ಕಾಪೂರೆಯವರ ಸದಭಿಪ್ರಾಯವನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಬೀದರ್ ಜಿಲ್ಲೆಯಲ್ಲಿ ಸಾಕಷ್ಟು ಕೆರೆಗಳಿದೆ. ಕೆರೆಗಳು ತುಂಬಿರುವುದಿಲ್ಲ. ಕೆರೆಗಳು ತುಂಬಿಲ್ಲದೇ ಇರುವಂತಹ ಸಂದರ್ಭದಲ್ಲಿ ರೈತರಿಗೆ ನೀರು ಕೊಡುವಂತಹ ಪ್ರಶ್ನೆ ಬರುವುದೇ ಇಲ್ಲ. ಈ ವಿಚಾರವಾಗಿ ಮಾನ್ಯ ಸದಸ್ಯರು ಉಪ ಪ್ರಶ್ನೆಯನ್ನು ಕೇಳಬಹುದು. ಅಂದರೆ, ಈಗ ಸಾಕಷ್ಟು ಕೆರೆಗಳಲ್ಲಿ ಹೂಳು ತುಂಬಿದೆ.

**ಮುಂದು**. . (161) 21.02.2018

11.40 ಎಸ್‌ವಿ-ಎಕೆ

**ಶ್ರೀ ಟಿ.ಬಿ.ಜಯಚಂದ್ರ (ಮುಂದು):-** ಸಾಕಷ್ಟು ಕೆರೆಗಳಲ್ಲಿ ಹೂಳು ತುಂಬಿದೆ. ಸರ್ವೇಸಾಮಾನ್ಯವಾಗಿ ಹೂಳು ತುಂಬಿರುವ ಕೆರೆಗಳು ಎಷ್ಟಿವೆಯೆಂದರೆ 20 ರಿಂದ 30 ಅಥವಾ 40ರವರೆಗೆ ಇದೆ. ಸಣ್ಣನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ 3700 ಕೆರೆಗಳು ಮಾತ್ರ ಬರುತ್ತವೆ. ತಾಲ್ಲೂಕು ಪಂಚಾಯ್ತಿ ಹಾಗೂ ಜಿಲ್ಲಾ ವ್ಯಾಪ್ತಿಯಲ್ಲಿ ಸುಮಾರು 28,000 ಕೆರೆಗಳು ಬರುತ್ತವೆ. ಎಲ್ಲೆಲ್ಲಿ ಎಷ್ಟು ಕೆರೆಗಳಿವೆ ಎಂಬುದನ್ನು ಲೆಕ್ಕ ಇಡುವುದೇ ಕಷ್ಟವಾಗಿತ್ತು. ಈ ಕಾರಣದಿಂದಲೇ ಕೆರೆ ಅಭಿವೃದ್ಧಿ ಪ್ರಾಧಿಕಾರ ಎಂಬುದನ್ನು ರಚಿಸಿ, ಆ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಎಲ್ಲಾ ಕೆರೆಗಳನ್ನೂ ತರುವಂತಹ ಕೆಲಸವನ್ನು ಮಾಡಲಾಗುತ್ತಿದೆ. ಕೆರೆ ಒತ್ತುವರಿಯಾಗುತ್ತಿರುವುದನ್ನು ನಿಲ್ಲಿಸಬೇಕು ಎಂಬುದು ಇದರ ಉದ್ದೇಶವಾಗಿದೆ. ಅದರಲ್ಲಿ ತುಂಬಿರುವ ಹೂಳೆತ್ತುವ ಕೆಲಸವನ್ನು ಮಾಡಬೇಕು. ರೈತರ ಸಹಯೋಗದಿಂದ ಪ್ರತಿಯೊಂದು ಕೆರೆಗೂ ಒಂದು ಕಮಿಟಿ ಇರಬೇಕು. Public participation ಇಲ್ಲದೆ ಕೆರೆಗಳನ್ನು ಉಳಿಸುವುದು ಕಷ್ಟವಾಗುತ್ತದೆ ಎನ್ನುವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರಣಕ್ಕಾಗಿ ಈ ವರ್ಷ ಸುಮಾರು 1200ಕ್ಕೂ ಹೆಚ್ಚು ಕೆರೆಗಳನ್ನು ಅಂದರೆ ಎಲ್ಲಾ ಕ್ಷೇತ್ರಗಳಲ್ಲಿಯೂ 5-10 ಕೆರೆಗಳನ್ನು ತೆಗೆದುಕೊಂಡು ರೈತರ ಜೊತೆಗೂಡಿ ಹೂಳು ತೆಗೆಯುವುದಕ್ಕಾಗಿ ಸುಮಾರು 60 ಕೋಟಿ ರೂಪಾಯಿಗಳ ಅಂದಾಜು ಮಾಡಿ ಹಣವನ್ನೂ ಸಹ ಬಿಡುಗಡೆ ಮಾಡಲಾಗಿದೆ. ರೈತರಿಗೆ ಪ್ರಯೋಜನ ಆಗುತ್ತಿಲ್ಲವೆಂಬುದನ್ನು ನಾನು ಒಪ್ಪುತ್ತೇನೆ. ಹವಾಮಾನದಲ್ಲಿ ಆಗುತ್ತಿರುವಂತಹ ವ್ಯತ್ಯಾಸದಿಂದ ಯಾವುದೇ ಕೆರೆಗಳು ತುಂಬುತ್ತಿಲ್ಲ. ಹೂಳು ತುಂಬಿರುವುದೇ ಮುಖ್ಯ ಕಾರಣವಾಗಿದೆ. ನಮ್ಮ ಕೆರೆಗಳನ್ನು ಉಳಿಸುವ ನಿಟ್ಟಿನಲ್ಲಿ ಅವುಗಳ ಜೀರ್ಣೋದ್ಧಾರ ಆಗಬೇಕಾಗಿದೆ. ಮೊದಲನೆಯದಾಗಿ ಕೆರೆ ಒತ್ತುವರಿಯನ್ನು ನಿಲ್ಲಿಸುವುದು ದೊಡ್ಡ ಕೆಲಸ. ಇದನ್ನು ಕೆರೆ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ಮಾಡುತ್ತಿದ್ದೇವೆ. ಅದರ ಜೊತೆಯಲ್ಲಿ ಬೆಂಗಳೂರಿನಲ್ಲಿರತಕ್ಕಂತಹ ಕೆರೆಗಳನ್ನೂ ಸಹ ಕೆರೆ ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಸೇರಿಸುವುದಕ್ಕಾಗಿ ಒಂದು ಮಸೂದೆಯನ್ನೂ ಸಹ ಮಂಡನೆ ಮಾಡುತ್ತಿದ್ದೇವೆ. ರಾಜ್ಯದಲ್ಲಿರತಕ್ಕಂತಹ ಎಲ್ಲಾ ಕೆರೆಗಳು ಒಂದು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರಬೇಕು. ಸಮಗ್ರವಾಗಿ ಅದರ ರಕ್ಷಣೆ ಮಾಡುವ ಕೆಲಸವಾಗಬೇಕೆನ್ನುವ ಉದ್ದೇಶದಿಂದ ಈ ಮಸೂದೆಯನ್ನು ಮಂಡಿಸುತ್ತಿದ್ದೇವೆ.

ಇತ್ತೀಚೆಗೆ ಬೀದರ್ ಜಿಲ್ಲೆಯ ಗಡಿಯಂಚಿನವರೆವಿಗೂ ಅಂದರೆ ಕಲಬುರಗಿಗೆ ಹೋಗಿದ್ದೆನು. ಅಲ್ಲಿನ ಸಮಸ್ಯೆಯನ್ನು ನಾನು ಅರಿತಿದ್ದೇನೆ. ಅಲ್ಲಿ ಮಳೆಯೇ ಇಲ್ಲ. ನದಿಗಳೇ ಬತ್ತಿಹೋಗುವಂತಹ ಸಂದರ್ಭದಲ್ಲಿ ಕೆರೆಗಳ ಜೀರ್ಣೋದ್ಧಾರವಾಗಬೇಕು. ಮಳೆ ನೀರನ್ನು ಹಿಡಿದಿಡುವಂತಹ ಕೆಲಸವಾಗಬೇಕು. ಅಲ್ಲಿ ತುಂಬಿರತಕ್ಕಂತಹ ಹೂಳನ್ನು ತೆಗೆಯುವ ಕೆಲಸಕ್ಕೆ ಆದ್ಯತೆಯನ್ನು ಕೊಡಬೇಕು. ಅದಕ್ಕೂ ಕೂಡ ಕಾರ್ಯಕ್ರಮವನ್ನು ರೂಪಿಸಲಾಗಿದೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ**:- ಮಾನ್ಯ ಸಭಾಪತಿಯವರೇ, ನಾನು ಕೇಳಿರುವ ಪ್ರಶ್ನೆ ನೇರವಾಗಿದೆ. 123 ಕೆರೆಗಳ ಪೈಕಿ 83 ಕೆರೆಗಳಿಂದ ರೈತರಿಗೆ ಒಂದು ಹನಿ ನೀರನ್ನೂ ಕೊಟ್ಟಿರುವುದಿಲ್ಲ.

**ಸಭಾಪತಿಯವರು**:- ಮಾನ್ಯ ಮಲ್ಕಾಪೂರೆಯವರೆ, ನೀರಿಲ್ಲ, ಅದಕ್ಕೆ ಕೊಟ್ಟಿಲ್ಲ ಎಂದು ಮಾನ್ಯ ಸಚಿವರು ಹೇಳಿದರಲ್ಲವೆ?

**ಶ್ರೀ ರಘುನಾಥರಾವ್ ಮಲ್ಕಾಪೂರೆ**:- ಮಾನ್ಯ ಸಭಾಪತಿಯವರೇ, ನೀರಿದೆ ಎಂದು ಮಾನ್ಯ ಸಚಿವರೇ ಉತ್ತರವನ್ನು ನೀಡಿದ್ದಾರೆ. ಅಂಕಿ-ಸಂಖ್ಯೆಗಳನ್ನು ತಮ್ಮ ಅವಗಾಹನೆಗೆ ತರಬಯಸುತ್ತೇನೆ. ಅವರು ಸದನಕ್ಕೆ ತಪ್ಪು ಉತ್ತರವನ್ನು ಕೊಡುತ್ತಿದ್ದಾರೆ.

**ಶ್ರೀ ಟಿ.ಬಿ.ಜಯಚಂದ್ರ**:- ಮಾನ್ಯ ಸಭಾಪತಿಯವರೇ, ಕುಡಿಯುವುದಕ್ಕೆ ನೀರು ಬೇಡವೇ? ಎಲ್ಲಾ ನೀರನ್ನು ವ್ಯವಸಾಯಕ್ಕೆ ಕೊಡಲು ಬರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ತಪ್ಪು ಉತ್ತರವನ್ನು ಸದನಕ್ಕೆ ನೀಡುತ್ತಿದ್ದಾರೆಂದು ನಾನು ಹೇಳುತ್ತಿದ್ದೇನೆ. ನಾನು ತಪ್ಪು ಹೇಳಿದ್ದರೆ, ಅವರು ಹೇಳಲಿ. ನಾನು ಸರಿಪಡಿಸಿಕೊಳ್ಳುತ್ತೇನೆ. The Hon'ble Minister cannot give wrong answer to the House. ದಯವಿಟ್ಟು ಕ್ಷಮಿಸಿ. ಬೀದರ್ ಜಿಲ್ಲೆಯ ಬೀದರ್ ತಾಲ್ಲೂಕಿನ ನಿಜಾಂಪುರ ಕೆರೆ ಅಚ್ಚುಕಟ್ಟು 67 ಎಕರೆ ಹೆಕ್ಟೇರ್ ಇದ್ದು, ನೀರಿನ ಸಾಮರ್ಥ್ಯ 11.264 ಎಂಸಿಎಫ್‌ಟಿ. 2.9 ಎಂಸಿಎಫ್‌ಟಿ ಸ್ಟಾಕ್ ಇದೆ. ಮತ್ತೆ ನೀರಿಲ್ಲ ಎಂದು ಏಕೆ ಹೇಳುತ್ತಿದ್ದಾರೆ? ಅಣದೂರ ಕೆರೆಯಲ್ಲಿ 4.16 ಎಂಸಿಎಫ್‌ಟಿ ನೀರಿದೆ. ಬಾವಗಿ ಕೆರೆಯಲ್ಲಿ 34.39 ಎಂಸಿಎಫ್‌ಟಿ ನೀರು ಇದೆ. ಸರ್ಕಾರವೇ ನೀಡಿರುವ ಅಂಕಿ ಅಂಶಗಳನ್ವಯ ನೀರು ಇದೆ. ನೀರಿದ್ದೂ ಬಿಟ್ಟಿಲ್ಲ. ನಾಲೆಗಳ ಸ್ಥಿತಿ ಬಹಳ ಹದಗೆಟ್ಟಿದೆ. ಯಾರೂ ಅದನ್ನು ದುರಸ್ತಿಗೊಳಿಸುವುದಿಲ್ಲ. ಯಾರೂ ಅದನ್ನು care ಮಾಡುವುದಿಲ್ಲ. ಅದಕ್ಕಾಗಿ ಬಂದಂತಹ ದುಡ್ಡನ್ನು ಯಲ್ಯಾ, ಮಲ್ಯಾ, ಕಲ್ಯಾ ಬಡಿದು ಮನೆಗೊಯ್ಯುತ್ತಾರೆ. ರೈತರಿಗೆ ಅನ್ಯಾಯ ಮಾಡುತ್ತಾರೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಪ್ರಸ್ತುತ ಐದು ಕೆರೆಗಳಲ್ಲಿ ಮಾತ್ರ ಶೇ.100ರಷ್ಟು ನೀರು ತುಂಬಿದೆ. 31 ಕೆರೆಗಳಲ್ಲಿ ಶೇ.50ಕ್ಕಿಂತ ಹೆಚ್ಚಿಗೆ ನೀರು ಇದೆ. 85 ಕೆರೆಗಳಲ್ಲಿ ಶೇ.50ಕ್ಕಿಂತ ಕಡಿಮೆ ನೀರು ಸಂಗ್ರಹವಾಗಿದೆ. ಮೂರು ಕೆರೆಗಳಲ್ಲಿ ನೀರೇ ಬಂದಿರುವುದಿಲ್ಲ. ಮಾನ್ಯ ಸದಸ್ಯರು ದಯಮಾಡಿ ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳಬೇಕು. ಅಂತರ್ಜಲ ಕಡಿಮೆ ಇರುವುದರಿಂದ ಕೆರೆ ತುಂಬಿರುತ್ತದೆ. ಅದಕ್ಕೂ ಮೀರಿ ಕೆರೆಯ ನೀರನ್ನು ವ್ಯವಸಾಯಕ್ಕೆ ಕೊಡಬೇಕಾದಂತಹ ಸಂದರ್ಭದಲ್ಲಿ Irrigation Consultative Committee ಇರುತ್ತದೆ. ಉಪವಿಭಾಗಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಮಿತಿ ಇರುತ್ತದೆ. ಅವರು ಸಮಿತಿಯಲ್ಲಿ ನೀರು ಕೊಡಬೇಕೆ ಅಥವಾ ಬೇಡವೇ ಎಂಬುದನ್ನು ತೀರ್ಮಾನಿಸುತ್ತಾರೆ. ಕೆರೆಯ ನೀರು ಮೊದಲು ದನಕರುಗಳಿಗೆ ಆಶ್ರಯವಾಗಬೇಕು. ಅಂತರ್ಜಲ ವೃದ್ಧಿಯಾಗಬೇಕು. ಬಾವಿಗಳಿಗೆ ನೀರು ಬರಬೇಕು. ಕೆರೆಕುಂಟೆಗಳೇ ಕುಡಿಯುವ ನೀರಿಗೆ ಮೂಲಾಧಾರ. ಆ ಹಿನ್ನೆಲೆಯಲ್ಲಿ ಶೇ.50ಕ್ಕಿಂತ ಜಾಸ್ತಿ ಇದ್ದಂತಹ ಸಂದರ್ಭದಲ್ಲಿ ಮಾತ್ರ ನೀರು ಕೊಡಬೇಕು. ಇಲ್ಲದಿದ್ದರೆ ನೀರು ಕೊಡಬಾರದು ಎನ್ನತಕ್ಕಂತಹ ಒಂದು ನಿರ್ದೇಶನ ಇದೆ. ಅಂತರ್ಜಲ ಅಭಿವೃದ್ಧಿ ಇಲಾಖೆಯು ಕೂಡ ನಮ್ಮ ವ್ಯಾಪ್ತಿಗೆ ಬರುತ್ತದೆ. ಆ ಇಲಾಖೆಯನ್ನು ಬಲಗೊಳಿಸಿ ಪ್ರತಿವರ್ಷವೂ ಸಹ ಅಂತರ್ಜಲವನ್ನು assess ಮಾಡಿ ವರ್ಷವರ್ಷಕ್ಕೂ ಅಂತರ್ಜಲ ಮಟ್ಟ ಎಷ್ಟು ಕುಸಿಯುತ್ತಿದೆ ಎಂಬುದನ್ನು ಅಂದಾಜಿಸಲಾಗುತ್ತದೆ. ಜಿಲ್ಲಾಧಿಕಾರಿಯವರು ತೀರ್ಮಾನವನ್ನು ತೆಗೆದುಕೊಳ್ಳಬೇಕಾದ ಸಂದರ್ಭದಲ್ಲಿ ಅಂತರ್ಜಲ ಅಭಿವೃದ್ಧಿ ಇಲಾಖೆಯ ಸಲಹೆಯನ್ನು ಪಡೆದೇ ಅವರು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಹೇಮಾವತಿ ನದಿಯ ನೀರಿನಿಂದ ನಮ್ಮಲ್ಲಿ ಕೆರೆಗಳು ತುಂಬಿದ್ದವು. ಆದರೆ ಅಂತರ್ಜಲ ಕುಸಿಯುತ್ತಿರುವುದರಿಂದ ನಾವು ಯಾವ ಕೆರೆಯ ನೀರನ್ನು ಬೆಳೆಗಳಿಗೆ ಕೊಡುವುದಕ್ಕೆ ಹೋಗಲಿಲ್ಲ. ಇದರ ಮೇಲುಸ್ತುವಾರಿಯನ್ನು ನೋಡುವುದಕ್ಕೆ ಒಂದು

Irrigation Consultative Committee ಎಂದು ಇದೆ. ಮಾನ್ಯ ಮಲ್ಕಾಪೂರೆಯವರೂ ಸಹ ಅದರ ಸದಸ್ಯರಾಗಿರುತ್ತಾರೆ. ಅವರಿಗೂ ಸಹ ಗೊತ್ತಿದೆ. ಅದನ್ನು ಆಧರಿಸಿಯೇ ತೀರ್ಮಾನ ಮಾಡಲಾಗುತ್ತದೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಭಾಗಶಃ ಕೆರೆಗಳಲ್ಲಿ ಹೂಳು ತುಂಬಿರುವ ಕಾರಣಕ್ಕಾಗಿ ಶೇ.50ಕ್ಕಿಂತ ಹೆಚ್ಚು ನೀರು ಶೇಖರಣೆಯಾಗಿರುವಂತಹ ಕೆರೆಗಳಿಂದ ಬೆಳೆಗಳಿಗೆ ನೀರು ಕೊಡಲಾಗುತ್ತಿಲ್ಲ, ದನ ಕರುಗಳಿಗೆ ಮಾತ್ರ ನೀರು ಕೊಡಲಾಗುತ್ತದೆ ಎಂದು ಮಾನ್ಯ ಸಚಿವರು ಹೇಳಿದರು. ಸಂತೋಷ. ಹಾಗಾದರೆ ಯಾವ ಯಾವ ಕೆರೆಗಳಿಗೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಿದ್ದಾರೆ? ಬಿಡುಗಡೆಯಾದಂತಹ ಹಣದಲ್ಲಿ ಪ್ರಾಮಾಣಿಕವಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ? ಮಾನ್ಯ ಸಚಿವರು ಕೊಟ್ಟಂತಹ ಅಂಕಿ ಸಂಖ್ಯೆಗಳನ್ನು ನಾನು ಇಲ್ಲಿ ಹೇಳುತ್ತೇನೆ. ಕ್ರಮ ಸಂಖ್ಯೆ 4ರಲ್ಲಿರುವ ಬೀದರ್ ಜಿಲ್ಲೆಯ ಬೋಂತಿ ಕೆರೆಗೆ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ರೂ.30 ಲಕ್ಷಗಳು ಮಂಜೂರಾಗಿದೆ. ಆದರೆ ಖರ್ಚು ಸೊನ್ನೆ. ಎರಡನೆಯದು...

**ಸಭಾಪತಿಯವರು:-** ಮಾನ್ಯ ಮಲ್ಕಾಪೂರೆಯವರೆ, ವಿವರಗಳು ಬೇಡ. You come to your question. ಒಂದು ಉದಾಹರಣೆಯನ್ನು ಕೊಟ್ಟಿದ್ದೀರಿ, ಸಾಕು.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಕೇವಲ ಇದೊಂದೇ ಅಲ್ಲ. ಎಲ್ಲವನ್ನೂ ನಿಮಗೆ ಹೇಳುತ್ತಿದ್ದೇನೆ. ಬಂಡಾರಕುಂಟಾ ಕೆರೆ – 40 ಲಕ್ಷ – 0. ತೇಗಂಪೂರ ಕೆರೆ – 3 ಲಕ್ಷ – ಖರ್ಚು 91.

**ಸಭಾಪತಿಯವರು:-** ಮಾನ್ಯ ಮಲ್ಕಾಪೂರೆಯವರೆ, ಆ ವಿವರಗಳೆಲ್ಲಾ ಇಲ್ಲಿ ಉತ್ತರದಲ್ಲಿದೆ. What is your question?

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಭಾಗಶಃ ಕೆರೆಗಳಿಗೆ ದುಡ್ಡು allotment ಆಗಿಲ್ಲ. ದಯವಿಟ್ಟು ಸಚಿವರು ಇದರ ಬಗ್ಗೆ ಹೇಳಬೇಕು.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಈ ಅಂಕಿ ಅಂಶಗಳಲ್ಲಿ ರೂಪಾಯಿ, ಲಕ್ಷ, ಕೋಟಿ ಎಂದೇನೂ ನಮೂದಿಸಿಲ್ಲ. ದಯಮಾಡಿ ಮಾನ್ಯ ಸಚಿವರು ಇದನ್ನು ಗಮನಿಸಬೇಕು.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಮಲ್ಕಾಪೂರೆಯವರು ಕೇಳಿರುವುದಕ್ಕೆ ಅಂಕಿ ಅಂಶಗಳನ್ನು ಕೊಟ್ಟಿದ್ದೇನೆ. ಅದರಲ್ಲಿಯೂ ಅನುಮಾನಗಳೇನಾದರೂ ಇದ್ದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿವರಣೆ ಕೊಡುವುದಕ್ಕೆ ನಾವು ತಯಾರಿದ್ದೇವೆ. ಬೀದರ್ ಜಿಲ್ಲೆಯ ಸಂಪೂರ್ಣವಾದಂತಹ ಚಿತ್ರಣ ಅವರ ಮುಂದೆ ಇದೆ. ಅದರಲ್ಲಿ ಅನುಮಾನಗಳಿದ್ದಲ್ಲಿ ಬಗೆಹರಿಸಲಾಗುವುದು.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಅಂಕಿ ಅಂಶಗಳನ್ನು ಕೇಳುವುದು ಏಕೆ? ಕೊರಳಿಗೆ ಹಾಕಿಕೊಂಡು ಓಡಾಡುವುದಕ್ಕಾಗಿಯೇ? ಅವರ ಅಂಕಿ ಸಂಖ್ಯೆಗಳ ಪ್ರಕಾರ ದುಡ್ಡನ್ನು ಖರ್ಚು ಮಾಡದೆ ಸುಮ್ಮನೆ ಖರ್ಚು ಮಾಡಿರುವುದಕ್ಕೆ ಕಾರಣವೇನು ಎಂದು ಕೇಳುತ್ತಿದ್ದೇನೆ. First of all the government has not allocated funds for all the tanks. ಎರಡನೆಯದಾಗಿ ಹಣ ಹಂಚಿಕೆ ಮಾಡಿರುವ ಕೆರೆಗಳಿಗೆ ಹಣವನ್ನು ಖರ್ಚು ಮಾಡಿಲ್ಲ. ಇದಕ್ಕೆ ಕಾರಣವೇನು?

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ರಾಮಚಂದ್ರಗೌಡರು ಕೇಳಿದಂತೆ ಅಂಕಿ ಅಂಶಗಳನ್ನು ಲಕ್ಷ ರೂಪಾಯಿಗಳಲ್ಲಿ ಎಂದು ತಿಳಿಸಬಯಸುತ್ತೇನೆ. ನಾವು plan ಮಾಡುವಾಗ ambitious ಆಗಿ Action Plan ಅನ್ನು ಮಾಡುತ್ತೇವೆ.

**Sri RAGHUNATHRAO MALKAPURE:** I am an Engineer, I know it.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಸಣ್ಣ ನೀರಾವರಿ ಕೆರೆಗಳಲ್ಲಿ ಬರುತ್ತಿದ್ದುದು 3700 ಕೆರೆಗಳು ಮಾತ್ರ. ಇತ್ತೀಚೆಗೆ ಈಗ ಒಂದೆರಡು ತಿಂಗಳುಗಳಿಂದ ಎಲ್ಲಾ ಕೆರೆಗಳು ನಮ್ಮ ವ್ಯಾಪ್ತಿಗೆ ಬರುತ್ತಿವೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವ ಕೆರೆಗಳ ಅಂಕಿ ಸಂಖ್ಯೆಗಳ ಬಗ್ಗೆ ಮಾತ್ರ ನಾನು ಕೇಳುತ್ತಿದ್ದೇನೆ. ಅವರು ಕೊಡದಿರುವ ಕೆರೆಗಳ ಅಂಕಿಸಂಖ್ಯೆಗಳ ಬಗ್ಗೆ ನಾನು ಕೇಳುತ್ತಿಲ್ಲ. ಹಣವನ್ನು ಏಕೆ allotment ಮಾಡಿಲ್ಲ? ಮಾಡಿದ್ದಲ್ಲಿ ಏಕೆ ಖರ್ಚು ಮಾಡುತ್ತಿಲ್ಲ?

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಹಣ ಇದ್ದರೆ ತಾನು ಖರ್ಚು ಮಾಡುವುದು.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಹಣ ಇದೆಯೆಂದು ಉತ್ತರದಲ್ಲಿ ಕೊಟ್ಟಿರುತ್ತಾರೆ.

(162) 21.02.2018 11.50. ಕೆಜಿ.ಎಕೆ

**ಶ್ರೀ ಟಿ.ಬಿ.ಜಯಚಂದ್ರ:-** ಅದು ಪ್ರಗತಿಯಲ್ಲಿ ಇದೆ. ಹಾಗಾಗಿ, ಆ ಹಣ ವೆಚ್ಚ ಆಗುತ್ತದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಫೆಬ್ರವರಿ ತಿಂಗಳು ಮುಗಿಯುತ್ತಾ ಬರುತ್ತಿದೆ. ಅವರು ಇನ್ನು ಯಾವಾಗ ಪ್ರಗತಿ ಮಾಡುತ್ತಾರೆ?

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಪ್ರಗತಿಯಲ್ಲಿದೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಈ ಹಣಕಾಸಿನ ವರ್ಷ ಮುಗಿದು ಹೋಗುತ್ತಿದೆ. ಇನ್ನು ಯಾವಾಗ ಖರ್ಚು ಮಾಡುತ್ತಾರೆ? There is zero expenditure.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಇಲ್ಲಿ ಹಣದ ಲಭ್ಯತೆ ಬಹಳ ಮುಖ್ಯವಾಗುತ್ತದೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಅಂದರೆ ಅವರು ಮಳೆ ಬಿದ್ದ ಮೇಲೆ ಈ ಕಾರ್ಯವನ್ನು ಕೈಗೊಳ್ಳುತ್ತಾರೆಯೇ?

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, allocation ಆಗಿರುತ್ತದೆ. ಹಣದ ಲಭ್ಯತೆಯನ್ನು ನೋಡಿಕೊಂಡು ಖರ್ಚು ಮಾಡುತ್ತೇವೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಅವರು ಮಳೆ ಬಿದ್ದ ಮೇಲೆ ಕೆರೆಗಳಲ್ಲಿನ ಹೂಳನ್ನು ತೆಗೆಯುತ್ತಾರೆಯೇ?

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಾವು ಈಗಾಗಲೇ ಈ ಕೆರೆಗಳನ್ನು ತುಂಬಿಸುವುದಕ್ಕಾಗಿ 60 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ನಮಗೆ ಕಾಮಗಾರಿಗಳನ್ನು ಮುಗಿಸುವುದಕ್ಕೆ ಯಾವುದೇ ತೊಂದರೆಯಾಗುವುದಿಲ್ಲ. ಮಾನ್ಯ ಸದಸ್ಯರಾದ ರಘುನಾಥರಾವ್ ಮಲ್ಕಾಪೂರೆಯವರು ಎತ್ತಿರುವಂತಹ ಪ್ರಶ್ನೆಗೆ ಆದ್ಯತೆ ಕೊಟ್ಟು ಕಾಮಗಾರಿಗಳನ್ನು ಆದಷ್ಟು ಬೇಗ ಮುಗಿಸುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿವರೇ, ನಾನು ಮಾನ್ಯ ಸಚಿವರಲ್ಲಿ ಕೈ ಮುಗಿದು ಕೇಳುತ್ತೇನೆ. ಅವರು ಕೊಟ್ಟಂತಹ zero expenditure ಕೆರೆಗಳ ಸಂಖ್ಯೆ ಎಷ್ಟು? ಅದಕ್ಕೆ ಏನು ಮಾಡುತ್ತಾರೆ ಎಂಬುದನ್ನು ಹೇಳಲಿ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿವರೇ, zero expenditure ಆಗಿರುವಂತಹ ಕಡೆಗೆ ಹಣವನ್ನು ಖರ್ಚು ಮಾಡುತ್ತೇವೆ. ಈಗ ಹಣವನ್ನು ಬಿಡುಗಡೆ ಮಾಡಿದ್ದೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಅವರು ಯಾವಾಗ ಖರ್ಚು ಮಾಡುತ್ತಾರೆ? ಮುಂದಿನ ವರ್ಷ ಮಾಡುತ್ತಾರೆಯೇ? ಈಗಾಗಲೇ ಫೆಬ್ರವರಿ ತಿಂಗಳು ಮುಗಿಯುತ್ತಿದೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, 60 ಕೋಟಿ ರೂಪಾಯಿಗಳನ್ನು Tank Development Authority ಗೆ ಠೇವಣಿ ಮಾಡಿರುವುದರಿಂದ ಹಣ lapse ಆಗುವುದಿಲ್ಲ. ಆ ಹಣದಲ್ಲಿ ಕೆರೆಗಳ ಕಾಮಗಾರಿಗಳನ್ನು ಮಾಡುತ್ತೇವೆ. ಆದ್ಯತೆಯ ಮೇರೆಗೆ ಬೀದರ್‌ನ ಕೆರೆಗಳ ಕಾಮಗಾರಿಗಳನ್ನು ಸಹ ಮುಗಿಸುತ್ತೇವೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೆರೆಗಳ ಹಣವನ್ನು ಬ್ಯಾಂಕಿನಲ್ಲಿ F.D. (Fixed Deposit) ಮಾಡುವುದಕ್ಕಾಗಿ ಕೊಟ್ಟಿದ್ದಾರೆಯೇ?

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಆಯಿತು ಬಿಡಿ. ಸಮಯ ಆಯಿತು.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರ ಏನು?

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಇದು ಪ್ರಶ್ನೋತ್ತರ ಅವಧಿ. 12 ನಿಮಿಷ ಆಗಿದೆ. ನಾನು ಮಾನ್ಯ ಸಚಿವರಿಗೆ ಈ ರೀತಿಯೇ ಉತ್ತರ ಕೊಡಿ ಎಂದು ಹೇಳುವುದಕ್ಕೆ ಬರುವುದಿಲ್ಲ. ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ ಅಷ್ಟೇ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಮ್ಮಲ್ಲಿ ಮಲತಾಯಿ ಧೋರಣೆ ಇಲ್ಲ. ಬೀದರ್‌ಗೆ ಆದ್ಯತೆ ಕೊಟ್ಟು, ಕಾಮಗಾರಿಗಳನ್ನು ಮುಗಿಸುತ್ತೇವೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಅವರು ಹೈದರಾಬಾದ್ ಕರ್ನಾಟಕವನ್ನು ಅಭಿವೃದ್ಧಿ ಮಾಡುತ್ತೇವೆಂದು ಪಣತೊಟ್ಟು, ಈಗ ಅಭಿವೃದ್ಧಿ ಮಾಡದೆ ಈ ಶೂನ್ಯ ಮಾಡಿದರೆ ಹೇಗೆ? ದಯವಿಟ್ಟು, ಮಾನ್ಯ ಸಚಿವರ ಕೈಯಲ್ಲಿ ಆಗಲಿಲ್ಲವೆಂದರೆ, ಈ ಇಲಾಖೆಯನ್ನು ಬೇರೆಯವರಿಗೆ ಬಿಟ್ಟು ಕೊಡಲಿ. ನಮ್ಮಲ್ಲಿ ಅನೇಕ ಜನ ಯುವಕರು ಇದ್ದಾರೆ. ಮಾನ್ಯ ಸಚಿವರಾದ ಎಂ.ಬಿ.ಪಾಟೀಲ್‌ರವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ರೀತಿಯ ವಾದ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅವರು ಸರ್ಕಾರದ ಉತ್ತರವನ್ನು ನಂಬಬೇಕಾಗುತ್ತದೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ದಯವಿಟ್ಟು ನನ್ನನ್ನು ಕ್ಷಮಿಸಬೇಕು. I am not satisfied. This is not the answer.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಸಾಕಷ್ಟು ಹಣ ಇದೆ. ಅದನ್ನು ಖರ್ಚು ಮಾಡಿ ಕಾಮಗಾರಿಗಳನ್ನು ಮುಗಿಸುತ್ತೇವೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ನಾನು ಅದನ್ನು ಹೇಳುತ್ತಿಲ್ಲ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅದನ್ನೇ ಹೇಳುತ್ತಿದ್ದಾರೆ. ಈಗ 60 ಕೋಟಿರೂಪಾಯಿಗಳನ್ನು ಬಿಡುಗಡೆ ಮಾಡಿ ಎರಡು ತಿಂಗಳು ಆಗಿದೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಎಷ್ಟು ಕಾಮಗಾರಿಗಳಿಗೆ ಬಿಡುಗಡೆ ಮಾಡಿದ್ದಾರೆ?

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, there are many number of works. ಮಾನ್ಯ ಸದಸ್ಯರು ಹೇಳುವಂತಹ ಎಲ್ಲಾ ಕಾಮಗಾರಿಗಳನ್ನು ಮುಗಿಸಬೇಕಾದರೆ 600 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದರೆ, ಮಾನ್ಯ ಸದಸ್ಯರು ಹೇಳುವುದನ್ನು ನಾನು ಒಪ್ಪುತ್ತೇನೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಅವರು ಇರುವ ಹಣವನ್ನೇ ಖರ್ಚು ಮಾಡಿಲ್ಲ. ನಾನು ಬೇರೆ ಹಣದ ವಿಷಯವನ್ನು ಹೇಳುತ್ತಿಲ್ಲ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, allocation ಆಗಿರುತ್ತದೆ. ಹಣ ಬಿಡುಗಡೆಯಾದ ನಂತರ ಖರ್ಚು ಮಾಡುತ್ತೇವೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಅವರು ಮತ್ತೆ ಯಾವಾಗ ಬಿಡುಗಡೆ ಮಾಡುತ್ತಾರೆ? ಈಗಾಗಲೇ ಫೆಬ್ರವರಿ ತಿಂಗಳು ಮುಗಿಯುತ್ತಿದೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಾವು ಈಗಾಗಲೇ ಖರ್ಚು ಮಾಡಿದ್ದೇವೆ. ನಾನು ಮಾನ್ಯ ಸದಸ್ಯರಿಗೆ ಹೇಳುತ್ತಿರುವುದು ಅರ್ಥವಾಗುತ್ತಿಲ್ಲ. ಈಗಾಗಲೇ 60 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅದನ್ನು Tank Development Authority ಮುಖೇನ ಖರ್ಚು ಮಾಡುತ್ತೇವೆ.

**ಶ್ರೀ ರಘುನಾಥರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೇ, ಅದರಲ್ಲಿ HKRDB ಹಣ ಇದೆ. ಮಾನ್ಯ ಸಚಿವರು ಏಕೆ ಈ ರೀತಿ ಮಾಡುತ್ತಿದ್ದಾರೆ.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಈ ರೀತಿ ಕೇಳಿದರೆ ನಮಗೆ ಉತ್ತರ ಹೇಳಲು ಕಷ್ಟವಾಗುತ್ತದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಆಯಿತು ಬಿಡಿ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಹಣ ಬಿಡುಗಡೆ ಮಾಡಿ ಖರ್ಚು ಮಾಡುತ್ತೇವೆ. ಮಾನ್ಯ ಸದಸ್ಯರು ಪದೇ ಪದೇ ಅದೇ ಪ್ರಶ್ನೆಯನ್ನು ಕೇಳಿದರೆ ಹೇಗೆ?

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನೀವು ಪ್ರಶ್ನೆ ಕೇಳಿದ್ದೀರಿ. ಮಾನ್ಯ ಸಚಿವರು ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಇದು ಪ್ರಶ್ನೋತ್ತರ ಅವಧಿ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಾವು ಉತ್ತರ ಕೊಟ್ಟಿದ್ದೇವೆ. ಅವರು ಬೇಡವೆಂದರೂ ಸಹ ನಾವು ಆ ಕಾಮಗಾರಿಗಳನ್ನು ಮಾಡುತ್ತೇವೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಆಯಿತು. ದಯವಿಟ್ಟು ಕುಳಿತುಕೊಳ್ಳಿ. ಮುಂದಿನ ಪ್ರಶ್ನೆ ಶ್ರೀ ಸೋಮಣ್ಣ ಮ ಬೇವಿನಮರದ ಅವರದ್ದು. He is absent. ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದ ಬಿ.ಜೆ.ಪುಟ್ಟಸ್ವಾಮಿಯವರದ್ದು.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಸೋಮಣ್ಣ ಮ ಬೇವಿನಮರದ ತಮಗೆ ಪತ್ರ ಕೊಟ್ಟಿದ್ದಾರೆ ಎಂದು ತಿಳಿಸಿದ್ದಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ನನಗೆ ಯಾವುದೇ ಪತ್ರ ಬಂದಿಲ್ಲ. ಅವರು ಕೊಟ್ಟಿಲ್ಲ ಬಿಡಿ. ನನ್ನ ಕೊಠಡಿಗೆ ಬಂದು ಕೊಡಬೇಕು.

ಪ್ರಶ್ನೆ ಸಂಖ್ಯೆ: 833

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಇದರಲ್ಲಿ ಒಂದು ಮಾಹಿತಿಗಾಗಿ ಈ ಪ್ರಶ್ನೆಯನ್ನು ಕೇಳಿದ್ದೆ. ಏಕೆಂದರೆ, ಈ ಸರ್ಕಾರದವರು ಕೇಂದ್ರ ಸರ್ಕಾರದವರು ಕೊಡಲಿಲ್ಲ, ಕೊಡುತ್ತಿಲ್ಲ, ಬರುತ್ತದೆ, ಬರುತ್ತದೆ ಎಂದು ಹೇಳುತ್ತಿದ್ದಾರೆ. ಕಳೆದ 5 ವರ್ಷಗಳಲ್ಲಿ ಕೇಂದ್ರದಲ್ಲಿ ಯುಪಿಎ ಸರ್ಕಾರ ಅಧಿಕಾರದಲ್ಲಿ ಇದ್ದಾಗ 27,227 ಕೋಟಿ ರೂಪಾಯಿಗಳನ್ನು ಕೇಳಿದ್ದರು. ಆಗ ಅವರು 2,420 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರು. ಅಂದರೆ, 9% ರಷ್ಟು ಕೊಟ್ಟಿದ್ದರು. ನಮ್ಮ ಬಿ.ಜೆ.ಪಿ ಸರ್ಕಾರ 17,524 ಕೋಟಿ ರೂಪಾಯಿಗಳಿಗೆ 5,371 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿಗೆ 32% ರಷ್ಟು ಕೊಟ್ಟಿದ್ದಾರೆ. ಅಂದರೆ, ಒಂದಕ್ಕೆ ಮೂರರಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಿದ್ದಾರೆ. ಹಾಗಾಗಿ, ಇವರು ಕೇಂದ್ರ ಸರ್ಕಾರದವರು ಕೊಟ್ಟಿಲ್ಲ, ಕೊಟ್ಟಿಲ್ಲವೆಂದು ಹೇಳುವಂತಹ ಅವಶ್ಯಕತೆ ಇಲ್ಲ. ಹಾನಿಗೊಳಗಾದ ರೈತರಿಗೆ ಈ ಹಣ ಪಾವತಿ ಆಗಿದೆಯೇ ಎನ್ನುವುದು ಒಂದೇ ಪ್ರಶ್ನೆ.

**ಸಭಾಪತಿಯವರು:-** ಮಾನ್ಯ ಸಚಿವರೇ, ಹಾನಿಗೊಳಗಾದ ರೈತರಿಗೆ ಈ ಹಣವನ್ನು ಪಾವತಿ ಮಾಡಲಾಗಿದೆಯೇ ಎಂಬುದನ್ನು ಕೇಳುತ್ತಿದ್ದಾರೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಎಲ್ಲಾ ಹಣ ಪಾವತಿಯಾಗಿದೆ. ಕೆಲವು ಜಿಲ್ಲೆಗಳಲ್ಲಿ ಸುಮಾರು 50 ಲಕ್ಷ ರೂಪಾಯಿಗಳು ಉಳಿದಿತ್ತು. ಏಕೆಂದರೆ, ಕೆಲವು ಅಂಕಿ-ಅಂಶಗಳು ಮತ್ತು ಅವರು ಕೊಟ್ಟಂತಹ ದಾಖಲೆಗಳಲ್ಲಿ ವ್ಯತ್ಯಾಸ ಆಗಿದ್ದರಿಂದ ಕೊಡುವುದಕ್ಕೆ ಆಗಲಿಲ್ಲ. ಅದನ್ನು ಸಹ ಸಂಪೂರ್ಣವಾಗಿ ಕೊಟ್ಟು ಪೂರೈಸುತ್ತೇವೆ.

**ಸಭಾಪತಿಯವರು:-** ಧನ್ಯವಾದಗಳು. ಮುಂದಿನ ಪ್ರಶ್ನೆ ಮಾನ್ಯ ಸದಸ್ಯರಾದ ಪ್ರಸನ್ನಕುಮಾರ್‌ರವರದ್ದು. ಅದು ವರ್ಗಾವಣೆಯಾಗಿದೆ. ಮುಂದಿನ ಪ್ರಶ್ನೆ ಶ್ರೀ ಐವನ್ ಡಿ ಸೋಜಾರವರದ್ದು,

ಪ್ರಶ್ನೆ ಸಂಖ್ಯೆ: 895

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾವು ಪಶ್ಚಿಮವಾಹಿನಿ ಯೋಜನೆಯ ಬಗ್ಗೆ ಬಹಳ ಹೋರಾಟವನ್ನು ಮಾಡಿ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಕುಡಿಯುವ ನೀರನ ಲಭ್ಯತೆಯಾಗಬೇಕೆಂದು ಹಾಗೂ ಕೃಷಿಯ ಬೆಳೆಗಳಿಗೆ ಹೆಚ್ಚು ನೀರನ್ನು ಒದಗಿಸಬೇಕೆಂದು ಮಾನ್ಯ ಸಚಿವರಲ್ಲಿ ಪ್ರಶ್ನೆಯನ್ನು ಕೇಳಿದ್ದೆ. ಇದಕ್ಕೆ 2017-2018ನೇ ಸಾಲಿನ ಬಜೆಟ್‌ನಲ್ಲಿ 100 ಕೋಟಿ ರೂಪಾಯಿಗಳನ್ನು ನಿಗಧಿ ಪಡಿಸಿ ಪ್ರಕಟಿಸಿದ್ದರು. ತದನಂತರ 200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ನಾನು ಇದನ್ನು ಸ್ವಾಗತ ಮಾಡುತ್ತೇನೆ ಮತ್ತು ಇನ್ನೂ ಹೆಚ್ಚು ಹಣವನ್ನು ಈ ಯೋಜನೆಗೆ ಬಿಡುಗಡೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಪಶ್ಚಿಮವಾಹಿನಿ ಯೋಜನೆಯಡಿಯಲ್ಲಿ ಕೈಗೊಳ್ಳಲು ನಿರ್ಧರಿಸಿದ ಕಾಮಗಾರಿಗಳಾವುವು: ಈ ಕಾಮಗಾರಿಗಳಿಗೆ ತಗಲುವ ವೆಚ್ಚವೆಷ್ಟು? ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸಮಿತಿ ರಚಿಸಲಾಗಿದೆಯೇ ಎಂದು ಎರಡನೆಯ ಪ್ರಶ್ನೆಯನ್ನು ಕೇಳಿದ್ದೆ. ನಾನು ಈ ಪ್ರಶ್ನೆಯನ್ನು ಕೇಳಿರುವಂತಹ ಉದ್ದೇಶವೇನೆಂದರೆ, ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಿಂಡಿಅಣೆಕಟ್ಟುಗಳು ಇವೆ. ಉಡುಪಿ ಜಿಲ್ಲೆಯಲ್ಲಿ 257 ಕಿಂಡಿ ಅಣೆಕಟ್ಟುಗಳು ಇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 212 ಕಿಂಡಿಅಣೆಕಟ್ಟುಗಳು ಇವೆ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ 278 ಕಿಂಡಿಅಣೆಕಟ್ಟುಗಳು ಇವೆ. ಈ ಯೋಜನೆಗೆ 200 ಕೋಟಿ ರೂಪಾಯಿಗಳು ಬಿಡುಗಡೆ ಆಗಿದೆ. ಆ ಹಣ ಯಾವ ಯಾವ ಕಾಮಗಾರಿಗಳಿಗೆ ಎನ್ನುವುದಕ್ಕೆ ಒಂದು ಲಿಸ್ಟ್‌ನ್ನು ಕೊಟ್ಟಿದ್ದಾರೆ. ಆ ಲಿಸ್ಟ್‌ನ ಪ್ರಕಾರ, ಉತ್ತರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕನ್ನಡ ಜಿಲ್ಲೆಗೆ 29 ಕಾಮಗಾರಿಗಳು. ಉಡುಪಿ ಜಿಲ್ಲೆಗೆ 15 ಕಾಮಗಾರಿ ಮತ್ತು ಮಂಗಳೂರಿನಲ್ಲಿ 9 ಕಾಮಗಾರಿಗಳನ್ನು ತೆಗೆದುಕೊಂಡಿರುತ್ತಾರೆ. ಈ 200 ಕೋಟಿ ರೂಪಾಯಿಗಳು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಇದರ ಹೆಚ್ಚು ಅವಶ್ಯಕತೆ ಇತ್ತು. ಆದರೆ, ಈ ಜಿಲ್ಲೆಗಳಿಗೆ 200 ಕೋಟಿ ರೂಪಾಯಿಗಳ ಪ್ರಯೋಜನವಾಗಲಿಲ್ಲವೆಂದು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಈ ಯೋಜನೆಗೆ ಯಾವ ಯಾವ ಕಾಮಗಾರಿಗಳು ಸೇರಿವೆ ಎಂದು ಕೇಳಿದ್ದಕ್ಕೆ, ಎಲ್ಲಾ ಕಾಮಗಾರಿಗಳನ್ನು ಕೊಟ್ಟಿದ್ದಾರೆ. ನಮ್ಮ ಉದ್ದೇಶ ಇರುವುದು ಕಿಂಡಿಅಣೆಕಟ್ಟುಗಳ ದುರಸ್ಥಿಯ ಬಗ್ಗೆ. ಉಡುಪಿ ಜಿಲ್ಲೆಯಲ್ಲಿ 257 ಕಿಂಡಿಅಣೆಕಟ್ಟುಗಳು ಇದ್ದರೆ, ಇದರಲ್ಲಿ ಯಾವ ಕಿಂಡಿಅಣೆಕಟ್ಟುಗಳು ಸಹ ಸುಸ್ಥಿತಿಯಲ್ಲಿ ಇಲ್ಲ. ಹೆಸರಿಗೆ ಮಾತ್ರ ಕಿಂಡಿಅಣೆಕಟ್ಟುಗಳು. ಅವುಗಳನ್ನು ದುರಸ್ಥಿ ಮಾಡುವುದಕ್ಕೆ ಮತ್ತು ಅವುಗಳನ್ನು ಸರಿಯಾಗಿ ನಿರ್ವಹಣೆ ಮಾಡುವುದಕ್ಕೆ ನಮ್ಮಲ್ಲಿ ಹಣ ಇಲ್ಲ. ಹಾಗಾಗಿ, ನೀರು ನೇರವಾಗಿ ಹರಿದು ಹೋಗುತ್ತದೆ. ಹಾಗಾಗಿ, ನಮ್ಮ ಜಿಲ್ಲೆಗಳಿಗೆ ಕುಡಿಯುವ ನೀರಿನ ಸಮಸ್ಯೆ ಬಂದಿರುತ್ತದೆ. ಅಲ್ಲಿ ಭತ್ತದ ಬೆಳೆಗಳನ್ನು ಮಾಡುತ್ತಿಲ್ಲ. ಏಕೆಂದರೆ, ಮೂರು ಭತ್ತದ ಬೆಳೆಗಳನ್ನು ಮಾಡುವುದಕ್ಕೆ ಸರಿಯಾದ ಪ್ರಮಾಣದಲ್ಲಿ ನೀರು ಸಿಗುತ್ತಿಲ್ಲ. ಇದಕ್ಕೆ ಉದಾಹರಣೆ ಕಿಂಡಿಅಣೆಕಟ್ಟುಗಳನ್ನು ಕಟ್ಟಿದ್ದಾರೆ. ಆದರೆ, ಅವುಗಳನ್ನು ದುರಸ್ಥಿ ಮಾಡಬೇಕು. 200 ಕೋಟಿ ರೂಪಾಯಿಗಳನ್ನು ಯಾವುದೋ ಕಾಮಗಾರಿಗಳಿಗೆ ಕೊಟ್ಟರೆ, ನಾವು ಬಯಸಿದಂತಹ ಕೆಲಸ ಮತ್ತು ನಮ್ಮ ಉದ್ದೇಶ ಈಡೇರುವುದಕ್ಕೆ ಆಗುವುದಿಲ್ಲವೆಂದು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಪತಿಯವರೇ, ಇದರ ಜೊತೆಗೆ ಸಮಿತಿಯನ್ನು ರಚನೆ ಮಾಡಿದ್ದಾರೆಯೇ ಎಂಬ ವಿಷಯದ ಬಗ್ಗೆ ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು ಸಮಿತಿಗಳ ಅಗತ್ಯವಿಲ್ಲ, ಅದನ್ನು ನಮ್ಮ ಅಧಿಕಾರಿಗಳೇ ಮಾಡುತ್ತಾರೆಂದು ಹೇಳಿದ್ದಾರೆ. ನಾವು ಹೋರಾಟ ಮಾಡಿರುವಂಥದ್ದು, ನಮ್ಮ ರೈತರ ಮತ್ತು ಕುಡಿಯುವ ನೀರಿನ ಸಮಸ್ಯೆಗಳ ಬಗ್ಗೆ. ನಮ್ಮ ಜನಪ್ರತಿನಿಧಿಗಳನ್ನು ಕರೆದು ಸಮಿತಿಯನ್ನು ಮಾಡಲಿ. ಇಷ್ಟೊಂದು ದೊಡ್ಡ project ಅನ್ನು ಮಾಡುತ್ತಾರೆ. ಇವತ್ತು 200 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಮುಂದಕ್ಕೂ ಸಹ 200 ಅಥವಾ 500 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಾರೆ. ಕೇವಲ ಅಧಿಕಾರಿಗಳು ಅವರಿಗೆ ಬೇಕಾದ ತೋಡು ರಿಪೇರಿ ಮಾಡುವುದೋ, ತೋಡು ಕಟ್ಟುವುದೋ ಅಥವಾ ಬೇರೆ ಬೇರೆ ಕಾಮಗಾರಿಗಳನ್ನು ಮಾಡಿದರೆ ಕುಡಿಯುವ ನೀರಿಗೆ ಆದ್ಯತೆ ಹೇಗೆ ಬರುತ್ತದೆ? ಹಾಗಾಗಿ, ಇದನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕಾಗಿಯೇ ಈ ಪ್ರಶ್ನೆಯನ್ನು ಕೇಳಿದ್ದೆ. ಈ ಬಗ್ಗೆ ಸ್ವತಃ ಮಾನ್ಯ ಸಚಿವರೇ ಪರಿಶೀಲನೆ ಮಾಡಬೇಕು. ನಾನು ಈ ಹಿಂದೆ ಈ ಪ್ರಶ್ನೆಯನ್ನು ಕೇಳಿದ್ದೆ. ಆಗ ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಉತ್ತರ ಬಂದಿದೆ, ಆದರೆ, ಆ ಉತ್ತರ ಸಮರ್ಪಕವಾಗಿ ಇಲ್ಲ. ಆ ಉತ್ತರ ನನ್ನ ಮನಸ್ಸಿಗೆ ಸಮಧಾನವಾಗಿಲ್ಲ. ಹಾಗಾಗಿ, ನಾನು ಆ ಉತ್ತರವನ್ನು ಹಿಂದಕ್ಕೆ ಕಳುಹಿಸಿದ್ದೇನೆ ಎಂದು ತಿಳಿಸಿದ್ದರು ಹಾಗೂ ಉತ್ತರವನ್ನು ಕೊಡುವುದಕ್ಕೆ ಸಮಯಾವಕಾಶ ಬೇಕೆಂದು ಕೇಳಿದ್ದರು. That

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

means you are applying your mind. 200 ಕೋಟಿ ರೂಪಾಯಿಗಳ ಯೋಜನೆಗಳನ್ನು ಕೇವಲ ತೋಡು ಕಟ್ಟುವುದಕ್ಕೆ ಮಾಡಿದರೆ, ನಮ್ಮ ಉದ್ದೇಶ ಈಡೇರುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದರ ಜವಾಬ್ದಾರಿಯನ್ನು ನೋಡಿಕೊಳ್ಳಬೇಕೆಂದು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಪಶ್ಚಿಮವಾಹಿನಿ ಎನ್ನುವಂಥದ್ದು ಒಂದು ಹೊಸ ರೀತಿಯಲ್ಲಿ ಚಿಂತನೆ ಮಾಡಿದಂತಹ ಯೋಜನೆ ಆಗಿದೆ. ಕರಾವಳಿ ಜಿಲ್ಲೆಯಲ್ಲಿ ಕುಡಿಯುವುದಕ್ಕೆ ನೀರು ಇಲ್ಲ ಎನ್ನುವಂಥದ್ದನ್ನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅಲ್ಲಿನ ವಸ್ತು ಸ್ಥಿತಿಯು ಹಾಗೆಯೇ ಇದೆ. ಅಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವುದಕ್ಕೂ ನೀರು ಇರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 6 ನದಿಗಳು, ಉಡುಪಿ ಜಿಲ್ಲೆಯಲ್ಲಿ 12 ನದಿಗಳು ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ 4 ನದಿಗಳು ಇವೆ. ಅವು ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವಂತಹ ನದಿಗಳು. ಈ ನದಿಗಳ ಜೊತೆಗೆ ಉಪ್ಪು ನೀರನ್ನು ತಡೆಯುವಂತಹ ಅಣೆಕಟ್ಟುಗಳನ್ನು ಕಟ್ಟುವಂತಹ ಒಂದು ಗುರಿಯಾಗಿತ್ತು. ಇದು ಬಹಳ ವರ್ಷದ ಆ ಭಾಗದ ಎಲ್ಲಾ ಶಾಸಕರ ಹಾಗೂ ಜನಪ್ರತಿನಿಧಿಗಳ ಬಯಕೆ ಆಗಿತ್ತು. ಅದಕ್ಕಾಗಿ ಪಶ್ಚಿಮವಾಹಿನಿ ಎನ್ನುವಂತಹ ಯೋಜನೆಯನ್ನು ಬಜೆಟ್‌ನಲ್ಲಿ ಸೇರಿಸಿದ್ದೇವೆ. ಅದಕ್ಕೆ allocation ಇದ್ದಿದ್ದು 100 ಕೋಟಿ ರೂಪಾಯಿಗಳು ಮಾತ್ರ. ಈ 100 ಕೋಟಿ ರೂಪಾಯಿಗಳು ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೂ apply ಆಗುತ್ತದೆ. ಈ ಮೂರು ಜಿಲ್ಲೆಗಳಿಗೆ ಆ ಹಣ ಸಾಕುವುದಿಲ್ಲವೆಂದು ಸಚಿವ ಸಂಪುಟದಲ್ಲಿ ಪ್ರಸ್ತಾಪವಾದಂತಹ ಸಂದರ್ಭದಲ್ಲಿ ಅದಕ್ಕೆ ಮುಖ್ಯ ಮಂತ್ರಿಗಳ ಒಪ್ಪಿಗೆಯನ್ನು ಪಡೆದು ಅದನ್ನು 200 ಕೋಟಿ ರೂಪಾಯಿಗಳಿಗೆ ಹೆಚ್ಚು ಮಾಡಲಾಗಿದೆ.

(ಮುಂದು...)

(163 )21-02-2018-12.00-MV_RN_

**ಶ್ರೀ ಟಿ.ಬಿ.ಜಯಚಂದ್ರ (ಮುಂದು):-**

ಸಚಿವ ಸಂಪುಟದಲ್ಲಿ ಪ್ರಸ್ತಾಪವಾದಂತಹ ಸಂದರ್ಭದಲ್ಲಿ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳ ಒಪ್ಪಿಗೆಯನ್ನು ಪಡೆದು, ಅದನ್ನು 200 ಕೋಟಿ ರೂಪಾಯಿಗಳಿಗೆ ಮಾಡಿದ್ದೇವೆ. ಇದಕ್ಕೆ comprehensive ಆಗಿ ಒಂದು report ಮಾಡಬೇಕೆಂದು. ಒಂದು Technical Consultant ಅನ್ನು ಇಟ್ಟು. comprehensive ಆಗಿ ಒಂದು report ಮಾಡಿದ್ದೇವೆ. ಅದಕ್ಕೆ ಈ ಮೂರು ನದಿಗಳಲ್ಲಿ ಎಲ್ಲಾ ನೀರನ್ನು ಕೂಡ ಅಂದರೆ ಎಲ್ಲಾ ನದಿಗಳ ನೀರನ್ನು ಅಲ್ಲ. ಎಲ್ಲೆಲ್ಲಿ ನೀರು ಸಂಗ್ರಹಿಸಿ ಇಡುವುದಕ್ಕೆ ಸಾಧ್ಯವೆಂದು ತಿಳಿದುಕೊಂಡು, 1,394 ಕೋಟಿ ರೂಪಾಯಿಗಳಿಗೆ ಒಂದು comprehensive project ಮಾಡಿಸಿದ್ದೇವೆ. ಅದಕ್ಕೆ ಮೊದಲನೆ ಹಂತದಲ್ಲಿ 200 ಕೋಟಿ ರೂಪಾಯಿಗಳನ್ನು ಖರ್ಚು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಮಾಡಬೇಕೆಂದು ಇದೆ. ಎರಡನೆ ಹಂತದಲ್ಲಿ 611 ಕೋಟಿ ರೂಪಾಯಿಗಳು, ಮೂರನೆ ಹಂತದಲ್ಲಿ 583 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಅಂದಾಜು ಇಟ್ಟುಕೊಂಡಿದ್ದೇವೆ. ನಾವು ಮೊದಲನೆ ಹಂತದಲ್ಲಿ 200 ಕೋಟಿ ರೂಪಾಯಿಗಳನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ 29 ಕಾಮಗಾರಿಗಳಿಗೆ 56 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಉಡುಪಿ ಜಿಲ್ಲೆಯಲ್ಲಿ 14 ಕಾಮಗಾರಿಗಳಿಗೆ 52 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 10 ಕಾಮಗಾರಿಗಳಿಗೆ 91 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಎಲ್ಲಾ ಶಾಸಕರ ಮತ್ತು ಜನರ ಬಯಕೆ ಎಲ್ಲಾ ಕಾಮಗಾರಿಗಳನ್ನು ಸಹ ಒಂದೇ ಬಾರಿ ತೆಗೆದುಕೊಳ್ಳಬೇಕೆಂದು. ಆದರೆ ಅದು ಆಗುವುದಿಲ್ಲ. ಬಜೆಟ್‌ನಲ್ಲಿ provision ಇದ್ದದ್ದು 100 ಕೋಟಿ ರೂಪಾಯಿಗಳಿಗೆ ಮಾತ್ರ. ಸಚಿವ ಸಂಪುಟದಲ್ಲಿ ಎಲ್ಲಾ ಸಚಿವರನ್ನು convince ಮಾಡಿ, ಅದನ್ನು 200 ಕೋಟಿ ರೂಪಾಯಿಗಳಿಗೆ ಮಾಡಿದ್ದೇವೆ. ಈಗ ಕಾಮಗಾರಿಗಳು ಪ್ರಾರಂಭದ ಹಂತದಲ್ಲಿ ಇವೆ. ಅದು ಪ್ರಾರಂಭವಾಗಲಿ. ಅದಕ್ಕೆ ಆದ್ಯತೆಯ ಮೇಲೆ ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ. ನಾವು ಒಟ್ಟಾರೆ projectಗೆ 1,394 ಕೋಟಿ ರೂಪಾಯಿಗಳ ಒಪ್ಪಿಗೆ ಕೊಟ್ಟಿದ್ದೇವೆ. ಮೊದಲನೆ ಹಂತದಲ್ಲಿ 200 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಇನ್ನುಳಿಯುವುದನ್ನು ಎರಡನೆ ಮತ್ತು ಮೂರನೆ ಹಂತದಲ್ಲಿ ಖರ್ಚು ಮಾಡಬೇಕಾಗುತ್ತದೆ. ಈಗಾಗಾಲೇ DPR (Detailed Project Report) ಕೂಡ ಬಂದಿದೆ. ಈಗಾಗಲೇ Technical Consultant ಮುಖೇನ ನಮ್ಮ ಅಧಿಕಾರಿಗಳು ನಿರಂತರವಾಗಿ ಸಂಪರ್ಕದಲ್ಲಿದ್ದಾರೆ. ಕಳೆದ ನಾಲ್ಕು ದಿನದಿಂದ ನಿರಂತರವಾಗಿ ಸಭೆ ನಡೆಯುತ್ತಿದೆ. ಕಾಮಗಾರಿಗಳನ್ನು ಆದಷ್ಟು ಬೇಗ ಮಾರ್ಚ್ ಮೊದಲನೆ ವಾರದಲ್ಲಿ ಪ್ರಾರಂಭ ಮಾಡಬೇಕು ಎನ್ನುವಂತಹ ತೀರ್ಮಾನ ಕೂಡ ಇದೆ. ಹಾಗಾಗಿ ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ಆದರೆ ಇದನ್ನು ಹೊಸದಾಗಿ ಪ್ರಾರಂಭ ಮಾಡಿರುವಂಥದ್ದು, ಯೋಜನೆಯನ್ನು ಮಾಡುವಂತಹ ಪೂರ್ವದಲ್ಲಿ ಅದನ್ನು ಯಾವ ರೀತಿ ಮಾಡಬೇಕೆಂದು, Consultative Committee ಎಂದು ಮಾಡಿಕೊಂಡು ಹೋದರೆ, ಎಲ್ಲರನ್ನು ಕೂಡ convince ಮಾಡುವುದಕ್ಕೆ ಕಷ್ಟವಾಗುತ್ತದೆ. ಅದಕ್ಕೆ comprehensive ಆಗಿರತಕ್ಕಂಥ project ಮಾಡಿ, on priority basis, ಕುಡಿಯುವ ನೀರಿಗೆ ಎಲ್ಲೆಲ್ಲಿ ಕೊರತೆ ಇದೆ ಮತ್ತು ವ್ಯವಸಾಯಕ್ಕೆ ಎಲ್ಲಿ ನೀರು ಬೇಕಾಗುತ್ತದೆ ಎಂಬುದನ್ನು ಆಯ್ಕೆ ಮಾಡಿ, Technical Report ಪ್ರಕಾರ ಅದನ್ನು ನೋಡಿಕೊಂಡು ಮಾಡಿರುವುದು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ಸಚಿವರು ಹೇಳಿರುವುದನ್ನು comprehensive ಆಗಿ ಮಾಡಲಿ. ಒಂದು ಸಾವಿರಕ್ಕಿಂತಲೂ ಅಧಿಕ ಕಿಂಡಿ ಅಣೆಕಟ್ಟುಗಳು ಈಗ ಏನಿವೆ. ಅದರಲ್ಲಿ ಹಲಗೆಗಳು ಇಲ್ಲ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಮಾನ್ಯ ಸದಸ್ಯರು ಕೇಳುತ್ತಿರುವುದು, ಮೊದಲು ಅದನ್ನು ಮಾಡಿ, ನಂತರ ಬೇರೆ ಮಾಡಿ ಎಂದು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನೀವು comprehensive plan ಮಾಡುವಾಗ it costs about thousand five hundred crores. It will take another three years. ಹಲಗೆಗಳು ಇಲ್ಲದೇ ಇರುವ ಕಡೆ ಮೊದಲು ಮಾಡಿ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮೊದಲು ಹಲಗೆಗಳನ್ನು ಉಪಯೋಗಿಸುತ್ತಿದ್ದರು. ಆ ಹಲಗೆಗಳು ಎರಡು-ಮೂರು ವರ್ಷದಲ್ಲಿ ಹಾಳಾಗಿ ಹೋಗುತ್ತಿದ್ದವು. ಅದಕ್ಕೆ fiber replacement ಮಾಡುವುದಕ್ಕೆ ಒಂದು ಹೊಸ technology ಇದೆ. ನಾನೇ ಖುದ್ದು ಆಂಧ್ರಪ್ರದೇಶಕ್ಕೆ ಹೋಗಿ ಅದನ್ನು ನೋಡಿಕೊಂಡು ಬಂದಿದ್ದೇನೆ. ಆ fiber ಅನ್ನು apply ಮಾಡುವುದಕ್ಕೆ ಈಗಾಗಲೇ ಪ್ರಾರಂಭ ಮಾಡಿದ್ದೇವೆ. ವಿಶೇಷವಾಗಿ ಅದಕ್ಕೆ ಉಪ್ಪು ನೀರು ಅಥವಾ ಬೇರೆ ಯಾವುದೇ ರೀತಿಯ ನೀರು ಬಿದ್ದರು ಅದಕ್ಕೆ ಸುಮಾರು 25 ರಿಂದ 30 ವರ್ಷದವರೆಗೂ ಸಹ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ. ಆ ರೀತಿ ಇರುವಂತಹ fiber ಹಲಗೆಗಳನ್ನು ಹಾಕುವುದಕ್ಕೆ ತೀರ್ಮಾನ ಮಾಡಿದ್ದೇವೆ. ಅದಕ್ಕೆ ನಿರಂತರವಾಗಿ ಹಲಗೆಗಳನ್ನು replacement ಮಾಡುವುದಕ್ಕೆ ಕೂಡ ನಾವು ಹಣವನ್ನು ಕೊಡುತ್ತಿದ್ದೇವೆ.

**ಸಭಾಪತಿಯವರು:-** ಈ 200 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗೆ ಈ ತರಹದ ಹಲಗೆ ಹಾಕುವುದಕ್ಕೆ, ಆದ್ಯತೆಯ ಮೇಲೆ ಮಾಡಿ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಈ ಪಶ್ಚಿಮವಾಹಿನಿಯೇ ಬೇರೆ. ಹಲಗೆಗಳನ್ನು replacement ಮಾಡುವುದಕ್ಕೆ ಬೇರೆ ಹಣವನ್ನು ಕೊಡುತ್ತಿದ್ದೇವೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಅವರು ಕೇಳಿರುವ ಪ್ರಶ್ನೆಗೆ ಪೂರಕವಾಗಿ ಕೇಳುತ್ತೇನೆ. ಈಗ ಹಳೆಯ ಕಿಂಡಿ ಅಣೆಕಟ್ಟುಗಳು ಹಾಳಾಗಿ ಹೋಗಿವೆ. ಮಾನ್ಯ ಸಚಿವರು ಹೇಳಿದ ಹಾಗೆ ಹೊಸದಾಗಿ ಮಾಡುವುದಕ್ಕೆ ಸಮಸ್ಯೆ ಇಲ್ಲ. ಅದಕ್ಕೆ ಫೈಬರ್ ಹಾಕುತ್ತಿದ್ದಾರೆ ಅದು ಸರಿ ಇದೆ. ಆದರೆ ಹಳೆಯ ಕಿಂಡಿ ಹಾಳಾಗಿ ಹೋಗಿರುವುದರಿಂದ, ಅದು ರಿಪೇರಿ ಆಗುತ್ತಿಲ್ಲ, ಅದಕ್ಕೆ ವಿಶೇಷ ಅನುದಾನವನ್ನು ಬಿಡುಗಡೆ ಮಾಡಿದರೆ, ಕುಡಿಯುವ ನೀರನ್ನು ಇನ್ನು ಹೆಚ್ಚು ಜನರಿಗೆ ಕೊಡುವುದಕ್ಕೆ ಆಗುತ್ತದೆ. ಅದನ್ನು ದಯವಿಟ್ಟು ಮಾಡಿಸಿ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಬಿ.ಜಯಚಂದ್ರ**:- ಮಾನ್ಯ ಸಭಾಪತಿಯವರೇ, ಈಗ ಬಜೆಟ್‌ನಲ್ಲಿ ಹೇಳಿದ ಹಾಗೆ ನಾವು ಶುರು ಮಾಡುತ್ತೇವೆ. ಈಗ ಹಳೆ ಕಿಂಡಿಗಳನ್ನು ದುರಸ್ತಿ ಮಾಡಿಸುವುದಕ್ಕೆ ಬಜೆಟ್‌ನಲ್ಲಿ ಸುಮಾರು 100 ಕೋಟಿ ರೂಪಾಯಿಗಳ ಹಣವನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಏಕೆಂದರೆ, ಬಜೆಟ್ ಅನ್ನು ಪಾಸ್ ಮಾಡಿದ ಮೇಲೆ, ಮುಂದೆ ನಾವು ಅಧಿಕಾರಕ್ಕೆ ಬರುತ್ತೇವೆ. ಮಾನ್ಯ ಸದಸ್ಯರು ಹೇಳಿರುವಂತೆ ಅದಕ್ಕೆ ಹಣವನ್ನು ಖರ್ಚು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 903**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಈ ಕರ್ನಾಟಕ ಜರ್ಮನ್ ಟೆಕ್ನಿಕಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗೆ 20 ಎಕರೆ ಭೂಮಿಯನ್ನು ಕೊಟ್ಟು, 40 ಕೋಟಿ ರೂಪಾಯಿಗಳ ವೆಚ್ಚವನ್ನು ನಿಗಧಿಪಡಿಸಲಾಗಿದ್ದು. ಈ ಸಂಸ್ಥೆ 2011ರಲ್ಲಿ ಸ್ಥಾಪನೆಯಾಗಿದ್ದರೂ, ಇದುವರೆವಿಗೂ ಕೂಡ ಐಟಿಐ ಕಾಲೇಜ್‌ನಲ್ಲಿ ತಾತ್ಕಾಲಿಕವಾಗಿ ಅಲ್ಲೇ ನಡೆಯುತ್ತಿದೆ. 2011 ರಿಂದ 2018ರವರೆಗೆ ಅಂದರೆ ಐದಾರು ವರ್ಷವಾದರೂ ಸಹ ಅದು ಅಲ್ಲೇ ನಡೆಯುತ್ತಿದೆ. ಇಲ್ಲಿ ಬಹಳ ಒಳ್ಳೆಯ ಕೋರ್ಸ್‌ಗಳಿವೆ ಎಂದು ನನಗೆ ಗೊತ್ತಿದೆ. ಅಂದರೆ ಆರು ತಿಂಗಳು, ಎರಡು ಮತ್ತು ಮೂರು ವರ್ಷದ ಟೆಕ್ನಿಕಲ್ ಕೋರ್ಸ್‌ಗಳು ಅಲ್ಲಿ ಆಗುತ್ತಿವೆ. ಆದರೆ ತಾತ್ಕಾಲಿಕವಾಗಿ ಐಟಿಐ ಕಾಲೇಜ್‌ನಲ್ಲಿ ಆಗುತ್ತಿರುವುದರಿಂದ, ಆ ಭಾಗದ ಯುವಕರಿಗೆ ಉಪಯೋಗ ಆಗಬೇಕಾಗಿತ್ತು, ಆದರೆ ಅದು ಆಗುತ್ತಿಲ್ಲ. ಇದಕ್ಕೆ 40 ಕೋಟಿ ರೂಪಾಯಿಗಳ ವೆಚ್ಚವನ್ನು ನಿಗಧಿ ಮಾಡಿದ್ದೇವೆಂದು ಹೇಳಿದ್ದಾರೆ. ಇದರಲ್ಲಿ ಅನುದಾನ ಎಷ್ಟು ಬಿಡುಗಡೆಯಾಯಿತು, ರಾಜ್ಯ ಸರ್ಕಾರದ ಪಾಲು ಎಷ್ಟು ಮತ್ತು ಕೇಂದ್ರ ಸರ್ಕಾರದ ಪಾಲು ಎಷ್ಟು? ಎಂದು ತಾವು ಉತ್ತರವನ್ನು ಕೊಡಬೇಕು. ಮೂಲಸೌಕರ್ಯಗಳೊಂದಿಗೆ ಹೊಸ ಕಟ್ಟಡ ಕಾಮಗಾರಿ ಶುರುವಾಗಿದೆ. ಆ ಕಾಮಗಾರಿ ಪೂರ್ಣಗೊಂಡಿದೆಯೆ? ಎಂದು ಕೇಳಿದರೆ, ಅದಕ್ಕೆ ಹೌದು ಎಂದು ಉತ್ತರವನ್ನು ಕೊಡುತ್ತಾರೆ. ಮತ್ತೊಂದು ಮುಂದಿನ ಉತ್ತರದಲ್ಲಿ ಸದರಿ ಸಂಸ್ಥೆಗೆ ಗ್ರಂಥಾಲಯ, solar water-heater ಮತ್ತು ಇತರ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಇದೆಯೆ? ಎಂದು ಕೇಳಿದರೆ, ಹೌದು ಎಂದು ಹೇಳುತ್ತಾ, ಕಾಮಗಾರಿ ಎಲ್ಲವೂ ಮುಕ್ತಾಯಗೊಂಡ ನಂತರ ಎಲ್ಲಾ ಸೌಲಭ್ಯ ಕಲ್ಪಿಸಲಾಗುವುದು ಎಂದು ಹೇಳುತ್ತಾರೆ. ನನಗೆ ಇದರ ಅರ್ಥವೇನು ಎಂದು ತಿಳಿಯಲಿಲ್ಲ. ಅಂದರೆ ಕಾಮಗಾರಿ ಎಲ್ಲಾ ಮುಗಿದ ಮೇಲೆ, ಮೂಲಭೂತ ಸೌಕರ್ಯಗಳ ಕೊರತೆಗಳನ್ನು ನಾವು ಸರಿಪಡಿಸುತ್ತೇವೆಂದು ಹೇಳುತ್ತಾರೆ. ಹಾಗಾದರೆ ಏನು ಕಾಮಗಾರಿ ಮಾಡುತ್ತಿದ್ದಾರೆ. ಇದರ ಬಗ್ಗೆ ಸ್ವಲ್ಪ ಮಾಹಿತಿಯನ್ನು ಕೊಡಬೇಕು. ನಂತರ ಮುಂದಿನ ಪ್ರಶ್ನೆಯನ್ನು ಕೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು) (ಕಾರ್ಮಿಕ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಈಗ ಸಮರ್ಪಕವಾಗಿ ಉತ್ತರವನ್ನು ಕೊಟ್ಟಿದ್ದೇವೆ. ಈಗ ಕಟ್ಟಡ ಕಾಮಗಾರಿ ಮುಗಿಯಬೇಕು.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಮೂಲಸೌಕರ್ಯದ ಕೊರತೆ ಇರುವುದನ್ನು ಒಪ್ಪಿಕೊಂಡಿದ್ದಾರೆ. ಕಾಮಗಾರಿ ಮುಗಿದ ಮೇಲೆ ಸರಿಪಡಿಸುತ್ತೇವೆ ಎಂದು ಹೇಳುತ್ತಾರೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಗುತ್ತಿಗೆದಾರರು ಆ ಕಟ್ಟಡವನ್ನು ಏಪ್ರಿಲ್‌ಗೆ ಅಂದರೆ ಇನ್ನೆರಡು ತಿಂಗಳಿನಲ್ಲಿ ಅದರ ಸಂಪೂರ್ಣ ಕಾಮಗಾರಿ ಮುಗಿಸಿ, ನಂತರ ಆ ಕಟ್ಟಡವನ್ನು ಹಸ್ತಾಂತರಿಸುತ್ತಾರೆ. ಅದು ಮುಗಿದ ಮೇಲೆ ಎಲ್ಲಾ ಪ್ರಕ್ರಿಯೆಯು ಪ್ರಾರಂಭವಾಗುತ್ತದೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಅವರು ಕೊರತೆ ಇದೆ ಎಂದು ಒಪ್ಪಿಕೊಂಡಿದ್ದಾರೆ. ಅಲ್ಲಿ ಕಾಂಪೌಂಡ್ ಇಲ್ಲ, ಗ್ರಂಥಾಲಯ ಇಲ್ಲ ಮತ್ತು ಬೇರೆ ಬೇರೆ ಸೌಲಭ್ಯಗಳು ಇಲ್ಲ. ಹಾಗಾದರೆ ಅವರು ಯಾವ ರೀತಿಯ ಕಾಮಗಾರಿಯನ್ನು ಮಾಡುತ್ತಿದ್ದಾರೆ. ಕಾಮಗಾರಿ ಮುಕ್ತಾಯಗೊಂಡ ನಂತರ ಎಂದು ಉತ್ತರವನ್ನು ಕೊಟ್ಟಿದ್ದಾರೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನೋಡಿ 40 ಕೋಟಿ ರೂಪಾಯಿಗಳ ಏನು ಟೆಂಡರ್ ಆಗಿದೆ. ಆ ಟೆಂಡರ್‌ನ ಕಾಮಗಾರಿಗಳು ಮುಗಿಯುತ್ತದೆ. ಈಗ Hindustan Steel Constructions ನವರು ಕಾಮಗಾರಿಯನ್ನು ಶೇಕಡ ೨೦ರಷ್ಟು ಕಾಮಗಾರಿಯನ್ನು ಮುಗಿಸಿದ್ದಾರೆ, ಇನ್ನು ಶೇಕಡ 10ರಷ್ಟು ಬಾಕಿ ಇದೆ. ಅದನ್ನು ಏಪ್ರಿಲ್ ತಿಂಗಳ ಒಳಗಡೆ ಮುಗಿಸಿ ಅದನ್ನು ಹಸ್ತಾಂತರ ಮಾಡುತ್ತಾರೆ. ಅವರು ಹಸ್ತಾಂತರ ಮಾಡಿದ ಮೇಲೆ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಯಾವ ಉದ್ದೇಶಕ್ಕೋಸ್ಕರ ಆ ಕೇಂದ್ರವನ್ನು ಪ್ರಾರಂಭ ಮಾಡಲಾಯಿತೋ, ಆ ಉದ್ದೇಶ ಸಾಧನೆ ಆಗುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಹಂತ ಹಂತವಾಗಿ ಪ್ರಾರಂಭ ಮಾಡುತ್ತೇವೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಇದರಲ್ಲಿ ಕೇಂದ್ರ ಸರ್ಕಾರದ ಪಾಲು ಎಷ್ಟು? ಮತ್ತು ರಾಜ್ಯ ಸರ್ಕಾರದ ಪಾಲು ಎಷ್ಟು? ಮತ್ತು ಇದಕ್ಕೆ ಎಷ್ಟು ಅನುದಾನ ಬಿಡುಗಡೆ ಆಗಿದೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಅದರ ಮಾಹಿತಿಯನ್ನು ತರಿಸಿಕೊಡುತ್ತೇನೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಈ ಇನ್‌ಸ್ಟಿಟ್ಯೂಟ್‌ಗಳನ್ನು ಹೊಸ complex ಗೆ ಯಾವಾಗ shift ಮಾಡುತ್ತಾರೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಈಗ ಕಟ್ಟಡ ಹಸ್ತಾಂತರಗೊಂಡ ನಂತರ, ಮುಂದಿನ ಮೇ ಅಥವಾ ಜೂನ್ ತಿಂಗಳಿನಲ್ಲಿ ಅದನ್ನು shift ಮಾಡುತ್ತೇವೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಮತ್ತೊಂದು ಮಾನ್ಯ ಕಾರ್ಮಿಕ ಸಚಿವರು ಕಳೆದ ಬಾರಿಯ ಅಧಿವೇಶನದಲ್ಲಿ ನನಗೆ ಉತ್ತರವನ್ನು ಕೊಟ್ಟಿದ್ದರು. ಈ ತರಹದ ಯುವಕರಿಗೆ ಉದ್ಯೋಗದಲ್ಲಿ ಅವಕಾಶಗಳನ್ನು ಮಾಡುವುದರಲ್ಲಿ, ಉದ್ಯೋಗ ಮೇಳಗಳನ್ನು ಮಾಡಬೇಕೆಂದು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಂಡಿದ್ದೆ. ಅವರು ಹೈದ್ರಾಬಾದ್ ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿ ಉದ್ಯೋಗ ಮೇಳವನ್ನು ಮಾಡಿದ್ದಾರೆ. ಆದರೆ, ಬೇರೆ ಜಿಲ್ಲೆಗಳಲ್ಲಿ, ಬೀದರ್, ಗುಲ್ಬರ್ಗ, ಯಾದಗಿರಿ, ರಾಯಚೂರು ಮತ್ತು ಕೊಪ್ಪಳ ಈ ಜಿಲ್ಲೆಗಳಲ್ಲಿ ಉದ್ಯೋಗ ಮೇಳಗಳು ಆಗಿಲ್ಲ. ಅಲ್ಲಿನ ಯುವಕರಿಗೆ ಒಳ್ಳೆಯ ತರಬೇತಿಯನ್ನು ಕೊಡುತ್ತಿದ್ದಾರೆ. ಅವರಿಗೆ placement ಆಗುವುದಕ್ಕೆ ಏನು ಯೋಜನೆಗಳು ಎಂದು ಕೇಳಿದ್ದೇನೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಅಮರನಾಥ ಪಾಟೀಲರೇ, ಈಗ skill development ಗೋಸ್ಕರ ಕೇಂದ್ರಗಳನ್ನು ಕಲಬುರ್ಗಿಯಲ್ಲಿ ಮಾಡುತ್ತಿರುವುದು. ಈ skill development ಆದಾಗ, ಆರು ತಿಂಗಳು ಅಥವಾ ಒಂದು ವರ್ಷ ಬೇಕಾಗುತ್ತದೆ, ಆ ಸಂದರ್ಭದಲ್ಲಿ ಮಾಡಬೇಕಾಗುತ್ತದೆ. ಆದರೆ ಈ ಉದ್ಯೋಗ ಮೇಳ ನಿರಂತರವಾಗಿ ಎಲ್ಲಾ ಜಿಲ್ಲೆಗಳಲ್ಲೂ ನಡೆಯುತ್ತಿರುತ್ತದೆ. ಉದ್ಯೋಗವನ್ನು ಸೃಷ್ಟಿ ಮಾಡುವುದು ಮತ್ತು ಉದ್ಯೋಗವನ್ನು absorb ಮಾಡುವುದು. ಅದು ನಡೆಯುತ್ತಲೇ ಇರುತ್ತದೆ. ತಾವು ಹೇಳಿದ ಹಾಗೆ ಉದ್ಯೋಗ ಮೇಳ ಬಳ್ಳಾರಿ ಜಿಲ್ಲೆಯಲ್ಲಿ ಆಗಿದೆ. ಅದೇ ರೀತಿ ತುಮಕೂರು ಜಿಲ್ಲೆಯಲ್ಲೂ ಸಹ ಆಗಿದೆ. ಈಗ ಆದ್ಯತೆಯ ಮೇಲೆ ಕಲಬುರ್ಗಿಯಲ್ಲೂ ಸಹ ಆದಷ್ಟು ಬೇಗ ಮಾಡುವಂತಹ ಕೆಲಸವನ್ನು ಮಾಡುತ್ತೇವೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗ ಬೀದರ್, ಗುಲ್ಬರ್ಗ, ಯಾದಗಿರಿ, ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಿಗೆ ಯಾವ ದಿನಾಂಕಗಳಂದು ಉದ್ಯೋಗ ಮೇಳವನ್ನು ಮಾಡುತ್ತಾರೆಂದು ಸದನದಲ್ಲೇ ದಿನಾಂಕವನ್ನು ಪ್ರಕಟ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಜಿಲ್ಲಾಮಟ್ಟದ ಬೃಹತ್ ಉದ್ಯೋಗ ಮೇಳವನ್ನು ಕಲಬುರ್ಗಿಯಲ್ಲಿ ಆದಷ್ಟು ಬೇಗ ಮಾಡುತ್ತೇವೆ.

**ಶ್ರೀ ಅಮರನಾಥ ಪಾಟೀಲ್:-** ಮಾನ್ಯ ಸಭಾಪತಿಯವರೇ, ಅಂದರೆ ಉದ್ಯೋಗ ಮೇಳವನ್ನು ಕಲಬುರ್ಗಿಯಲ್ಲಿ ಯಾವಾಗ ಮಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಬಿ.ಜಯಚಂದ್ರ**:- ಮಾನ್ಯ ಸಭಾಪತಿಯವರೇ, ಅದು ನಿರಂತರ ಪ್ರಕ್ರಿಯೆ, ಅದಕ್ಕೂ ಇದಕ್ಕೂ ಏನು ತೊಂದರೆ ಇಲ್ಲ.

(164)21.02.2018-12.10-ಎಲ್‌ಎಲ್ -ಆರ್‌ಎನ್

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, ನನಗೆ ಕಳೆದ ಅಧಿವೇಶನದಲ್ಲಿ ಕಾರ್ಮಿಕ ಸಚಿವರು ಉತ್ತರ ಕೊಟ್ಟಿದ್ದಾರೆ.

**ಶ್ರೀ ಟಿ.ಬಿ. ಜಯಚಂದ್ರ**:- ಮಾನ್ಯ ಸಭಾಪತಿಯವರೇ, ಮೇ ಅಥವಾ ಜೂನ್ ತಿಂಗಳನಲ್ಲಿ ಉದ್ಯೋಗ ಮೇಳವನ್ನು ಮಾಡುತ್ತೇವೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, ಈ ಉದ್ಯೋಗ ಮೇಳವನ್ನು ಈಗಿನ ಸರ್ಕಾರದವರೇ ಮೇ ಅಥವಾ ಜೂನ್ ತಿಂಗಳನಲ್ಲಿಯೇ ಮಾಡುತ್ತಾರೆಯೇ?

**ಶ್ರೀ ಟಿ.ಬಿ. ಜಯಚಂದ್ರ**:- ಮಾನ್ಯ ಸಭಾಪತಿಯವರೇ, ಹೌದು. ಮುಂದಿನ ಬಾರಿಯು ಸಹ ನಮ್ಮ ಸರ್ಕಾರವೇ ಅಧಿಕಾರಕ್ಕೆ ಬರುತ್ತದೆ. ಆಗ ನಾವುಗಳೇ ಉದ್ಯೋಗ ಮೇಳವನ್ನು ಮಾಡುತ್ತೇವೆ. ಇದರಲ್ಲಿ ಯಾವುದೇ ಅನುಮಾನ ಬೇಡ. ಅದಕ್ಕಾಗಿಯೇ ನಾವು ಖಚಿತವಾಗಿ ಉತ್ತರ ನೀಡುತ್ತಿದ್ದೇವೆ.

**(ಗೊಂದಲ)**

**ಸಭಾಪತಿಯವರು**:- ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ: 844**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ರಮೇಶ್ ಬಾಬು**:- ಮಾನ್ಯ ಸಭಾಪತಿಯವರೇ, ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ಸಂಬಂಧಪಟ್ಟಂತೆ ಕೈಗೊಂಡಂತಹ ಯೋಜನೆಗಳಿಗೆ ಸಂಬಂದಿಸಿದಂತೆ 4 ಪ್ರಶ್ನೆಗಳನ್ನು ಕೇಳಿದ್ದೆನು. ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಅವರು ಅಪೂರ್ಣವಾದ ಉತ್ತರವನ್ನು ಕೊಟ್ಟಿದ್ದಾರೆ. ಪ್ರಶ್ನೆ ಸಂಖ್ಯೆ:2 ಕ್ಕೆ ಸಂಬಂಧಪಟ್ಟಂತೆ ತುಮಕೂರು ಜಿಲ್ಲೆಯಲ್ಲಿ ಯಾವ್ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ, ಇವುಗಳಿಗೆ ನೀಡಲಾದ ಅನುದಾನ ಮತ್ತು ಬಿಡುಗಡೆಯಾದ ಅನುದಾನವೆಷ್ಟು ಎಂಬ ಬಗ್ಗೆ ಪೂರ್ಣ ಮಾಹಿತಿಯನ್ನು ಕೇಳಿದ್ದೆನು. ಆದರೆ, ಉತ್ತರದಲ್ಲಿ ತುಮಕೂರು ಜಿಲ್ಲೆಯಲ್ಲಿ ಕೈಗೊಳ್ಳಲಾದ ಯೋಜನೆಗಳು ಹಾಗೂ ಅವುಗಳಿಗೆ ಹಂಚಿಕೆಯಾಗಿರುವ ಅನುದಾನ, ಬಿಡುಗಡೆ ಮತ್ತು ವೆಚ್ಚದ ಯೋಜನಾವಾರು ಹಾಗೂ ವರ್ಷವಾರು ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ ಎಂದು ತಿಳಿಸಿದ್ದಾರೆ. ಮುಂದುವರೆದ ಪ್ರಶ್ನೆಯಲ್ಲಿ ಎಷ್ಟು ಭೂಮಿಗೆ ಪ್ರಾಥಮಿಕ ಹಾಗೂ ಅಂತಿಮ ಅಧಿಸೂಚನೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊರಡಿಸಲಾಗಿದೆ ಎನ್ನುವ ಪ್ರಶ್ನೆಗೆ ಅವರು 64 ಪ್ರಕರಣಗಳಲ್ಲಿ 4(1) ಮತ್ತು 6(1) ಅಧಿಸೂಚನೆ ಹೊರಡಿಸಲಾಗಿರುವುದಾಗಿಯೂ ಎಂದು ಹೇಳಿದ್ದಾರೆ ಮತ್ತು 544 ಎಕರೆ 28 1/4 ಭೂ ಪ್ರದೇಶ ಅವಶ್ಯಕತೆ ಇರುತ್ತದೆ ಎಂದು ಉತ್ತರ ನೀಡಿರುತ್ತಾರೆ. ಆದರೆ, ಉತ್ತರದಲ್ಲಿ ಎಲ್ಲಿಯೂ ಸಹ 4(1) ಯಾವುದು ಮತ್ತು 6(1) ಯಾವುದು ಎಂದು ತಿಳಿಸಿರುವುದಿಲ್ಲ. ನಾನು ಬಹಳ ಸ್ಪಷ್ಟವಾಗಿ ಎಷ್ಟು ಅಂತಿಮ ಅಧಿಸೂಚನೆಯನ್ನು ಮಾಡಲಾಗಿದೆ ಎಂದು ಪ್ರಶ್ನೆ ಕೇಳಿದ್ದೆನು. ಅದರ ಮಾಹಿತಿಯನ್ನು ಸಹ ಕೊಟ್ಟಿರುವುದಿಲ್ಲ. ಮುಂದುವರೆದ ಉತ್ತರದಲ್ಲಿ 64 ಪ್ರಕರಣಗಳಲ್ಲಿ 38 ಪ್ರಕರಣಗಳ ಭೂ ಮಾಲೀಕರಿಗೆ ಪರಿಹಾರಧನವನ್ನು ಪಾವತಿಸಲಾಗಿದೆ ಎಂಬುದಾಗಿಯೂ, ಉಳಿಕೆ 26 ಪ್ರಕರಣಗಳಲ್ಲಿ 1959.85 ಕೋಟಿ ರೂಪಾಯಿಗಳ ಬಾಕಿ ಇದೆಯೆಂದು ಉತ್ತರ ನೀಡಿದ್ದಾರೆ.

ಜೊತೆಗೆ ಕೊನೆಯ ಪ್ರಶ್ನೆಯಲ್ಲಿ ಚಿಕ್ಕನಾಯಕನಹಳ್ಳಿ ಕುಡಿಯುವ ನೀರಿಗೆ ಸಂಬಂಧಪಟ್ಟಂತೆ ಎಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ, ಅಧಿಸೂಚನೆ ಎಷ್ಟು ಮಾಡಲಾಗಿದೆ ಎನ್ನುವಂತಹ ಪ್ರಶ್ನೆಗೆ, ಭೂ ಸ್ವಾಧೀನ ಸದರಿ ಪ್ರಕರಣದಲ್ಲಿ 16.06.2015 ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಚಿಕ್ಕನಾಯಕನಹಳ್ಳಿಗೆ ಕುಡಿಯುವ ನೀರನ್ನು ಪೂರೈಸಲು ಕಿಬ್ಬನಹಳ್ಳಿ ಗ್ರಾಮದ ಮೂಲಕ ಹಾದು ಹೋಗಿರುವ ಪೈಪ್‌ಲೈನ್‌ಗೆ ಸಂಬಂಧಿಸಿದಂತೆ 3 ಎಕರೆ 15 3/4 ಗುಂಟೆ ಪ್ರದೇಶದ ಅವಾರ್ಡ್ ಅನುಮೋದನೆಗಾಗಿ ಜಿಲ್ಲಾಧಿಕಾರಿಯವರಿಗೆ ಸಲ್ಲಿಸಲಾದ ಪ್ರಸ್ತಾವನೆ ಅನುಮೋದನೆಯಾಗಿದ್ದು, ಸಂಬಂಧಿಸಿದ ಭೂ ಮಾಲೀಕರಿಗೆ ಪರಿಹಾರ ಮೊತ್ತವನ್ನು ಪಾವತಿಸಲು ಕ್ರಮ ಜರುಗಿಸಲಾಗುವುದೆಂದು ಮಾಹಿತಿಯನ್ನು ಕೊಟ್ಟಿದ್ದಾರೆ. ಆದರೆ, ಮಾನ್ಯ ಸಚಿವರು ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಕಾರಣವೇನೆಂದರೆ, ಅಂತಿಮ ಅಧಿಸೂಚನೆ ಹೊರಡಿಸಿದ ಮೇಲೆ ಹಣ ಡಿಪಾಸಿಟ್ ಮಾಡಬೇಕಾಗುತ್ತದೆ. ಆದರೆ, ಇಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿದ್ದೇವೆಂದು ಹೇಳುತ್ತಾರೆ, ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಬಾಕಿ ಇದೆಯೆಂದು ಹೇಳುತ್ತಾರೆ. ಈ ಬಗ್ಗೆ ನಾನು ಬಹಳ ಸ್ಪಷ್ಟವಾಗಿ ಹೇಳುವುದೇನೆಂದರೆ, ಕಿಬ್ಬನಹಳ್ಳಿ ವ್ಯಾಪ್ತಿಯಲ್ಲಿ ಆಗಿರತಕ್ಕಂತಹ ಅಧಿಸೂಚನೆಯಲ್ಲಿ 4(1) ಮಾಡಿದ್ದಾರೆ, 6(1) ಮಾಡಿರುವುದಿಲ್ಲ. 6(1) ಮಾಡದೇ ಕಾಮಗಾರಿ ಮಾಡಿ ಹಣ ತೆಗೆದುಕೊಂಡಿದ್ದಾರೆ. ಅಧಿಕಾರಿಗಳು ಮಾನ್ಯ ಸಚಿವರಿಗೇ ಕೊಟ್ಟಿರುವ ಮಾಹಿತಿ ತಪ್ಪು ಇದೆ. ಆದುದರಿಂದ, ದಯಮಾಡಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ, 6(1) ಆಗದೇ ಯೋಜನೆ ಅನುಷ್ಠಾನಕ್ಕೆ ಬರುವುದಿಲ್ಲ. ಆದುದರಿಂದ, ಮಾನ್ಯ ಸಚಿವರು ಕೊಟ್ಟಿರತಕ್ಕಂತಹ ಉತ್ತರ ಸರಿಯಿಲ್ಲ, ಜೊತೆಗೆ ನಾನು ಯಾವ್ಯಾವ ಮಾಹಿತಿ ಕೇಳಿದ್ದೆನು ಆ ಮಾಹಿತಿಗಳನ್ನು ಸಹ ಕೊಟ್ಟಿರುವುದಿಲ್ಲ. 3 ಎಕರೆ 15 3/4 ಗುಂಟೆ ಎಂದು ಹೇಳುತ್ತಾರೆ. ಸ್ವಾಧೀನಪಡಿಸಿಕೊಂಡಿರುವಂಥದ್ದು ಜಾಸ್ತಿ ಇದೆ. 4(1) ಆಗಿದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. 6(1) ಆಗಿರುವುದಿಲ್ಲ, ಅವಾರ್ಡ್ ಕೂಡ ಕೊಟ್ಟಿರುವುದಿಲ್ಲ. ಆಗಲೇ ಹಣ ಖರ್ಚು ಮಾಡಿದ್ದಾರೆ, ಜೊತೆಗೆ ಯೋಜನೆಯನ್ನು ಅನುಷ್ಠಾನ ಮಾಡಿದ್ದಾರೆ. ದಯಮಾಡಿ ಈ ಬಗ್ಗೆ ಸರಿಯಾದ ಮಾಹಿತಿಯನ್ನು ಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಬಿ. ಪಾಟೀಲ್**:- ಮಾನ್ಯ ಸಭಾಪತಿಯವರೇ, ನಾವು ಉತ್ತರವನ್ನು ವಿವರವಾಗಿ ಕೊಟ್ಟಿದ್ದೇವೆ. 4(1) ಮತ್ತು 6(1) ಅನ್ನು ಕೂಡ 64 ಪ್ರಕರಣಗಳಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಎರಡನೆಯದಾಗಿ, ಅನುಬಂಧ-1 ರಲ್ಲಿ ಎಷ್ಟು ಹಣ ಅಲೋಕೇಟ್ ಮಾಡಿತ್ತು, ಅದರಲ್ಲಿ ಎಷ್ಟು ಹಣ ಕೊಟ್ಟಿದ್ದೇವೆ, ಉದಾಹರಣೆಗೆ, 2013-14 ರಲ್ಲಿ ಒಟ್ಟು ಬಿಡುಗಡೆಯಾದ ಅನುದಾನ 140 ಲಕ್ಷ ರೂಪಾಯಿಗಳಾಗಿದ್ದು, ಆ 140 ಲಕ್ಷ ರೂಪಾಯಿ ಹಣವನ್ನು ಬಿಡುಗಡೆ ಮಾಡಿ ಖರ್ಚು ಮಾಡಿದ್ದೇವೆ. 2014-15 ರಲ್ಲಿ 156 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು, ಬಿಡುಗಡೆಯಾದ ಹಣವನ್ನು ಅಂದರೆ, ಶೇಕಡ 100 ರಷ್ಟು ಸಂಪೂರ್ಣವಾಗಿ ಖರ್ಚು ಮಾಡಿದ್ದೇವೆ.

ಮೂರನೆಯದಾಗಿ, 64 ಪ್ರಕರಣಗಳಲ್ಲಿ 4(1), 6(1) ಕೂಡ ಆಗಿದೆ. ಅದರಲ್ಲಿ 38 ಪ್ರಕರಣಗಳಲ್ಲಿ ಭೂ ಮಾಲೀಕರಿಗೆ ಪರಿಹಾರಧನವನ್ನು ನಾವು ಪಾವತಿಸಿದ್ದೇವೆ. 26 ಪ್ರಕರಣಗಳಲ್ಲಿ ಭಾಗಶಃ ಪರಿಹಾರಧನ ಪಾವತಿಸುವುದಕ್ಕೆ 1959.85 ಲಕ್ಷ ರೂಪಾಯಿಗಳ ಹಣ ಅವಶ್ಯಕತೆ ಇರುತ್ತದೆ. ಈಗಾಗಲೇ ನಾನು ಹೇಳಿದ ಹಾಗೆ, ಜಿಲ್ಲಾಧಿಕಾರಿಗಳು ಇದಕ್ಕೆ ಅನುಮೋದನೆ ಕೊಟ್ಟಿದ್ದಾರೆ. ಈ ದಿನ ಬೆಳಗ್ಗೆ ಸಭೆ ನಡೆಸಿದಾಗ ಜಿಲ್ಲಾಧಿಕಾರಿಯವರು ಅದನ್ನು ಅಪ್ರೂವ್ ಮಾಡಿದ್ದಾರೆ.

**ಶ್ರೀ ರಮೇಶ್ ಬಾಬು**:- ಮಾನ್ಯ ಸಭಾಪತಿಯವರೇ...

**ಶ್ರೀ ಎಂ.ಬಿ. ಪಾಟೀಲ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಭೂ ಸ್ವಾಧೀನ ಹಂತದ ಬಗ್ಗೆ ಏನು ಕೊನೆಯ ಪ್ರಶ್ನೆ ಕೇಳಿದ್ದಾರೆ, ಅದಕ್ಕೆ ಸಂಬಂಧಪಟ್ಟಂತೆ ಇವತ್ತಿನ ದಿವಸ ಬೆಳಗ್ಗೆ ರಿವ್ಯೂ ಮೀಟಿಂಗ್ ಮಾಡಿದಾಗ ನೋಡಿದ್ದೇನೆ, ಜಿಲ್ಲಾಧಿಕಾರಿಗಳು ಅದನ್ನು ಅಪ್ರೂವ್ ಮಾಡಿದ್ದಾರೆ. 2013-14 ರಿಂದ 2017-18 ಅಂದರೆ, ಇಲ್ಲಿಯವರೆಗೆ ಒಟ್ಟು 1430 ಕೋಟಿ ರೂಪಾಯಿಗಳು ಇವತ್ತಿನ ದಿವಸ ಅಲೋಕೇಟ್ ಆಗಿತ್ತು. ನಂತರ 980 ಕೋಟಿ ರೂಪಾಯಿಗಳು ಬಿಡುಗಡೆಯಾಗಿದ್ದು, ಪೂರ್ಣ ಹಣವನ್ನು ಖರ್ಚು ಮಾಡಿದ್ದೇವೆ. ಚಿಕ್ಕನಾಯಕನಹಳ್ಳಿ 6(1) ಅನ್ನು 11.06.2015ರಲ್ಲಿ ಅವಾರ್ಡ್ ಅನ್ನು ಹೊರಡಿಸುವುದಕ್ಕೆ ಅನುಮೋದನೆ ಮಾಡಲಾಗಿದೆ. ಹೀಗಾಗಿ, ನಾನು ಸದನಕ್ಕೆ ತಪ್ಪು ಮಾಹಿತಿಯನ್ನು ಕೊಟ್ಟಿರುವುದಿಲ್ಲ. ಉತ್ತರ ಸರಿಯಾಗಿದೆ. ಇದನ್ನು ಹೊರತುಪಡಿಸಿ ಮಾನ್ಯ ಸದಸ್ಯರು ಯಾವುದಾದರೂ ಪ್ರಶ್ನೆ ಕೇಳುವುದು ಇದ್ದರೆ ಕೇಳಲಿ. ಅದಕ್ಕೆ ನಾನು ಉತ್ತರ ನೀಡುತ್ತೇನೆ.

**ಶ್ರೀ ರಮೇಶ್ ಬಾಬು**:- ಮಾನ್ಯ ಸಭಾಪತಿಯವರೇ, ನನ್ನ ಮೂರನೆಯ ಪ್ರಶ್ನೆ ಬಹಳ ಸ್ಪಷ್ಟವಾಗಿದೆ. 554 ಎಕರೆ 28 1/4 ಗುಂಟೆ ಭೂ ಪ್ರದೇಶಕ್ಕೆ ಅಧಿಸೂಚನೆ ಮಾಡಿದ್ದೇವೆಂದು ಉತ್ತರ ನೀಡಿದ್ದಾರೆ. ಅದರಲ್ಲಿ ಪ್ರಾಥಮಿಕ ಅಧಿಸೂಚನೆ ಎಷ್ಟು ಮತ್ತು ಅಂತಿಮ ಅಧಿಸೂಚನೆ ಎಷ್ಟು ಎಂದು ಪ್ರಶ್ನೆ ಕೇಳಿದ್ದೆನು. ಅದಕ್ಕೆ ಅನುಬಂಧ-2 ರಲ್ಲಿ ಉತ್ತರವನ್ನು ಕೊಟ್ಟಿದ್ದೇನೆಂದು ಮಾನ್ಯ ಸಚಿವರು ಹೇಳಿದ್ದಾರೆ. ದಯಮಾಡಿ, ಅದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾವು ಗಮನಿಸಬೇಕು. ಅದರಲ್ಲಿ ಪ್ರಾಥಮಿಕ ಅಧಿಸೂಚನೆ ಎಷ್ಟು ಮತ್ತು ಅಂತಿಮ ಅಧಿಸೂಚನೆ ಎಷ್ಟು ಎಂದು ಮಾಹಿತಿ ಕೊಟ್ಟಿರುವುದಿಲ್ಲ.

**ಶ್ರೀ ಎಂ.ಬಿ. ಪಾಟೀಲ್**:- ಮಾನ್ಯ ಸಭಾಪತಿಯವರೇ, over all ಉತ್ತರದಲ್ಲಿ ಎಷ್ಟು ಎಕರೆ ಎಂದು ಮಾಹಿತಿ ಕೊಟ್ಟಿದ್ದೇವೆ.

**ಶ್ರೀ ರಮೇಶ್ ಬಾಬು**:- ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಯಾಗಿದೆ ಪ್ರಾಥಮಿಕ ಅಧಿಸೂಚನೆ ಎಷ್ಟು ಮತ್ತು ಅಂತಿಮ ಅಧಿಸೂಚನೆ ಎಷ್ಟು ಎನ್ನುವುದಕ್ಕೆ ಸಚಿವರು ಉತ್ತರ ಕೊಟ್ಟಿರುವುದಿಲ್ಲ.

**ಶ್ರೀ ಎಂ.ಬಿ. ಪಾಟೀಲ್**:- ಮಾನ್ಯ ಸಭಾಪತಿಯವರೇ, 4(1) ಮತ್ತು 6(1) ಅನ್ವಯ ಎಲ್ಲಾ 64 ಪ್ರಕರಣಗಳಲ್ಲಿ ಅಧಿಸೂಚನೆ ಮಾಡಲಾಗಿದೆ. ಈ ಬಗ್ಗೆ ಉತ್ತರ ಕೊಟ್ಟಿದ್ದೇವೆ.

**ಶ್ರೀ ರಮೇಶ್ ಬಾಬು**:- ಮಾನ್ಯ ಸಭಾಪತಿಯವರೇ, ಅದರಲ್ಲಿ 554 ಎಕರೆ 28 1/4 ಭೂ ಪ್ರದೇಶಕ್ಕೆ ಅಂತಿಮ ಅಧಿಸೂಚನೆ ಆಗಿದೆಯೇ?

**ಶ್ರೀ ಎಂ.ಬಿ. ಪಾಟೀಲ್**:- ಮಾನ್ಯ ಸಭಾಪತಿಯವರೇ, ಒಟ್ಟಾರೆಯಾಗಿ 554 ಎಕರೆ 28 1/4 ಭೂ ಪ್ರದೇಶದ ಎಲ್ಲಾ ಪ್ರಕರಣಗಳಲ್ಲಿ 4(1) ಮತ್ತು 6(1) ಅಂತಿಮ ಅಧಿಸೂಚನೆ ಆಗಿದೆ. ಮಾನ್ಯ ಸದಸ್ಯರು ಕೇಳಿರುವ ಕೊನೆಯ ಪ್ರಶ್ನೆಯಲ್ಲಿ ಮಾತ್ರ ಜಿಲ್ಲಾಧಿಕಾರಿಯವರ ಅನುಮೋದನೆ ಬಾಕಿ ಇತ್ತು, ದಿನಾಂಕ:11.06.2015 ಕ್ಕೆ ಅಂತಿಮ ಅಧಿಸೂಚನೆ ಹೊರಡಿಸಿದ್ದು, ಅವಾರ್ಡ್ ಕೂಡ ಅನುಮೋದನೆಯಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿಯವರು ಸಹ ಇದಕ್ಕೆ ಅನುಮೋದನೆ ಕೊಟ್ಟಿದ್ದಾರೆ. ಇವತ್ತಿನ ದಿವಸ ಇದ್ದ ರಿವ್ಯೂ ಮೀಟಿಂಗ್‌ನಲ್ಲಿಯೂ ಸಹ ಅದೇ ವಿಷಯವನ್ನು ಮಾತನಾಡಿದ್ದೇನೆ. ಅನುಬಂಧ-2 ರಲ್ಲಿ ಮಾನ್ಯ ಸದಸ್ಯರಿಗೆ ಬೇಕಾಗಿರುವ ಮಾಹಿತಿಯನ್ನು ಕೂಡ ನಾನು ನಂತರ ಒದಗಿಸುತ್ತೇನೆ.

**ಶ್ರೀ ರಮೇಶ್ ಬಾಬು**:- ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಕಾನೂನು ಮಂತ್ರಿಯವರು ನಮ್ಮ ತಾಲ್ಲೂಕಿನವರಾಗಿದ್ದು, ಇದೇ ಸದನದಲ್ಲಿ ಹಾಜರಿದ್ದಾರೆ. ಕುಡಿಯುವ ನೀರಿನ ಯೋಜನೆಗೆ ನಮ್ಮ ವಿರೋಧವಿಲ್ಲ. ಆದರೆ, ನನ್ನ ಪ್ರಶ್ನೆ ಏನೆಂದರೆ, 6(1) ಅಧಿಸೂಚನೆ ಮಾಡದೇ ಹಣ ಖರ್ಚು ಮಾಡಿದ್ದಾರೆ. ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ಚಿಕ್ಕನಾಯಕನಹಳ್ಳಿ ಕುಡಿಯುವ ನೀರಿನ ಯೋಜನೆ ಬಗ್ಗೆ ನಾನು ಏನು ಹೇಳುತ್ತಿದ್ದೇನೆಂದರೆ, 6(1) ಅಧಿಸೂಚನೆ ಆಗಿರುವುದಿಲ್ಲ. ಪ್ರಾಥಮಿಕ ಅಧಿಸೂಚನೆ ಆಗಿರುವುದು ನಿಜ. ಪೈಪ್‌ಲೈನ್ ಮಾಡಿ ಹಣ ಡ್ರಾ ಮಾಡಿದ್ದಾರೆ. ಅಂತಿಮ ಅಧಿಸೂಚನೆ ಆಗದೇ ಹಣ ಡ್ರಾ ಮಾಡುವುದಕ್ಕೆ ಬರುವುದಿಲ್ಲ. ನಾನು ಈ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇಲ್ಲಿ ಅಂತಿಮ ಅಧಿಸೂಚನೆ ಮಾಡಿರುವುದಿಲ್ಲ. ಚಿಕ್ಕನಾಯಕನಹಳ್ಳಿಗೆ ಕುಡಿಯುವ ನೀರಿನ ಯೋಜನೆ ಏನು ಇದೆ, ಈ ಬಗ್ಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪು ಸಹ ಇದೆ. ಅಂತಿಮ ಅಧಿಸೂಚನೆ ಇಲ್ಲದೇ ಯಾವುದೇ ಕಾಮಗಾರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೈಗೊಳ್ಳಲು ಬರುವುದಿಲ್ಲ. ಇಲ್ಲಿ ಅಂತಿಮ ಅಧಿಸೂಚನೆ ಆಗಿರುವುದಿಲ್ಲ, ಪ್ರಾಥಮಿಕ ಅಧಿಸೂಚನೆ ಮಾಡಿ ಪೈಪ್‌ಲೈನ್ ಹಾಕಿಕೊಂಡು ಹೋಗಿ ಅಧಿಕಾರಿಗಳು ಹಣ ಡ್ರಾ ಮಾಡಿದ್ದಾರೆ.

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, old Land Acquisition Act ನಲ್ಲಿ after 6(1) ಕೆಲಸ ಮಾಡುವುದಕ್ಕೆ ನಮ್ಮ ಅಧಿಕಾರಿಗಳಿಗೆ ಪರವಾನಗಿ ಸಿಗುತ್ತಿತ್ತು. ಹೀಗಾಗಿ ನಮ್ಮ ಅಧಿಕಾರಿಗಳು ಕೆಲಸವನ್ನು ಮಾಡಿದ್ದಾರೆ. ಜೊತೆಗೆ, ಬಾಕಿ ಇರುವಂಥದ್ದು ಏನು ಇದೆ ಅದನ್ನು ಜಿಲ್ಲಾಧಿಕಾರಿಯವರು ಅನುಮೋದನೆ ಮಾಡಿದ್ದಾರೆ. ಇದು ಆದ ನಂತರವೂ ಕೂಡ ಮಾನ್ಯ ಸದಸ್ಯರು ಅನುಬಂಧ–2 ರ ಬಗ್ಗೆ ಕೇಳಿರುವ ಮಾಹಿತಿಯನ್ನು ಕೂಡ ನಾನು ಅಧಿಕಾರಿಗಳಿಂದ ಪಡೆದು ಈ ಸದನ ಮುಗಿಯುವುದರೊಳಗೆ ಅವರಿಗೆ ಮಾಹಿತಿ ನೀಡುತ್ತೇನೆ.

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ...

**ಶ್ರೀ ಕೆ.ಟಿ. ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, 6(1) ಅಂತಿಮ ಅಧಿಸೂಚನೆ ಆಗದೇ ಹೇಗೆ ಹಣ ಖರ್ಚು ಮಾಡುತ್ತಾರೆ?

**(ಗೊಂದಲ)**

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, ಹಳೆಯ ಕಾಯ್ದೆಯಲ್ಲಿಯೂ ಸಹ ಅಂತಿಮ ಅಧಿಸೂಚನೆ ಇಲ್ಲದೇ ಹಣ ಖರ್ಚು ಮಾಡುವುದಕ್ಕೆ ಬರುವುದಿಲ್ಲ. ಮಾನ್ಯ ಕಾನೂನು ಮಂತ್ರಿಗಳು ಈ ಸದನದಲ್ಲಿ ಹಾಜರಿದ್ದಾರೆ. ಹಳೆಯ ಕಾಯ್ದೆಯಲ್ಲಿಯೂ ಸಹ 4(1) ಪ್ರಕಾರ ಹಣ ಖರ್ಚು ಮಾಡುವುದಕ್ಕೆ ಬರುವುದಿಲ್ಲ.

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಹಳೆಯ ಕಾಯ್ದೆಯಲ್ಲಿ after 6(1) you should have proceed with the works...

**ಶ್ರೀ ರಮೇಶ್ ಬಾಬು:–** ಮಾನ್ಯ ಸಭಾಪತಿಯವರೇ, 6(1) ಅಧಿಸೂಚನೆ ಸರಿಯಾಗಿದೆ. ಅದನ್ನು ನಾನು ಒಪ್ಪುತ್ತೇನೆ. ಹಳೆಯ ಕಾಯ್ದೆಯಲ್ಲಿಯೂ ಸಹ 4(1) ಅಧಿಸೂಚನೆ ಮೇರೆಗೆ ಕಾಮಗಾರಿ ಮಾಡುವುದಕ್ಕೆ ಬರುವುದಿಲ್ಲ. ದಯಮಾಡಿ, ಕಾನೂನು ಮಂತ್ರಿಗಳು ಈ ಸದನದಲ್ಲಿ ಹಾಜರಿದ್ದಾರೆ. ಹಳೆಯ ಕಾಯ್ದೆಯಲ್ಲಿಯೂ ಸಹ 4(1) ಮೇರೆಗೆ ಕಾಮಗಾರಿ ಮಾಡುವುದಕ್ಕೆ ಬರುವುದಿಲ್ಲ. 6(1) ನಲ್ಲಿ ರೈತರ ಹೆಸರಿನಲ್ಲಿ ಹಣ ಡಿಪಾಸಿಟ್ ಮಾಡಿ ಕಾಮಗಾರಿ ಮಾಡಬಹುದು. ಆದರೆ, ಇದರಲ್ಲಿ 6(1) ಅಧಿಸೂಚನೆ ಆಗಿರುವುದಿಲ್ಲ. ಅದು ಆಗದೇ ಕಾಮಗಾರಿ ಮಾಡಿರುತ್ತಾರೆ. ಆದುದರಿಂದ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ತನಿಖೆಗೆ ಆದೇಶ ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಬಿ. ಪಾಟೀಲ್**:- ಮಾನ್ಯ ಸಭಾಪತಿಯವರೇ, ನನ್ನ ಮಾಹಿತಿ ಪ್ರಕಾರ 554 ಎಕರೆ 28 1/4 ಗುಂಟೆ ಭೂ ಪ್ರದೇಶ ಏನು ಅವಶ್ಯಕತೆ ಇದೆ, ಅದನ್ನು ಸ್ವಾಧೀನ ಪಡಿಸಿಕೊಳ್ಳುವುದರಲ್ಲಿ ಒಟ್ಟು 64 ಪ್ರಕರಣಗಳವೆ. ಈ 64 ಪ್ರಕರಣಗಳಲ್ಲಿ 4(1) ಮತ್ತು 6(1) ಅಧಿಸೂಚನೆಯನ್ನು ಹೊರಡಿಸಲಾಗಿದೆ. ಈ ಬಗ್ಗೆ ಅನುಮೋದನೆಯನ್ನು ಕೊಟ್ಟಿದ್ದೇವೆ. ಆ ಬಗ್ಗೆ ಹೆಚ್ಚಿನ ವಿವರಗಳನ್ನು ಸಹ ನಾನು ನಂತರ ಒದಗಿಸುತ್ತೇನೆ.

**ಶ್ರೀ ರಮೇಶ್ ಬಾಬು**:- ಮಾನ್ಯ ಸಭಾಪತಿಯವರೇ, ನಾನು ನನ್ನ ಕೊನೆಯ ಪ್ರಶ್ನೆ ಬಗ್ಗೆ ಕೇಳುತ್ತಿದ್ದೇನೆ.

**ಶ್ರೀ ಎಂ.ಬಿ. ಪಾಟೀಲ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಜಿಲ್ಲಾಧಿಕಾರಿಯವರು ಅನುಮೋದನೆ ನೀಡಿದ್ದಾರೆ. ಇವತ್ತಿನ ದಿವಸ ಬೆಳಗ್ಗೆ ರಿವ್ಯೂ ಮೀಟಿಂಗ್ ಮಾಡಿದಂತಹ ಸಂದರ್ಭದಲ್ಲಿ ಸಹ ಈ ಬಗ್ಗೆ ಜಿಲ್ಲಾಧಿಕಾರಿಯವರಿಂದ ಕೇಳಿ ತಿಳಿದುಕೊಂಡಿದ್ದೇನೆ.

**ಶ್ರೀ ರಮೇಶ್ ಬಾಬು**:- ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಸಭಾಪತಿಯವರು**:- ಮಾನ್ಯ ಸದಸ್ಯರು ಹೇಳುತ್ತಿರುವುದು ಸರಿಯೇ ಅಥವಾ ತಪ್ಪೇ ಎಂಬುದನ್ನು ಮಾನ್ಯ ಸಚಿವರೇ ತಾವು ಪರಿಶೀಲಿಸಿ.

**ಶ್ರೀ ಎಂ.ಬಿ. ಪಾಟೀಲ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದನ್ನು ನಾನು ಪರಿಶೀಲಿಸುತ್ತೇನೆ. ನಾನು ತಪ್ಪಾಗಿದೆ ಎಂದು ಹೇಳುವುದಿಲ್ಲ. ಆದರೆ, ಜಿಲ್ಲಾಧಿಕಾರಿಗಳು ಅನುಮೋದನೆ ಮಾಡಿದ್ದಾರೆ ಎನ್ನುವುದನ್ನು ನಾನು ಸ್ಪಷ್ಟೀಕರಣ ಮಾಡಿಕೊಂಡಿದ್ದೇನೆ.

**ಸಭಾಪತಿಯವರು**:- ಅದನ್ನು ಪರಿಶೀಲಿಸಿ. ಮುಂದಿನ ಪ್ರಶ್ನೆ ಶ್ರೀ ಬಿ.ಜಿ. ಪಾಟೀಲ್‌ರವರ ಪರವಾಗಿ ಶ್ರೀ ಅಮರನಾಥ ಪಾಟೀಲ್‌ರವರು ಕೇಳುತ್ತಾರೆ.

**ಪ್ರಶ್ನೆ ಸಂಖ್ಯೆ: 838**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಅಮರನಾಥ ಪಾಟೀಲ್(ಪದವೀಧರರ ಕ್ಷೇತ್ರ)(ಶ್ರೀ ಬಿ.ಜಿ. ಪಾಟೀಲ್‌ರವರ ಪರವಾಗಿ)**:- ಮಾನ್ಯ ಸಭಾಪತಿಯವರೇ, ಇದು ಕಲಬುರಗಿ ಜಿಲ್ಲೆಯ ಬೆಣ್ಣೆತೊರಾ ನೀರಾವರಿ ಯೋಜನೆಯ ಕಾಲುವೆಗಳ ಆಧುನೀಕರಣದ ಬಗ್ಗೆ ಪ್ರಶ್ನೆ ಇದೆ. ಇದೊಂದು ಬಹಳ ವಿಶಿಷ್ಟವಾದ ಯೋಜನೆಯ ಕಾಲುವೆಯಾಗಿದೆ.

(ಮುಂದುವರೆದಿದೆ...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

(165) 21.02.2018/ವೈಎಲ್-ವಿಕೆ/12.20

ಶ್ರೀ ಅಮರನಾಥ ಪಾಟೀಲ್ (ಮುಂದು):- ಮಾನ್ಯ ಬಸವರಾಜ ಎಸ್ ಹೊರಟ್ಟಿಯವರು ಸಹ ಸದನದಲ್ಲಿಯೇ ಇದ್ದಾರೆ. ಈ ಬೆಣ್ಣೆತೊರಾ ಅಣ್ಣೆಕಟ್ಟಿನ ನೀರು ಹೊಲಗಳ ಕಡೆಗೆ ಹರಿಯುತ್ತಿಲ್ಲ. ನೀರು ಬಿಟ್ಟರೆ ವಾಪಸ್ಸು ಡ್ಯಾಂ ಕಡೆಗೆ ಬರುತ್ತದೆ. ಅಂದರೆ, ಮೇಲ್ಭಾಗದಲ್ಲಿ ಕಾಲುವೆ, ಕೆಳಭಾಗದಲ್ಲಿ ಡ್ಯಾಂ ಎಂಬುವ ರೀತಿ ಇದೆ. ಈ ಯೋಜನೆಗೆ ಆಧುನೀಕರಣ ಅಡಿಯಲ್ಲಿ ರೂ.150.00 ಕೊಡುತ್ತೇವೆ ಎಂದು ಹೇಳುತ್ತಾರೆ. ಆದರೆ, ಇಲ್ಲಿಯವರೆಗೂ ರೈತರಿಗೆ ನೀರು ಮುಟ್ಟಿಲ್ಲ. ಆದರೆ, ನನ್ನದೊಂದು ಪ್ರಶ್ನೆ ಈ ಯೋಜನೆ ಪ್ರಾರಂಭವಾದ ವರ್ಷ ಯಾವುದು? ಆಗ ಭರಿಸಿರತಕ್ಕಂಥ ವೆಚ್ಚ ಎಷ್ಟು? ಇಲ್ಲಿಯವರೆಗೆ ಈ ಯೋಜನೆಗೆ ಮೀಸಲಿಟ್ಟ ಅನುದಾನದಲ್ಲಿ ಎಷ್ಟು ಅನುದಾನ ಖರ್ಚಾಗಿದೆ. ಇದರಲ್ಲಿ ಆಗಿರುವುದೇನೆಂದರೆ, main canal, distributaries ಎಲ್ಲವೂ ಆಗಿದೆ. ಆದರೆ, field canal ಅನ್ನು ಇನ್ನೂ ರೈತರಿಗೆ ಒದಗಿಸಿಕೊಟ್ಟಿಲ್ಲ. ಅದನ್ನು ಕೇಳಿದರೆ ಮೂಲವಾಗಿ ಯಾವ ಯೋಜನೆ ಇತ್ತೋ ಆಗ ಕೊಟ್ಟಿದ್ದೇವೆ ಎರಡನೆ ಬಾರಿ ಒದಗಿಸುವುದಕ್ಕಾಗುವುದಿಲ್ಲ, ಇದು ರೈತರ ಜವಾಬ್ದಾರಿ ಎಂದು ಹೇಳುತ್ತಾರೆ. ಇದು ರೈತರ ಜವಾಬ್ದಾರಿ ಹೇಗೆ ಆಗುತ್ತದೆ. ನೀರಾವರಿ ಇಲಾಖೆಯವರ ವಿಳಂಬದಿಂದ ನೀರು ರೈತರಿಗೆ ಮುಟ್ಟಿಲ್ಲ. ಕಾಲುವೆಗಳು ಹಾಳಾಗಿದೆ. ನಾನು ತಮ್ಮ ಮೂಲಕ ವಿನಂತಿಸುವುದೇನೆಂದರೆ, ರೈತರ ಹೊಲಗಳಿಗೂ ಸಹ ಹೊಲಗಾಲುವೆಯನ್ನು ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಹಾಗೆಯೇ ಕಾಲುವೆಗಳಿಗೆ ನಿರ್ಮಾಣ ಮಾಡಿರುವ ಪರಿಹಾರವನ್ನು ಸಹ ಸಮರ್ಪಕವಾಗಿ ಕೊಟ್ಟಿಲ್ಲ. ಕಾಲುವೆಗಳ ಗುಣಮಟ್ಟ ಸಹ ಸರಿಯಿಲ್ಲ.

**ಸಭಾಪತಿಯವರು**:- ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ.

**ಶ್ರೀ ಎಂ.ಬಿ.ಪಾಟೀಲ್(ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)**:- ಮಾನ್ಯ ಸಭಾಪತಿಯವರೇ, ಬೆಣ್ಣೆತೊರಾ ಯೋಜನೆಯಿಂದ ಆಗಿದಂಥ ಯೋಜನೆಯಾಗಿದೆ. ಈ ಯೋಜನೆಯಲ್ಲಿ ನೀರು ಸಮರ್ಪಕವಾಗಿ ಹೊಲಗಳಿಗೆ ಹೋಗುತ್ತಿರಲಿಲ್ಲ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಯೋಜನೆಗೆ ರೂ.150.00 ಕೋಟಿ ಅನುದಾನ ಬಿಡುಗಡೆ ಮಾಡಿ, ಆಧುನೀಕರಣ ಮಾಡುವುದಕ್ಕೆ ಕೈಗೆತ್ತಿಕೊಂಡಿದ್ದೇವೆ. ಈಗಾಗಲೇ ರೂ.99.00 ಕೋಟಿ ಖರ್ಚು ಮಾಡಲಾಗಿದೆ. ಸದರಿ ಕಾಮಗಾರಿಯೂ ಮುಕ್ತಾಯಗೊಳ್ಳುತ್ತಿತ್ತು. ಆದರೆ, ಕಳೆದ 2 ವರ್ಷದಿಂದ ಈ ಬೆಣ್ಣೆತೊರಾ ಅಣ್ಣೆಕಟ್ಟಿನಲ್ಲಿ ನೀರು ತುಂಬಿದೆ. ಇದು ತಮಗೂ ಗೊತ್ತಿದೆ. ನಾವು tail-enders ವರೆಗೂ ನೀರು ಹರಿಸಿದ್ದೇವೆ. ಈ ವರ್ಷ ನಾಲ್ಕು ಬಾರಿ ನೀರನ್ನು ಒದಗಿಸಿದ್ದೇವೆ. ನಾಲ್ಕು ಬಾರಿ ನೀರನ್ನು ಒದಗಿಸಿ ತೇವದಿಂದ ಕೂಡಿರುವುದರಿಂದ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದಕ್ಕಾಗುವುದಿಲ್ಲ. ಹೀಗಾಗಿ ಇದನ್ನು ಪ್ರತಿ ಸಲ ನೆನಪು ಮಾಡಿಕೊಳ್ಳುತ್ತಿದ್ದೇನೆ. 4 ಬಾರಿ ನೀರು ಒದಗಿಸುತ್ತಿರುವುದರಿಂದ ತೇವಾ ಇರುವುದರಿಂದ ಈ ಕಾಮಗಾರಿಯನ್ನು ಪೂರ್ಣಗೊಳಿಸುವುದಕ್ಕೆ ಆಗಲಿಲ್ಲ. ಬಹುತೇಕ ಮುಖ್ಯ ಕಾಲುವೆಗಳು ಪೂರ್ಣಗೊಂಡಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾರ್ಚ್ 10ನೇ ತಾರೀಖಿನಂದು deadline ಸಹ fix ಮಾಡಿದ್ದೇವೆ. ಮಾರ್ಚ್ 10ನೇ ತಾರೀಖಿನೊಳಗೆ ಪೂರ್ಣಗೊಳಿಸಿ, ಅವತ್ತಿನ ದಿವಸ ಒದಗಿಸಿ ಕೊಡುತ್ತೇವೆ. ಮಾನ್ಯ ಸದಸ್ಯರು FIC (Field Irrigation Canals) ಬಗ್ಗೆ ಕೇಳಿದ ಪ್ರಶ್ನೆಗೆ ಸಂಬಂಧಿಸಿದಂತೆ FIC ಯನ್ನು ನೀರಾವರಿ ಯೋಜನೆಯಲ್ಲಿ ಒಂದು ಬಾರಿ ಮಾತ್ರ ಮಾಡುತ್ತಾರೆ. ಎರಡನೆ ಸಲ ಮಾಡುವ ಅವಕಾಶವಿಲ್ಲ. ಇದಾಗಿಯೂ ಸಹ as a special case, ಏಕೆಂದರೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಇಂತಹ ಯೋಜನೆಗೆ 50:50 ಬೇಸಿಸ್‌ನಲ್ಲಿ ಅನುದಾನದ ಪಾಲು ಇರುತ್ತದೆ. ಇದರಿಂದಾಗಿ ಎರಡನೆ ಸಲ ಕೇಂದ್ರ ಸರ್ಕಾರ ಕೊಡುವುದಿಲ್ಲ. ಬೆಣ್ಣೆತೊರಾದಲ್ಲಿ ನಿಶ್ಚಿತವಾಗಿ ಎರಡನೆ ಸಲ FIC ಮಾಡುವುದಕ್ಕೆ consider ಮಾಡುತ್ತೇನೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, ಈ ಯೋಜನೆಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗಿದೆ. ಇಲ್ಲಿಯವರೆಗೂ ಆಗಿರತಕ್ಕಂಥ ವೆಚ್ಚ ಎಷ್ಟು? ಎಂಬುದನ್ನು ತಿಳಿಸಬೇಕು.

**ಶ್ರೀ ಎಂ.ಬಿ.ಪಾಟೀಲ್**:- ಮಾನ್ಯ ಸಭಾಪತಿಯವರೇ, ಈಗಾಗಲೇ ರೂ.99.00 ಕೋಟಿಗಳಾಗಿದೆ ಎಂದು ತಿಳಿಸಿದ್ದೇನೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, ಯಾವ ವರ್ಷದಲ್ಲಿ ಯೋಜನೆಯಾಗಿದೆ. ಆಗ ಇದ್ದಂತಹ ಮೂಲ ಯೋಜನಾ ವೆಚ್ಚ ಎಷ್ಟಿತ್ತು ಎಂಬುದನ್ನು ತಿಳಿಸಬೇಕು.

**ಶ್ರೀ ಎಂ.ಬಿ.ಪಾಟೀಲ್**:- ಮಾನ್ಯ ಸಭಾಪತಿಯವರೇ, ಹಳೆಯ ಇತಿಹಾಸ ಎಲ್ಲಾ ಬೇಡ. ವಿವರವನ್ನು ಕೇಳಿಲ್ಲ. ಅದರ ವಿವರವನ್ನು ಮೊದಲೇ ಕೇಳಿದರೆ ಒದಗಿಸುತ್ತಿದ್ದೆ. ಮಾನ್ಯ ಸದಸ್ಯರಿಗೂ ಹಿಂದಿನ ವಿವರ ಜಾಸ್ತಿ ಗೊತ್ತಿದೆ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, ಒಂದು ಮಾಹಿತಿ ಕೊಡುತ್ತೇನೆ. ಹಿಂದೆ ಸಹ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು.

**ಶ್ರೀ ಎಂ.ಬಿ.ಪಾಟೀಲ್**:- ಮಾನ್ಯ ಸಭಾಪತಿಯವರೇ, ಅದಕ್ಕೂ ಮೊದಲು 5 ವರ್ಷ ಬಿಜೆಪಿ ಸರ್ಕಾರ ಅಧಿಕಾರದಲ್ಲಿತ್ತಲ್ಲವೇ?

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, ರೈತರಿಗೆ ಪರಿಹಾರ ಸಿಕ್ಕಿಲ್ಲ. ಕಾಲುವೆಗಳನ್ನು ಸ್ವಲ್ಪ ನೋಡಿ ಮಾಡಲಿ.

**ಶ್ರೀ ಎಂ.ಬಿ.ಪಾಟೀಲ್**:- ಮಾನ್ಯ ಸಭಾಪತಿಯವರೇ, ರೈತರಿಗೆ ಪರಿಹಾರ ಸಿಕ್ಕಿಲ್ಲ ಎಂದು ಏನು ಹೇಳುತ್ತಾರೆ ಅದನ್ನು ಒಪ್ಪಿಕೊಳ್ಳುತ್ತೇನೆ. ರೈತರಿಗೆ ಪರಿಹಾರ ಸಿಕ್ಕಿಲ್ಲದಿದ್ದರೆ ನಾನು ನಿಶ್ಚಿತವಾಗಿ details

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆಸುತ್ತೇನೆ. ಮುಖ್ಯವಾದ ಕಾಲುವೆಯಿಂದ 4 ಬಾರಿ ನೀರು ಒದಗಿಸಿದ್ದೇವೆ. ಒದ್ದೆ ಇರುವ ಕಾರಣ ಕಾಲುವೆಯನ್ನು ಮುಕ್ತಾಯಗೊಳಿಸಲು ಆಗಲಿಲ್ಲ.

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, ಸೋರಿಕೆ ಸಹ ಆಗುತ್ತಿದೆ.

**ಶ್ರೀ ಎಂ.ಬಿ.ಪಾಟೀಲ್**:- ಮಾನ್ಯ ಸಭಾಪತಿಯವರೇ, ಏನೇ ಇದ್ದರೂ ಅದೆಲ್ಲವನ್ನೂ third-party inspection ಮಾಡಿಸಿ ಎಲ್ಲವನ್ನೂ ಪರಿಶೀಲನೆ ಮಾಡುತ್ತೇನೆ. ಹಾಗೆಯೇ ಮಾರ್ಚ್ 10ನೇ ತಾರೀಖಿಗೆ ಪೂರ್ಣಗೊಳಿಸಿ, opening ಸಹ ಮಾಡುತ್ತೇವೆ. ಮಾನ್ಯ ಸದಸ್ಯರು ಆಗ ಇರುತ್ತಾರಲ್ಲವೇ?

**ಶ್ರೀ ಅಮರನಾಥ ಪಾಟೀಲ್**:- ಮಾನ್ಯ ಸಭಾಪತಿಯವರೇ, Field Canal ಯಾವಾಗ ಅನುಮೋದನೆ ಮಾಡಿ, ಮಂಜೂರು ಮಾಡುತ್ತಾರೆ ಎಂಬ ಬಗ್ಗೆ ತಿಳಿಸಬೇಕು.

**ಶ್ರೀ ಎಂ.ಬಿ.ಪಾಟೀಲ್**:- ಮಾನ್ಯ ಸಭಾಪತಿಯವರೇ, Field Irrigation Canal ಯೋಜನೆಯನ್ನು ಒಂದು ಸಲ ಮಾಡುವುದಕ್ಕೆ ಮಾತ್ರ ಅವಕಾಶ ಇರುತ್ತದೆ. ಎರಡನೆ ಸಲ ಮಾಡುವುದಕ್ಕೆ ಅವಕಾಶ ಇಲ್ಲ. ಏಕೆಂದರೆ, ಇದನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ CADA (Command Area Development Act) ದಲ್ಲಿ ಮಾಡುವುದಾಗಿದೆ. ಅದು ತಮಗೂ ಗೊತ್ತಿರುವ ವಿಚಾರ. ಈ ರೀತಿ ಆಗಿದ್ದರೂ ಸಹ ಇದನ್ನು ವಿಶೇಷ ಪ್ರಕರಣವಾಗಿ ಪರಿಗಣಿಸುತ್ತೇನೆ. ಎರಡನೆಯದಾಗಿ 5 ವರ್ಷಕ್ಕೂ ಮೊದಲು ಮಾನ್ಯ ಸದಸ್ಯರು ಅಧಿಕಾರದಲ್ಲಿದ್ದರು. ಆಗ ಬೆಣ್ಣೆತೊರಾ, ಮುಲ್ಲಾಮಾರಿಯ ಮೇಲ್ದಂಡೆ ಹಾಗೂ ಕೆಳದಂಡೆ ಯೋಜನೆಗಳು, ದಂಡೋತಿನಾಲೆ, ಸನ್ನತಿನಾಲೆ, ಬಸವಕಲ್ಯಾಣ, ಕಾರಂಜಾ, ಅಮರ್‌ಝಾ ಇವುಗಳೆಲ್ಲವೂ ನೆನಪಾಗಲಿಲ್ಲವೇ? ಎಲ್ಲದಕ್ಕೂ ಕಾಂಗ್ರೆಸ್ ಸರ್ಕಾರ ನೇತೃತ್ವದಲ್ಲಿ ಅನುಮೋದನೆ ಪಡೆದು, ಟೆಂಡರ್ ಮೂಲಕ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಇವತ್ತಿನ ದಿವಸ ಕಲಬುರಗಿ ಜಿಲ್ಲೆ ಮತ್ತು ಜೇವರ್ಗಿ ತಾಲ್ಲೂಕಿಗೆ ಕೊಟ್ಟಿದ್ದೇವೆ. ಅದಕ್ಕಾಗಿ ಧನ್ಯವಾದಗಳನ್ನರ್ಪಿಸಬೇಕು.

**ಪ್ರಶ್ನೆ ಸಂಖ್ಯೆ: 843**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ)(ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿರವರ ಪರವಾಗಿ)**:- ಮಾನ್ಯ ಸಭಾಪತಿಯವರೇ, ಭೂ ಸ್ವಾಧೀನ ಪ್ರಕ್ರಿಯೆಗೆ ಸಂಬಂಧಪಟ್ಟಂತೆ 2013ರ ಕಾಯ್ದೆ ಒಂದು ಸಾಮಾಜಿಕ ಪರಿಣಾಮ ನಿರ್ಧರಣೆಯನ್ನು ಮಾಡುವಂತಹ ಅವಕಾಶವನ್ನು ನೀಡಿದೆ. ಅದನ್ನು Social Impact Assessment ಎಂಬುದಾಗಿ ಕರೆಯುತ್ತೇವೆ. ಇದರನ್ವಯ ಎಷ್ಟು ಕಡಿಮೆ ಪ್ರಮಾಣದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕು ಮತ್ತು ಭೂ ಸ್ವಾಧೀನ ಮಾಡುವುದರಿಂದ ಸ್ಥಳಾಂತರ ಆಗುವಂತಹ ಅಥವಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದಕ್ಕೆ ಸಂಬಂಧಪಟ್ಟಂತಹ ರೈತರು ಇರುತ್ತಾರೋ ಅವರಿಗೆ ಆಗುವಂತಹ ಸಾಮಾಜಿಕ ತೊಂದರೆಗಳೇನು ಎನ್ನುವುದನ್ನು ಮೌಲ್ಯಮಾಪನ ಮಾಡಿ ವರದಿಯನ್ನು ನೀಡಲು ಇರುವಂತಹ ಸಂಸ್ಥೆ ಇದಾಗಿದೆ. ಇದರಲ್ಲಿ ಪರಿಣಿತರು, ತಜ್ಞರು ಹಾಗೂ ಸ್ವಯಂ ಸೇವಾ ಸಂಸ್ಥೆಗಳನ್ನು ನೊಂದಣಿ ಮಾಡಿಸಲು ಅವಕಾಶವನ್ನು ನೀಡಲಾಗಿದೆ. ಪ್ರಸ್ತುತ ಇಡೀ ಯೋಜನೆಯು ನೆಲಕಚ್ಚಿ ಹೋಗಿದೆ ಹಾಗೂ ಇದು ಒಂದು ದುರುಪಯೋಗದ ದೊಡ್ಡ ಹಗರಣವಾಗಿದೆ. ಏಕೆಂದರೆ ಈ ಯೋಜನೆಗೆ ನೊಂದಣಿ ಮಾಡಿಸಬೇಕೆಂದರೆ ಅವರುಗಳು Sociology, Anthropology, Geography, Development Science, Rehabilitation Planning ಇಂತಹ ವಿಷಯಗಳನ್ನು ವ್ಯಾಸಂಗ ಮಾಡಿದ ಅಭ್ಯರ್ಥಿಗಳಾಗಿರಬೇಕು. ಆದರೆ ನೀವುಗಳು ರಾಜಕೀಯ ವಿಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿದ ಗಂಡ, ಹೆಂಡತಿ ಮತ್ತು ಮಕ್ಕಳು ಇವರುಗಳಿಗೆ ಒಬ್ಬೊಬ್ಬರಿಗೆ ಮೂರು-ಮೂರು ಹೆಸರಿನಡಿ ನೋಂದಣಿಯನ್ನು ಮಾಡಿಸಲು ಅವಕಾಶವನ್ನು ನೀಡಿದ್ದೀರಿ. ಈ ವಿಚಾರದಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿಯನ್ನು ಪಡೆಯಲಾಗಿದೆ. ರಾಜಕೀಯ ವಿಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿದ ಅಭ್ಯರ್ಥಿಯನ್ನು Consultant ಆಗಿ ನೇಮಕ ಮಾಡಲು ಕಾಯ್ದೆಯ ಪ್ರಕಾರ ಮಾಡಲು ಅವಕಾಶವಿರುವುದಿಲ್ಲ. ಆದರೆ ಈ ವಿಚಾರದಲ್ಲಿ ನೀವು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಸರ್ಕಾರವು ನೀಡಿರುವ ಲಿಖಿತ ಉತ್ತರದ ಅನುಬಂಧ 2 ರಲ್ಲಿ ನಮೂದಿಸಿದ ಶ್ರೀ ಸಿ.ಈಶ್ವರಪ್ಪ, ಕನ್ಸ್‌ಲ್ಟೆಂಟ್ ಸೋಷಿಯಲ್ ಇಂಪ್ಯಾಕ್ಟ್ ಅಸಸೆಮೆಂಟ್ ರವರು ಯಾವುದೇ ರೀತಿಯಾದ Sociology, Anthropology, ವಿಷಯಗಳನ್ನು ವ್ಯಾಸಂಗ ಮಾಡಿಲ್ಲ. ಗಂಡನ ಹೆಸರಿನಲ್ಲಿ ಒಂದು ಸಂಸ್ಥೆ ಹಾಗೂ ಹೆಂಡತಿಯ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ನೋಂದಣಿ ಮಾಡಲಾಗಿದೆ. ಅವರುಗಳು ಯಾವುದೇ ರೀತಿಯಾದ ವರದಿಯನ್ನು, ಸರ್ವೇಯನ್ನು ನೀಡಿರುವುದಿಲ್ಲ ಹಾಗೂ ಕಾರ್ಯಾದೇಶ ನೀಡಿದ ಮೊತ್ತ 67,02,500/- ರ ಪೈಕಿ ಈಗಾಗಲೇ 60,32,250/- ರಷ್ಟು ಹಣವನ್ನು ಸದರಿ ಸಂಸ್ಥೆಗೆ ಪಾವತಿಸಲಾಗಿದೆ. ಇನ್ನೂ 6,70,250/- ಗಳನ್ನು ಪಾವತಿಸಬೇಕಾಗಿದೆ. ಎಸ್.ಐ.ಎ. ಆಗಿ ತಜ್ಞರ ತಂಡವನ್ನು ರಚಿಸಲಾಗಿದ್ದು, ತಂಡವು ಮೌಲ್ಯಮಾಪನ ಮಾಡಿ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ ಎಂಬ ಷರಾವನ್ನು ಲಿಖಿತ ಉತ್ತರದಲ್ಲಿ ಬರೆಯಲಾಗಿದೆ. 67,02,500/- ರೂಪಾಯಿಗಳ ಪೈಕಿ ಈಗಾಗಲೇ 60,32,250/- ರಷ್ಟು ಹಣವನ್ನು ಪಾವತಿಸಲಾಗಿದೆ. ಇದು ನನಗೆ ಅರ್ಥವಾಗುತ್ತಿಲ್ಲ. ಅರ್ಹತೆಯೇ ಇಲ್ಲದ ಸಂಸ್ಥೆಯನ್ನು ಏಜೆನ್ಸಿಯನ್ನಾಗಿ ಮಾಡಿಕೊಂಡು, ಇಡೀ ರಾಜ್ಯದಲ್ಲಿ ಈ ರೀತಿಯಾದ 48 ಸಂಸ್ಥೆಗಳನ್ನು ನೋಂದಣಿ ಮಾಡಲು ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಹೈದರಾಬಾದ್ ಸಂಸ್ಥೆಯವರಿಗೆ ನಮ್ಮ ರಾಜ್ಯದಲ್ಲಿ ಏನು ಕೆಲಸವಿದೆ? ಸದರಿ ಸಂಸ್ಥೆಯವರು ಸಹ ನೋಂದಣಿಯಾಗಿದ್ದಾರೆ. ನಮ್ಮ ರಾಜ್ಯದಲ್ಲಿ ಅರ್ಹ ಸಂಸ್ಥೆಗಳಿಲ್ಲವೇ? ಸಂಪನ್ಮೂಲ ವ್ಯಕ್ತಿಗಳಿಲ್ಲವೇ? ಎಲ್ಲೋ ಭೂಮಿ ಕಳೆದುಕೊಳ್ಳುವುದರ ಬಗ್ಗೆ ಆಗಿರುವಂತಹ ಅನಾಹುತಗಳನ್ನು ತಡೆಯುವ ದೆಸೆಯಲ್ಲಿ ಬಂದಂತಹ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಸಂಸ್ಥೆಗಳಿಂದ ಹಗರಣವಾಗುವುದಾದರೆ, ಅದಕ್ಕೆ ನ್ಯಾಯ ಕೊಡಿಸುವುದು ಹೇಗೆ? ಸರ್ಕಾರದ ಆಸೆ ಎಲ್ಲಿ ಪ್ರಯೋಜನಕ್ಕೆ ಬರುತ್ತಿದೆ. ಶ್ರೀ ಸಿ.ಈಶ್ವರಪ್ಪನವರಿಗೆ ಅರ್ಹತೆಯೇ ಇಲ್ಲ. ಆದರೂ ಅವರ ಹೆಸರಿನಲ್ಲಿ ಒಂದು ಸಂಸ್ಥೆ ಮತ್ತು ಅವರ ಪತ್ನಿಯ ಹೆಸರಿನಲ್ಲಿ ಒಂದು ಸಂಸ್ಥೆ ನೋಂದಣಿಯಾಗಿದೆ. ಸದರಿಯವರಿಗೆ ಬೇನಾಮಿ ಹೆಸರಿನಲ್ಲಿ ನಾಲ್ಕೈದು ಸಂಸ್ಥೆಗಳು ನೋಂದಣಿಯಾಗಿದೆ. ಇದನ್ನು ಉದಾಹರಣೆಯಾಗಿ ಕೊಡುತ್ತಿದ್ದೇನೆ. ಹಾಗಾಗಿ ನೋಂದಣಿಯಾಗಿರತಕ್ಕಂಥ 48 ಸಂಸ್ಥೆಗಳು ಬೇರೆ ರಾಜ್ಯಗಳದ್ದು ಸೇರಿ ಎಲ್ಲಿಯೋ ಒಂದು ಕಡೆ ನಮಗೆ ಅನುಮಾನ ಆತಂಕ ಕಾಡುವಂಥದ್ದಾಗಿದೆ. ಏನೂ ವರದಿ ಕೊಡದೇ 67,02,500/- ರೂಪಾಯಿಗಳ ಪೈಕಿ ಈಗಾಗಲೇ 60,32,250/- ರೂಪಾಯಿಗಳನ್ನು ಹೇಗೆ ಪಾವತಿಸಿದ್ದಾರೆ. ಅರ್ಹತೆಯೇ ಇಲ್ಲವೆಂದು ಆರ್‌ಟಿಐ ನಲ್ಲಿ ನಿಮ್ಮ ಅಧಿಕಾರಿಗಳು ಲಿಖಿತವಾಗಿ ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ತಾವು ತೆಗೆದುಕೊಂಡಿರುವ ಕ್ರಮವೇನು? ಮತ್ತು ಹೆಚ್ಚಿನ ಸಂಸ್ಥೆಗಳನ್ನು ನೋಂದಾವಣಿ ಮಾಡಿಕೊಳ್ಳುವುದಕ್ಕೆ Social Impact Assessment ಏನಿದೆ ಅದನ್ನು ಸಮರ್ಥವಾಗಿ ಬಳಸಿಕೊಳ್ಳುವುದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಈ ದುರುಪಯೋಗದ ಬಗ್ಗೆ ಸರ್ಕಾರದವರಲ್ಲಿ ಇರತಕ್ಕಂಥ ಅಭಿಪ್ರಾಯವೇನು ಎಂದು ನಮಗೆ ಸ್ಪಷ್ಟವಾಗಿ ಹೇಳಬೇಕು.

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸಂಸ್ಥೆಯನ್ನು ಕಾಯ್ದೆಗೆ ತರುವಲ್ಲಿ ಲೋಪವಾಗಿದೆ ಎಂಬುವ ವಿಚಾರವನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ನಾನು ಇದರ ಬಗ್ಗೆ ಗಂಭೀರವಾಗಿ ಪರಿಶೀಲನೆ ಮಾಡಿ, ಒಂದು ವೇಳೆ ಲೋಪವಾಗಿದರೆ ಸಂಬಂಧಪಟ್ಟವರ ವಿರುದ್ಧ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ.

(ಮುಂದು) . . .

(166)/21.02.2018/12.30/ಎಸ್‌ಕೆ-ವಿಕೆ

**ಚುಕ್ಕೆಗುರುತಿನ ಪ್ರಶ್ನೆ 835**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಬೆಳಗಾವಿ ಜಿಲ್ಲೆಯ ನ್ಯಾಗರಮುನ್ನೋಳಿ ಹೋಬಳಿ ವ್ಯಾಪ್ತಿಯ ಬಹು ನಿರೀಕ್ಷಿತ ಕೊಟಬಾಗಿ ಏತ ನೀರಾವರಿ ಯೋಜನೆ ಜಾರಿಗೆ ಬಂದರೂ ನೀರು ಸಿಗದೇ, ಜಮೀನು ಕಳೆದುಕೊಂಡ ರೈತರಿಗೆ ಪರಿಹಾರವೂ ಸಿಗದ ವಿಚಾರವಾಗಿ ಮತ್ತು ಈ ಭಾಗದ ರೈತರು ಬಹಳಷ್ಟು ಸಂಕಷ್ಟ ಪಡುತ್ತಿರುವ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದೆ. ಇದಕ್ಕೆ ಮಾನ್ಯ ಸಚಿವರು ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ತಮ್ಮ ಉತ್ತರದಲ್ಲಿ ಭೂಸ್ವಾಧೀನವನ್ನು ಪಡೆದಿರುವ ಪ್ರಸ್ತಾವನೆಗಳ ಬಗ್ಗೆ ವಿಶೇಷ ಭೂಸ್ವಾಧೀನ ಅಧಿಕಾರಿಗಳು ಹಿಡಕಲ್ ಡ್ಯಾಂ ಇವರಿಂದ ಮುಂದಿನ ಪ್ರಕ್ರಿಯೆ ಕೈಗೊಳ್ಳಲು ಕ್ರಮ ಜರುಗಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಇಲ್ಲಿಯವರೆಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಭೂಸ್ವಾಧೀನ ಪೂರ್ತಿಯಾಗಿದೆ. ಎಷ್ಟು ಪೇಂಡಿಂಗ್ ಇದೆ ಎನ್ನುವುದರ ಬಗ್ಗೆ ಮಾಹಿತಿ ಕೊಡಬೇಕು. ಏಕೆಂದರೆ, ಯೋಜನೆ ಜಾರಿಗೆ ಬಂದೂ, ಇವತ್ತು ನೀರು ಬರುತ್ತಿಲ್ಲ ಎಂಬುದರ ಬಗ್ಗೆ ರೈತರು ಪ್ರಸ್ತಾಪ ಮಾಡುತ್ತಿದ್ದಾರೆ. ಒಂದು ವೇಳೆ ಯೋಜನೆ ಜಾರಿಗೆ ಬಂದರೂ ಸಹಿತ ರೈತರಿಗೆ ಭೂಸ್ವಾಧೀನ ಪ್ರಕರಣದಲ್ಲಿ ಏಕೆ ಈ ರೀತಿ ಪರಿಹಾರ ಸಿಕ್ಕಿಲ್ಲ ಎನ್ನುವುದು ನನ್ನ ಮೊದಲನೆಯ ಪ್ರಶ್ನೆಯಾಗಿದೆ. ಎರಡನೆಯ ಪಶ್ನೆ ಎಂದರೆ ನಾಗರಮುನ್ನೋಲಿ ಹೋಬಳಿಯಲ್ಲಿ ಬರುವಂತಹ ಅನೇಕ ಗ್ರಾಮಗಳಿಗೆ, ಇದು ಘಟಪ್ರಭಾ ಯೋಜನೆಯ ಒಂದು lift irrigation project. ಆದರೆ ಆ ಭಾಗದಲ್ಲಿರುವಂತಹ tail-enders ಗೆ ಇವತ್ತಿಗೂ ಸಹ ನೀರು ಬರುವುದಿಲ್ಲ. ಇದನ್ನು ತಾವು ಗಮನಿಸಬೇಕು. ತಾವು ಪ್ರತಿ ಬಾರಿ ಉತ್ತರದಲ್ಲಿ ಏನು ಹೇಳಿದ್ದೀರಿ ಎಂದರೆ ಧೂಪದಾಳ ವಿಯರ್ ಹಿನ್ನೀರಿನಿಂದ 225 ಕ್ಯೂಸೆಕ್ಸ್ ಲಿಫ್ಟ್ ಮಾಡಿ, ಒಟ್ಟು 1.89 ಟಿ.ಎಂ.ಸಿ. ನೀರು ಮುಂಗಾರು ಹಂಗಾಮಿಗೆ ಮಾತ್ರ ಹಂಚಿಕೆ ಮಾಡಿದ್ದೇವೆ. ಒಟ್ಟು, 1.89 ಟಿ.ಎಂ.ಸಿ. ನೀರು ಕೊಟ್ಟಿದ್ದೇವೆಂದು ಉತ್ತರದಲ್ಲಿ ಹೇಳಿದ್ದೀರಿ. ಇರಲಿ, ಇವತ್ತಿಗೂ ಸಹಿತ tail-enders ಗೆ ನೀರು ಬರುವುದಿಲ್ಲ ಎಂಬ ಮಾಹಿತಿಯು ಮಾನ್ಯ ಸಚಿವರಿಗೆ ಗೊತ್ತಿರಲಿ. ಈ ವಿಷಯವಾಗಿ ಹಲವಾರು ಬಾರಿ ಘಟಪ್ರಭಾ ಎಡದಂಡೆಯ ಕಾಲುವೆಯಿಂದ ವಂಚಿತವಾಗಿರುವಂತಹ ಚಿಕ್ಕೋಡಿ ತಾಲ್ಲೂಕು ಇರಬಹುದು. ಚಿಕ್ಕೋಡಿ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆ ಏನಿದೆ, ನಮ್ಮಲ್ಲಿ ಘಟಪ್ರಭಾ ಎಡದಂಡೆ ಕಾಲುವೆ, ಚಿಕ್ಕೋಡಿ ಸಿಬಿಸಿ ಇದರಿಂದ ನಾವು ಏನು ಸುಮಾರು 50 ಕಿಲೋ ಮೀಟರ್ ನಂತರ ದೂರದಲ್ಲಿ ಇದ್ದೇವೆ. ನಮಗೆ ಯಾವ ಕಾಲುವೆಗಳಿಂದ ಸಹಿತ ಘಟಪ್ರಭಾ ಎಡದಂಡೆ ಕಾಲುವೆಯಿಂದ ಸಹಿತ ನೀರು ಬರುವುದಿಲ್ಲ. ಹಲವಾರು ಬಾರಿ ನಾವು ಪ್ರಶ್ನೆ ಕೇಳಿದಾಗ ಮಾನ್ಯ ಸಚಿವರು ಉತ್ತರದಲ್ಲಿ ಏನು ಹೇಳುತ್ತಾರೆಂದರೆ, ಅವರು ಅಲ್ಲಿ crop violation ಮಾಡುತ್ತಾರೆಂದು ಹೇಳುತ್ತೀರಿ. ದಯವಿಟ್ಟು, ಇದರ ಬಗ್ಗೆ ಗಮನಿಸಬೇಕು. ಅಲ್ಲಿರುವಂತಹ ಅಧಿಕಾರಿಗಳು ಏನು ಮಾಡುತ್ತಾರೆ? Crop violation ನ್ನು ಯಾರಾದರೂ ನಿಲ್ಲಿಸುವುದಕ್ಕೆ ಆಗುವುದಿಲ್ಲವೇ? ಏಕೆಂದರೆ tail-enders ಗೆ ನೀರು ಕೊಡುವುದಿಲ್ಲವೆಂದರೆ, ದಯವಿಟ್ಟು ಆ ಕಾಲುವೆಗಳನ್ನು ಮುಚ್ಚಿ ಬಿಡಿ. ಇದರ ಬಗ್ಗೆ ನನಗೆ ಸ್ಪಷ್ಟತೆ ಬೇಕಾಗಿದೆ. ಚಿಕ್ಕೋಡಿ ತಾಲ್ಲೂಕಿಗೆ ಮಾನ್ಯ ಸಚಿವರು ಭೇಟಿ ಕೊಟ್ಟಾಗ, ಸಿಬಿಸಿ, ಘಟಪ್ರಭಾ ಎಡದಂಡೆ ಕಾಲುವೆ, ಕೊಡಬಾಗಿ ಏತ ನೀರಾವರಿ ನೋಡಿದ್ದಾರೆ. ಆದರೆ ಇವತ್ತಿಗೂ ಸಹಿತ tail-enders ಗೆ ನೀರು ಬರುವುದಿಲ್ಲ. Crop violation ಎಂದು ಹೇಳುತ್ತೀರಿ. ನಾನು ಹೇಳುತ್ತಿರುವುದೇನೆಂದರೆ, ನಮಗೆ ಕೃಷ್ಣಾ ನದಿಯು ಸುಮಾರು ಹತ್ತು ಕಿಲೋ ಮೀಟರ್‌ಗಳಷ್ಟು ಸಮೀಪವಿದೆ. ಅದಕ್ಕೆ lift ಮಾಡಿ, ಆ canal ಗೆ ನೀರು ತನ್ನಿ ಎಂದರೆ, ನೀವು ಹೇಳುವಂತಹ ವಿಚಾರವೇನು? ಈಗಾಗಲೇ ಖರ್ಚಾದಂತಹ ಒಂದು ಯೋಜನೆಗೆ, ಮತ್ತೊಮ್ಮೆ ನಾವು ಖರ್ಚು ಮಾಡುವುದಕ್ಕೆ ಬರುವುದಿಲ್ಲ ಎಂದು ಮಾನ್ಯ ಸಚಿವರು ಹೇಳುತ್ತಾರೆ. ಮೊದಲನೆಯದಾಗಿ, ನಾಲೆಗಳನ್ನು ಬಂದ್ ಮಾಡಿ. ಇಲ್ಲವಾದರೆ, ತಮ್ಮಲ್ಲಿರುವಂತಹ ಅಧಿಕಾರಿಗಳಿಂದ tail-enders ಗೆ ನೀರು ಕೊಡುವ ಕೆಲಸವನ್ನು ಮಾನ್ಯ ಸಚಿವರು ಮಾಡಬೇಕೆಂದು ಈ ಸದನದಲ್ಲಿ ನಾನು ಒತ್ತಾಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತೇನೆ. ಮಾನ್ಯ ಸಚಿವರು ಇದಕ್ಕೆ ಏನು police force ಉಪಯೋಗ ಮಾಡುತ್ತೀರೋ, ಇದಕ್ಕೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ತಂಡವನ್ನು ತೆಗೆದುಕೊಂಡು, ನಾಲೆಯ ಕಡೆಯಲ್ಲಿ ಇರುವಂತಹ ಜನರಿಗೆ (tail-enders) ನೀರು ಕೊಡಬೇಕು. ಇಲ್ಲವಾದರೆ ನಾಲೆಗಳನ್ನು ಮುಚ್ಚಬೇಕೆಂಬ ಒತ್ತಾಯವನ್ನು ಮಾಡಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ಸಚಿವರು ಹೇಳುತ್ತಾರೆ.

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಕವಟಗಿಮಠರವರು ಬಹಳ ಕಳಕಳಿಯನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. 2007ನೇ ಸಾಲಿನಲ್ಲಿ ಕೊಡಬಾಗಿ ಏತ ನೀರಾವರಿ ಯೋಜನೆ ಪ್ರಾರಂಭವಾಗಿದ್ದು. ಇಲ್ಲಿ ಭೂಸ್ವಾಧೀನ ಪ್ರಕ್ರಿಯೆ ಆವೊತ್ತಿನ ದಿವಸ ಪೂರ್ತಿಯಾಗಿದೆ. ಆದರೆ 384.3 ಎಕರೆಗಳು ಇವತ್ತಿನ ದಿವಸ ಅದಕ್ಕೆ total ಆಗಿ ಬೇಕಾಗಿರುವಂತಹದು. ಇವತ್ತಿನ ದಿವಸ 218 ಎಕರೆಗಳಿಗೆ ಪೇಮೆಂಟ್ ಆಗಿದೆ. ಇವತ್ತು ಬೆಳಗ್ಗೆ ನಾನು review ಮಾಡುತ್ತಿದ್ದಾಗ ಆಶ್ಚರ್ಯವಾಯಿತು. ಇವತ್ತು ಸುಮಾರು 171.25 ಎಕರೆಗಳಿಗೆ 2007 ರಿಂದ ಇಲ್ಲಿಯವರೆಗೆ ಪರಿಹಾರ ಕೊಟ್ಟಿಲ್ಲ. ಇವತ್ತಿನ ದಿವಸ ಸುಮಾರು 25 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ನಾನು ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ಮೊದಲು ಹಳೆಯ ಕೇಸ್‌ಗಳನ್ನು ಈ ತರಹ ಇಟ್ಟುಕೊಳ್ಳಬಾರದು. ಇದನ್ನು ಪೂರ್ತಿ ಮಾಡಿ ಎಂದು ನಾನು ಇವತ್ತು ನಿರ್ದೇಶನವನ್ನು ಕೊಟ್ಟಿದ್ದೇನೆ. ತಕ್ಷಣವೇ ಸುಮಾರು 25 ಕೋಟಿ ರೂಪಾಯಿಗಳನ್ನು ಆ ಕೊಟಬಾಗಿಯಲ್ಲಿರುವ ರೈತರಿಗೆ 2007 ರಿಂದ ಇಲ್ಲಿಯವರೆಗೆ ಏನು ಬಾಕಿ ಇದೆ. ಅದನ್ನು ಕೊಡುವುದಕ್ಕೆ ನಾನು ನಿರ್ದೇಶನವನ್ನು ಕೊಟ್ಟಿದ್ದೇನೆ.

ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ಕಡೆಯವರಿಗೆ ನೀರು ಹೋಗುತ್ತಿಲ್ಲ ಎಂದು ದೂರು ಇದೆ. ಪಂಪು, ಮೋಟಾರ್, control panel board ಹಾಳಾಗಿದ್ದಂತಹ ಸಂದರ್ಭದಲ್ಲಿ 2015ನೇ ಸಾಲಿನಲ್ಲಿ ನಾವು ವಿಶೇಷ ಅನುದಾನದಲ್ಲಿ ಸುಮಾರು 2 ಕೋಟಿ 98 ಲಕ್ಷ ರೂಪಾಯಿಗಳನ್ನು ಕೊಟ್ಟು, ಇವತ್ತಿನ ದಿವಸ ಕಾಮಗಾರಿಗಳನ್ನು ಮಾಡುವುದಕ್ಕೆ ಖರ್ಚು ಮಾಡಿದ್ದೇವೆ. ಇವತ್ತಿನ ದಿವಸ ಕಡೆಯವರೆಗೆ ನೀರು... ಇದರಲ್ಲಿ ಒಟ್ಟು 1.89 ಟಿ.ಎಂ.ಸಿ. ನೀರು ಮುಂಗಾರು ಹಂಗಾಮಿಗೆ ಮಾತ್ರ ಹಂಚಿಕೆಯಾಗಿದ್ದು, ಹುಕ್ಕೇರಿ ಹಾಗೂ ಚಿಕ್ಕೋಡಿ ತಾಲ್ಲೂಕಿನ ಒಟ್ಟು 18 ಗ್ರಾಮಗಳ ಸುಮಾರು 8000 ಹೆಕ್ಟೇರ್ ಕ್ಷೇತ್ರ ನೀರಾವರಿಗೆ ಒಳಪಡುತ್ತದೆ. ಇವತ್ತಿನ ದಿವಸ ಒಟ್ಟು 1160 ರೈತರ ಜಮೀನುಗಳಿವೆ. ನಮ್ಮ ಪ್ರಕಾರ ಇವತ್ತಿನ ದಿವಸ ಕಡೆಯವರೆಗೆ ನೀರು ಹೋಗುತ್ತಿದೆ. ಆದರೆ ಮಾನ್ಯ ಸದಸ್ಯರು crop violation ಬಗ್ಗೆ ಹೇಳುತ್ತಿದ್ದಾರೆ. ಅದರ ಬಗ್ಗೆ ನಾನು ಇಲ್ಲಿ ಹೇಳಿಲ್ಲ. ಆದರೆ ತಾವು ಹೇಳುತ್ತಿದ್ದೀರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**:- ಮಾನ್ಯ ಸಭಾಪತಿಯವರೇ, ಹಲವಾರು ಬಾರಿ ಸದನದಲ್ಲಿ ಘಟಪ್ರಭಾ ಎಡ ದಂಡೆ ಕಾಲುವೆಯಲ್ಲಿ ಕಡೆ ಗ್ರಾಮಗಳಿಗೆ ನೀರು ಬರುವುದಿಲ್ಲ ಎಂಬ ಪ್ರಶ್ನೆ ಬಂದಾಗ, ಸದನದಲ್ಲಿ ಮಾನ್ಯ ಸಚಿವರು Tail-enders ಗೆ ನೀರು ಕೊಡುವುದಕ್ಕೆ ಆಗುತ್ತಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಈ ಹಿಂದೆ ಸದನದಲ್ಲಿ ಪ್ರಶ್ನೆಯನ್ನು ಕೇಳಿದ್ದೆನು. ನಾನು ಅದನ್ನು refer ಮಾಡಿ ಹೇಳುತ್ತಿದ್ದೇನೆ. ನಾನು ಮಾನ್ಯ ಸಚಿವರ ಬಗ್ಗೆ ಆರೋಪ ಮಾಡುತ್ತಿಲ್ಲ. This is a general practice what is happening in Ghataprabha Left Bank Canal.

**ಶ್ರೀ ಎಂ.ಬಿ. ಪಾಟೀಲ್**:- ಮಾನ್ಯ ಸಭಾಪತಿಯವರೆ, not only in Ghatapabha, but it is there in the entire State.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**:- ಮಾನ್ಯ ಸಭಾಪತಿಯವರೇ, ನನ್ನ reference ನ್ನು ಹೇಳುತ್ತಿದ್ದೇನೆ. I don't want to blame anybody.

**ಸಭಾಪತಿಯವರು**:- ಮಾನ್ಯ ಸಚಿವರು ಪೂರ್ತಿಯಾಗಿ ಹೇಳಲಿ.

**ಶ್ರೀ ಎಂ.ಬಿ. ಪಾಟೀಲ್**:- ಮಾನ್ಯ ಸಭಾಪತಿಯವರೆ, ನನ್ನನ್ನು blame ಮಾಡುವ ಪ್ರಶ್ನೆಯೇ ಬರುವುದಿಲ್ಲ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**:- ಮಾನ್ಯ ಸಭಾಪತಿಯವರೇ, ನಾನು ಹೇಳಿದ್ದೇನೆ.

**ಶ್ರೀ ಎಂ.ಬಿ. ಪಾಟೀಲ್**:- ಮಾನ್ಯ ಸಭಾಪತಿಯವರೇ, ಇದು ನಿಜವಾಗಲೂ ಬಹಳ ಚರ್ಚೆಯಾಗುವಂತಹ ವಿಚಾರ, ಆದರೆ ಚುನಾವಣೆ ಸಮೀಪ ಇರುವುದರಿಂದ, ಇದನ್ನು ಚರ್ಚೆ ಮಾಡಬೇಕೋ ಅಥವಾ ಬಿಡಬೇಕೋ ಎಂಬುದು ನನಗೆ ಗೊತ್ತಿಲ್ಲ. Overall ನಮ್ಮ ನೀರಾವರಿ ಯೋಜನೆಗಳೆಲ್ಲಾ supportive irrigation schemes. ಇಲ್ಲೆಲ್ಲಾ light crops ಬೆಳೆಯಬೇಕು ಎಂದು ಹೇಳಿ ನಮ್ಮ ಇಲಾಖೆಯ ಇಂಜಿನಿಯರ್ಸ್‌ಗಳು ಇವತ್ತಿನ ದಿವಸ ನೀರಾವರಿ ಯೋಜನೆಯನ್ನು ಮಾಡಿರುತ್ತಾರೆ. ಉದಾಹರಣೆಗೆ ಕೊಟಬಾಗಿಯನ್ನು ತೆಗೆದುಕೊಂಡರೆ, light crops ಬೆಳೆದರೆ, ಸುಮಾರು ೮೦೦೦ ಎಕರೆ ನೀರಾವರಿಯಾಗಬೇಕು. Light crops, Semi-dry crops ನ್ನು ಬೆಳೆದಾಗ, ಅದು ೮೦೦೦ ಎಕರೆಗಳಿಗೆ ಕಟ್ಟ ಕಡೆಯ tail-enders ಗೆ ನೀರು ಹೋಗುತ್ತದೆ. In case ಮಾನ್ಯ ಕವಟಗಿಮಠರವರು ಹೇಳಿದಹಾಗೆ, upper reaches ಗೆ.... ಬಹಳಷ್ಟು ಕಡೆ ಆಗಿದ್ದವು. ಮಾಧ್ಯಮದಲ್ಲಿ ಜಲ ಸಂಪನ್ಮೂಲ ಇಲಾಖೆಯಿಂದ ನೀರು tail-enders ಗೆ ಹೋಗುವುದಿಲ್ಲ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಾರೆ. ಅವರು ಹೇಳಿದ ಹಾಗೆ, ಇವತ್ತಿನ ದಿವಸ ನಮ್ಮ project device ಆಗಿದ್ದೇ supportive irrigation ಅಂದರೆ Light crops, Semi-dry crops ಗಾಗಿ. Upper reaches ನಲ್ಲಿ ಕಬ್ಬು ಅಥವಾ ಭತ್ತವನ್ನು ಬೆಳೆದರೆ, ಸ್ವಾಭಾವಿಕವಾಗಿ ಮುಂದೆ ನೀರು ಹೋಗುವುದಿಲ್ಲ. ಈ ಸಂದರ್ಭ ಅಲ್ಲ ಬಹುಶಃ ಇದರ ಬಗ್ಗೆ ಮುಂದೆ ಒಂದು ದಿವಸ ವ್ಯಾಪಕವಾಗಿ ಚರ್ಚೆಯಾಗಬೇಕಾಗುತ್ತದೆ.

**ಸಭಾಪತಿಯವರು**:- ರೈತರ ಮನಸ್ಸು ಗೆಲ್ಲಬೇಕೆಂದರೆ ತಾವು ಮತ್ತು ಅವರು ಒಟ್ಟಾಗಬೇಕು.

**ಶ್ರೀ ಎಂ.ಬಿ. ಪಾಟೀಲ್**:- ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಾಮುಖ್ಯವಾಗಿದೆ.

**ಸಭಾಪತಿಯವರು**:- ರೈತರ ಮನಸ್ಸು ಗೆಲ್ಲಬೇಕು ಎಂದರೆ, ಇಬ್ಬರೂ ಒಟ್ಟಾಗಬೇಕು.

**ಶ್ರೀ ಎಂ.ಬಿ. ಪಾಟೀಲ್**:- ಮಾನ್ಯ ಸಭಾಪತಿಯವರೇ, ಇಬ್ಬರೂ ಒಟ್ಟಾಗಿ ಎಲ್ಲೋ ಒಂದು ಕಡೆ ಇದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಬಹಳ ಸುದೀರ್ಘವಾಗಿ ...

**ಸಭಾಪತಿಯವರು**:- ಇಲ್ಲಿ ಕಾನೂನು ಮಾಡುವುದಕ್ಕೆ ಬರುವುದಿಲ್ಲ.

**ಶ್ರೀ ಎಂ.ಬಿ. ಪಾಟೀಲ್**:- ಮಾನ್ಯ ಸಭಾಪತಿಯವರೇ, ಕಾನೂನು ಇದೆ. ಇಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ.

**ಸಭಾಪತಿಯವರು**:- ಇದೆಯಾ?

**ಶ್ರೀ ಎಂ.ಬಿ. ಪಾಟೀಲ್**:- ಮಾನ್ಯ ಸಭಾಪತಿಯವರೇ, ಆದರೆ ರೈತರ ಪ್ರಶ್ನೆ ಬಂದಾಗ, ಕಾನೂನಿಗೆ ಬರುತ್ತದೆಯೇ?

**ಸಭಾಪತಿಯವರು**:- ರೈತರ ಮನಸ್ಸು ಗೆಲ್ಲಬೇಕು.

**ಶ್ರೀ ಎಂ.ಬಿ. ಪಾಟೀಲ್**:- ಮಾನ್ಯ ಸಭಾಪತಿಯವರೇ, ಯಾರೂ ಕೂಡ ಮಾತನಾಡಿಲ್ಲ. ಅವರು ಮಾತನಾಡುವುದಿಲ್ಲ ಮತ್ತು ನಾವು ಮಾತನಾಡುವುದಿಲ್ಲ. ನಾವು ಎಲ್ಲೋ ಒಂದು ಕಡೆ ಬೆಕ್ಕಿಗೆ ಘಂಟೆ ಕಟ್ಟಲೇಬೇಕಾಗುತ್ತದೆ. ನಾವು ಒಂದು ನಿರ್ಣಯ ಮಾಡಲೇಬೇಕಾಗುತ್ತದೆ. ಒಂದು ಬೆಳೆ ಬಗ್ಗೆ ರೈತರಲ್ಲಿ awareness create ಮಾಡಬೇಕಾಗುತ್ತದೆ. ಇಂಥಿಂಥ ಯೋಜನೆಗಳು ಇಂಥಿಂಥ ಬೆಳೆ ಪದ್ಧತಿಗಳ ಸಲುವಾಗಿದೆ. ಈ ರೀತಿ ಇದೆ ಎಂದು ನಾವು ಹೇಳಿ, ಸದನದಲ್ಲಿರುವ ಎಲ್ಲಾ ರಾಜಕೀಯ ಪಕ್ಷದ ಸದಸ್ಯರು ಒಟ್ಟಾರೆಯಾಗಿ ಮಾಡಿದರೆ, tail-enders ಗೆ ನೀರು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಇದ್ದರೆ ಮಾನ್ಯ ಕವಟಗಿಮಠರವರು ಹೇಳಿರುವುದು ಸರಿಯಿದೆ. ಕೇವಲ ಘಟಪ್ರಭಾಕ್ಕಷ್ಟೇ ಸೀಮೀತವಾಗಿರದೇ,...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಇಡೀ ರಾಜ್ಯದಲ್ಲಿದೆ.

**ಶ್ರೀ ಎಂ.ಬಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, Tail-enders ಗೆ ನೀರು ಹೋಗಬೇಕಾದರೆ, basically crop violation ಇದೆ. ನಾವು ಅದಕ್ಕೊಂದು consciousness develop ಮಾಡಿ ರೈತರಿಗೆ ತಿಳುವಳಿಕೆ ಕೊಡುವ ಸಲುವಾಗಿ ಇವತ್ತಿನ ದಿವಸ ನಾವೆಲ್ಲರೂ ಕೂಡ ಒಟ್ಟಾರೆ ನಿರ್ಣಯ ಮಾಡಬೇಕು. ನಾವು ಮಾಡಿದಾಗ, ಮತ್ತೊಬ್ಬರು ರಾಜಕೀಯ ಮಾಡುವುದು. ನೀವು ಮಾಡಿದಾಗ, ನಾವು ರಾಜಕೀಯ ಮಾಡಿಕೊಳ್ಳುತ್ತಾ ಹೋದರೆ ಇದು ನಿಲ್ಲುವುದಿಲ್ಲ. ನಾವು ಲಕ್ಷಾಂತರ ಕೋಟಿ ರೂಪಾಯಿಗಳನ್ನು ನೀರಾವರಿಗೆ ಖರ್ಚು ಮಾಡಿದ್ದು ಕೂಡ ವ್ಯರ್ಥವಾಗಿ ಹೋಗುತ್ತದೆ. ನಾವೆಲ್ಲರೂ ಒಂದು ಕಡೆ ಸೂಕ್ತವಾದ ಚರ್ಚೆಯನ್ನು ಮಾಡಿ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಎಲ್ಲದಕ್ಕೂ ಕೂಡ ನಮ್ಮ ಇಂಜಿನಿಯರ್‌ಗಳು ಬೈಸಿಕೊಳ್ಳುತ್ತಾರೆ. ಜಲಸಂಪನ್ಮೂಲ ಇಲಾಖೆಯ ಬಗ್ಗೆ tail-enders ಗೆ ನೀರು ಹೋಗುತ್ತಿಲ್ಲ ಎಂದು ಪತ್ರಿಕೆಯಲ್ಲಿ ಬರೆದು ಬಿಡುತ್ತಾರೆ. ಕಾರಣ ನಾವು ಯಾರೂ ರೈತರ ಬಗ್ಗೆ ಹೇಳುವುದಕ್ಕೆ ಬರುವುದಿಲ್ಲ. ಪಾಪ violation ಇದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಇಂಜಿನಿಯರ್‌ಗಳು ಸರಿಯಾಗಿ ಕೆಲಸ ಮಾಡಿಲ್ಲ. ಸರಿಯಾಗಿ ಕೆಲಸವಾಗಿಲ್ಲದ್ದರಿಂದ tail-enders ಗೆ ನೀರು ಹೋಗುವುದಿಲ್ಲ ಎನ್ನುತ್ತಾರೆ. ಆದರೆ ಸತ್ಯ ಏನು ಇರುತ್ತದೆ ಎಂದರೆ ಇದು supportive irrigation ಅಂದರೆ light crops ಗೆ ಇರುವಂತಹ ಯೋಜನೆಗಳು. ಹೀಗಾಗಿ upper reaches ಮಾಡಿದಾಗ ಸ್ವಾಭಾವಿಕವಾಗಿ tail-enders ಗೆ ನೀರು ಹೋಗುವುದಿಲ್ಲ. ಇಲ್ಲಿ tail-enders ಗೆ ನೀರು ಹೋಗುತ್ತಿಲ್ಲ ಎಂಬ ಮಾಹಿತಿಯನ್ನು ಕೊಟ್ಟಿದ್ದಾರೆ. ನನಗೆ ಇರುವಂತಹ ಮಾಹಿತಿ ಇವತ್ತಿನ ದಿವಸ tail-enders ಗೆ ನೀರು ಹೋಗುತ್ತಿದೆ ಎಂದು. ಅದನ್ನು ಯಾವ ರೀತಿ ನಾವು ನಿರ್ವಹಣೆ ಮಾಡಬೇಕೆಂದು ಮಾನ್ಯ ಸದಸ್ಯರ ಜೊತೆಯಲ್ಲಿಯೂ ಸಹ ನಾನು ಇವತ್ತು ಚರ್ಚೆ ಮಾಡುತ್ತೇನೆ. ಅದನ್ನು ಚರ್ಚೆ ಮಾಡಿ, ಅದನ್ನು ಮಾಡುವಂತಹ ಕೆಲಸವನ್ನು ಮಾಡುತ್ತೇನೆ. ಅವರು ಇನ್ನೊಂದು ಸೂಚನೆಯನ್ನು ಕೊಟ್ಟಿದ್ದಾರೆ. Suffering ಅಚ್ಚುಕಟ್ಟು ಕೃಷ್ಣಾಗೆ ಸಮೀಪವಾಗುತ್ತದೆ. ಅಲ್ಲಿ ನೀರು ಕೊಡಬೇಕೆಂದು ಹೇಳಿ Tail-end ಅಂದರೆ ಅದು suffering ಅಚ್ಚುಕಟ್ಟು. ಅದಕ್ಕೂ ಇವತ್ತಿನ ದಿವಸ ಏನಾದರೂ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ನೋಡುತ್ತೇನೆ.

**ಸಭಾಪತಿಯವರು:–** ಪರಿಹಾರ ಇದೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ನನ್ನ ವಿನಂತಿಯೇನೆಂದರೆ, ...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಚಿವರು ಗಂಭೀರವಾಗಿ ಪರಿಗಣಿಸುತ್ತೇವೆಂದು ಹೇಳುತ್ತಿದ್ದಾರೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಕೃಷ್ಣಾ ನದಿ...

**ಸಭಾಪತಿಯವರು:-** ನೀವು repeat ಮಾಡಬೇಡಿ. Don't repeat.

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, suffering ಅಚ್ಚುಕಟ್ಟು ಏನು tail-endಗೆ ಇದೆ, ಆ tail-end ನ suffering ಅಚ್ಚುಕಟ್ಟು ಕೂಡ ನಾವು... ಎಷ್ಟರಮಟ್ಟಿಗೆ ನಾವು crop violation ನಿಲ್ಲಿಸುತ್ತೇವೆ, ಬಿಡಿಸುತ್ತೇವೆ ಎಂದು ನಾವು-ನೀವು ಹೇಳುವುದಕ್ಕೆ ಸಾಧ್ಯವಿಲ್ಲ.

**ಸಭಾಪತಿಯವರು:-** ಅದು ಬೇರೆ

**ಶ್ರೀ ಎಂ.ಬಿ. ಪಾಟೀಲ್:-** ಮಾನ್ಯ ಸಭಾಪತಿಯವರೇ, ಆದರೆ ಆ tail-end ನ suffering ಅಚ್ಚುಕಟ್ಟಿಗೆ ಏನಾದರೂ ಒಂದು ಪರಿಹಾರ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು.

(ಮುಂದು...)

(167)/21/02/2018/ಟಿಸಿಹೆಚ್-ಬಿಎನ್ಎಸ್/12.40

**ಸಭಾಪತಿಯವರು:-** ಮಾನ್ಯ ಸೋಮಣ್ಣ ಮ.ಬೇವಿನಮರದರವರ ಪ್ರಶ್ನೆಗೆ ನನಗೆ ಪತ್ರ ಬರುವುದು ತಡವಾಯಿತು. ಆದುದರಿಂದ ಶ್ರೀ ಎಸ್.ವ್ಹಿ.ಸಂಕನೂರರವರು ಮಾನ್ಯ ಸೋಮಣ್ಣ ಮ.ಬೇವಿನಮರದ ರವರ ಪರವಾಗಿ ಮಾನ್ಯ ಕಂದಾಯ ಸಚಿವರಿಗೆ ಪ್ರಶ್ನೆ ಕೇಳಿ.

**ಪ್ರಶ್ನೆ ಸಂಖ್ಯೆ.882**

**(ಉತ್ತರ ಲಗತ್ತಿಸಿದೆ)**

**ಶ್ರೀ ಎಸ್.ವ್ಹಿ.ಸಂಕನೂರ(ಶ್ರೀ ಸೋಮಣ್ಣ ಮ. ಬೇವಿನಮರದರವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಹಾವೇರಿ ಜಿಲ್ಲೆ ಸವಣೂರು ತಾಲ್ಲೂಕಿನ ರೈತರಿಗೆ ತಹಸೀಲ್ದಾರ್‌ರವರ ಕಛೇರಿಯಿಂದ ಸಿಗಬೇಕಾದಂತಹ ದಾಖಲೆಗಳಾದ ಉತಾರಗಳು ಇರಬಹುದು, ಡ ಉತಾರಗಳು ಇರಬಹುದು, ಹಕ್ಕುಪತ್ರ ಇರಬಹುದು, ವಾಟ್ನಿ ವಾರಸಾ ಪ್ರಮಾಣ ಪತ್ರಗಳು ಇರಬಹುದು, 2000 ಸಾಲಿನ ಹಿಂದಿನದ್ದನ್ನು ಸಂಬಂಧಪಟ್ಟವರು ಕೊಡುತ್ತಿಲ್ಲ, ಕಾಗದ ಪತ್ರಗಳನ್ನು ಮತ್ತು ಉತಾರಗಳನ್ನು ಒದಗಿಸುವುದಕ್ಕೆ ಏನು ಕ್ರಮ ಕೈಗೊಳ್ಳುತ್ತೀರಿ ಎಂದು ಪ್ರಶ್ನೆ ಕೇಳಿದ್ದಾರೆ. ಜೂನ್ ತಿಂಗಳಲ್ಲಿ ನಡೆದ ಅಧಿವೇಶನದಲ್ಲಿಯೂ ಸಹ ಇದೇ ಪ್ರಶ್ನೆಯನ್ನು ಮಾನ್ಯ ಸದಸ್ಯರಾದ ಶ್ರೀ ಸೋಮಣ್ಣ ಮ. ಬೇವಿನಮರದರವರು ಕೇಳಿದ್ದರು. ಆದರೆ, ಹಿಂದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೋರಾಟ ನಡೆದಂತಹ ಸಂದರ್ಭದಲ್ಲಿ ಅಲ್ಲಿನ ದಾಖಲೆಗಳು ಸುಟ್ಟುಹೋಗಿದ್ದವು. ಅವುಗಳನ್ನು rebuild ಮಾಡುವುದಕ್ಕೆ ನಾವು ಆದೇಶವನ್ನು ಕೊಡುತ್ತೇವೆಂದು ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದರು. ಆ ರೀತಿಯೇ ಅವರು ಆದೇಶವನ್ನು ಕೊಟ್ಟಿದ್ದಕ್ಕೆ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇನ್ನು ಪ್ರಾದೇಶಿಕ ಆಯುಕ್ತರವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಮಾಡಲು, ಅಲ್ಲಿ ಕಾಗದ ಪತ್ರಗಳೆಲ್ಲಾ ಏನು ಸುಟ್ಟು ಹೋಗಿದ್ದವು ಅವುಗಳನ್ನು rebuild ಮಾಡುವುದಕ್ಕೆ ಅಲ್ಲಿನ ತಹಸೀಲ್ದಾರ್ ಮತ್ತು Assistant Commissioner (A.C.) ರವರಿಗೆ ಮಾನ್ಯ ಸಚಿವರು instructions ಕೊಟ್ಟಿದ್ದಾರೆ. ಅದರ ಜೊತೆಗೆ A.C. ರವರ ನೇತೃತ್ವದಲ್ಲಿ ಒಂದು ವಿಶೇಷ ತಂಡವನ್ನು ಸಹ ರಚನೆ ಮಾಡಿದ್ದಾರೆ. ಮಾನ್ಯ ಸಚಿವರು ಅವರ ಕೆಲಸವನ್ನು ಬಹಳ ಚೆನ್ನಾಗಿ ಮಾಡಿದ್ದಾರೆ, ಅದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ ಇಲ್ಲಿ ಏನಾಗಿದೆ ಎಂದರೆ, ಕೆಳಹಂತದಲ್ಲಿ ಏನೂ ಕೆಲಸ ಆಗಿಲ್ಲ. ಇವತ್ತಿಗೂ ಕೂಡ ಅಲ್ಲಿ ಯಾವುದೇ ಉತಾರಗಳು ಇರಬಹುದು, ಡ ಉತಾರಗಳು ಇರಬಹುದು, ವಾಟ್ನಿ ಪ್ರಮಾಣ ಪತ್ರ ಹಾಗೂ ಇನ್ನಿತರೆ ಪ್ರಮಾಣ ಪತ್ರಗಳೇನೂ ಸಿಗುತ್ತಿಲ್ಲ. ಅಲ್ಲಿ ಯಾವ ರೀತಿಯ progress ಕೂಡ ಆಗಿಲ್ಲ. ಅದಕ್ಕೆ ಕಾಲ ಮಿತಿಯನ್ನು ನಿಗದಿಪಡಿಸಿ. ಏಕೆಂದರೆ, ಇದರಿಂದ 18000 ರೈತರಿಗೆ ತೊಂದರೆಯಾಗುತ್ತಿದೆ. ಆ ರೈತರು ಬ್ಯಾಂಕ್‌ಗಳಿಗೆ ಹೋಗಿ ಸಾಲ ತೆಗೆದುಕೊಳ್ಳಬೇಕಾದರೆ ಉತಾರಗಳು ಇಲ್ಲ, ಮನೆ ವಾಟ್ನಿ ಮಾಡಿಕೊಳ್ಳಬೇಕೆಂದರೆ ಕಾಗದ ಪತ್ರಗಳು ಇಲ್ಲ. ಅಲ್ಲಿ ಯಾವುದೇ ದಾಖಲೆಗಳು ಸಿಗುತ್ತಿಲ್ಲ.

**ಸಭಾಪತಿಯವರು:–** ಮಾನ್ಯ ಎಸ್.ವ್ಹಿ.ಸಂಕನೂರರವರೇ, You pin point the question, then you will get the answer.

**ಶ್ರೀ ಎಸ್.ವ್ಹಿ.ಸಂಕನೂರ:–** ಕೆಳ ಹಂತದಲ್ಲಿ ಯಾವುದೇ ಕೆಲಸ ಆಗಿಲ್ಲ. ಇದರಿಂದ ರೈತರಿಗೆ ಬಹಳ ತೊಂದರೆ ಆಗಿದೆ.

**ಸಭಾಪತಿಯವರು:–** ಆಯಿತು, ಮಾನ್ಯ ಸಚಿವರೇ, ಆ ಕೆಲಸವನ್ನು ಮಾಡಿಸಿ ಕೊಡಿ. ಅದನ್ನು ಯಾವಾಗ ಅದನ್ನು ಮಾಡಿಸಿಕೊಡುತ್ತೀರಿ? In spite of your commitment, there is no progress of work.

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೇ, ಅಲ್ಲಿ ಏನಾಗಿದೆ ಎಂದರೆ, 2000ನೇ ಸಾಲಿನಲ್ಲಿ ಈ ಘಟನೆ ನಡೆದಿದ್ದು, ಅಲ್ಲಿ ದಾಖಲೆಗಳೆಲ್ಲಾ ಸುಟ್ಟು ಹೋಗಿವೆ. ಆ 2000ನೇ ಸಾಲಿನ ಹಿಂದಿನ ದಾಖಲೆಗಳು ನಮಗೆ ಸಿಗುತ್ತಿಲ್ಲ. ಅದಕ್ಕೆ ನಾಳೆ ಒಂದು ಸಭೆಯನ್ನು ಕೂಡ ಕರೆದಿದ್ದೇನೆ. 2000ನೇ ಸಾಲಿನ ನಂತರದ ದಾಖಲೆಗಳು ಮಾತ್ರ ಸಿಗುತ್ತಿವೆ. ಏಕೆಂದರೆ, ಇಂತಹ ಒಂದು ಅಪರೂಪದ ಘಟನೆ ಮೊದಲನೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬಾರಿಗೆ ನಡೆದು ಇಂತಹ ಸನ್ನಿವೇಶ ಸೃಷ್ಟಿಯಾಗಿದೆ. ಅದಕ್ಕಾಗಿ ಮಾನ್ಯ ಸದಸ್ಯರು ಹೇಳಿದಂತಹ ರೀತಿಯಲ್ಲಿ ಕಾಲಬದ್ಧವಾಗಿ ತೀರ್ಮಾನ ಆಗಲೇಬೇಕು. ಅದನ್ನು ನಾನು ಒಪ್ಪುತ್ತೇನೆ. ಅದಕ್ಕೆ ಪಹಣಿಗಳು ಇವೆ. ಮತ್ತೆ ಇಲಾಖೆಯ ಭೂಮಿ ತಂತ್ರಾಂಶದಲ್ಲಿ 2000 ಸಾಲಿನ ನಂತರದ ದಾಖಲೆಗಳು ಸಿಗುತ್ತಿವೆ. ಆ ಹಿಂದಿನ ಸಾಲಿನ ದಾಖಲೆಗಳು ನಮಗೆ ಬೇಕಾಗಿರುತ್ತದೆ. ಏಕೆಂದರೆ, ಅದನ್ನು ಮಾಡಲು ನಮಗೆ ಸ್ವಲ್ಪ ಕಷ್ಟದ ಕೆಲಸವಾಗಿದೆ. ಅದಕ್ಕೋಸ್ಕರ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಹಾಗೂ ಪ್ರಾದೇಶಿಕ ಆಯುಕ್ತರು ಹಾಗೂ ತಹಸೀಲ್ದಾರ್ ಇವರೆಲ್ಲರೂ ಸೇರಿಸಿ ನಾನು ಒಂದು ಸಭೆಯನ್ನು ಕರೆದು, ಆ ಹಿಂದಿನ ದಾಖಲೆಗಳನ್ನು ಹೊಸದಾಗಿ ಸೃಷ್ಟಿ ಮಾಡುವುದಕ್ಕೆ ಯಾವ ರೀತಿಯಾದಂತಹ ಕ್ರಮ ಕೈಗೊಳ್ಳಬೇಕು ಎಂಬುದನ್ನು ಆದಷ್ಟು ಬೇಗನೆ ಮಾಡುತ್ತೇನೆ. ಮಾನ್ಯ ಸದಸ್ಯರ ಕಳಕಳಿ ಏನಿದೆ, ಅದನ್ನು ಮುಟ್ಟುವಂತಹ ಪ್ರಯತ್ನವನ್ನು ನಾನು ಖಂಡಿತ ಮಾಡುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಸುಮಾರು 18000 ರೈತರು ಇದ್ದಾರೆ. Procedure ಪ್ರಕಾರ rebuild ಮಾಡಿ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಸುಮಾರು 18000 ರೈತರಲ್ಲಿ 179 ಕೆ.ಎಲ್.ಆರ್. ಕಡತಗಳನ್ನು ಏನು ಮರು ಸೃಷ್ಟಿ ಮಾಡಲಾಗಿದೆ, 87 ಎಲ್.ಎನ್.ಡಿ. ಕಡತಗಳನ್ನು ಮರು ಸೃಷ್ಟಿ ಮಾಡಲಾಗಿದೆ, 188 ಕಡತಗಳನ್ನು ಮರು ಸೃಷ್ಟಿ ಮಾಡಲಾಗಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅಂದರೆ, ಈ ಕೆಲಸವನ್ನು ಮಾಡಲು ಇನ್ನೂ ಎಷ್ಟು ತಿಂಗಳು ಸಮಯ ಬೇಕಾಗುತ್ತದೆ? They are dead slow. ಇವರ ಇಲಾಖೆಯಲ್ಲಿ ಕೆಸವೇ ಮಾಡುತ್ತಿಲ್ಲ. ಮಾನ್ಯ ಸಚಿವರು ಮಾತ್ರ ಕೆಲಸ ಮಾಡಿದ್ದಾರೆ ಅಷ್ಟೆ. ಆದರೆ ಕೆಳ ಹಂತದಲ್ಲಿ ಏನೂ ಕೆಲಸವಾಗುತ್ತಿಲ್ಲವೆಂದರೆ, ಇನ್ನು ಮುಂದೆ ರೈತರು ಹೇಗೆ ಬದುಕಬೇಕು?

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ, 2000 ಸಾಲಿನ ಹಿಂದಿನ ಎಲ್ಲಾ ದಾಖಲೆಗಳು ಸಂಪೂರ್ಣವಾಗಿ ಸುಟ್ಟು ಹೋಗಿವೆ. ಈಗ ಅದನ್ನು ಸೃಷ್ಟಿ ಮಾಡಬೇಕಾಗಿದೆ. ಅದನ್ನು ಮಾಡಬೇಕಾದರೆ, ನಾವು ಬಹಳ ಜಾಗ್ರತೆ ವಹಿಸಬೇಕು, ಇಲ್ಲವೆಂದರೆ, ಇಂತಹ ಸನ್ನಿವೇಶವನ್ನು ದುರುಪಯೋಗಪಡಿಸಿಕೊಂಡು, ಅನೇಕ ಜನ ಕೆಟ್ಟ ದಾಖಲೆಗಳನ್ನು ಸೃಷ್ಟಿ ಮಾಡುವುದಕ್ಕೆ ಸಾಧ್ಯತೆ ಇದೆ. ಆದುದರಿಂದ ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ಇದರಿಂದ ರೈತರಿಗೆ ತೊಂದರೆಯಾಗಿದ್ದು, ಇಂತಹ ಸನ್ನಿವೇಶ ಸೃಷ್ಟಿಯಾಗಿದೆ. ಇದಕ್ಕೆ ಸೂಕ್ತವಾದಂತಹ ರೀತಿಯಲ್ಲಿ ಕಾನೂನು ಬದ್ಧವಾಗಿ ನಾವು ಕ್ರಮ ಕೈಗೊಳ್ಳುತ್ತೇವೆಂದು ನಾನು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ. ನಾನು ನಾಳೆ ಒಂದು ಸಭೆಯನ್ನು ಕರೆದಿದ್ದೇನೆ. ಸಮಯ ಬದ್ಧವಾಗಿ ತೀರ್ಮಾನ ಮಾಡಲು ಅವಕಾಶಬೇಕಾಗುತ್ತದೆ. ಏಕೆಂದರೆ, ನಾವು ಪ್ರತಿಯೊಂದು ಗ್ರಾಮಕ್ಕೂ ಹೋಗಿ, ಅಲ್ಲಿನ ಜನರನ್ನು ಸೇರಿಸಿಕೊಂಡು, ನಾವು ಕಡತ ತಯಾರು ಮಾಡಿದ್ದನ್ನು ಅವರ ಗಮನಕ್ಕೆ ತರಬೇಕಾಗುತ್ತದೆ. ಅದರಿಂದ ಏನಾದರೂ ತಕರಾರು ಇದ್ದಲ್ಲಿ, ಅಲ್ಲೇ ಸಲ್ಲಿಸುವಂತೆ ಮಾಡಬೇಕು. ಅದನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕ್ರಮಬದ್ಧವಾಗಿ ಮಾಡಬೇಕಾದಂತಹ ಅನಿವಾರ್ಯತೆ ಇದೆ. ಖಂಡಿತವಾಗಿ ಅದನ್ನು ಮಾಡಿಕೊಡುತ್ತೇನೆ ಎನ್ನುವಂತಹ ಭರವಸೆಯನ್ನು ಕೊಡುತ್ತಿದ್ದೇನೆ.

**ಸಭಾಪತಿಯವರು:–** ಧನ್ಯವಾದಗಳು.

**ತಡೆಹಿಡಿಯಲಾದ ಪ್ರಶ್ನೆಗಳು**

**ಸಭಾಪತಿಯವರು:–** ಶ್ರೀ ಪುಟ್ಟಣ್ಣನವರ ಪ್ರಶ್ನೆ. ಅವರು ಗೈರು ಹಾಜರಾಗಿದ್ದಾರೆ. ಮುಂದಿನ ಪ್ರಶ್ನೆ ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿಯವರ ಪರವಾಗಿ ಶ್ರೀ ಕೆ.ಟಿ.ಶ್ರೀ ಕಂಠೇಗೌಡರವರು.

**ಪ್ರಶ್ನೆ ಸಂಖ್ಯೆ.125**

**(ಉತ್ತರ ಲಗತ್ತಿಸಿದೆ)**

**ಶ್ರೀ.ಕೆ.ಟಿ.ಶ್ರೀಕಂಠೇಗೌಡ** (ಶ್ರೀ ಆರ್.ಚೌಡರೆಡ್ಡಿ ತೂಪಲ್ಲಿಯವರ ಪರವಾಗಿ) :– ಮಾನ್ಯ ಸಭಾಪತಿಯವರೇ, ಮಾನ್ಯ ಆರ್.ಚೌಡರೆಡ್ಡಿ ತೂಪಲ್ಲಿಯವರ ಪರವಾಗಿ ಉಪ ಪ್ರಶ್ನೆಯನ್ನು ಕೇಳುವುದೇನೆಂದರೆ, ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯು ಕಾರ್ಮಿಕ ಇಲಾಖೆಯಡಿ ಸ್ಥಾಪಿತವಾಗಿರತಕ್ಕಂಥದ್ದಾಗಿದೆ. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಯೋಜನೆ ಮತ್ತು ಕಲ್ಯಾಣ ಕಾರ್ಯಕ್ರಮಗಳೆಲ್ಲವನ್ನೂ ಒಂದುಗೂಡಿಸಿ, **"ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ"** ಎನ್ನುವಂಥ ಒಂದು ಯೋಜನೆಯನ್ನು ಕಾರ್ಮಿಕ ಇಲಾಖೆಯಡಿ ತಂದಿರುವುದಕ್ಕೆ ಮೊದಲಿಗೆ ನಾನು ಅಭಿನಂದಿಸುತ್ತೇನೆ. ಈ ಅಸಂಘಟಿತ ಕಾರ್ಮಿಕರ ವಿಚಾರದಲ್ಲಿ ಏನೂ ಕಾರ್ಯಕ್ರಮಗಳನ್ನು ರೂಪಿಸುತ್ತಿಲ್ಲವೆಂದು ನಾವು ಬಹಳಷ್ಟು ಸಲ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಈ ಯೋಜನೆಗಾಗಿ ಇವತ್ತಿನ ದಿವಸ ಮನೆಯ ಕಟ್ಟಡದ ಪರವಾನಿಗೆ ಪಡೆಯುವಾಗ ಅಥವಾ ಸೆಸ್ ಮುಖಾಂತರ ಸಾವಿರಾರು ಕೋಟಿ ರೂಪಾಯಿಗಳು ಸರ್ಕಾರಕ್ಕೆ ಸಂಗ್ರಹವಾಗುತ್ತಿದೆ. ಸುಮಾರು 5335 ಕೋಟಿ ರೂಪಾಯಿಗಳ ಹಣ ಇರುತ್ತದೆ. ಇದನ್ನು ಖರ್ಚು ಮಾಡಬೇಕಾದರೆ, ಎಲ್ಲಾ ಯೋಜನೆಗಳಿಗೆ ಸಂಬಂಧಪಟ್ಟಂತೆ, ಇವರು **"ಒಬ್ಬ ಕಾರ್ಮಿಕ ಬಂಧುವನ್ನು ಸ್ವಯಂ ಸೇವಕರನ್ನಾಗಿ ನೇಮಕ ಮಾಡಿಕೊಳ್ಳಲಾಗುತ್ತದೆ"** ಎಂದು ದಿನಾಂಕ:07.11.2017, ದಿ:08.12.2017 ಮತ್ತು ದಿ:18.01.2018 ರಂದು ದಿನ ಪತ್ರಿಕೆಗಳಲ್ಲಿ 3 ಬಾರಿ ಜಾಹೀರಾತುಗಳನ್ನು ಕೊಟ್ಟಿದ್ದರು. ಆದರೆ, ಯಾರೂ ಅರ್ಜಿಗಳನ್ನು ಸಲ್ಲಿಸಿಲ್ಲ. ಏಕೆ ಅರ್ಜಿಗಳನ್ನು ಸಲ್ಲಿಸುತ್ತಿಲ್ಲವೆಂದರೆ, ಅವರಿಗೆ ಒಂದು ಅರ್ಜಿಗೆ ಎರಡು ರೂಪಾಯಿ, ಮೂರು ರೂಪಾಯಿ, ಐದು ರೂಪಾಯಿ ಮತ್ತು ಹತ್ತು ರೂಪಾಯಿಗಳನ್ನು ತೆಗೆದುಕೊಳ್ಳಿ ಎನ್ನುವಂಥ ಷರತ್ತನ್ನು ಹಾಕಿದ್ದಾರೆ. ಇದರ ಜೊತೆಗೆ ಕಂಪ್ಯೂಟರ್ ಜ್ಞಾನ ಇರಬೇಕು ಮತ್ತು ಸಾಕಷ್ಟು ವಿದ್ಯಾರ್ಹತೆ ಇರಬೇಕಾಗುತ್ತದೆ. ಇವರು ಬರೀ ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆ ಇರಬೇಕೆಂದು ಅರ್ಜಿ ಕರೆದಿದ್ದಾರೆ. ಕನಿಷ್ಠ ಪದವಿ ಮತ್ತು computer knowledge ಇರುವವರಿಗೆ ಒಂದು ಅವಕಾಶ ಮಾಡಿಕೊಡಬೇಕು. ಜೊತೆಗೆ ಪ್ರತಿ ವರ್ಷ 1500 ಕೋಟಿ ಹಣ ಸೆಸ್ ಮೂಲಕ ಕಾರ್ಮಿಕ ಇಲಾಖೆಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬರುತ್ತಿದೆ. ಏಕೆ ಇಷ್ಟೊಂದು ಹಣ ಸೆಸ್ ಮೂಲಕ ಬರುತ್ತಿದೆ ಎಂದರೆ, ಇದರ ವ್ಯಾಪ್ತಿ ಬಹಳಷ್ಟಿದೆ. ಈ ರಾಜ್ಯದಲ್ಲಿ 6024 ಗ್ರಾಮ ಪಂಚಾಯಿತಿಗಳಿವೆ. 1200 ನಗರ ಪಾಲಿಕೆ ಮತ್ತು ಸ್ಥಳೀಯ ಸಂಸ್ಥೆಗಳ ವಾರ್ಡ್‌ಗಳು ಇವೆ. ಒಟ್ಟಾರೆಯಾಗಿ ಇವೆಲ್ಲದ್ದರಿಂದ 7200 ಜನ ಕಾರ್ಮಿಕ ಬಂಧುಗಳ ನೇಮಕಾತಿಯ ಅಗತ್ಯತೆ ಇದೆ. ಇವರು ಸ್ವಯಂ ಸೇವಕ ಎಂದು ನೇಮಕ ಮಾಡಿಕೊಂಡು, ಒಂದು ಅರ್ಜಿಗೆ ಎರಡು ರೂಪಾಯಿಗಳನ್ನು ತೆಗೆದುಕೊಳ್ಳಿ ಎಂದು ಹೇಳಿದರೆ, ಅವನು ಏನು ಕೆಲಸ ಮಾಡುತ್ತಾನೆ. ಅದಕ್ಕೆ ಸಾವಿರಾರು ಕೋಟಿ ರೂಪಾಯಿಗಳ ಹಣ ಇರುವುದರಿಂದ, ಅವರಿಗೆ 10,000/-ರೂಪಾಯಿಗಳು ಅಥವಾ 12,000/- ಗೌರವ ಸಂಭಾವನೆಯನ್ನು ನಿಗಧಿ ಮಾಡಬಹುದು. ಈಗ ಅಲ್ಲಿ ಹಣ ಇದೆ, ಪ್ರತಿ ವರ್ಷ 1500 ಕೋಟಿ ರೂಪಾಯಿಗೂ ಹೆಚ್ಚು ಹಣ ಬರುತ್ತಿದೆ. ಆಗ ಅವರು ಈ ಕಾರ್ಯಕ್ರಮಕ್ಕೂ ಸಹ ಜನ ಅರ್ಜಿ ಹಾಕುತ್ತಾರೆ. ಅವರು justice ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈ ಎಲ್ಲಾ ಯೋಜನೆಗಳನ್ನು ಅಂಬೇಡ್ಕರ್‌ರವರ ಹೆಸರಿನಲ್ಲಿ ಒಂದು ಯೋಜನೆ ಸೂರಿನಡಿ ತರುವುದಕ್ಕೆ ಪ್ರಯತ್ನ ಮಾಡಿದ್ದರೆ ಆಗ ಇದು ಸಫಲವಾಗುತ್ತದೆ. ಇಲ್ಲವೆಂದರೆ, ಇವರು ಜಾಹೀರಾತು ಮಾಡುತ್ತಲೇ ಇರಬೇಕಾಗುತ್ತದೆ. ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ ನೀವು ಜಾಹೀರಾತನ್ನು ಕೊಟ್ಟರು ಅವರ್ಯಾರು ಏಕೆ ಬರುತ್ತಿಲ್ಲವೆಂದರೆ ಅವರಿಗೆ ಸಂಭಾವನೆ ಇಲ್ಲ. ಸಂಭಾವನೆ ಮತ್ತು ಸಂಬಳ ಕೊಡದಿದ್ದರೆ ಯಾರು ಬರುತ್ತಾರೆ, ಈ ಯೋಜನೆ ಹೇಗೆ ಯಶಸ್ವಿ ಆಗುತ್ತದೆ? ಹಣ ಕೊಡಲು ಇವರಿಗೆ ಸಮಸ್ಯೆ ಇಲ್ಲ. ಹಣ ಯಥೇಚ್ಛವಾಗಿ ಕಾರ್ಮಿಕ ಇಲಾಖೆಯಲ್ಲಿ ಸೆಸ್ ಮೂಲಕ ಸಂಗ್ರಹವಾಗಿರುವುದು ಇದೆ. ಈ ರೀತಿ ಹಣ ಪ್ರತಿ ವರ್ಷವೂ ಸಂಗ್ರಹವಾಗುತ್ತಿದೆ. ಆದ್ದರಿಂದ ಇವರು ದಯವಿಟ್ಟು ಅದಕ್ಕೆ ಪದವಿ ಮತ್ತು computer knowledge ವಿದ್ಯಾರ್ಹತೆ ಇರಬೇಕೆಂದು ಮಾಡಿ. ಅವರಿಗೆ ನಿರ್ದಿಷ್ಟವಾದ ಸಂಭಾವನೆಯನ್ನು ಘೋಷಣೆ ಮಾಡಿದ ನಂತರ ಇವರು ಜಾಹೀರಾತನ್ನು ಕೊಡಲಿ. ಆಗ ಅವರು ಈ ಕೆಲಸಕ್ಕೆ ಬರದಿದ್ದರೆ ನನ್ನನ್ನು ಕೇಳಲಿ.

**ಶ್ರೀ ಟಿ.ಬಿ.ಜಯಚಂದ್ರ (ಮಾನ್ಯ ಕಾರ್ಮಿಕ ಸಚಿವರ ಪರವಾಗಿ):-** ಮಾನ್ಯ ಸದಸ್ಯರ ಕಳಕಳ ನನಗೂ ಅರ್ಥವಾಗುತ್ತದೆ. ಈಗ ಅವರಿಗೆ ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ಮತ್ತು computer knowledge ಇರಬೇಕೆಂದು ನಿಗದಿಪಡಿಸಲಾಗಿದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಚಿವರೇ, ಪದವಿ ವಿದ್ಯಾರ್ಹತೆ ಇರಬೇಕೆಂದು ನಿಗದಿಪಡಿಸಿ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಾನು ಬಹುಶಃ ಎಸ್‌ಎಸ್‌ಎಲ್‌ಸಿ ವಿದ್ಯಾರ್ಹತೆ ಹೊಂದಿರಬೇಕೆಂದು ಹೇಳಿದ್ದರೂ ಸಹ ಕಾರ್ಮಿಕ ಬಂಧುಗಳು ಸ್ವಯಂ ಸೇವಕರು ಸುಮಾರು 2300 ಜನ ಬೇಕಾಗುತ್ತದೆ. ಅದರಲ್ಲಿ ಈಗ ಇರುವಂತಹ 2000 ಜನ ಕಾರ್ಮಿಕ ಬಂಧುಗಳು ಬಹುತೇಕ ಎಲ್ಲರೂ ಪದವಿ ಹೊಂದಿದವರೇ ಇದ್ದಾರೆ. ಆದರೆ, ಅವರಿಗೆ ಸಂಭಾವನೆ ಎಷ್ಟು ಬರುತ್ತದೆ ಎಂದರೆ, progress ಮೇಲೆ ಸುಮಾರು 4,000/- ರೂಪಾಯಿಗಳಿಂದ 5,000/- ರೂಪಾಯಿಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬರಬಹುದು. ಅವರನ್ನು ಖಾಯಂ ಆಗಿ ನೇಮಕಾತಿ ಮಾಡಬೇಕೆಂಬ ಒಂದು ಒತ್ತಾಯವಿದೆ. ಅಷ್ಟೇ ಪ್ರಮಾಣದಲ್ಲಿ ಕೂಡ beneficiaries ಗೆ reach ಆಗಬೇಕಾದರೆ, ಇಲಾಖೆಯಲ್ಲಿ ಹಣವೂ ಸಹ ಲಭ್ಯತೆ ಇದೆ. ಇದಕ್ಕೆ ಹಣವನ್ನು ಕೂಡ ಖರ್ಚು ಮಾಡಬೇಕಾಗುತ್ತದೆ. ಏಕೆಂದರೆ, ಈಗ ನಾವು registration fee ಗೆ ಕೊಡುತ್ತಿರುವಂತಹ ಹಣದ ಪ್ರಮಾಣ ಜಾಸ್ತಿ ಮಾಡಿ, ಇನ್ನೂ ಹೆಚ್ಚು ಜನರು ಆಕರ್ಷಿತರಾಗಿ ಬರುವುದಕ್ಕೆ ಸಾಧ್ಯವಾಗುವುದರ ಬಗ್ಗೆ ಒಂದು ಯೋಚನೆ ಮಾಡಬೇಕಾಗುತ್ತದೆ.

**(168)21.02.2018/ಎಂಎಂ/ಬಿಎನ್‌ಎಸ್/12.50**

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಚಿವರೇ, ಅಸಂಘಟಿತ ಕಾರ್ಮಿಕರ ಹಿತವನ್ನು ಕಾಪಾಡುವುದು ನಮ್ಮ ನಿಮ್ಮ ಜವಾಬ್ದಾರಿ ಆಗಬೇಕಾಗಿದೆ.

**ಶ್ರೀ ಟಿ.ಬಿ. ಜಯಚಂದ್ರ:-** ಈಗ ಕಾರ್ಮಿಕರ fund ಅವಶ್ಯಕತೆ ತುಂಬಾ ಇದೆ.

**ಸಭಾಪತಿಯವರು:-** ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಸಂಪನ್ಮೂಲಕ್ಕೂ ನೀವು ಪರದಾಡಬೇಕಾಗಿಲ್ಲ.

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಕಮಿಷನ್ ಅಮೌಂಟ್ ಅನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯವೇ ಎನ್ನುವುದರ ಬಗ್ಗೆ ಯೋಚನೆ ಮಾಡಿ ತದನಂತರ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ನಿಮ್ಮ ಕಳಕಳಿಯನ್ನು ಸರ್ಕಾರವು ಅರ್ಥಮಾಡಿಕೊಂಡಿದ್ದು ಅದನ್ನು ಪರಿಶೀಲನೆ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 28(96)**

**(ಉತ್ತರವನ್ನು ಲಗತ್ತಿಸಿದೆ)**

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಈ ಉತ್ತರವನ್ನು ಕೊಡುವುದಕ್ಕೆ ಮಾನ್ಯ ಕಾರ್ಮಿಕ ಸಚಿವರ ಬದಲು ತಾವೇ ಬಂದಿರುವುದಕ್ಕೆ ನನಗೆ ಖುಷಿಯಾಗಿದೆ. ನಾನು ಕಳೆದ ವರ್ಷದ ಬಜೆಟ್ ಅನ್ನು ಓದುತ್ತಿದ್ದೆ. ಅದರಲ್ಲಿ ಕಾರ್ಮಿಕ ಇಲಾಖೆಗೆ ಸಂಬಂಧಪಟ್ಟ ಹಾಗೆ ತಾವು ಉಲ್ಲೇಖ ಮಾಡಿರುವುದೇನೆಂದರೆ, ಖಾಸಗಿ ವಲಯದ ಉದ್ದಿಮೆಗಳಲ್ಲಿ 'ಸಿ' ಮತ್ತು 'ಡಿ' ವೃಂದದ ನೇಮಕಾತಿಯಲ್ಲಿ ಕನ್ನಡಿಗರಿಗೆ ಶೇ.100 ರಷ್ಟು ಮತ್ತು ವಿಕಲಚೇತನರಿಗೆ ಶೇ.5ರಷ್ಟು ಆದ್ಯತೆ ನೀಡಲು ಸರ್ಕಾರವು ಕ್ರಮ ಕೈಗೊಳ್ಳುತ್ತದೆ ಎಂದು ಅದರಲ್ಲಿ ಘೋಷಣೆ ಮಾಡಿದ್ದರು. ಆದರೆ ಇಲ್ಲಿ ಉತ್ತರ ನೀಡಬೇಕಾದರೆ ಅದಾವುದನ್ನೂ ಮಾಡುವುದಕ್ಕೆ ಆಗಲಿಲ್ಲ, ಅದಕ್ಕೆ ಬೇರೆ ಬೇರೆ ಕಾರಣಗಳಿವೆ ಎಂದು ಹೇಳಿದ್ದಾರೆ. ಆದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದನ್ನು ಅನುಷ್ಠಾನ ಮಾಡುವುದಕ್ಕೆ ಸೆಪ್ಟೆಂಬರ್ ತಿಂಗಳಿನಲ್ಲಿ ಒಂದು ಬಾರಿ ಮತ್ತು ಜನವರಿ ತಿಂಗಳಿನಲ್ಲಿ ಒಂದು ಬಾರಿ ಸಭೆಯನ್ನು ನಡೆಸಿದ್ದೀರಿ. ನಾನು ಇಷ್ಟಕ್ಕೇ ಸೀಮಿತವಾಗಿ ಪ್ರಶ್ನೆ ಕೇಳಿಲ್ಲ. ನಾನು ಕೇಳುವ ಉದ್ದೇಶವೇನಿತ್ತು ಎಂದರೆ, 1968ರಿಂದ ಅಂದರೆ ಬಹಳ ಹಿಂದಿನಿಂದ ರಾಷ್ಟ್ರೀಯ ಐಕ್ಯತಾ ಪರಿಷತ್‌ನವರು ನಿರ್ಣಯವೊಂದನ್ನು ತೆಗೆದುಕೊಂಡಿದ್ದರು. ರಾಜ್ಯಗಳಲ್ಲಿ ನೌಕರಿಗೆ local candidates ಗಳನ್ನು ಆಯ್ಕೆ ಮಾಡುವುದಕ್ಕೆ ಏನು ಮಾಡಬೇಕೆಂಬುದಕ್ಕೆ ವರದಿಯೊಂದನ್ನು ಕೊಟ್ಟಿದ್ದರು. ಅದಾದ ನಂತರ 1984 ರಿಂದ 1986ರ ಅವಧಿಯಲ್ಲಿ ಪ್ರಾರಂಭದಲ್ಲಿ ಶ್ರೀ ಮಾರ್ಗರೇಟ್ ಆಳ್ವರವರು ಅದರ ನಂತರ ಡಾ: ಸರೋಜಿನಿ ಮಹಿಷಿಯವರು ವರದಿ ಕೊಟ್ಟರು. ಡಾ: ಸರೋಜಿನಿ ಮಹಿಷಿಯವರು ಕೊಟ್ಟ ವರದಿಯಲ್ಲಿ ಸ್ಥಳೀಯರ ನೇಮಕಾತಿಗೆ ರಾಜ್ಯ ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕು, ಕೇಂದ್ರ ಸರ್ಕಾರದ ನೇಮಕಾತಿಗೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದನ್ನು ಉಲ್ಲೇಖ ಮಾಡಿದ್ದರು. ಮುಂದುವರೆದು 2017ರಲ್ಲಿ ಪ್ರೊ. ಜಿ. ಸಿದ್ದರಾಮಯ್ಯನವರು ವರದಿಯೊಂದನ್ನು ಕೊಟ್ಟರು. ಈ ಎಲ್ಲಾ ವರದಿಗಳ ಆಧಾರದಲ್ಲಿ 2017-18ರ ಬಜೆಟ್‌ನಲ್ಲಿ ಉಲ್ಲೇಖ ಮಾಡಿರುವುದಕ್ಕೆ ಬೇಕಾದ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ ಎಂದು ನಾನು ತಿಳಿದುಕೊಂಡಿದ್ದೆ. ಆದರೆ ತಾವು ಅನುಬಂಧದಲ್ಲಿ ಉತ್ತರ ಕೊಟ್ಟಿರುವುದೇನೆಂದರೆ, ತಮ್ಮ ಘೋಷಣೆಯಾದ ಮೇಲೆ ಅಡ್ವೊಕೇಟ್ ಜನರಲ್‌ರವರ ಬಳಿ ಮಾತನಾಡಿದ್ದೀರಿ. ಅವರು ಉಲ್ಲೇಖ ಮಾಡಲು ಆಗುತ್ತಿಲ್ಲವೆಂದು ವರದಿ ಕೊಟ್ಟಿದ್ದಾರೆ. ಆದರೆ ಡಾ: ಸರೋಜಿನಿ ಮಹಿಷಿಯವರ ವರದಿಯ ಆಧಾರದಲ್ಲಿ ಮತ್ತು ಅದರ ನಂತರ ಪ್ರೊ.ಜಿ. ಸಿದ್ದರಾಮಯ್ಯನವರು ಕೊಟ್ಟ ವರದಿಯ ಆಧಾರದಲ್ಲಿ ರಾಜ್ಯ ಸರ್ಕಾರದಲ್ಲಿ ಮಾಡಬೇಕಾದ ಕ್ರಮ ಮತ್ತು ಸ್ಥಳೀಯ ಅಭ್ಯರ್ಥಿಗಳಿಗೆ ಕರ್ನಾಟಕದಲ್ಲಿ ಮುಖ್ಯವಾಗಿ 'ಸಿ' ಮತ್ತು 'ಡಿ' ದರ್ಜೆಗಳಲ್ಲಿ ಖಾಸಗಿ ವಲಯದಲ್ಲಿ ಕೊಡುವುದಕ್ಕೆ ಯಾವುದೇ ಕ್ರಮವನ್ನು ಸರಿಯಾಗಿ ಮಾಡಿಲ್ಲ. ಘೋಷಣೆ ಮಾಡುವುದು ಬಹಳ ಸುಲಭವಾಗಿದೆ. ಆದರೆ 1986 ರಿಂದ 2018ರವರೆಗೆ ಸರೋಜಿನಿ ಮಹಿಷಿ ಅವರ ವರದಿಯ ಬಗ್ಗೆ ಮತ್ತೆ ಪುನರ್ವಿಮರ್ಶೆಯಾಗಿ 2017ರಲ್ಲಿ ವರದಿ ಕೊಟ್ಟರೂ ಕೂಡ ಕರ್ನಾಟಕದ ಜನರಿಗೆ ನ್ಯಾಯ ಒದಗಿಸಲು ಸಾಧ್ಯವಾಗುತ್ತಿಲ್ಲ. ನನ್ನ ವಿನಂತಿಯೇನೆಂದರೆ, ಡಾ: ಸರೋಜಿನಿ ಮಹಿಷಿ ವರದಿಯನ್ನು ಗಂಭೀರವಾಗಿ ಸ್ವೀಕಾರ ಮಾಡಿಕೊಂಡು ರಾಜ್ಯ ಸರ್ಕಾರ ಅದನ್ನು ಅನುಷ್ಠಾನಗೊಳಿಸಬೇಕು ಇದು ಮೊದಲನೆಯದು. ಎರಡನೆಯದಾಗಿ 1968ರಲ್ಲಿನ ರಾಷ್ಟ್ರೀಯ ಐಕ್ಯತಾ ಪರಿಷತ್ತಿನ ನಿರ್ದೇಶನದಂತೆ ಸ್ಥಳೀಯ ಅಭ್ಯರ್ಥಿಗಳಿಗೆ ಕೊಡುವುದಕ್ಕೆ ಏನೆಲ್ಲಾ ಮಾಡಬೇಕೆಂಬುದನ್ನು ಆಧಾರವಾಗಿಟ್ಟುಕೊಂಡು ಕೇಂದ್ರ ಸರ್ಕಾರದಲ್ಲಿ one-point agenda ಎಂದು ಇದನ್ನು ತೆಗೆದುಕೊಳ್ಳದಿದ್ದರೆ, ಪ್ರತಿವರ್ಷ ಡಾ.ಸರೋಜಿನಿ ಮಹಿಷಿ ವರದಿಗೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೀರಿ ಆದರೆ ಏನೂ ಆಗುತ್ತಿಲ್ಲ. ಬಜೆಟ್‌ನ ಉಲ್ಲೇಖವನ್ನು ಉದ್ಧರಿಸಿ ನಾನು ಇಷ್ಟನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ತಾವು ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ? ಮತ್ತೆ ನಾವೇ ಅಧಿಕಾರಕ್ಕೆ ಬರುತ್ತೇವೆಂದು ತಾವು ಹೇಳುತ್ತೀರಿ. ಯಾವುದೇ ಸರ್ಕಾರ ಬರಲಿ ಮುಂದಿನ ಐದು ವರ್ಷಕ್ಕೆ ಅಜೆಂಡಾ ಹಾಕಿಕೊಳ್ಳಬೇಡಿ. ಇನ್ನು ಎರಡು ತಿಂಗಳಿನಲ್ಲಿ ಏನಾದರೂ ಮಾಡಿ ಕರ್ನಾಟಕದ

ತಿದ್ದುಪಡಿಯಾಗದ ಪ್ರತಿ-ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜನತೆಗೆ ನ್ಯಾಯವನ್ನು ಒದಗಿಸುವುದಕ್ಕೆ ಕೇಂದ್ರ ಸರ್ಕಾರದೊಂದಿಗೆ ಯಾವ ವ್ಯವಹಾರವನ್ನು ನಡೆಸಬೇಕು ಅದರ ಕಡೆ ಗಮನಹರಿಸಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಅನೇಕ ವರದಿಗಳು ಬಂದಿವೆ. ಆಯವ್ಯಯದಲ್ಲಿ ಮಂಡಿಸುವ ಸಂದರ್ಭದಲ್ಲಿಯು ಕೂಡ 2017-18ರಲ್ಲಿ ಮಾನ್ಯ ಮುಖ್ಯಮಂತ್ರಿಯವರು ಉಲ್ಲೇಖ ಮಾಡಿದ್ದಾರೆ. ಗ್ರೂಪ್ 'ಸಿ' ಮತ್ತು 'ಡಿ' ಉದ್ಯೋಗಗಳನ್ನು ಕನ್ನಡಿಗರಿಗೆ ಶೇ.100ಕ್ಕೆ 100ರಷ್ಟು ಮೀಸಲಿಡಬೇಕೆಂದು ಸರ್ಕಾರದ ಇಚ್ಛೆ ಇದೆ. ಈ ವಿಚಾರವಾಗಿ ಪ್ರಸ್ತಾಪವೊಂದು ಕಾರ್ಮಿಕ ಇಲಾಖೆಯಿಂದ ಕಾನೂನು ಇಲಾಖೆಗೆ ಬಂದಂತಹ ಸಂದರ್ಭದಲ್ಲಿ 2-3 ಸಭೆಗಳನ್ನು ಮಾಡಿ, ಸಾಕಷ್ಟು ಚರ್ಚೆ ಮಾಡಿ ಅಂತಿಮವಾಗಿ ಕಾನೂನಾತ್ಮಕವಾಗಿ ಸಂವಿಧಾನ ರೀತ್ಯಾ ಏನಾದರೂ ವ್ಯತ್ಯಾಸಗಳು ಬರುತ್ತವೆಯೇ ಎನ್ನುವುದನ್ನು ನೋಡಿದ್ದೇವೆ. ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯವನ್ನು ಕೂಡ ನಾವು ತೆಗೆದುಕೊಂಡಿದ್ದೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಈ ರೀತಿ ಪ್ರಮುಖವಾದ ಒಂದು ಘೋಷಣೆಯನ್ನು ಬಜೆಟ್‌ನಲ್ಲಿ ಮಾಡಬೇಕಾದುದರಿಂದ, ಈ ಸಂಗತಿಗಳನ್ನು ತಾವು ಮೊದಲೇ ಪರಿಗಣಿಸಬೇಕಾಗಿತ್ತಲ್ಲವೇ? ಬಜೆಟ್‌ನಲ್ಲಿ ಘೋಷಣೆಯನ್ನು ಮಾಡಲಾಗಿದೆ. ಅದಾದ ನಂತರ ಅಡ್ವೋಕೇಟ್ ಜನರಲ್‌ರವರು ಅದನ್ನು ಸಂವಿಧಾನಾತ್ಮಕವಾಗಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ನಾವು ರಾಜ್ಯಕ್ಕೆ ಯಾವ ತಪ್ಪು ಸಂದೇಶಗಳನ್ನು ಕೊಟ್ಟಿದ್ದೇವೆ?

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಒಂದು ವಿಧೇಯಕವನ್ನು ಮಂಡನೆ ಮಾಡಬೇಕಾದಾಗ ಆಯವ್ಯಯದಲ್ಲಿ ಆಗಲೀ ಅಥವಾ ಯಾವುದರಲ್ಲಾಗಲೀ ಒಂದು ಪ್ರಸ್ತಾಪ ಮಾಡಿದಾಗ ಆ ವಿಧೇಯಕದ ಸಾಧಕ-ಬಾಧಕಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ. ನಾನು ಅಧ್ಯಕ್ಷನಾಗಿ ಕುಳಿತು 2-3 ಸಭೆಗಳನ್ನು ಮಾಡಿ, ಕಾರ್ಮಿಕ ಸಚಿವರು ಹೆಚ್ಚು ಆಸಕ್ತಿಯನ್ನು ವಹಿಸಿ ಆದ್ಯತೆ ಮೇಲೆ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೆವು. ಅವರ ಅಭಿಪ್ರಾಯವನ್ನು ಕೂಡ ತಂದಿದ್ದೆವು. ಇದರ ಮೇಲೆ ಸಚಿವ ಸಂಪುಟಕ್ಕೆ ಹೋಗಿ ಇದು ತೀರ್ಮಾನವಾಗಬೇಕಾಗುತ್ತದೆ. ನಾವು ಆಯವ್ಯಯದಲ್ಲಿ ಏನು ಹೇಳಿದ್ದೇವೆ ಅದನ್ನು ಆದಷ್ಟು ಬೇಗ ಅನುಷ್ಠಾನ ಮಾಡುವುದಕ್ಕೆ ಎಲ್ಲ ರೀತಿಯಾದ ಪ್ರಯತ್ನಗಳನ್ನು ಮಾಡುತ್ತೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ತಾವು ಇದನ್ನು ತುಂಬಾ ಗಂಭೀರವಾಗಿ ತೆಗೆದುಕೊಂಡಿರುವುದಕ್ಕೆ ಸ್ವಾಗತ ಮಾಡುತ್ತೇನೆ. ಬಜೆಟ್ ಆದ ಮೇಲೆ ದಿನಾಂಕ 20-9-2017ಕ್ಕೆ ಒಂದು ಸಭೆ ಆಗಿದೆ. ದಿ. 11-01-2018ಕ್ಕೆ ಮತ್ತೊಂದು ಮೀಟಿಂಗ್ ಆಗಿದೆ. ನನಗೆ ನೀವು ಸ್ಪಷ್ಟವಾಗಿ ಹೇಳಿ. ಕೇಂದ್ರ ಸರ್ಕಾರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಬೇಕಾದ ಸಂಗತಿಗಳು ಸಂವಿಧಾನಾತ್ಮಕವಾಗಿ 1968ರ ರಾಷ್ಟ್ರೀಯ ಐಕ್ಯತಾ ಪರಿಷತ್‌ನ recommendation implement ಮಾಡುವುದರ ಬಗ್ಗೆ ನಾವು ಏನು ಮಾಡಿದ್ದೇವೆ? ಏನೂ ಮಾಡದೇ ಘೋಷಣೆ ಮಾಡಿದರೆ ಕರ್ನಾಟಕದ ಜನತೆಗೆ ಯಾವ ರೀತಿ ನ್ಯಾಯ ಒದಗಿಸುವುದಕ್ಕೆ ಸಾಧ್ಯವಿದೆ? 1968ರ recommendation ಅನ್ನು ಡಾ: ಸರೋಜಿನಿ ಮಹಿಷಿ ವರದಿಯ ಆಧಾರದ ಮೇಲೆ ಕೂಡ ಇಲ್ಲಿಯವರೆಗೆ ಕೇಂದ್ರ ಸರ್ಕಾರದ ಜೊತೆ ಯಾವುದೇ ವ್ಯವಹಾರವನ್ನು ಮಾಡಿಲ್ಲದಿರುವುದರಿಂದ ಇಲ್ಲಿ ಎಷ್ಟೇ ಘೋಷಣೆ ಮಾಡಿ, ಎಷ್ಟೇ ಮೀಟಿಂಗ್ ಮಾಡಿದರೂ ಅದನ್ನು implement ಮಾಡುವುದಕ್ಕಾಗುವುದಿಲ್ಲ. ನನ್ನ ವಿನಂತಿಯೇನೆಂದರೆ, ಇನ್ನು ತಮಗೆ ಕೇವಲ ಎರಡು ತಿಂಗಳ ಅವಧಿ ಉಳಿದಿದೆ. ಜನವರಿ ತಿಂಗಳಿನಲ್ಲಿ ನಡೆಸಿದ ಸಭೆಯ ವರದಿಯ ಆಧಾರದ ಮೇಲಾದರೂ ಮಾಡಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

**ಸಭಾಪತಿಯವರು**:- Initiate ಆದರೂ ಮಾಡಿ ಎಂದು ಕೇಳುತ್ತಿದ್ದಾರೆ.

**ಶ್ರೀ ಟಿ.ಬಿ. ಜಯಚಂದ್ರ**:- ಮಾನ್ಯ ಸಭಾಪತಿಯವರೇ, ಅಡ್ವೊಕೇಟ್ ಜನರಲ್‌ರವರಿಂದ ಅಭಿಪ್ರಾಯ ಬಂದಿದೆ, ಆ ಕಡತ ನನ್ನ ಬಳಿಯೇ ಇದೆ. ಅದನ್ನು ಮುಂದಿನ ಕ್ಯಾಬಿನೆಟ್ ಸಭೆಯಲ್ಲಿ ಕ್ಯಾಬಿನೆಟ್ ಮುಂದೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಸಭಾಪತಿಯವರು**:- ಪ್ರಶ್ನೋತ್ತರ ಅವಧಿ ಇಲ್ಲಿಗೆ ಮುಗಿಯಿತು, ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ) **<u>ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>**

**ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, ದಿನಾಂಕ 21ನೇ ಫೆಬ್ರವರಿ 2018 ಸಮೂಹ-IIIರ ಲಿಖಿತ ಮೂಲಕ ಉತ್ತರಿಸುವ ಒಟ್ಟು 122 ಪ್ರಶ್ನೆಗಳ ಪೈಕಿ 64 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

**ಸಭಾಪತಿಯವರು**:- ಮಂಡಿಸಲಾಯಿತು.

**<u>2. ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು</u>**

**ಅ) ವಿಷಯ**:- ವಸತಿ ಶಾಲೆ ಪ್ರವೇಶ ಪರೀಕ್ಷೆಗೆ ಹೈಕೋರ್ಟ್ ತಡೆ ನೀಡಿರುವ ಬಗ್ಗೆ.

- - - - -

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಿನಾಂಕ: 16-2-2018ರಂದು ಅನೇಕ ವಿವಿಧ ದಿನಪತ್ರಿಕೆಗಳಲ್ಲಿ **"ವಸತಿ ಶಾಲೆ ಪ್ರವೇಶ ಪರೀಕ್ಷೆಗೆ ಹೈಕೋರ್ಟ್ ತಡೆ"** ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾಗಿರುವ ಅಂಶವು ಅತ್ಯಂತ ಗಂಭೀರವಾಗಿದೆ. ರಾಜ್ಯದಲ್ಲಿ ಸರ್ಕಾರದ ವತಿಯಿಂದ ನಡೆಸುತ್ತಿರುವ ವಸತಿ ಶಾಲೆಗಳ ಪ್ರವೇಶಕ್ಕೆ ರಾಜ್ಯ ಹೈಕೋರ್ಟ್ ತಡೆ ನೀಡಿದೆ. ಇದರಿಂದಾಗಿ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಮೊರಾರ್ಜಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಹಾಗು ಇತರೆ ಅನೇಕ ವಸತಿ ಶಾಲೆಗಳಿಗೆ ಪ್ರವೇಶ ಪರೀಕ್ಷೆಗೆ ವಿದ್ಯಾರ್ಥಿಗಳು ಕೂರಲು ತಡೆಯಾಜ್ಞೆ ನೀಡಿರುವುದರಿಂದ ವಿದ್ಯಾರ್ಥಿಗಳು ಸಂಕಷ್ಟದಲ್ಲಿದ್ದಾರೆ. ಈ ಪ್ರವೇಶ ಪರೀಕ್ಷೆ ಫೆಬ್ರವರಿ 2018ರಲ್ಲಿ ಪೂರ್ಣಗೊಳ್ಳಬೇಕಾಗಿತ್ತು. ತಡೆಯಾಜ್ಞೆ ನೀಡಿರುವುದರಿಂದ ಪ್ರವೇಶಕ್ಕೆ ಅವಕಾಶ ಇಲ್ಲದಂತಾಗಿದೆ.

ರಾಜ್ಯ ಹೈಕೋರ್ಟ್ ತನ್ನ ಮಧ್ಯಂತರ ತಡೆಯಾಜ್ಞೆ ಆದೇಶವನ್ನು ಸಂವಿಧಾನದಲ್ಲಿ ಮೀಸಲಿರುವ ಗರಿಷ್ಠ ಮಿತಿ ಶೇ.50ರಷ್ಟು ದಾಟಬಾರದೆಂದು ಉಲ್ಲೇಖಿಸಲಾಗಿದೆ. ಎಸ್.ಸಿ./ಎಸ್.ಟಿ.ಗೆ ಸೇರಿದ ಗ್ರಾಮೀಣ ಮಕ್ಕಳಿಗೆ ಈ ವಸತಿ ಶಾಲೆಗಳ ಸೌಲಭ್ಯವನ್ನು ತೆರೆಯಲಾಗಿದೆ. ಸಂವಿಧಾನದ ಅನುಚ್ಛೇದ (46)ರಂತೆ ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಎಸ್.ಸಿ./ಎಸ್.ಟಿ.ಗಳಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಸಂವಿಧಾನವು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡಿದೆ. ಆ ರೀತಿಯ ದತ್ತವಾದ ಅಧಿಕಾರದಿಂದ ವಿಶೇಷ ಸವಲತ್ತುಗಳನ್ನು ಕಲ್ಪಿಸಿಕೊಡಲು ಸಂವಿಧಾನವು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡಿದೆ. ವಸತಿ ಶಿಕ್ಷಣ ಶಾಲೆಗಳು ಹತ್ತಾರು ವರ್ಷಗಳಿಂದ ನಡೆದುಕೊಂಡು ಬರುತ್ತಿವೆ. ಇದನ್ನು ಹೈಕೋರ್ಟ್‌ಗೆ ಸಮರ್ಥಿಸಿಕೊಳ್ಳುವುದಕ್ಕೆ ಸರ್ಕಾರ ವಿಫಲವಾಗಿದೆ. ಮಕ್ಕಳು ಅರ್ಜಿ ಹಾಕಿದ್ದು, ಅವರ ಅಡ್ಮಿಷನ್ ಆಗಬೇಕಾಗಿದೆ. ವಿಳಂಬವಾದರೆ ಅಕಾಡೆಮಿಕ್ ವರ್ಷಕ್ಕೆ ತೊಂದರೆಯಾಗುತ್ತದೆ ಎನ್ನುವ ಅಂಶವನ್ನು ಹೈಕೋರ್ಟ್‌ಗೆ ಸಮರ್ಥವಾಗಿ ಮಂಡಿಸದೇ ಇರುವ ಕಾರಣ ಈ ಸಂಕಷ್ಟ ಎದುರಾಗಿದೆ. ಆದ್ದರಿಂದ ತಕ್ಷಣವೇ ವಿಶೇಷ ಅರ್ಜಿಯನ್ನು ಹೈಕೋರ್ಟ್‌ನಲ್ಲಿ ಹಾಕಿ, ತಡೆಯಾಜ್ಞೆಯನ್ನು ತೆರವುಗೊಳಿಸಿ. ಸಾವಿರಾರು ವಿದ್ಯಾರ್ಥಿಗಳು ಪ್ರವೇಶಕ್ಕಾಗಿ ಕಾಯುತ್ತಿದ್ದಾರೆ. ಅವರಿಗೆ ಶೈಕ್ಷಣಿಕ ಪ್ರವೇಶಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಮೂಲಕ ನಾನು ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಮಾಜ ಕಲ್ಯಾಣ ಸಚಿವರ ಜೊತೆ ಮಾತನಾಡಿ ಈ ಬಗ್ಗೆ ಆದಷ್ಟು ಬೇಗ ಕ್ರಮವನ್ನು ಜರುಗಿಸಬೇಕೆಂದು, ಕೂಡಲೇ procedure ಪ್ರಾರಂಭ ಮಾಡಬೇಕೆಂದು ನಿವೇದನೆ ಮಾಡಿಕೊಳ್ಳುತ್ತೇನೆ.

(ಮುಂದು . . .

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವಿಷಯ:-ಶೌಚಗುಂಡಿ ಮತ್ತು ತ್ಯಾಜ್ಯ ಸಂಗ್ರಹ ಟ್ಯಾಂಕ್ ಸ್ವಚ್ಛಗೊಳಸುವಾಗ ಕಾರ್ಮಿಕರು ಸಾವಿಗೀಡಾಗುತ್ತಿರುವ ಬಗ್ಗೆ**

***

**ಡಾ॥ ಜಯಮಾಲ ರಾಮಚಂದ್ರ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ಶೌಚಗುಂಡಿ ಹಾಗೂ ತ್ಯಾಜ್ಯ ಸಂಗ್ರಹ ಟ್ಯಾಂಕ್ ಕಟ್ಟಿಕೊಂಡಿರುವುದನ್ನು ಸ್ವಚ್ಛಗೊಳಸಲು ರಸ್ತೆಯ ಗುಂಡಿಗೆ ಇಳದವರು ಸಾವಿಗೀಡಾಗುತ್ತಿರುವ ವಿಚಾರವು ಸಾರ್ವಜನಿಕವಾಗಿ ಅತ್ಯಂತ ಮಹತ್ವದುಳ್ಳದ್ದಾಗಿದ್ದು, ಈ ವಿಚಾರವನ್ನು ಸದನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿಯನ್ನು ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ತಿಳಸುತ್ತೇನೆ.

ರಾಜ್ಯದಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕ (ಎಸ್.ಟಿ.ಪಿ) ಪಂಪ್ ದುರಸ್ಥಿಗೊಳಸಲು ಮ್ಯಾನ್‌ಹೋಲ್‌ಗಳಲ್ಲಿ ಇಳದು ಸ್ವಚ್ಛತಾ ಕಾರ್ಯವನ್ನು ಕೈಗೊಳ್ಳಲು ರಾಜ್ಯದ ಕಾನೂನಿನಲ್ಲಿ ನಿಷೇಧ ಹೇರಿದ್ದರೂ ಸಹ, ಹೋಟೇಲ್‌ಗಳ/ಅಪಾರ್ಟ್‌ಮೆಂಟ್‌ಗಳ ಮಾಲೀಕರುಗಳ ಒತ್ತಾಯದಿಂದ ಕಾರ್ಮಿಕರು ಮ್ಯಾನ್‌ಹೋಲ್‌ಗಳಗೆ ಇಳದು ಸಾವಿಗೀಡಾಗುತ್ತಿರುವುದು ಅವಮಾನವೀಯವಾದ ಘಟನೆಯಾಗಿದೆ. ಮ್ಯಾನ್‌ಹೋಲ್, ಒಳಚರಂಡಿ ಮತ್ತು ಎಸ್.ಟಿ.ಪಿ ಸ್ವಚ್ಛಗೊಳಸಲು/ದುರಸ್ಥಿ ಮಾಡಲು ಯಾವುದೇ ಸುರಕ್ಷತಾ/ಮುಂಜಾಗ್ರತಾ ಕ್ರಮಗಳನ್ನು ವಹಿಸದೇ ಕಾರ್ಮಿಕರನ್ನು ಬಳಸಿಕೊಳ್ಳುತ್ತಿರುವುದು ಶೋಚನೀಯ ಸಂಗತಿಯಾಗಿದೆ. ಈ ರೀತಿ ಸ್ವಚ್ಛತಾ ಕಾರ್ಯ ಮಾಡುವ ಸಮಯದಲ್ಲಿ ಮ್ಯಾನ್‌ಹೋಲ್‌ನಲ್ಲಿ ಹಾಗೂ ಎಸ್.ಟಿ.ಪಿ.ಗಳಲ್ಲಿ ಮೀಥೇನ್ (ಸಿಹೆಚ್ 4), ಕಾರ್ಬನ್ ಮಾನಾಕ್ಸೈಡ್‌ನಂಥ ವಿಷಕಾರಿ ಅನಿಲಗಳು ಇರುವ ಕಾರಣದಿಂದ ಕಾರ್ಮಿಕರು ಮರಣ ಹೊಂದುತ್ತಾರೆ.

ಬಿ.ಬಿ.ಎಂ.ಪಿ., ವ್ಯಾಪ್ತಿಯಲ್ಲಿ 1995 ರಿಂದ ಇಲ್ಲಿಯವರೆಗೆ ಇಂತಹ 32 ಪ್ರಕರಣಗಳು ಕಂಡು ಬಂದಿದ್ದು, ಅದರಲ್ಲಿ 62 ಕಾರ್ಮಿಕರು ಬಲಿಯಾಗಿರುತ್ತಾರೆ. ಇಂತಹ ಗುಂಡಿಗಳಲ್ಲಿ ಕಾರ್ಮಿಕರುಗಳನ್ನು ಇಳಸುವಂತಿಲ್ಲ ಎಂಬ ನಿಯಮವಿದ್ದರೂ ಸಹ, ಈ ರೀತಿಯಾದ ಪ್ರಕರಣಗಳು ಪದೇ ಪದೇ ಮರುಕಳಸುತ್ತಲೇ ಇದೆ. ಮ್ಯಾನ್‌ಹೋಲ್ ಗುಂಡಿಗಳಗೆ ಕಾರ್ಮಿಕರನ್ನು ಇಳಸುವುದು ಮಲ ಹೊರುವ ಪದ್ಧತಿ ನಿಷೇಧ ಕಾಯ್ದೆ ಪ್ರಕಾರ ಶಿಕ್ಷಾರ್ಹ ಅಪರಾಧ. ಇಂತಹ ಪ್ರಕರಣಗಳಲ್ಲಿ ಮುಂಜಾಗರೂಕತೆ ವಹಿಸದೇ ಇಳಸುವವರ ಮಾಲೀಕರುಗಳ ವಿರುದ್ಧ ಹಾಗೂ ಈ ರೀತಿಯ ಘಟನೆಗಳು ಮರುಕಳಸದಂತೆ ಕಾನೂನು ರೀತ್ಯಾ ಕಟ್ಟುನಿಟ್ಟಿನ ಕ್ರಮ ಜರುಗಿಸಲು ಸಂಬಂಧಪಟ್ಟವರಿಗೆ ಸೂಚಿಸಬೇಕೆಂದು ಸದನದ ಮೂಲಕ ಸರ್ಕಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಕೋರುತ್ತೇನೆ.

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಈ ಗಂಭೀರವಾದ ಸಮಸ್ಯೆಯನ್ನು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತಂದು ಕೂಡಲೇ ಕ್ರಮವನ್ನು ಜರುಗಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಇ) ವಿಷಯ:- ವಿಜಯಪುರ ಮಹಾನಗರ ಪಾಲಿಕೆ ದೀರ್ಘಾವಧಿ ಲೀಜ್ ಆಸ್ತಿಗಳನ್ನು ಗುತ್ತಿಗೆಗೆ ಹಾಕುವಲ್ಲಿ ವಿಳಂಬ ನೀತಿ ಆಗುತ್ತಿರುವ ಬಗ್ಗೆ**

***

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಮಾತನಾಡಲು ಅವಕಾಶವನ್ನು ಕೊಟ್ಟಿರುವುದಕ್ಕೆ ಧನ್ಯವಾದಗಳನ್ನು ತಿಳಿಸುತ್ತೇನೆ. ವಿಜಯಪುರ ಮಹಾನಗರ ಪಾಲಿಕೆಯು ತನ್ನ ಲೀಜ್ ಆಸ್ತಿಗಳನ್ನು 99 ವರ್ಷ/ 50 ವರ್ಷ/ 30 ವರ್ಷ ದೀರ್ಘಾವಧಿ ಲೀಜ್ ನೀಡಿದ್ದು, ಸರ್ಕಾರದ ಆದೇಶಗಳನ್ವಯ ಮಹಾನಗರ ಪಾಲಿಕೆಯು ಲೀಜ್ ಆಸ್ತಿಗಳನ್ನು ಖರೀದಿ ಹಾಕಿಕೊಳ್ಳುವಂತೆ ಪ್ರಕಟಣೆ ನೀಡಿದಾಗ ಖರೀದಿ ಹಾಕುವಂತೆ ಕೋರಿ 1,440 ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಇದರಲ್ಲಿ 1045 ಅರ್ಜಿಗಳನ್ನು ಮಾತ್ರ ಇತ್ಯರ್ಥ ಮಾಡಲಾಗಿದ್ದು, ಇನ್ನೂ 395 ಅರ್ಜಿಗಳನ್ನು 7 ವರ್ಷಗಳಿಂದ ಇತ್ಯರ್ಥವಾಗದೆ ಸಾರ್ವಜನಿಕರು ತೀವ್ರ ತೊಂದರೆಯಲ್ಲಿ ಪರದಾಡುತ್ತಿದ್ದಾರೆ. ಈ ಕುರಿತು ನಾನು ದಿನಾಂಕ:08.02.2018 ರಂದು ವಿಧಾನ ಪರಿಷತ್‌ನಲ್ಲಿ ಪ್ರಶ್ನೆಯನ್ನು ಕೇಳಿದ್ದೆ. ನನ್ನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 227 ಇದಕ್ಕೆ ನೀಡಿರುವ ಉತ್ತರದಲ್ಲಿ ವಿಜಯಪುರ ಮಹಾನಗರ ಪಾಲಿಕೆ ಬಹುತೇಕ ಆಸ್ತಿಗಳು ಖರೀದಿಯಾಗಿದ್ದು, ಶೇಕಡಾ 10 ರಷ್ಟು ಆಸ್ತಿ ಸ್ಥಗಿತಗೊಂಡಿರುವುದನ್ನು ಸರ್ಕಾರವು ಒಪ್ಪಿಕೊಂಡಿರುತ್ತದೆ ಮತ್ತು ದಿನಾಂಕ:07.06.2010ರ ಆದೇಶದಂತೆ 1,440 ಅರ್ಜಿಗಳು ಸ್ವೀಕೃತವಾಗಿ 1,045 ಅರ್ಜಿಗಳು ಇತ್ಯರ್ಥವಾಗಿದ್ದು, ಬಾಕಿ ಉಳಿದ 395 ಅರ್ಜಿಗಳು ಸುಮಾರು 07 ವರ್ಷಗಳಿಂದ ಇತ್ಯರ್ಥವಾಗದೆ ಉಳಿದಿರುವ ಕಾರಣವೇನೆಂಬುದರ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಜಿಲ್ಲಾಧಿಕಾರಿಗಳು, ವಿಜಯಪುರ ಜಿಲ್ಲೆ ಇವರಿಗೆ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರು ನಿರ್ದೇಶನ ನೀಡಿದರೂ ಸಹ ವಿಜಯಪುರ ಜಿಲ್ಲಾಧಿಕಾರಿಗಳು ಮತ್ತು ಮಹಾನಗರ ಪಾಲಿಕೆಯ ಆಯುಕ್ತರು ಸೇರಿ ಸರ್ಕಾರಕ್ಕೆ ಸ್ಪಷ್ಟೀಕರಣ ನೀಡದೆ ವಿಳಂಬ ನೀತಿ ಅನುಸರಿಸುತ್ತಿರುವುದರಿಂದ 395 ಜನರಿಗೆ ತೀವ್ರ ಅನ್ಯಾಯವಾಗಿರುತ್ತದೆ.

ಆದ್ದರಿಂದ ಸರ್ಕಾರವು ಈ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ಕೂಡಲೇ 395 ಜನರಿಗೂ ಈ ಲೀಜ್ ಆಸ್ತಿಗಳನ್ನು ಖರೀದಿ ಹಾಕಿ ಅನುಕೂಲ ಮಾಡಿಕೊಡುವಂತೆ ಶೂನ್ಯ ವೇಳೆಯಲ್ಲಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನಕ್ಕೆ ತಂದು, ಇದನ್ನು ಕೂಡಲೇ ವಿಲೇವಾರಿ ಮಾಡಿಸುತ್ತೇನೆ.

**ಈ)ವಿಷಯ:- ವಿಶ್ವವಿದ್ಯಾಲಯಗಳ ಧನ ಸಹಾಯ ಆಯೋಗದ ಅರ್ಹತೆಯುಳ್ಳ ಪದವಿ ಪೂರ್ವ ಕಾಲೇಜು ಉಪನ್ಯಾಸಕರುಗಳು ಬಡ್ತಿ ಇಲ್ಲದೇ ನಿವೃತ್ತರಾಗುತ್ತಿರುವ ಬಗ್ಗೆ.**

***

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳನ್ನು ತಿಳಿಸುತ್ತೇನೆ. ವಿಶ್ವವಿದ್ಯಾನಿಲಯಗಳ ಧನ ಸಹಾಯ ಆಯೋಗದ (ಯು.ಜಿ.ಸಿ) (ಎನ್.ಇ.ಟಿ, ಎಸ್.ಎಲ್.ಇ.ಟಿ., ಪಿ.ಹೆಚ್.ಡಿ.,) ಅರ್ಹತೆಯುಳ್ಳ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಉಪನ್ಯಾಸಕರುಗಳು ತಮ್ಮ ವೃತ್ತಿ ಜೀವನದಲ್ಲಿ ಒಂದು ಬಡ್ತಿ ಇಲ್ಲದೆ ನಿವೃತ್ತಿ ಹೊಂದುತ್ತಿರುವುದು ವಿಷಾದನೀಯ ಸಂಗತಿಯಾಗಿದೆ. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಉಪನ್ಯಾಸಕರುಗಳಲ್ಲಿ ಸರಿ ಸುಮಾರು 1,500ಕ್ಕೂ ಹೆಚ್ಚು ಮಂದಿ ಯು.ಜಿ.ಸಿ. ಅರ್ಹತೆಯುನ್ನು ಪಡೆದ ಉಪನ್ಯಾಸಕರಾಗಿರುತ್ತಾರೆ. ಇವರಿಗೆ ಉನ್ನತ ಶಿಕ್ಷಣ ಇಲಾಖೆಯಲ್ಲಿನ ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗೆ ಬಡ್ತಿ ನೀಡುವ ಬಗ್ಗೆ ಉನ್ನತ ಶಿಕ್ಷಣ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ತರಬೇಕಾದಂತಹ ಅವಶ್ಯಕತೆ ಇದೆ.

ಈಗಾಗಲೇ ಈ ರೀತಿ ಆಂಧ್ರಪ್ರದೇಶ, ಕೇರಳ, ಜಮ್ಮು, ಕಾಶ್ಮೀರ ಮತ್ತು ಇತರೆ ರಾಜ್ಯಗಳಲ್ಲಿ ಬಡ್ತಿ ನೀಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಅಲ್ಲದೆ ನಮ್ಮ ರಾಜ್ಯದ ಉನ್ನತ ಶಿಕ್ಷಣ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಯು.ಜಿ.ಸಿ ಅರ್ಹತೆಯುಳ್ಳ ಬೋಧಕೇತರ ಸಿಬ್ಬಂದಿಗಳಿಗೆ ಶೇಕಡಾ 5 ರಷ್ಟು ಪದವಿ ಕಾಲೇಜುಗಳಲ್ಲಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಬಡ್ತಿ ನೀಡುವ ಪ್ರಕ್ರಿಯೆ ಕೂಡ ಇದೆ. ಅಂತೆಯೇ ನಮ್ಮ ರಾಜ್ಯದಲ್ಲಿ ಪದವಿ ಪೂರ್ವ ಕಾಲೇಜಿನ ಯು.ಜಿ.ಸಿ ಅರ್ಹತೆಯುಳ್ಳ ಉಪನ್ಯಾಸಕರುಗಳಿಗೆ ಪದವಿ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗೆ ಬಡ್ತಿ ನೀಡುವುದರಿಂದ ಸರ್ಕಾರಕ್ಕೆ ಹೆಚ್ಚಿನ ಹಣಕಾಸು ಹೊರೆಯು ಆಗುವುದಿಲ್ಲ.

ಈ ಕುರಿತು ಕುಮಾರ್ ನಾಯಕ್ ವರದಿಯು ಶಿಫಾರಸ್ಸು ಮಾಡಿದೆ. ಈಗಾಗಲೇ ಸರ್ಕಾರವು ಸಾಕಷ್ಟು ಬಾರಿ ಮಾತನ್ನು ಕೊಟ್ಟಿದೆ.

ಈ ಎಲ್ಲಾ ಅಂಶಗಳ ಕಾರಣದಿಂದ ಉನ್ನತ ಶಿಕ್ಷಣ ಇಲಾಖೆಯಲ್ಲಿನ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿಯನ್ನು ತಂದು ಯು.ಜಿ.ಸಿ ಅರ್ಹತೆಯುಳ್ಳ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರುಗಳಿಗೆ ಪದವಿ ಕಾಲೇಜುಗಳಲ್ಲಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಬಡ್ತಿಯನ್ನು ನೀಡಲು ಕ್ರಮವಹಿಸಬೇಕೆಂದು ತಮ್ಮ ಮೂಲಕ ಮಾನ್ಯ ಉನ್ನತ ಶಿಕ್ಷಣ ಸಚಿವರನ್ನು ಆಗ್ರಹಿಸುತ್ತೇನೆ.

ಈ ರೀತಿಯಲ್ಲಿ ಆದ್ಯತೆಯ ಮೇರೆಗೆ ಬೇರೆ ಬೇರೆ ರಾಜ್ಯಗಳಲ್ಲಿ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಆ ಪ್ರಕಾರ ತಾವು ಕೂಡ ಅವಕಾಶವನ್ನು ಮಾಡಿಕೊಡಿ ಎಂದು ಕೇಳುತ್ತಿದ್ದೇನೆ. ಹಿಂದೆ ಕೂಡ ಇದನ್ನು ಮಾನ್ಯ ಸಚಿವರು ಒಪ್ಪಿದ್ದರು. ಕುಮಾರ್ ನಾಯಕ್ ವರದಿಯು ಶಿಫಾರಸ್ಸು ಮಾಡಿದೆ. ಕನಿಷ್ಠ ಶೇಕಡಾ 10 ರಷ್ಟಾದರೂ ಬಡ್ತಿಯನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಪರಿಶೀಲನೆ ಮಾಡಿ ಏನು ಸಾಧ್ಯತೆ ಇದೆಯೋ, ಅದನ್ನು ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

3. **ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ಉತ್ತರ**

**ಅ)** ರಾಜ್ಯದ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮತ್ತು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹುದ್ದೆ ನೇಮಕಾತಿ ಪ್ರಕ್ರಿಯೆಯಲ್ಲಿ ವಿಳಂಬವಾಗಿರುವ ಬಗ್ಗೆ.

***

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೋಟಾ ಶ್ರೀನಿವಾಸ ಪೂಜಾರಿರವರು ದಿನಾಂಕ:09-02-2018 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದಂತಹ ವಿಷಯಕ್ಕೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

**ಆ)** ಪದವಿ ಪೂರ್ವ ಕಾಲೇಜಿನ ಸಿಬ್ಬಂದಿಗಳಿಗೆ ಬೇಸಿಗೆ ರಜೆ 15 ದಿನ ರಜೆ ಕಡಿತ, ಮೇ 15 ರಿಂದಲೇ ತರಗತಿ ಆರಂಭ ವಿಷಯದ ಬಗ್ಗೆ –

***

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ವಿ.ಸಂಕನೂರರವರು ದಿನಾಂಕ:20-02-2018 ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಂತಹ ವಿಷಯಕ್ಕೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

(ಉತ್ತರದ ಪ್ರತಿಯನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಿಂದೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ ಪ್ರಶ್ನೆಗೆ ಇನ್ನು ಉತ್ತರವನ್ನು ಕೊಟ್ಟಿರುವುದಿಲ್ಲ. ನೆನ್ನೆಯ ದಿವಸ ಪ್ರಮುಖವಾಗಿ ಹುಬ್ಬಳ್ಳಿ-ಧಾರವಾಡದ ವಿಷಯ ಬಹಳ ಕಷ್ಟದ ಕೆಲಸವಾದುದರಿಂದ, ಆದ್ದರಿಂದ ಸದನದ ಸಮಯವನ್ನು ಹಾಳು ಮಾಡಬಾರದೆಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಕೊಟ್ಟಿರುತ್ತೇನೆ. ದಯಮಾಡಿ ಇವತ್ತಿನ ದಿವಸ ಉತ್ತರವನ್ನು ಸಂಬಂಧಪಟ್ಟ ಸಚಿವರಿಂದ ಕೊಡಿಸುತ್ತೇನೆ ಎಂದು ಸಭಾನಾಯಕರು ಹೇಳಿದರು. ದಯಮಾಡಿ ಇವತ್ತು ಹುಬ್ಬಳ್ಳಿ-ಧಾರವಾಡದ ವಿಷಯದ ಬಗ್ಗೆ ಉತ್ತರವನ್ನು ಕೊಡಿಸಬೇಕು. ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ.

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಇವತ್ತಿನ ದಿವಸ ಮಾನ್ಯ ಸಚಿವರು ಬಂದ ಕೂಡಲೇ ಉತ್ತರವನ್ನು ಕೊಡಿಸಿಕೊಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರೇ ನೆನ್ನೆಯ ದಿವಸವೇ ಇದು ಬಹಳ ಗಂಭೀರವಾದ ವಿಷಯವೆಂದು ಹೇಳಿದ್ದೇನೆ. ತಾವು ದಯಮಾಡಿ ಇವತ್ತು ಮಾನ್ಯ ಸಚಿವರಿಂದ ಉತ್ತರವನ್ನು ಕೊಡಿಸಬೇಕು. ತಾವು ಸಭಾನಾಯಕರು ಆಗಿರುವುದರಿಂದ ನೀವು ಹೇಳಿದ ಹಾಗೆ ನಡೆಯಬೇಕು. ಅದಕ್ಕೆ ಇವತ್ತು ಉತ್ತರವನ್ನು ಕೊಡಿಸಬೇಕು.

ಇ) ಮಾನ್ಯ ಸದಸ್ಯರುಗಳ ಎರಡನೆಯ ಪಿ.ಎ. ಗಳಿಗೆ ವೇತನ ಬಿಡುಗಡೆ ಮಾಡುವ ಬಗ್ಗೆ-

- - - - --

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರೇ ನಮ್ಮದೊಂದು ಪ್ರಶ್ನೆಗೆ ಉತ್ತರವನ್ನು ಕೊಡಲಿಲ್ಲ. ಸರ್ಕಾರದ ಆದೇಶವನ್ನು ಕೊಡಲಾಗಿದೆ. ಉತ್ತರವನ್ನು ಯಾವಾಗ ಒದಗಿಸಿಕೊಡುತ್ತೀರಿ?

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಸ್ವಾಮಿಯವರು ಪ್ರಸ್ತಾಪಿಸಿದ ಮಾನ್ಯ ಸದಸ್ಯರ ಎರಡನೇ ಪಿ.ಎ.ಗಳ ಸಂಬಳವನ್ನು ಕೊಡಲು ಜಿಲ್ಲಾಧಿಕಾರಿಯವರಿಗೆ ಹಣವನ್ನು ಬಿಡುಗಡೆ ಮಾಡಲು ಆದೇಶವನ್ನು ಕೊಟ್ಟಿದ್ದೇನೆ.

**ಸಭಾಪತಿಯವರು:-** ಮಾನ್ಯ ಸಭಾನಾಯಕರು ಹಣವನ್ನು ಬಿಡುಗಡೆ ಮಾಡಲು ಜಿಲ್ಲಾಧಿಕಾರಿಯವರಿಗೆ ಆದೇಶವನ್ನು ಕೊಟ್ಟಿದ್ದೇನೆ ಎಂದು ಹೇಳುತ್ತಿದ್ದಾರೆ.

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಹಣವನ್ನು ಒದಗಿಸಿದ್ದೇನೆ. ಅದರ ಪ್ರತಿಯನ್ನು ಸಹ ಈಗಾಗಲೇ ಕೊಟ್ಟಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಜಿಲ್ಲಾಧಿಕಾರಿಯವರಿಗೆ ಸ್ವಲ್ಪ ಬೇಗ ಮಾಡುವುದಕ್ಕೆ ಹೇಳಬೇಕು.

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನೆನ್ನೆಯ ದಿವಸ ತೊಗರಿಬೇಳೆ ಬೆಳೆಗಾರರ ಸಮಸ್ಯೆಯ ಬಗ್ಗೆ ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಅಲ್ಲಿ ತುಂಬಾ ಗಂಭೀರವಾಗಿ ಅಹೋರಾತ್ರಿ ಧರಣಿಯನ್ನು ಮಾಡುತ್ತಿದ್ದಾರೆ. ಇದರ ಬಗ್ಗೆ ತಾವು ಹಿಂದೆ ಕೊಡುತ್ತೇನೆ ಎಂದು ಹೇಳಿದ್ದರು. ಆದರೆ ಇನ್ನೂ ನನಗೆ ಸಿಕ್ಕಿಲ್ಲ.

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷಿ ಸಚಿವರು ಬಂದು ಉತ್ತರವನ್ನು ಕೊಡುತ್ತಾರೆ. ನಾಳೆ ಒಳಗೆ ನಿಮಗೆ ಉತ್ತರವನ್ನು ಕೊಡುತ್ತೇನೆ.

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತೊಗರಿಬೇಳೆ ಬೆಳೆಗಾರರ ಸಮಸ್ಯೆಯ ಬಗ್ಗೆ ಮತ್ತು ತೊಗರಿಬೇಳೆಯನ್ನು ಖರೀದಿ ಮಾಡುವುದರ ಬಗ್ಗೆ ಹೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಕೃಷಿ ಸಚಿವರು ಬರುತ್ತಾರೆ. ಅವರು . .

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಸರ್ಕಾರವು ಈ ವರ್ಷ ಹೆಚ್ಚು ದಾಖಲೆಯನ್ನು ಮೀರಿ ನಾವು ತೊಗರಿ ಬೇಳೆಯನ್ನು ತೆಗೆದುಕೊಂಡಿದ್ದೇವೆ.

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, . . .

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷಿ ಸಚಿವರು ಬಂದು ನಿಮಗೆ ಇದರ ಬಗ್ಗೆ ಸಮಜಾಯಿಷಿಯನ್ನು ಕೊಡುತ್ತಾರೆ.

**4.ವರದಿಯನ್ನೊಪ್ಪಿಸುವುದು**

**ಶ್ರೀ ಎನ್.ಎಸ್.ಬೋಸ್‌ರಾಜು (ಅಧ್ಯಕ್ಷರು, ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿ):-** ಮಾನ್ಯ ಸಭಾಪತಿಯವರೇ, 2016-2017ನೇ ಸಾಲಿನ ಹಕ್ಕುಬಾಧ್ಯತಾ ಸಮಿತಿಯ 90, 91 ಹಾಗೂ 92 ನೇ ವರದಿಗಳನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**ಸಭಾಪತಿಯವರು:-** ಮಂಡಿಸಲಾಯಿತು.

**5. ವಿತ್ತೀಯ ಕಾರ್ಯಕಲಾಪ**

**2017-2018 ನೇ ಸಾಲಿನ ಪೂರಕ ಅಂದಾಜುಗಳ (ಮೂರನೆಯ ಕಂತು) ಮಂಡನೆ**

- - - - - -

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ 2017-2018 ನೇ ಸಾಲಿನ ಪೂರಕ ಅಂದಾಜುಗಳನ್ನು (ಮೂರನೆಯ ಕಂತು) ಸದನದಲ್ಲಿ ಮಂಡಿಸುತ್ತಿದ್ದೇನೆ.

(ಮುಂದು)

(170) 21/02/2018/ಎಸ್‌ಪಿಆರ್/ಕೆಎಸ್/1:10

**ಸಭಾಪತಿಯವರು:-** ಈಗ ನಾನು ಎರಡು ವಿಧೇಯಕಗಳನ್ನು ತೆಗೆದುಕೊಳ್ಳಬೇಕು. ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಅರ್ಧ ಗಂಟೆಯ ಕಾಲಾವಕಾಶವನ್ನು ಕೋರಿದ್ದಾರೆ. ಹೀಗಾಗಿ ಭೋಜನದ ವೇಳೆಯವರೆಗೆ ಘನತೆವೆತ್ತ ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ಮಾತನಾಡಲು ಕೆಲವು ಸದಸ್ಯರುಗಳು ತಮ್ಮ ಹೆಸರುಗಳನ್ನು ನೀಡಿದ್ದಾರೆ. ಅದರಲ್ಲಿ ಶ್ರೀ ರಮೇಶ್ ಬಾಬು, ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ರವರುಗಳ ಹೆಸರುಗಳಿವೆ. ಈ ಪೈಕಿ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ತಯಾರಿದ್ದರೆ ಮಾತನಾಡಲು ಪ್ರಾರಂಭಿಸಲಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲೆ ನಮ್ಮ ಪಕ್ಷದ ಇತರೆ ಸದಸ್ಯರು ಮಾತನಾಡುತ್ತಾರೆ. ನಾನು ಆಯವ್ಯಯದ ಮೇಲೆ ಮಾತನಾಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಆಯವ್ಯಯದ ಮೇಲೆ ಮಾತನಾಡುತ್ತಾರೆ. ಹೀಗಾಗಿ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ಇಚ್ಛೆ ವ್ಯಕ್ತಪಡಿಸಿದ ಮಾನ್ಯ ಸದಸ್ಯರಾದ ಶ್ರೀ ರಮೇಶ್ ಬಾಬು ರವರ ಹೆಸರನ್ನು ಮಾನ್ಯ ಕೆ.ಟಿ.ಶ್ರೀಕಂಠೇಗೌಡರವರು ನನಗೆ ನೀಡಿದ್ದರು. ಪ್ರಸ್ತುತ ಶ್ರೀ ರಮೇಶ್ ಬಾಬು ರವರು ಸದನದಲ್ಲಿ ಹಾಜರಿಲ್ಲ. ಅದೇ ರೀತಿಯಾಗಿ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ರವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ತಮ್ಮ ಹೆಸರನ್ನು ನೀಡಿದ್ದರು. ಆದರೆ ಅವರೂ ಸಹ ಪ್ರಸ್ತುತ ಸದನದಲ್ಲಿ ಹಾಜರಿಲ್ಲ. ಆಡಳಿತ ಪಕ್ಷದ ಬೇರೆ ಸದಸ್ಯರುಗಳು ಮಾತನಾಡಲು ತಯಾರಿದ್ದರೆ ಮಾತನಾಡಬಹುದು. ಇಲ್ಲವೆಂದಾದರೆ ಭೋಜನ ವಿರಾಮಕ್ಕಾಗಿ ನಾನು ಸದನವನ್ನು ಮುಂದೂಡಬೇಕಾಗುತ್ತದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಮೊದಲು ಮುಕ್ತಾಯಗೊಳಿಸಿ. ನಂತರದಲ್ಲಿ ಆಯವ್ಯಯದ ಮೇಲಿನ ಚರ್ಚೆಯನ್ನು ತೆಗೆದುಕೊಳ್ಳೋಣ.

**ಸಭಾಪತಿಯವರು:-** ಈ ವಿಚಾರದಲ್ಲಿ ಸಣ್ಣದಾದ ಸಮಸ್ಯೆಯೊಂದಿದೆ. ಇರಲಿ, ಅದನ್ನು ಆಮೇಲೆ ನೋಡೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಅವರುಗಳು ಬರುವುದು ಖಚಿತವಾಗಿಲ್ಲ.

**ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವರು ಸಂಜೆಯ ವೇಳೆಗೆ ಬಂದು ಮಾತನಾಡುತ್ತೇನೆಂದು ಹೇಳಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಸಂಜೆಯ ವೇಳೆಗೆ ಬಂದು ಮಾತನಾಡಲು ಇದು ಅವರ ಬೀಗರ ಮನೆಯೇ?

**ಸಭಾಪತಿಯವರು:-** ಈಗ ಈ ವಿಷಯದ ಬಗ್ಗೆ ಚರ್ಚೆ ಮಾಡುವುದು ಬೇಡ. ಈಗ ಸದನವನ್ನು ಭೋಜನಕ್ಕಾಗಿ 2 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

**(ಭೋಜನ ವಿರಾಮಕ್ಕಾಗಿ ಸದನವನ್ನು ಮಧ್ಯಾಹ್ನ 1 ಗಂಟೆ 12 ನಿಮಿಷದಿಂದ**

**2 ಗಂಟೆ 30 ನಿಮಿಷದವರೆಗೆ ಮುಂದೂಡಲ್ಪಟ್ಟಿತು)**

171/21.02.2018/3.00/ಹೆಚ್‌ವಿಃಎಂಡಿ

**(ಭೋಜನ ವಿರಾಮದ ನಂತರ ಸದನವು 3 ಗಂಟೆ 6 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಯವರು ಸಭಾ ಪೀಠವನ್ನು ಅಲಂಕರಿಸಿದರು.)**

**ಸಭಾಪತಿಯವರುಃ- ಕಳೆದ ಅಧಿವೇಶನದಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರು ವಿಧಾನ ಸಭೆಯಿಂದ ಅಂಗೀಕೃತವಾಗಿ ಬಂದಂತಹ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಈ ಮನೆಯ ಅಂಗೀಕಾರಕ್ಕಾಗಿ ಮಂಡಿಸಿದ್ದರು. ಈ ಸದನದ ಬಹಳಷ್ಟು ಗೌರವಾನ್ವಿತ ಸದಸ್ಯರು ಆ ವಿಧೇಯಕದಲ್ಲಿನ ಬಹಳಷ್ಟು ಅಂಶಗಳಿಗೆ ತಿದ್ದುಪಡಿಗಳನ್ನು ತರಬೇಕು ಎಂದು ಒತ್ತಾಯ ಮಾಡಿದಾಗ, ಆ ತಿದ್ದುಪಡಿಗಳ ಮೇಲೆ ಸದನದಲ್ಲಿ ಚರ್ಚೆ ಮಾಡಲು ಸಮಯವಿಲ್ಲ ಎನ್ನುವ ಕಾರಣದ ಹಿನ್ನೆಲೆಯಲ್ಲಿ ಮಾನ್ಯ ಸಚಿವರು, 'ಸದನದಲ್ಲಿ ತಿದ್ದುಪಡಿಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಸಮಯದ ಅಭಾವ ಇರುವುದರಿಂದ ಒಂದು ಸದನ ಸಮಿತಿಯನ್ನು ರಚನೆ ಮಾಡಿದರೆ ಅಲ್ಲಿ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ' ಎನ್ನುವ ಸಲಹೆಯನ್ನು ನೀಡಿದ್ದರು. ಅವರ ಸಲಹೆಯ ಮೇರೆಗೆ ಸದರಿ ವಿಚಾರದಲ್ಲಿ ಆಸಕ್ತಿಯುಳ್ಳ ಈ ಸದನದ ಗೌರವಾನ್ವಿತ ಸದಸ್ಯರುಗಳನ್ನೊಳಗೊಂಡಂತೆ ಒಂದು ಸದನ ಸಮಿತಿಯನ್ನು ರಚನೆ ಮಾಡಲಾಗಿತ್ತು.**

**ನನಗೆ ಬಂದಿರುವ ಮಾಹಿತಿಯ ಪ್ರಕಾರ ಸದನ ಸಮಿತಿ ಉನ್ನತ ಮಟ್ಟದಲ್ಲಿ ಚರ್ಚೆ ಮಾಡಿ, ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿ, ಆ ಮಸೂದೆಗೆ ಹಲವಾರು ತಿದ್ದುಪಡಿಗಳನ್ನು ಸರ್ವಾನುಮತದಿಂದ ಶಿಫಾರಸ್ಸು ಮಾಡಿದೆ. ನಿನ್ನೆ ಈ ಮನೆಯಲ್ಲಿ ಸದನ ಸಮಿತಿಯ ವರದಿಯನ್ನು ಮಂಡನೆ ಮಾಡಲಾಗಿತ್ತು. ಸದನ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ತಿದ್ದುಪಡಿಗಳೊಂದಿಗೆ ತಂದಿರುವ ಈ ವಿಧೇಯಕದ ಮೇಲೆ ಚರ್ಚೆ ಮಾಡಿ,**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವಿಧೇಯಕಕ್ಕೆ ಸದನವು ಅನುಮತಿಯನ್ನು ನೀಡಿದರೆ, ಅದು ಕಾನೂನಾಗಿ ಮುಂದುವರೆಯುತ್ತದೆ. ಈಗ ಮಾನ್ಯ ಉನ್ನತ ಶಿಕ್ಷಣ ಸಚಿವರು ವಿಧೇಯಕವನ್ನು ಪರ್ಯಾಲೋಚನೆಗಾಗಿ ಮಂಡಿಸಬೇಕು.**

## 6.ಶಾಸನ ರಚನೆ

### ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

### ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2017

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ ಮತ್ತು ವಿಧಾನ ಪರಿಷತ್ತಿನ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ರೀತ್ಯಾ 2017ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಕಳೆದ ಅಧಿವೇಶನದಲ್ಲಿ ಯಾವ ಕಾರಣಕ್ಕಾಗಿ ಮತ್ತು ಯಾವ ಉದ್ದೇಶದ ಹಿನ್ನೆಲೆಯಲ್ಲಿ ಈ ವಿಧೇಯಕವನ್ನು ತರಲಾಗುತ್ತಿದೆ ಎನ್ನುವುದರ ಬಗ್ಗೆ ಸ್ಪಷ್ಟಪಡಿಸಿದ್ದೆ. ಆದರೂ ಸಹ ಈಗ ಸಂಕ್ಷಿಪ್ತವಾಗಿ ವಿವರಣೆಯನ್ನು ನೀಡುವುದಕ್ಕೆ ಬಯಸುತ್ತಿದ್ದೇನೆ. ಕಳೆದ ಅಧಿವೇಶನದಲ್ಲಿ ಈ ವಿಧೇಯಕವನ್ನು ತಂದಂತಹ ಸಂದರ್ಭದಲ್ಲಿ ಈ ಮನೆಯ ಎಲ್ಲ ಮಾನ್ಯ ಸದಸ್ಯರುಗಳ ಸಲಹೆಯ ಮೇರೆಗೆ ಒಂದು ಸದನ ಸಮಿತಿಯನ್ನು ರಚನೆ ಮಾಡಿ, ವಿಧೇಯಕದ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿ, ಸದನ ಸಮಿತಿಯ ಸದಸ್ಯರುಗಳು ನೀಡಿದಂತಹ ಸಲಹೆಗಳನ್ನು ಕ್ರೋಡೀಕರಿಸಿ, ಈಗ ಈ ವಿಧೇಯಕವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ. ಇದರಲ್ಲಿನ ಅಂಶಗಳು ಕಾಯಿದೆಯಾದ ಮೇಲೆ ವಿಶ್ವವಿದ್ಯಾಲಯಗಳಿಗೆ ಹೊಸ ರೂಪ ನೀಡಬೇಕು, ಗುಣಮಟ್ಟದ ಶಿಕ್ಷಣವನ್ನು ನೀಡಬೇಕು ಮತ್ತು ಶಿಕ್ಷಣದಲ್ಲಿ ಪಾರದರ್ಶಕತೆ ತರಬೇಕೆನ್ನುವ ಹಿನ್ನೆಲೆಯಲ್ಲಿ ಈ ವಿಧೇಯಕವನ್ನು ತರಲಾಗಿದೆ. ಆದ್ದರಿಂದ ಈ ವಿಧೇಯಕದ ಮೇಲೆ ಹೆಚ್ಚಿನ ಚರ್ಚೆಯ ಅವಶ್ಯಕತೆ ಇಲ್ಲವೆನ್ನುವುದು ನನ್ನ ಅಭಿಪ್ರಾಯವಾಗಿದೆ. ಈ ಸದನದ ಬಹಳಷ್ಟು ಸದಸ್ಯರು ಸದನ ಸಮಿತಿಯಲ್ಲಿ ಭಾಗಿಗಳಾಗಿ ಹಲವಾರು ಶಿಫಾರಸ್ಸುಗಳನ್ನು ನೀಡಿದ್ದಾರೆ. ಆದರೂ ಸಹ ಸದನದ ಮಾಹಿತಿಗಾಗಿ ಕೆಲವು ಪ್ರಮುಖ ಅಂಶಗಳನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

172/21.2.2018/ಪಿಕೆ/ಎಕೆ/3.10

ಶ್ರೀ ಬಸವರಾಜ ರಾಯರೆಡ್ಡಿ(ಮುಂದುವರೆದಿದೆ)

ಮಾನ್ಯ ಸಭಾಪತಿಯವರೇ, 1976ರಲ್ಲಿ ಪ್ರಪ್ರಥಮವಾಗಿ ವಿಶ್ವವಿದ್ಯಾಲಯಗಳ ಕಾಯಿದೆಯನ್ನು ನಮ್ಮ ಕರ್ನಾಟಕದಲ್ಲಿ ಜಾರಿಗೆ ತಂದರು. ನಂತರ, 2000ನೇ ಇಸವಿಯಲ್ಲಿ, 1976ರಲ್ಲಿ ತಂದಂಥ ಕಾಯಿದೆಯ ಸುಧಾರಣೆಗಾಗಿ ತಿದ್ದುಪಡಿಗಳನ್ನು ಮಾಡಲಾಯಿತು. ಇದಾದ ಮೇಲೆ, ಬೇರೆ ಬೇರೆ ವಿಶ್ವವಿದ್ಯಾಲಯಗಳಾದವು. ಸಂಗೀತ ವಿಶ್ವವಿದ್ಯಾಲಯ, ಸಂಸ್ಕೃತ ವಿಶ್ವವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯಗಳಾಯಿತು. ತಾಂತ್ರಿಕ ವಿಶ್ವವಿದ್ಯಾಲಯ ಆಯಿತು. ಹೀಗೆ ಬೇರೆ ಬೇರೆ ವಿಷಯಾಧಾರಿತ ವಿಶ್ವವಿದ್ಯಾಲಯಗಳು ಆಗಿ there are more than seven Acts. ಹೀಗಾಗಿ ಒಂದು ಆ್ಯಕ್ಟ್ ಒಂದು ತರಹ ಹೇಳಿದರೆ ಇನ್ನೊಂದು ಆ್ಯಕ್ಟ್ ಮತ್ತೊಂದು ತರಹ ಹೇಳುತ್ತಿತ್ತು. ಇದರಿಂದ ಉನ್ನತ ಶಿಕ್ಷಣ ಇಲಾಖೆಯಲ್ಲಿ ಗೊಂದಲಗಳು ಪ್ರಾರಂಭವಾದವು. ಕುಲಾಧಿಪತಿಗಳು, ಕುಲಪತಿಗಳು ಹಾಗೂ ಆ ವ್ಯಾಪ್ತಿಯ ಸಂಬಂಧ ಆಡಳಿತಾತ್ಮಕ ಸಮಸ್ಯೆಗಳು ಸಹ ಪ್ರಾರಂಭವಾಯಿತು. ಏಕರೂಪದ ಕಾಯಿದೆಯನ್ನು ಮಾಡಿದರೆ ಈ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ, ಸ್ಪಷ್ಟತೆ ಸಿಗುತ್ತದೆ, ಪಾರದರ್ಶಕ ಆಡಳಿತ ನೀಡುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಇನ್ನೂ ಕೆಲವು ಸುಧಾರಣೆಗಳನ್ನು ತರಲು ಸಾಧ್ಯವಾಗುತ್ತದೆ. ಶಿಕ್ಷಣ ತಜ್ಞರ ಸಲಹೆಯ ಮೇರೆಗೆ ಈ ನಿಟ್ಟಿನಲ್ಲಿ ತಿದ್ದುಪಡಿ ಮಾಡಬೇಕು ಎನ್ನುವ ವಿಚಾರ ಪ್ರಾರಂಭವಾಗಿ, 2017ರಲ್ಲಿ ಏಕರೂಪ ಕಾಯಿದೆಯನ್ನು ತಂದೆವು.

ನಮ್ಮಲ್ಲಿರುವ ಸಂಸ್ಕೃತ ವಿಶ್ವವಿದ್ಯಾಲಯ, ಸಂಗೀತ ವಿಶ್ವವಿದ್ಯಾಲಯ, ತಾಂತ್ರಿಕ ವಿಶ್ವವಿದ್ಯಾಲಯ, ಜಾನಪದ ವಿಶ್ವವಿದ್ಯಾಲಯ ಹೀಗೆ ಎಲ್ಲಾ ವಿಶ್ವವಿದ್ಯಾಲಯಗಳು ಇದರಲ್ಲಿ ಒಳಗೊಳ್ಳುತ್ತವೆ. ಆದರೆ ಕನ್ನಡ ವಿಶ್ವವಿದ್ಯಾಲಯವನ್ನು ಇದರಿಂದ ಹೊರತುಪಡಿಸಲಾಗಿದೆ. ಏಕೆಂದರೆ, ಇದು unitary university ಆಗಿದೆ. ಇಲ್ಲಿ affiliated college ಗಳು ಇಲ್ಲ. ಅದು ಸಂಶೋಧನೆಗೆ ಮಾತ್ರ ಸಂಬಂಧಪಡುತ್ತದೆ. ಹೀಗಾಗಿ ಅವರು, ಇದರ ಅವಶ್ಯಕತೆ ಇಲ್ಲ ಎಂದು ಹೇಳಿದ ಮೇಲೆ ಆ ವಿಶ್ವವಿದ್ಯಾಲಯವನ್ನು ಕೈಬಿಟ್ಟು ಬೇರೆ ವಿಶ್ವವಿದ್ಯಾಲಯಗಳಿಗೆ ಸಂಬಂಧಪಟ್ಟಂತೆ ಏಕರೂಪದ ಕಾಯಿದೆಯನ್ನು ತಂದಿದ್ದೇವೆ. ಮಾನ್ಯ ಸಭಾಪತಿಯವರೇ, ತಾವು ಈ ಖಾತೆಯ ಮಂತ್ರಿಗಳಾಗಿ ಉತ್ತಮವಾಗಿ ಕೆಲಸ ಮಾಡಿದ್ದೀರಿ, ಶಿಕ್ಷಣದ ಗುಣಮಟ್ಟ ಏರುವುದಕ್ಕೆ ನಿಮ್ಮ ಕೊಡುಗೆ ಕೂಡ ಸಾಕಷ್ಟಿದೆ. ಹೊಸ ಕಾಲೇಜುಗಳನ್ನು ಮಂಜೂರು ಮಾಡಿಸಿಕೊಟ್ಟಿದ್ದೀರಿ. ಅದಕ್ಕಾಗಿ ನಾನು ಈ ಸಂದರ್ಭದಲ್ಲಿ ನಿಮ್ಮನ್ನು ಅಭಿನಂದಿಸುತ್ತೇನೆ.

ಇವತ್ತು ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳ ನೇಮಕಾತಿ ಸೇರಿದಂತೆ ಇತರ ನೇಮಕಾತಿ ಪ್ರಕ್ರಿಯೆಗಳು ವಿಳಂಬವಾಗುತ್ತಿವೆ. ಕಾಯಿದೆಯಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ನಿರ್ದಿಷ್ಟವಾಗಿ ಹೇಗೆ ಅಳವಡಿಸಬೇಕು ಎಂಬ ಬಗ್ಗೆ ಸ್ಪಷ್ಟತೆ ಇಲ್ಲದೇ ಇರುವುದರಿಂದ ಈ ರೀತಿ ಆಗುತ್ತಿದೆ. ಕುಲಪತಿಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವ ಆಧಾರದ ಮೇಲೆ ನೇಮಕ ಮಾಡಬೇಕು, ಅವರ ವಿದ್ಯಾರ್ಹತೆ ಏನಿರಬೇಕು ಎಂಬ ಬಗ್ಗೆ ಇದರಲ್ಲಿ ವಿವರ ಇದೆ. ವೈಸ್ ಚಾನ್ಸಲರ್ ಆಗುವ ವ್ಯಕ್ತಿಗೆ ಕನಿಷ್ಠ 25 ವರ್ಷಗಳ ಕಾಲ ಬೋಧನೆಯ ಅನುಭವ ಇರಬೇಕು. ಇದರಲ್ಲೂ 10 ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಕೆಲಸ ಮಾಡಿದ ಅನುಭವ ಇರಬೇಕು. ಮೊದಲು ಈ ನಿಯಮ ಇರಲಿಲ್ಲ. ಈಗ ಖಾಸಗಿ ವಿಶ್ವವಿದ್ಯಾಲಯಗಳು ಬಂದಿವೆ, deemed to be university ಬಂದಿವೆ. ಅಲ್ಲಿ ನಾವು 10 ವರ್ಷ ಪ್ರೊಫೆಸರ್ ಆಗಿ ಕೆಲಸ ಮಾಡಿದ್ದೇವೆ ಎಂದು ಹೇಳಿ ನೇಮಕಾತಿ ಬಯಸುತ್ತಾರೆ. They are also going to be eligible. 25 ವರ್ಷಗಳ teaching experience ಇರುವುದು ಕಡ್ಡಾಯ ಎನ್ನುವ ನಿಯಮವನ್ನು ಇದರಲ್ಲಿ ಮಾಡಿದ್ದೇವೆ. ಇದರಿಂದ ಶೈಕ್ಷಣಿಕ ಗುಣಮಟ್ಟ ಸುಧಾರಣೆ ಆಗುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದು ನಮ್ಮ ಸಮಿತಿಯ ಅಭಿಪ್ರಾಯವಾಗಿದೆ.

ವೈಸ್ ಚಾನ್ಸಲರ್ ಅವರನ್ನು ನೇಮಕ ಮಾಡುವ ಸಂದರ್ಭದಲ್ಲಿ ಕೂಡ ಹಲವಾರು ಕಾರಣಗಳ ಹಿನ್ನೆಲೆಯಲ್ಲಿ ವಿಳಂಬವಾಗುತ್ತಿತ್ತು. ಇದಕ್ಕೆ ನಾನು ಯಾರನ್ನೂ ದೂಷಿಸುವುದಕ್ಕೆ ಹೋಗುವುದಿಲ್ಲ. ಅದಕ್ಕಾಗಿ ನಾವು time bound ಮಾಡುತ್ತಿದ್ದೇವೆ. ಅಂದರೆ, ಒಬ್ಬ ವಿಶ್ವವಿದ್ಯಾಲಯದ ಕುಲಪತಿ ನಿವೃತ್ತಿ ಆಗುತ್ತಿದ್ದರೆ, ಅದಕ್ಕೆ ಮೂರು ತಿಂಗಳ ಹಿಂದೆಯೇ ಆ ಜಾಗಕ್ಕೆ ಹೊಸದಾಗಿ ನೇಮಕ ಮಾಡುವ process ಪ್ರಾರಂಭವಾಗಿ ಮುಂದಿನ ಪ್ರಕ್ರಿಯೆಗಳು ನಡೆಯಬೇಕು ಎಂಬ ಕಾನೂನನ್ನು ಮಾಡುತ್ತಿದ್ದೇವೆ. Search Committee ಸದಸ್ಯರ ಸಂಖ್ಯೆ ಮೊದಲು ನಾಲ್ಕು ಇತ್ತು. ಯಾವುದಾದರೂ ಸಭೆ ಮಾಡಬೇಕಾದರೆ ಕಡ್ಡಾಯವಾಗಿ ಈ ನಾಲ್ಕು ಜನರ ಕೋರಂ ಇರಲೇಬೇಕಾಗುತ್ತಿತ್ತು. ಇವರಲ್ಲಿ ಒಬ್ಬರು ಯುಜಿಸಿಯಿಂದ ಬಂದವರಾಗಿರುತ್ತಾರೆ, ಒಬ್ಬರನ್ನು ರಾಜ್ಯಪಾಲರು ನಾಮನಿರ್ದೇಶನ ಮಾಡುತ್ತಾರೆ, ಒಬ್ಬರು ವಿಶ್ವವಿದ್ಯಾಲಯದಿಂದ ಬಂದವರಾಗಿರುತ್ತಾರೆ ಮತ್ತು ಒಬ್ಬರು ಸರ್ಕಾರದ ಕಡೆಯಿಂದ ಇರುತ್ತಾರೆ. ಒಂದೊಂದು ಸಲ UGC Nominee ಬರದೇ ಇದ್ದ ಸಂದರ್ಭದಲ್ಲಿ, Governor Nominee ಬರದೇ ಇದ್ದ ಸಂದರ್ಭದಲ್ಲಿ ಸಭೆಗಳು ಆಗುತ್ತಿರಲಿಲ್ಲ, ಸಭೆಗಳು ಮುಂದೂಡಲ್ಪಡುತ್ತಿದ್ದವು. ಆ ಕಮಿಟಿಯಲ್ಲಿದ್ದ 4 ಜನ ಸದಸ್ಯರ ಸಂಖ್ಯೆಯನ್ನು 5ಕ್ಕೆ ಏರಿಸಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ. Central University Act ನ ಪ್ರಕಾರ Search Committee ಯಲ್ಲಿ 5 ಜನ ಸದಸ್ಯರಿದ್ದಾರೆ. ಇದಕ್ಕೆ ಕೋರಂ ಸಂಖ್ಯೆ 3. ಕನಿಷ್ಠ ಮೂರು ಜನ ಸದಸ್ಯರಿದ್ದರೆ ಸಭೆಯನ್ನು ನಡೆಸಬಹುದಾಗಿರುತ್ತದೆ. ಇದೇ ಹಿನ್ನೆಲೆಯನ್ನು ಇಟ್ಟುಕೊಂಡು ನಮ್ಮಲ್ಲೂ 5 ಜನ ಸದಸ್ಯರು ಇರಬೇಕು ಎನ್ನುವ ದಿಸೆಯಲ್ಲಿ process ಮಾಡಿದ್ದೇವೆ. ನಮ್ಮ Experts' Committee ಯಾವ ಮೂರು ಹೆಸರುಗಳನ್ನು ಶಿಫಾರಸ್ಸು ಮಾಡುತ್ತದೆಯೋ ಆ ಹೆಸರುಗಳನ್ನು ಪರಿಶೀಲನೆ ಮಾಡಿ ಕುಲಾಧಿಪತಿಗಳಿಗೆ ಒಂದು ಹೆಸರನ್ನು ಕಳುಹಿಸಿ ಕೊಡಲಾಗುತ್ತಿತ್ತು. ಹೀಗೆ ಕಳುಹಿಸಿ ಕೊಟ್ಟಾಗ ಹಲವಾರು ಕಾರಣಗಳಿಂದ ನೇಮಕಾತಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಳಂಬವಾಗುತ್ತಿತ್ತು. Karnataka State Universities Act, 2000, Section 14, sub-section (4) ನಲ್ಲಿ, ಸರ್ಕಾರ ಮತ್ತು ಕುಲಾಧಿಪತಿಗಳು ಒಂದು ಒಮ್ಮತಕ್ಕೆ ಬರಬೇಕಾಗುತ್ತದೆ. ಒಂದೊಂದು ಸಲ ಒಮ್ಮತಕ್ಕೆ ಬರದೇ ಇದ್ದಾಗ ವಿಳಂಬವಾಗುತ್ತಿತ್ತು.

ಮಾನ್ಯ ಸಭಾಪತಿಯವರೇ, ಯಾವುದೇ ಒಂದು ವಿಧೇಯಕವನ್ನು ರಾಜ್ಯಪಾಲರಿಗೆ ಕಳುಹಿಸಿದ ಸಂದರ್ಭಧಲ್ಲಿ ಒಂದು ಸಲ ಅವರು ವಾಪಸ್ಸು ಕಳುಹಿಸಬಹುದು. ಆದರೆ ಇನ್ನೊಂದು ಸಲ ಅದೇ ವಿಧೇಯಕವನ್ನು ರಾಜ್ಯಪಾಲರಿಗೆ ಕಳುಹಿಸಿದ ಮೇಲೆ ಅದಕ್ಕೆ ಅನುಮೋದನೆ ಕೊಡಲೇಬೇಕಾಗುತ್ತದೆ. ಅದೇ ಸಂಪ್ರದಾಯದಂತೆ, ಮಾನ್ಯ ರಾಜ್ಯಪಾಲರು ಅಥವಾ ನಮ್ಮ ವಿಶ್ವವಿದ್ಯಾಲಯದ ಕುಲಾಧಿಪತಿಗಳಿಗೆ ನಾವು ಶಿಫಾರಸ್ಸು ಮಾಡಿ ಕಳುಹಿಸಿ ಕೊಟ್ಟವರ ಹೆಸರು ಇಷ್ಟ ಆಗದೇ ಇದ್ದರೆ, ಯಾವ ಕಾರಣಕ್ಕಾಗಿ ಇಷ್ಟ ಆಗುತ್ತಿಲ್ಲ ಎಂಬುದನ್ನು ಹೇಳಬೇಕಾಗುತ್ತದೆ. ಅಂದರೆ, ಅವರ ಮೇಲೆ Charge Sheet ಇದೆಯೇ, criminal charges ಇದೆಯೇ, ಭ್ರಷ್ಟಾಚಾರದ ಆರೋಪ ಇದೆಯೇ ಅಥವಾ ಇತರ ಅಪವಾದಗಳಿವೆಯೇ ಎಂದು ಕಾರಣ ಕೊಟ್ಟು, ಬರೆದು ವಾಪಸ್ಸು ಕಳುಹಿಸಬೇಕಾಗುತ್ತದೆ. ಆಗ ಮಾತ್ರ ಶಿಫಾರಸ್ಸು ಮಾಡಿದವರನ್ನು ಡ್ರಾಪ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಯಾವುದೇ ಕಾರಣ ಇಲ್ಲದೇ ಡ್ರಾಪ್ ಮಾಡುವುದಕ್ಕೆ ಆಗುವುದಿಲ್ಲ. ಇಂತಹ ವಿಚಾರಗಳ ಹಿನ್ನೆಲೆಯಲ್ಲೂ ನೇಮಕಾತಿ ಆಗುವುದು ವಿಳಂಬವಾಗುತ್ತಿತ್ತು. ಇದರಿಂದ ವಿಶ್ವವಿದ್ಯಾಲಯದ ಗುಣಮಟ್ಟ ಕೆಡಬಾರದು, ವಿಶ್ವವಿದ್ಯಾಲಯಗಳು ನಡೆದುಕೊಂಡು ಹೋಗಬೇಕು ಎನ್ನುವ ದೃಷ್ಟಿಯಿಂದ, ಸರ್ಕಾರ 2ನೇ ಸಲ ಶಿಫಾರಸ್ಸು ಮಾಡಿದರೆ ರಾಜ್ಯಪಾಲರು ಅದನ್ನು ಒಪ್ಪಲೇಬೇಕಾಗುತ್ತದೆ. ಸರ್ಕಾರ ಶಿಫಾರಸ್ಸು ಮಾಡಿ ಕಳುಹಿಸಿದ ಪ್ರಸ್ತಾವವನ್ನು 30 ದಿವಸದ ಒಳಗಾಗಿ ರಾಜ್ಯಪಾಲರು ಅನುಮೋದನೆ ಕೊಡಬೇಕಾಗುತ್ತದೆ ಎನ್ನುವುದನ್ನು ಕಡ್ಡಾಯ ಮಾಡಿದ್ದೇವೆ. ಇವೆಲ್ಲವನ್ನೂ ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಮಾಡಿದ್ದೇವೆಯೇ ಹೊರತು ಇದರಲ್ಲಿ ನಮ್ಮ ಸ್ವಂತ ಉದ್ದೇಶ ಯಾವುದೂ ಇಲ್ಲ. ಬೇಗ ಪ್ರಕ್ರಿಯೆ ಆಗಬೇಕು, ವಿಶ್ವವಿದ್ಯಾಲಯ ನಡೆದುಕೊಂಡು ಹೋಗಬೇಕು ಎನ್ನುವುದು ಇದರ ಉದ್ದೇಶವಾಗಿದೆ.

ಮಾನ್ಯ ಸಭಾಪತಿಯವರೇ, ಆಂಧ್ರಪ್ರದೇಶದಲ್ಲಿ ಇಂತಹ ಸಂದರ್ಭಗಳು ಬಂದು ಸರ್ಕಾರ ಒಂದು ಸಲ ಒಂದು ಹೆಸರನ್ನು ಶಿಫಾರಸ್ಸು ಮಾಡಿ ರಾಜ್ಯಪಾಲರಿಗೆ ಕಳುಹಿಸಿದಾಗ ಅದಕ್ಕೆ ಅನುಮೋದನೆ ಕೊಡಲೇಬೇಕಾಗುತ್ತದೆ. ಕೆಲವು ರಾಜ್ಯಗಳಲ್ಲಿ ಮುಖ್ಯಮಂತ್ರಿಗಳೇ ಚಾನ್ಸಲರ್‌ಗಳೂ ಆಗಿರುತ್ತಾರೆ. The Chief Minister himself is the Chancellor. ಆದಾಗ್ಯೂ ನಾವು ನಮ್ಮ ರಾಜ್ಯಪಾಲರನ್ನು ಕುಲಾಧಿಪತಿಗಳನ್ನಾಗಿ ಮಾಡಿ, ಅವರು ಸಲಹೆಗಳನ್ನು ಕೊಡುವುದಕ್ಕೆ ಇದರಲ್ಲಿ ಅವಕಾಶ ಮಾಡಿಕೊಟ್ಟಿದ್ದೇವೆ. ಕೇವಲ ಸರ್ಕಾರದ ನಿಯಂತ್ರಣವೇ ಇಲ್ಲಿರುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ವಿಶ್ವವಿದ್ಯಾಲಯಗಳಲ್ಲಿ ಸಿಂಡಿಕೇಟ್ ಮೆಂಬರ್ಸ್ ಇರುತ್ತಾರೆ. ಅಂದರೆ ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಸಮಿತಿ (Executive Committee) ಯಲ್ಲಿ ಈ ಸದಸ್ಯರು ಇರುತ್ತಾರೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ Executive Council ಎಂದು ಮಾಡಿದ್ದೇವೆ. ಅಂದರೆ ಕಾರ್ಯಕಾರಿ ಸಮಿತಿ. It is a university policy making body. "ಸಿಂಡಿಕೇಟ್" ಎನ್ನುವ ಪದವನ್ನು Executive Council ಎಂದು ಮಾಡಿದ್ದೇವೆ. Executive Council ಗೆ ಹಿಂದೆಯೂ 6 ಜನ ಸದಸ್ಯರಿದ್ದರು, ಈಗಲೂ 6 ಜನ ಸದಸ್ಯರಿರುತ್ತಾರೆ. ಆದರೆ ಈ ವಿಚಾರವಾಗಿ ಕೆಲವು ಸಲಹೆಗಳು ಬಂತು. ಸರ್ಕಾರ 6 ಜನ ಸದಸ್ಯರೆಂದು ನೇಮಕ ಮಾಡಿಬಿಡುತ್ತದೆ, ಆದರೆ ಅವರಿಗೆ, ವಿಶ್ವವಿದ್ಯಾಲಯ ಹೇಗೆ ನಡೆಯಬೇಕು ಎಂಬ ಬಗ್ಗೆ ಅನುಭವದ ಕೊರತೆ ಇರುತ್ತದೆ, ಹಾಗಾಗಿ ಸೂಕ್ತ ವಿದ್ಯಾರ್ಹತೆ ಇರುವವರನ್ನೇ ಸಿಂಡಿಕೇಟ್‌ನ ಸದಸ್ಯರನ್ನಾಗಿ ಮಾಡಬೇಕು ಎನ್ನುವ ಸಲಹೆ ಬಂತು. ಇನ್ನು ಮೇಲೆ ಸರ್ಕಾರ 6 ಜನರ ಬದಲಾಗಿ 4 ಜನರನ್ನು ಮಾತ್ರ ಸಿಂಡಿಕೇಟ್‌ಗೆ ನಾಮಿನೇಟ್ ಮಾಡಬಹುದು. ಅದರಲ್ಲಿ ಒಬ್ಬರು ಎಸ್‌ಸಿ/ಎಸ್‌ಟಿ, ಒಬ್ಬರು minority or backward class, ಒಬ್ಬರು ಸಾಮಾನ್ಯ ವರ್ಗದವರು ಮತ್ತು ಒಬ್ಬ ಮಹಿಳೆಯನ್ನು ಕಡ್ಡಾಯವಾಗಿ ಸಿಂಡಿಕೇಟ್ ಸದಸ್ಯರನ್ನಾಗಿ ಮಾಡಬೇಕು ಹಾಗೂ ಅವರಿಗೆ ಕನಿಷ್ಠ post-graduate ವಿದ್ಯಾರ್ಹತೆ ಇರಬೇಕಾಗುತ್ತದೆ. ಹಿಂದೆ ಇದ್ದ ನಿಯಮದಲ್ಲಿ, ಶಿಕ್ಷಣ ತಜ್ಞರು ಸಿಂಡಿಕೇಟ್ ಸದಸ್ಯರಾಗಿರಬೇಕು ಎಂದಿತ್ತು. "ಹಕ್ಕಿಯು ಹಾರಿತು" ಎನ್ನುವ ಒಂದು ಪುಸ್ತಕ ಬರೆದುಬಿಟ್ಟರೆ ಆವನೇ ಶಿಕ್ಷಣ ತಜ್ಞ ಆಗಿಬಿಡುತ್ತಿದ್ದ. ಆದರೆ ಈಗ ಈ ಸದಸ್ಯರ ಕನಿಷ್ಠ ವಿದ್ಯಾರ್ಹತೆ post-graduate ಆಗಿರಲೇ ಬೇಕು. Otherwise, they must be professional degree holders like M.B.B.S., B.A., L.L.B., etc. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಮೆಂಬರ್ ಆಗಬೇಕಾದರೆ ಕಡ್ಡಾಯವಾಗಿ ಇಂಜಿನಿಯರಿಂಗ್ ಪಾಸ್ಟ್ ಆಗಿರಬೇಕಾಗುತ್ತದೆ.

(ಮುಂದು . .

173/21-2-2018/ಡಿಎಸ್-ಎಕೆ/3.20

ಶ್ರೀ ಬಸವರಾಜ ರಾಯರೆಡ್ಡಿ(ಮುಂದು):-

ಅವರು post-graduate ಮಾಡಿರುವವರು ಅಥವಾ professional degree ಹೊಂದಿರುವವರು ಆಗಿರಬೇಕು. ಅದಕ್ಕೆ ಕನಿಷ್ಠ ವಿದ್ಯಾರ್ಹತೆ ಸಿಗುತ್ತದೆ. ಇನ್ನು ಇಬ್ಬರು ಸದಸ್ಯರು, ಅದರಲ್ಲಿ ಒಬ್ಬರು ವಿಧಾನ ಪರಿಷತ್ತಿನಿಂದ, ಮತ್ತೊಬ್ಬರು ವಿಧಾನ ಸಭೆಯಿಂದ ಆಯ್ಕೆ ಮಾಡಬೇಕಾಗುತ್ತದೆ. ಆಯ್ಕೆ ಮಾಡುವಂತಹ ಸಂದರ್ಭದಲ್ಲಿ ಆ ಏರಿಯಾಕ್ಕೆ ಸಂಬಂಧಪಟ್ಟವರಿಗೆ preference ಕೊಡಬೇಕು ಎನ್ನುವುದು ನಮ್ಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದ್ದೇಶವಾಗಿದೆ. ಅದನ್ನು ನಾವು ಆಕ್ಟ್‌ನಲ್ಲಿ ಹೇಳಿಲ್ಲ. ಅದನ್ನು ಸಾಂಪ್ರದಾಯಿಕವಾಗಿ ಮಾನ್ಯ ಸಭಾಪತಿಯವರು ಮತ್ತು ಸಭಾಧ್ಯಕ್ಷರು ನಾಮಿನೇಟ್ ಮಾಡಬೇಕಾಗುತ್ತದೆ. ಅವರು ಅದನ್ನು ನಡೆಸಿಕೊಂಡು ಹೋಗುತ್ತಾರೆ. ಅಂದರೆ ಒಬ್ಬ ಎಂ.ಎಲ್.ಎ. ಮತ್ತು ಎಂ.ಎಲ್.ಸಿ. ಸಿಂಡಿಕೇಟ್‌ನಲ್ಲಿದ್ದರೆ ಸರ್ಕಾರದಿಂದ ಏನೇನು ಅನುದಾನ ಹೋಗುತ್ತದೆ, ಏನೇನು ಮಾಡಬೇಕು ಎಂಬ ಜವಾಬ್ದಾರಿ ಇರುತ್ತದೆ ಎನ್ನುವ ದೃಷ್ಟಿಕೋನದಿಂದ ಏನು ಸಲಹೆ ಕೊಟ್ಟಿದ್ದರು ಆ ಸಲಹೆಯನ್ನು ಸರ್ಕಾರ ಒಪ್ಪಿಕೊಂಡಿದೆ. ಒಬ್ಬ ಎಂ.ಎಲ್.ಸಿ., ಒಬ್ಬ ಎಂ.ಎಲ್.ಎ. ಮತ್ತು ನಾಲ್ಕು ಜನ ಇತರೆ ಸದಸ್ಯರು, ಒಟ್ಟು ಆರು ಜನ ಸದಸ್ಯರು. ಉಳಿದಂತೆ ಸಿಂಡಿಕೇಟ್ ಸದಸ್ಯರುಗಳನ್ನು ನಾಮನಿರ್ದೇಶನ ಮಾಡುವುದಕ್ಕೆ ರಾಜ್ಯಪಾಲರಿಗೆ ಅವಕಾಶ ಇದೆ, ಅವರು ಮಾಡುತ್ತಾರೆ. Academic Council ಎಂದು ಇದೆ. ಅದನ್ನು Academic Council ಎಂದೆ ಇಟ್ಟಿದ್ದೇವೆ. ಅಲ್ಲಿ ಮೂರು ಜನ ಎಕ್ಸ್‌ಪರ್ಟ್ಸ್ ಇರುತ್ತಾರೆ. ಸಂಬಂಧಪಟ್ಟ ಹಳೆ ಕಾಯ್ದೆ ಏನಿದೆ ಅದನ್ನು ಅಲ್ಲಿ ಇಟ್ಟಿದ್ದೇವೆ. ಈಗ ರಿಜಿಸ್ಟ್ರಾರ್‌ರವರು ಇಬ್ಬರು ಇದ್ದಾರೆ, ಒಬ್ಬರು Registrar (Administration), ಒಬ್ಬರು Registrar (Evaluation). Registrar (Administration) ನ್ನು ಹಿಂದಿನ ಕಾಯ್ದೆಯಲ್ಲಿ ಏನಿತ್ತು ಎಂದರೆ ಐ.ಎ.ಎಸ್., ಕೆ.ಎ.ಎಸ್. ಮತ್ತು ಐದು ವರ್ಷ ಪ್ರೊಫೆಸರ್ ಆದರೆ ಸಾಕು, ಅವರನ್ನು ರಿಜಿಸ್ಟ್ರಾರ್ ಎಂದು ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಮಾಡಿದ್ದೆವು. ಐದು ವರ್ಷ ಇರುವುದನ್ನು ಈಗ ಹತ್ತು ವರ್ಷ ಮಾಡಿದ್ದೇನೆ. ರಿಜಿಸ್ಟ್ರಾರ್ ಆಗುವವರು ಕನಿಷ್ಠ ಹತ್ತು ವರ್ಷ ಪ್ರೊಫೆಸರ್ ಆಗಿ ಕೆಲಸ ಮಾಡಿರಬೇಕು. ಅದಕ್ಕೆ ಅಲ್ಲಿ ಅವಕಾಶ ಮಾಡಿದ್ದೇವೆ. Registrar (Evaluation) ಏನಿತ್ತು ಪರೀಕ್ಷೆಗೆ ಸಂಬಂಧಪಟ್ಟಿರುವುದು ಅದು ಬಹಳ ಜನರಿಗೆ ಗೊಂದಲವಾಗುತ್ತಿತ್ತು. ಅದು ಮೊದಲು ಹೇಗೆ 'Controller of Examination' ಎಂದು ಇತ್ತು ಆ ಪದವನ್ನು ಇಲ್ಲಿ insert ಮಾಡಿದ್ದೇವೆ. ನಾವು ನೀವು ವ್ಯಾಸಂಗ ಮಾಡುವಾಗ 'Controller of Examination' ಎಂದು ಇತ್ತಲ್ಲಾ ಅದನ್ನು insert ಮಾಡಿದ್ದೇವೆ.

**ಸಭಾಪತಿಯವರು:-** ಈಗ ಇಬ್ಬರು ರಿಜಿಸ್ಟ್ರಾರ್ ಇಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಗೊಂದಲ ಆಗುತ್ತಿತ್ತು. ಒಬ್ಬರು Registrar (Administration), ಒಬ್ಬರು 'Controller of Examination'. ಆದರೆ ಅಲ್ಲಿಯೂ ಕೂಡ ಕನಿಷ್ಠ ಅವರು ಮೂರು ವರ್ಷಕ್ಕಿಂತ ಹೆಚ್ಚು ಇರಬಾರದು ಎಂದು ಮಾಡಿದ್ದೇವೆ. ಇನ್ನು ಮೇಲೆ ಯಾರು ರಿಜಿಸ್ಟ್ರಾರ್ ಆಗುತ್ತಾರೆ ಅವರಿಗೆ administrative knowledge ಇರುವಂತಹ ತರಬೇತಿಯನ್ನು ಕೊಡಬೇಕೆಂದು ನಾವು ಪ್ರತ್ಯೇಕವಾಗಿ ಒಂದು ನಿಯಮಾವಳಿ ಪುಸ್ತಕವನ್ನು ಮಾಡುತ್ತಿದ್ದೇವೆ. ಅದರಲ್ಲಿ ನಾವು insert ಮಾಡುತ್ತೇವೆ. ಇದನ್ನು ನಾನು ಕಾಯ್ದೆಯಲ್ಲಿ ಹೇಳಿಲ್ಲ. ಅವರಿಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

administrative knowledge ತಂದುಕೊಡುವುದಕ್ಕೆ ತರಬೇತಿಯನ್ನು ಕೊಡುತ್ತೇವೆ. ಈಗ ವಿಶ್ವವಿದ್ಯಾಲಯಗಳಲ್ಲಿ ಮೊದಲು Finance Committee ಇತ್ತು. ಈಗಲೂ ಅದರಲ್ಲೂ ಸ್ವಲ್ಪ ಸುಧಾರಣೆಯನ್ನು ತಂದಿದ್ದೇವೆ. ಈ ವಿಶ್ವವಿದ್ಯಾಲಯಗಳಲ್ಲಿ ಏನು Finance Committee ಯಲ್ಲಿ ಅನುಮೋದನೆಯಾಗುತ್ತದೆ ಅದರಲ್ಲಿ ಹಣಕಾಸಿನ ವ್ಯವಹಾರ ಪಾರದರ್ಶಕವಾಗಿಲ್ಲ. ಒಂದೊಂದು ವಿಶ್ವವಿದ್ಯಾಲಯದ ಅಕೌಂಟ್‌ಗಳು 15-20 ಬ್ಯಾಂಕ್‌ಗಳಲ್ಲಿವೆ. ಎಲ್ಲಾ ಬ್ಯಾಂಕ್‌ಗಳಲ್ಲಿ ಎಫ್.ಡಿ.ಗಳಿವೆ. ಎಲ್ಲೆಲ್ಲಿ ಯಾರ್ಯಾರು ಎಫ್.ಡಿ. ಇಟ್ಟಿದ್ದಾರೆಂದು ವೈಸ್-ಛಾನ್ಸಲರ್‌ರವರಿಗೇ ಗೊತ್ತಿರುವುದಿಲ್ಲ. ಈಗ ಉದಾಹರಣೆಗಾಗಿ ಒಬ್ಬ ವೈಸ್-ಛಾನ್ಸಲರ್ ನೇಮಕವಾಗುತ್ತಾರೆ. ನಾಲ್ಕು ವರ್ಷ ಎಫ್.ಡಿ. ಇಟ್ಟು ಅವರು ನಿವೃತ್ತಿಯಾಗಿಬಿಡುತ್ತಾರೆ. ಇನ್ನೂ ಅದರ ಬಗ್ಗೆ ಬಹಳಷ್ಟು ಇವೆ. ಅದನ್ನು ನಾನು ಹೇಳುವುದಕ್ಕಾಗುವುದಿಲ್ಲ. ಎಲ್ಲಾ ಬಹಳಷ್ಟು ತೊಂದರೆಗಳಾಗುತ್ತಿತ್ತು. ಅದಕ್ಕೆ ಈಗ ನಾವು ಹೊಸ ಬ್ಯಾಂಕಿಂಗ್ ವ್ಯವಸ್ಥೆಯನ್ನು introduce ಮಾಡಿದ್ದೇವೆ. That is called 'Public Finance System'. ಪ್ರತಿಯೊಂದು ಕೂಡ ಪ್ರತಿ ದಿವಸ ಅಲ್ಲಿ ದಾಖಲಾಗಲೇಬೇಕು. ಈಗ ಭಾರತ ಸರ್ಕಾರ, ಕರ್ನಾಟಕ ಸರ್ಕಾರ ಅದೇ ತರಹ ಹೊಸ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಅದರಲ್ಲಿ ಯಾವ್ಯಾವ ವಿಶ್ವವಿದ್ಯಾಲಯದಲ್ಲಿ ದಿವಸಕ್ಕೆ ಎಷ್ಟು ಹಣ ಜಮಾ ಆಗುತ್ತದೆ, ಎಷ್ಟು ಹಣ ಖರ್ಚಾಗುತ್ತದೆ ಎಂದು ಬ್ಯಾಂಕ್ ಸ್ಟೇಟ್‌ಮೆಂಟ್ ರೀತಿಯಲ್ಲಿ ಬರಲೇಬೇಕು. ಯಾರು ಬೇಕಾದರೂ ಅಕೌಂಟ್‌ನ್ನು ಓಪನ್ ಮಾಡಿಕೊಳ್ಳಬಹುದು. ಅದು ಅತ್ಯಂತ ಪಾರದರ್ಶಕವಾದ ವ್ಯವಸ್ಥೆ. ಹೀಗಾಗಿ ಅದನ್ನು ಕಾನೂನಿನಲ್ಲಿ ಅಳವಡಿಸಿದ್ದೇವೆ. ಅವರು ಇನ್ನು ಮೇಲೆ ಮಾಡಲೇಬೇಕು. ಎಷ್ಟು ಬ್ಯಾಂಕ್‌ನಲ್ಲಿ ಅಕೌಂಟ್ ಇಟ್ಟರೂ ಎಲ್ಲಾ ಒಂದೇ ಕಡೆ ಸ್ಟೇಟ್‌ಮೆಂಟ್ ಬಂದುಬಿಡುತ್ತದೆ. ವಿಶ್ವವಿದ್ಯಾಲಯಕ್ಕೆ ನಾಲ್ಕು ತರಹದ ಅನುದಾನ ಬರುತ್ತದೆ. ಆಗಾಗ್ಗೆ ಕೇಂದ್ರ ಸರ್ಕಾರ ಅನುದಾನ ಕೊಡುತ್ತದೆ. ಯು.ಜಿ.ಸಿ. ಯಾವಾಗಲಾದರೂ ಒಂದು ಸಲ ಅನುದಾನ ಕೊಡುತ್ತದೆ. ಎಲ್ಲರೂ ಯು.ಜಿ.ಸಿ. ಯಿಂದ ಪ್ರತಿ ವರ್ಷ ಅನುದಾನ ಬರುತ್ತದೆಂದು ತಿಳಿದುಕೊಂಡಿದ್ದಾರೆ. ಆದರೆ ಯು.ಜಿ.ಸಿ. ಪ್ರತಿ ವರ್ಷ ಅನುದಾನ ಕೊಡುವುದಿಲ್ಲ. The U.G.C. will give 2-3 crore rupees once in ten years. ಆದರೆ ಕೇಂದ್ರ ಸರ್ಕಾರದ ಬೇರೆ ಬೇರೆ ಯೋಜನೆಗಳಿಂದ ಬರುತ್ತಿರುತ್ತವೆ. ಕೇಂದ್ರ ಸರ್ಕಾರ ಯು.ಜಿ.ಸಿ.ಯಿಂದ ಬಂದಂತಹ ಹಣ, ರಾಜ್ಯ ಸರ್ಕಾರದಿಂದ ಕೊಡುವ ಪ್ರತಿ ವರ್ಷದ ಅನುದಾನ, internal source of the university, ಅವರ ಹಣ, ಮತ್ತು ಯಾರಾದರೂ ದಾನ ಕೊಡುತ್ತಿರುತ್ತಾರೆ. ಅವೆಲ್ಲಾ ಸೇರಿ ಒಂದು ಸ್ಟೇಟ್‌ಮೆಂಟ್ ಮಾಡಬೇಕು. ಖರ್ಚುಗಳಾಗಿರುವ ಬಗ್ಗೆ ಪ್ರತಿ ತಿಂಗಳು ಅವರು ಸರ್ಕಾರಕ್ಕೆ ಕಳುಹಿಸಿಕೊಡಬೇಕು. ಅವರು ಸ್ಟೇಟ್‌ಮೆಂಟ್ ಮಾಡುತ್ತಲೇ ಇರಬೇಕು. ಪ್ರತಿ ದಿವಸದ ಸ್ಟೇಟ್‌ಮೆಂಟ್ ಅವರಿಗೆ ಸಿಗುತ್ತದೆ. ಈ ವ್ಯವಸ್ಥೆಯನ್ನು ನಾವು ಜಾರಿಗೆ ತಂದಿದ್ದೇವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾನ್ಯ ಸಭಾಪತಿಯವರೇ, ಖರೀದಿ ಸಮಿತಿ ಮತ್ತು ಅಭಿವೃದ್ಧಿ ಸಮಿತಿಯನ್ನು ಮಾಡಿದ್ದೇವೆ. ಇದನ್ನು ಏಕೆ ಮಾಡಿದ್ದೇವೆಂದರೆ, ಒಂದೊಂದು ವಿಶ್ವವಿದ್ಯಾಲಯದಲ್ಲಿ ಒಂದೊಂದು ರೀತಿಯಲ್ಲಿ ಖರೀದಿ ಮಾಡುತ್ತಾರೆ. ಯಾರು ಹೇಳುವ ಹಾಗಿಲ್ಲ, ಕೇಳುವ ಹಾಗಿಲ್ಲ. ನಾನು ಹೆಸರು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಉದಾಹರಣೆಗೆ, ಬಹುತೇಕ ಎಲ್ಲಾ ವಿಶ್ವವಿದ್ಯಾಲಯಗಳು luxurious items ಅಂದರೆ, ಡೈನಿಂಗ್ ಟೇಬಲ್‌ಗಳು, ಮಂಚಗಳು, ಎಲ್ಲಾ ನಮ್ಮ ಕಾವೇರಿ ಎಂಪೋರಿಯಂ ನಿಂದ ಖರೀದಿ ಮಾಡುತ್ತಾರೆ. ಒಂದು ಚೇರ್ ಐವತ್ತು ಸಾವಿರ ರೂಪಾಯಿಗಳ ಮೇಲೆ ಆಗುತ್ತದೆ. ಮಲಗುವ ಮಂಚ ಎಲ್ಲಾ ದಂತದಿಂದ ಮಾಡಿರುತ್ತಾರೆ. ಇದೊಂದು ವಿಶ್ವವಿದ್ಯಾಲಯದಲ್ಲಿ ಅಲ್ಲ, ಬೇಕಾದರೆ ಇಲ್ಲಿ ಪಿಕ್ಚರ್ ತೋರಿಸಿ ಎಂದರೆ ತೋರಿಸುತ್ತೇನೆ. Teakwood ಅನ್ನು ಖರೀದಿ ಮಾಡಲಿ, ಆದರೆ ಕಾವೇರಿ ಎಂಪೋರಿಯಂಗೆ ಹೋಗಿ ivory embedded ವಸ್ತುಗಳನ್ನು ಖರೀದಿ ಮಾಡುತ್ತಾರೆ. ಇದೊಂದೇ ವಿಶ್ವವಿದ್ಯಾಲಯದಲ್ಲಿ ಅಲ್ಲ, ಎಲ್ಲಾ ವಿಶ್ವವಿದ್ಯಾಲಯದಲ್ಲಿ ಈ ರೀತಿ ಖರೀದಿ ಮಾಡುತ್ತಿದ್ದಾರೆ. ಬಹಳ ದುಬಾರಿ ವೆಚ್ಚ ಮಾಡುತ್ತಿದ್ದಾರೆ. ಕೆಲವು ಸಲ Mont Blanc pen ತೆಗೆದುಕೊಂಡುಬಿಡುವುದು. A Mont Blanc pen costs more than a lakh rupees. ಒಂದೂವರೆ ಲಕ್ಷ ರೂಪಾಯಿಗಳಾಗುತ್ತದೆ. ಆಮೇಲೆ ವಾಹನಗಳನ್ನು ಮನಸ್ಸೋಇಚ್ಛೆಯಾಗಿ ಖರೀದಿ ಮಾಡುತ್ತಾರೆ. ಈಗ ಉದಾಹರಣೆಯಾಗಿ ಒಂದು ವಿಶ್ವವಿದ್ಯಾಲಯದಲ್ಲಿ Camry car ಇದೆ. ಒಬ್ಬೊಬ್ಬ ವೈಸ್-ಛಾನ್ಸಲರ್‌ಗಳಿಗೆ ಎರಡೆರಡು ಕಾರುಗಳಿವೆ. ಅಂದರೆ ಇನ್ನೋವಾ ಕಾರು ಮೂರು ಮೂರು ಇವೆ. ಒಳ್ಳೆಯ Camry car ಬಂದಿದೆ ಎಂದು ಹೇಳಿದರೆ ತೆಗೆದುಕೊಂಡುಬಿಡುವುದು. A Camry car costs more than Rs.50 lakhs. ನಾನು ಇಲ್ಲಿ ಹೆಸರು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ನಾನು ಈ ರೀತಿ ಇದೆ ಎಂದು ಹೇಳುತ್ತಿದ್ದೇನೆ. ನೀವು ಏನು ಖರೀದಿ ಮಾಡಬೇಕು, ಏನು ಖರೀದಿ ಮಾಡಬಾರದೆಂದು ಒಂದು ನೀತಿ ನಿಯಮಾವಳಿ ಸರ್ಕಾರದಿಂದ ಹೋಗಬೇಕು. ಆದ್ದರಿಂದ ಇದೆಲ್ಲವನ್ನು ಈ ಖರೀದಿ ಸಮಿತಿ ಮುಂದೆ ತರಬೇಕು. ಅಲ್ಲಿ ಯಾರ್‍ಯಾರು ಇರುತ್ತಾರೆಂದರೆ ವೈಸ್-ಛಾನ್ಸಲರ್ ಅದಕ್ಕೆ ಅಧ್ಯಕ್ಷರು. ಅವರನ್ನೇ ಅಧ್ಯಕ್ಷರನ್ನಾಗಿ ಮಾಡಿದ್ದೇನೆ. ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, Chief Architect of the Government ಇರುತ್ತಾರೆ. ಸರ್ಕಾರದ Chief Architect ಅವರನ್ನು ಅದರ ಸದಸ್ಯರನ್ನಾಗಿ ಮಾಡಿದ್ದೇನೆ. Chief Engineer, PWD ರವರನ್ನು ಸದಸ್ಯರನ್ನಾಗಿ ಮಾಡಿದ್ದೇವೆ. The Registrar is the Member Secretary. ಇದನ್ನು ಏಕೆ ಮಾಡಿದ್ದೇವೆಂದರೆ, ಉದಾಹರಣೆಗೆ ಒಂದು ವಿಶ್ವವಿದ್ಯಾಲಯಕ್ಕೆ ಕೇಂದ್ರ ಸರ್ಕಾರ 60:40 ಅನುಪಾತದಲ್ಲಿ RUSA (Rashtriya Uchchatar Shiksha Abhiyan) grant ಕೊಡುತ್ತದೆ. ಶೇಕಡ 60 ರಷ್ಟು ಕೇಂದ್ರ ಸರ್ಕಾರ, ಶೇಕಡ 40 ರಷ್ಟು ರಾಜ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರ ಕೊಡುತ್ತದೆ. ಅದನ್ನು ಇವರು ಅಭಿವೃದ್ಧಿಗೆ ಹಾಕದೆ ಅದರಲ್ಲಿ ಒಂದು ಅತಿಥಿ ಗೃಹ ಕಟ್ಟುತ್ತೇವೆಂದು ಎಂಟು ಕೋಟಿ ರೂಪಾಯಿಗಳನ್ನು ಅದಕ್ಕೆ ಹಾಕಿಬಿಟ್ಟರು. ಈಗಾಗಲೇ ಒಂದು ವಿಶ್ವವಿದ್ಯಾಲಯದಲ್ಲಿ 40 ಕೊಠಡಿಗಳಿವೆ. But still they want to build another Guest House at a cost of Rs.8 crore. I objected to it. ಇದು ಸರಿಯಲ್ಲ. ಸರ್ಕಾರ ಅಭಿವೃದ್ಧಿಗಾಗಿ ಹಣ ಕೊಡುತ್ತಿರುವುದು. ಹೀಗೆ ಒಂದೊಂದು ಉದಾಹರಣೆಯನ್ನು ಹೇಳುತ್ತಾ ಹೋದರೆ ಬಹಳಷ್ಟು ಇವೆ. ಅದಕ್ಕೆ ಅವಶ್ಯಕತೆ ಇದೆಯೋ ಇಲ್ಲವೋ, ಅವಶ್ಯಕತೆಗೆ ಅನುಗುಣವಾಗಿ ಸಮಿತಿ ಒಪ್ಪಿಗೆ ಕೊಡಬೇಕು. It should see whether it is necessary or not. ಕಟ್ಟಡವನ್ನು ಯಥೇಚ್ಛವಾಗಿ ಕಟ್ಟುತ್ತಾರೆ. ಅದಕ್ಕೆ Chief Architect ಹಾಕಿ ಕ್ಲಾಸ್ ರೂಮ್ ಎಂದರೆ ಹೇಗಿರಬೇಕು, Administrative Block ಎಂದರೆ ಹೇಗಿರಬೇಕು ಎಂದು ನಾವು ಮಾಡಿದ್ದೇವೆ. ನಾನು ಮತ್ತೊಂದು ವಿಚಾರವನ್ನು ಪ್ರಮುಖವಾಗಿ ಹೇಳಲೇಬೇಕು. ಬಹುತೇಕ ವಿಶ್ವವಿದ್ಯಾಲಯದಲ್ಲಿ ಏನು ಎಸ್ಟಿಮೇಟ್ ಮಾಡುತ್ತಾರೆ, ಆ ಎಸ್ಟಿಮೇಟ್ ದರಕ್ಕಿಂತ ಮೂರು ಪಟ್ಟು, ನಾಲ್ಕು ಪಟ್ಟು ಜಾಸ್ತಿ ಪೇಮೆಂಟ್ ಮಾಡುತ್ತಾರೆ. ಉದಾಹರಣೆಗೆ ಒಂದು ಕಟ್ಟಡಕ್ಕೆ ಒಂದು ಕೋಟಿ ರೂಪಾಯಿಗೆ ಟೆಂಡರ್ ಕರೆಯುತ್ತಾರೆ. ಒಂದು ಕೋಟಿ ರೂಪಾಯಿಗಿಂತ ಹೆಚ್ಚು ವೆಚ್ಚವಾದರೆ ಸರ್ಕಾರದ ಅನುಮತಿ ತೆಗೆದುಕೊಳ್ಳಬೇಕು. ಆದರೆ ಸರ್ಕಾರದ ಅನುಮತಿಯನ್ನು ತೆಗೆದುಕೊಳ್ಳುವುದೇ ಇಲ್ಲ. ಈ ಹಿಂದೆ ಐದು ಕೋಟಿ ರೂಪಾಯಿ ಮೇಲಾದರೆ ಸಚಿವ ಸಂಪುಟದ ಒಪ್ಪಿಗೆಯನ್ನು ತೆಗೆದುಕೊಳ್ಳಬೇಕು ಎಂದು ಇತ್ತು. ಆದರೆ, ಸಚಿವ ಸಂಪುಟದ ಒಪ್ಪಿಗೆಯನ್ನು ತೆಗೆದುಕೊಳ್ಳುವುದಿಲ್ಲ. 100 ಕೋಟಿ ವೆಚ್ಚವಾದರೂ ಸಚಿವ ಸಂಪುಟದ ಒಪ್ಪಿಗೆಯನ್ನು ತೆಗೆದುಕೊಂಡಿಲ್ಲ. ಟೆಂಡರ್ ಕರೆಯುತ್ತಾರೆ. ಟೆಂಡರ್ ಕರೆದಾಗ ಕೆಲವೊಮ್ಮೆ ಟೆಂಡರ್ minus ಹೋಗುತ್ತದೆ. ಮತ್ತೆ ಕೆಲವೊಮ್ಮೆ premium ಗೆ ಹೋಗುತ್ತದೆ. (ಮುಂದು)

174/21-02-2018/bkp/rn/3-30).

**ಶ್ರೀ ಬಸವರಾಜ ರಾಯರೆಡ್ಡಿ(ಮುಂದು. . )**

ಪ್ರೀಮಿಯಂ ಕೊಡುವಂತಹ ಸಂದರ್ಭದಲ್ಲಿಯೂ ಕೂಡ ಶೇಕಡ 24, 25, 30 ರವರೆಗೂ ಕೊಟ್ಟಿದ್ದಾರೆ. ಅದನ್ನು ಕೊಟ್ಟು ಸಹ ಮತ್ತೆ hundred percent ಪೇಮೆಂಟ್ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾರೆ, ಎಲ್ಲಿಯೋ ನಿಮ್ಮ ಊರಿನ ಹತ್ತಿರ ಒಂದು ಸ್ಟೇಡಿಯಂ ಕಟ್ಟಬೇಕು. ಅ ಸಂಬಂಧ 4 ಕೋಟಿ, 80 ಲಕ್ಷಕ್ಕೆ ಟೆಂಡರ್ ಕರೆಯುತ್ತಾರೆ. ಶೇಕಡ 25ಕ್ಕೂ ಮೇಲೆ ಹೋಗುತ್ತಾರೆ. 5 ಕೋಟಿ 70 ಲಕ್ಷ ಆಗುತ್ತದೆ. ಪೇಮೆಂಟ್ 11 ಕೋಟಿ 65 ಲಕ್ಷ ರೂಪಾಯಿಗಳಾಗುತ್ತದೆ. ಇಲ್ಲಿ ಎಲ್ಲಿಯೋ ಮುದ್ದೇನಹಳ್ಳಿಯಲ್ಲಿ 49 ಕೋಟಿ ರೂಪಾಯಿಗಳಿಗೆ ಟೆಂಡರ್ ಕರೆಯುತ್ತಾರೆ. ಶೇಕಡ 20ಕ್ಕೂ ಮೇಲೆ ಹೋಗಿ 60 ಕೋಟಿ ರೂಪಾಯಿಗಳಾಗುತ್ತದೆ. 84 ಕೋಟಿ ರೂಪಾಯಿಗಳ ಪೇಮೆಂಟ್ ಆಗುತ್ತದೆ. ಇದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇವಲ ಒಂದು ವಿಶ್ವವಿದ್ಯಾನಿಲಯದ ವಿಚಾರವಲ್ಲ. ಬಹುತೇಕ ಶೇಕಡ 95 ರಷ್ಟು ವಿಶ್ವವಿದ್ಯಾನಿಲಯಗಳು ಹೆಚ್ಚು ಹೆಚ್ಚು ಪೇಮೆಂಟ್ ಮಾಡಿವೆ. ಅದನ್ನು ಯಾರೂ ಸಹ ಆಡಿಟ್ ಮಾಡಿಲ್ಲ, ಯಾರೂ ಸಹ ಕೇಳಿಲ್ಲ. ಹೀಗಾಗಿ, ಅವುಗಳೆಲ್ಲವೂ ಕೂಡ ಈಗ PWD S.R (Schedule of Rates) ದರ ಏನಿದೆ, ಅದೇ ದರ ಪಟ್ಟಿಯಲ್ಲಿಯೇ ಎಸ್ಟಿಮೇಟ್ ಮಾಡಬೇಕು. ಅವರು ಮನಸ್ಸೋ ಇಚ್ಛೆ ಕಟ್ಟಡಗಳನ್ನು ಕಟ್ಟಿಕೊಂಡು ಹೋದರೆ ಹೇಗೆ? ಮನಸ್ಸೋ ಇಚ್ಛೆ ಖರೀದಿ ಮಾಡಿದರೆ ಹೇಗೆ? ಅದಕ್ಕೆ they have to follow PWD Schedule of Rates. 10 ಕೋಟಿ ರೂಪಾಯಿಗಳಗಿಂತ ಮೇಲೆ ಆದಲ್ಲಿ ಅದಕ್ಕೆ ಕ್ಯಾಬಿನೆಟ್ ಅಪ್ರೂವಲ್ ತೆಗೆದುಕೊಳ್ಳಬೇಕು. ಅದಕ್ಕೆ ಏನೇನು ಮಾಡಬೇಕು, ಹೇಗೆ ಮಾಡಬೇಕೆನ್ನುವುದಕ್ಕೆ ಅಲ್ಲಿ ಕಮಿಟಿಯನ್ನು ಮಾಡಿದ್ದೇವೆ. ಜೊತೆಗೆ ಅಲ್ಲಿ Private Architect ಹಾಕಿದ್ದೇವೆ. ಸರ್ಕಾರದ ಕಡೆಯಿಂದಲೂ ಸಹ Architect ಹಾಕಿದ್ದೇವೆ. ಅವರಿಗೆ ಶುಲ್ಕ ನೀಡುವ ಬಗ್ಗೆ ಪ್ರಶ್ನೆ ಬರುವುದಿಲ್ಲ. ಕೇವಲ ಹೋಲಿಕೆ ಮಾಡುವುದಕ್ಕೋಸ್ಕರ ಹಾಕಲಾಗಿದೆ. ಹೀಗೆ ಅಲ್ಲಿ ಒಂದು Purchase Commitee ಯನ್ನು ಮಾಡಿದ್ದೇವೆ. ನಂತರ ನೇಮಕಾತಿಯಲ್ಲೂ ಕೂಡ ಸ್ವಲ್ಪಮಟ್ಟಿಗೆ ಬದಲಾವಣೆಯನ್ನು ತಂದಿದ್ದೇವೆ. ನೇಮಕಾತಿ ಪಾರದರ್ಶಕವಾಗಿ ಆಗಬೇಕು, ಅಲ್ಲಿ ಭ್ರಷ್ಟಾಚಾರ ಆಗಬಾರದು, ಗುಣಮಟ್ಟದ ಅಭ್ಯರ್ಥಿಗಳು ಆಯ್ಕೆಯಾಗಬೇಕೆನ್ನುವ ಉದ್ದೇಶದಿಂದ ಅಲ್ಲಿ ಇರುವಂತಹ ವೈಸ್ ಚಾನ್ಸಲರ್‌ರವರನ್ನೇ ನಾವು ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ಈಗಾಗಲೇ ಯುಜಿಸಿ. ನಿಯಮಾವಳಿ ಪ್ರಕಾರ 4 ಜನ ವಿಷಯ ತಜ್ಞರನ್ನು ನೇಮಕಾತಿಗೆ ಹಾಕಬೇಕೆಂದು ತೀರ್ಮಾನ ಮಾಡಿದ್ದೇವೆ. ಆದರೆ, ಇಲ್ಲಿ ಏನಾಗಿದೆ ಎಂದರೆ ಆ ಕಮಿಟಿಗೆ ವೈಸ್ ಚಾನ್ಸಲರ್‌ರವರೇ 4 ಜನರ ಹೆಸರನ್ನು ತೆಗೆದುಕೊಂಡು ಮಂತ್ರಿಗಳ ಹತ್ತಿರ ಬರುತ್ತಾರೆ, ಮಂತ್ರಿಗಳು ಅದಕ್ಕೆ ಅನುಮೋದನೆ ಮಾಡುತ್ತಾರೆ. ಅದು ಕುಲಾಧಿಪತಿಗಳಿಗೆ ಹೋಗುತ್ತದೆ, ಅದಕ್ಕೆ ಅವರು ಒಪ್ಪಿಗೆಯನ್ನು ಕೊಟ್ಟುಬಿಡುತ್ತಾರೆ. But the members are selected by the Vice Chancellor himself, though they are from the UGC Panel. ಆದರೆ, ಅವರು ಆಯ್ಕೆ ಮಾಡಿಕೊಂಡಿರುತ್ತಾರೆ. ಆದರೆ, ಈ ಆಕ್ಟ್‌ನಲ್ಲಿ ಹೇಳಿಲ್ಲ. ನಾವು ಇದನ್ನು ಕಾಯಿದೆಯಲ್ಲಿ ಮಾಡುತ್ತಿದ್ದೇವೆ. It should be selected randomly. ಈಗ 100 ಜನ ಇದ್ದಾರೆ. ಅದರಲ್ಲಿ ಅಗತ್ಯ ಇರುವಷ್ಟು ಜನರನ್ನು ಆಯ್ಕೆ ಮಾಡಿಕೊಳ್ಳಬೇಕು. ಮತ್ತೆ written test compulsory ಮಾಡಿದ್ದೇವೆ. 1:3 ಅನುಪಾತದಲ್ಲಿ ಅಭ್ಯರ್ಥಿಗಳು ಮೌಖಿಕ ಸಂದರ್ಶನಕ್ಕೆ ಬರುತ್ತಾರೆ. ಈಗ ಆ ರೀತಿಯಲ್ಲಿ ಇಲ್ಲ. ಮೊನ್ನೆ, ಮಾನ್ಯ ಸದಸ್ಯರಾದ ಶ್ರೀಯುತ ಚೌಡರೆಡ್ಡಿಯವರು ಹೇಳಿದ ಪ್ರಕಾರ ಗೋಲ್ಡ್ ಮೆಡಲ್ ಇದ್ದವನು ಕೆಳಗಡೆ ಹೋಗುತ್ತಾನೆ, ಕೆಳಗಡೆ ಇದ್ದವನು ಮೇಲುಗಡೆ ಬರುತ್ತಾನೆ. ಆ ರೀತಿಯಲ್ಲಿ ಈಗ ಅವಕಾಶಗಳಿವೆ. ಆದ್ದರಿಂದ, written examination ಮಾಡಿ, ಎಂ.ಎ., ಎಂಕಾಂ, ಎಂಎಸ್ಸಿ ಅಥವಾ ಬೇರೆ ಬೇರೆ ವಿಷಯಗಳಲ್ಲಿ ತೆಗೆದುಕೊಂಡ ಅಂಕಗಳನ್ನು ಕಂಪೇರ್

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲಿಕ್ಕೆ, ಮತ್ತೆ ಲಿಖಿತ ಪರೀಕ್ಷೆಯನ್ನು ಬರೆದದ್ದನ್ನು ಜೆರಾಕ್ಸ್ ಮಾಡಿ ಅದಕ್ಕೆ ಅಂಕಗಳನ್ನು ಕೊಟ್ಟಿದ್ದನ್ನು ಹೊರಗಡೆ ತೋರಿಸಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಅದು ರೂಲ್ಸ್‌ನಲ್ಲಿ ಇದೆ. ಆಕ್ಟ್‌ನಲ್ಲಿ ಇಲ್ಲ. 1:3 ಅನುಪಾತದಲ್ಲಿ ಮೌಖಿಕ ಸಂದರ್ಶನಕ್ಕೆ ಬರುತ್ತಾರೆ. ಅಭ್ಯರ್ಥಿಗಳು ಮೌಖಿಕ ಸಂದರ್ಶನ ಮಾಡಿದ್ದನ್ನು ವಿಡಿಯೋ ಮಾಡಲೇಬೇಕು. ಡೆಮೋ ಏನು ಕೊಡುತ್ತೇವೆ, ಆ ವಿಡಿಯೋ ಮಾಡಿದ್ದನ್ನು ವೆಬ್‌ಸೈಟ್‌ಗೆ ಹಾಕಬೇಕು.

**ಸಭಾಪತಿಯವರು:-** ಅಂದರೆ ಅದನ್ನು ಗುಟ್ಟಾಗಿ ಏನು ಇಡಬೇಕಾಗಿಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ:-** ಅಲ್ಲಿ ಬಹಳ ಕಡಿಮೆ ಅಂಕಗಳಿವೆ. ಅಲ್ಲಿ ಎರಡೂವರೆ ಅಂಕಗಳನ್ನಿಟ್ಟಿದ್ದೇವೆ. ಹೀಗಾಗಿ, ಆದಷ್ಟುಮಟ್ಟಿಗೆ transparency ತಂದು ಈ ಗುಣಮಟ್ಟವನ್ನು ತರುವಂಥದ್ದನ್ನು ಮಾಡಿದ್ದೇವೆ. ವೈಸ್ ಚಾನ್ಸಲರ್‌ರವರನ್ನೇ ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ನಾವು ಬೇರೆ ಯಾರನ್ನೂ ಹಾಕಿರುವುದಿಲ್ಲ. ಈ ರೀತಿಯ ವ್ಯವಸ್ಥೆಯನ್ನು ತಂದು ಅಲ್ಲಿಯೂ ಸಹ ಗುಣಮಟ್ಟವನ್ನು ಕಾಪಾಡಿ ಪಾರದರ್ಶಕತೆಯನ್ನು ತರುವಂಥದ್ದನ್ನು ಮಾಡಿದ್ದೇವೆ. ಹೀಗಾಗಿ, ಈ ಎಲ್ಲಾ ಸುಧಾರಣೆಗಳನ್ನು ತರುತ್ತಿರುವುದರಿಂದ ಮುಂದಿನ ದಿನಮಾನಗಳಲ್ಲಿ ಹೆಚ್ಚಿನ ಗುಣಮಟ್ಟದ ಶಿಕ್ಷಣ ಸಿಕ್ಕುತ್ತದೆನ್ನುವ ಒಂದು ಭರವಸೆಯಿಂದ ಈ ಒಂದು ಆಕ್ಟ್ ತಂದಿದ್ದೇವೆ. ವಿಧಾನ ಪರಿಷತ್ತಿನ ಬಹುತೇಕ ಮಾನ್ಯ ಸದಸ್ಯರುಗಳೆಲ್ಲರೂ ಇದನ್ನು ಗಮನಿಸಿದ್ದೀರಿ. ಈ ವಿಚಾರದಲ್ಲಿ ಕಮಿಟಿ ಮಾಡುವಂತಹ ಸಂದರ್ಭದಲ್ಲಿ ತಾವೆಲ್ಲರೂ ಸಲಹೆಗಳನ್ನು ಕೊಟ್ಟಿದ್ದೀರಿ. ಹೀಗಾಗಿ, ಇದನ್ನು ನಾವೆಲ್ಲರೂ ಸೇರಿಕೊಂಡು ಏನು ಮಾಡಿದ್ದೇವೆ, ಅದೇ ರೀತಿಯಲ್ಲಿ ತಾವೆಲ್ಲರೂ ಈ ಬಿಲ್ ಅನ್ನು ಒಂದೇ ಮನಸ್ಸಿನಿಂದ ಪಾಸ್ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ ಪ್ರಮುಖವಾದಂತಹ ಒಂದು ಕಾಯಿದೆಯನ್ನು ತಂದಿದ್ದಾರೆ. ಇಡೀ ರಾಷ್ಟ್ರದಲ್ಲಿ ಎಲ್ಲರೂ ಮೆಚ್ಚಬೇಕಾದಂತಹ ಕಾಯಿದೆ ಇದಾಗಿದೆ. ನೀವು ಚಿಂತನೆ ಮಾಡಿರತಕ್ಕಂತಹ ಹಾದಿಗಳನ್ನು ನೋಡಿದರೆ ನಿಜಕ್ಕೂ ಕೂಡ ನೀವು ರಾಜ್ಯದ ಮುಖ್ಯಮಂತ್ರಿಯಾಗುವಷ್ಟು ಚೈತನ್ಯ ನಿಮಗೆ ಇದೆ ಎಂದು ಹೇಳಲಿಕ್ಕೆ ಬಯಸುತ್ತೇನೆ. ಆದ್ದರಿಂದ, ಮಾನ್ಯ ಸಚಿವರಿಗೆ ಅಭಿನಂದನೆ ಸಲ್ಲಿಸುತ್ತೇನೆ.

**ಸಭಾಪತಿಯವರು:-** ಈಗ ಸಮಸ್ಯೆ ಪ್ರಾರಂಭವಾಯಿತು. ಮಾನ್ಯ ರಾಯರೆಡ್ಡಿಯವರಿಗೆ ಟಿಕೆಟ್ ಕೊಡುವುದಿಲ್ಲ. ರಾಮಚಂದ್ರಗೌಡರೆ, ಅವರಿಗೆ ಟಿಕೆಟ್ ಕೊಡದಂತೆ ಮಾಡುತ್ತೀರಿ.

**ಶ್ರೀ ರಾಮಚಂದ್ರಗೌಡ:-**ಹೌದು. I must call a spade as spade.

**ಸಭಾಪತಿಯವರು:-**ಮಾನ್ಯ ಸಚಿವರ ಮೇಲೆ ಶ್ರೀಯುತ ರಾಮಚಂದ್ರಗೌಡ ರವರಿಗೆ ಏನೋ ಇದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಚಿವರಿಗೆ ಸಮಸ್ಯೆ ಶುರುವಾಯಿತು.

**ಶ್ರೀ ಬಸವರಾಜ ರಾಯರೆಡ್ಡಿ:-** ನಾನು ಆಗಲೇ ತಿಳಿದುಕೊಂಡೆ. ನನ್ನನ್ನು ಇನ್ನು ಮುಂದೆ ಮಂತ್ರಿ ಮಾಡಬಾರದು ಎನ್ನುವ ರೀತಿಯಲ್ಲಿ ಇದೆ.

**ಸಭಾಪತಿಯವರು:-** ತಾವು ಮುಂದುವರೆಸಿ. Don't take it serious, it is in a lighter vein.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, ಈ ಬಿಲ್ ಪ್ರತಿಯ 9ನೇ ಪುಟವನ್ನು ನೋಡಿದಾಗ, ಅಲ್ಲಿ ಪರಂತು, ವಿದೇಶದಿಂದ, ವಿದೇಶಿ ಪ್ರತಿಷ್ಠಾನದಿಂದ ದೇಣಿಗೆಗಳನ್ನು ರಾಜ್ಯ ಸರ್ಕಾರದ ಅನುಮೋದನೆಯಿಲ್ಲದೆ ಸ್ವೀಕರಿಸತಕ್ಕದಲ್ಲ ಎಂದು ಹೇಳಲಾಗಿದೆ. ಸರ್ಕಾರದ ಅಧೀನದಲ್ಲಿರುವ ವಿಶ್ವವಿದ್ಯಾನಿಲಯಗಳನ್ನು ಹೊರತುಪಡಿಸಿ ಎಂದು ಮಾಡಬೇಕಾಗಿದೆ. ಏಕೆಂದರೆ, ಬೇಕಾದಷ್ಟು ವಿಶ್ವವಿದ್ಯಾನಿಲಯಗಳಿವೆ. ಉದಾಹರಣೆಗೆ ಬೆಂಗಳೂರು ವಿಶ್ವವಿದ್ಯಾನಿಲಯ. ಅಂದರೆ ಸರ್ಕಾರದವರು ಮಾಡಿರುವ ಯಾವ್ಯಾವ ವಿಶ್ವವಿದ್ಯಾನಿಲಯಗಳು ಇವೆ, ಅವುಗಳಿಗೆ ಅಷ್ಟೂ ಅಧಿಕಾರ ಇರಬೇಕು. ಬಂದ ಮೇಲೆ ಈಗ ಬಂದಿದೆ ಎಂದು ಅವರು ಸರ್ಕಾರಕ್ಕೆ ಹೇಳಬಹುದು. ಪರಂತು, ವಿದೇಶದಿಂದ, ವಿದೇಶಿ ಪ್ರತಿಷ್ಠಾನದಿಂದ ದೇಣಿಗೆಗಳನ್ನು ರಾಜ್ಯ ಸರ್ಕಾರದ ಅನುಮೋದನೆಯಿಲ್ಲದೆ ಸ್ವೀಕರಿಸತಕ್ಕದಲ್ಲ ಎನ್ನುವುದರೊಳಗೆ ಸರ್ಕಾರದ ಅಧೀನದಲ್ಲಿರುವ ವಿಶ್ವವಿದ್ಯಾನಿಲಯಗಳನ್ನು ಹೊರತುಪಡಿಸಿ ಎಂದು ಸೇರಿಸಿದರೆ, ಅವರು ಬೇಕಾದರೆ ನಿಮಗೆ ಅಕೌಂಟ್ ಕೊಡುವಾಗ ಎಲ್ಲವನ್ನು ಕೊಡುತ್ತಾರೆ. ಅದು ನಿಮಗೆ ಬಿಟ್ಟ ವಿಚಾರ. ಮತ್ತೆ ಮಾನ್ಯ ಸಚಿವರು 3 ತಿಂಗಳ ಒಳಗಾಗಿ ಒಂದು ಕಮಿಟಿಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಅಲ್ಲಿ ಪ್ರಮುಖವಾಗಿ ಸೇರಿಸಬೇಕಾದ್ದು ಏನೆಂದರೆ, ಯಾವುದೇ ಕಾರಣಕ್ಕೂ vacancy ಇಡುವುದಿಲ್ಲವೆಂದು ಹೇಳಬೇಕು. ಒಂದು ದಿವಸವೂ ಕೂಡ vacancy ಇಡುವುದಿಲ್ಲವೆಂದು ಹೇಳಬೇಕು. ವೈಸ್ ಚಾನ್ಸಲರ್ ರವರನ್ನು 3 ತಿಂಗಳ ಒಳಗಡೆ ನೇಮಕ ಮಾಡದೇ ಹೋದರೆ ಏನು ಮಾಡಬೇಕು?

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, that concept is there.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, I know that concept is there. They cannot do it within three months. ಅಲ್ಲಿ ಒಂದು ದಿವಸವೂ ಕೂಡ vacancyಯನ್ನು ಇಡಲಿಕ್ಕೆ ಸಾಧ್ಯವಿಲ್ಲವೆಂದು ಒಂದು ಮಾತು ಇದ್ದರೆ ಅದನ್ನು ಮಾಡಲೇ ಬೇಕಾಗುತ್ತದೆ. ನಾನು ಹೇಳಬೇಕಾದ ವಿಚಾರವನ್ನು ಹೇಳುತ್ತೇನೆ. ನೀವು ಅದನ್ನು ಮಾಡುವುದು ಬಿಡುವುದು ಬೇರೆ ವಿಚಾರ. ರಾಜ್ಯಪಾಲರಿಗೆ ಹಿಂದಕ್ಕೆ ಕಳುಹಿಸಬೇಕಾದರೆ ಅನೇಕ ಕಾರಣಗಳನ್ನು ಕೊಡಬೇಕೆಂದು ಇತ್ತು. The

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Governor may find that person as not efficient and also not suitable for that post.

**ಸಭಾಪತಿಯವರು:-** ಅದನ್ನು ಬರೆಯಬೇಕು.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೇ, if the Governor finds that recommended Vice Chancellor as not efficient to run the University ಎಂದಾಗ ಅದಕ್ಕೆ ಮಾನ್ಯತೆಯನ್ನು ಕೊಡಬೇಕಾಗುತ್ತದೆ ಎನ್ನುವುದು ಒಂದು ಮಾತು. ಇದು ಕಾನೂನು ಹೇಗೆ ಇದೆ ಎನ್ನುವುದನ್ನು ತಮಾಷೆಗಾಗಿ ಹೇಳುತ್ತೇನೆ. ಗಾಳಿಪಟ ಹಬ್ಬ ಬಂದಾಗ ಎಲ್ಲಾ ಹುಡುಗರು ಗಾಳಿಪಟ ಬಿಡುತ್ತಿರುತ್ತಾರೆ. ಅವರವರದ್ದೇ ಒಂದು ಮೋಜು. ಆ ರೀತಿಯ ವಿಶ್ವವಿದ್ಯಾನಿಲಯಗಳು. ಒಬ್ಬ ಮಾತ್ರ ಒಂದೇ ದಾರಕ್ಕೆ 100 ಗಾಳಿಪಟ ಕಟ್ಟಿ ಬಿಡುತ್ತಾನೆ. ಆ ರೀತಿಯಲ್ಲಿ ಈ ವಿಶ್ವವಿದ್ಯಾನಿಲಯಗಳ ಕಾನೂನು ಇದೆ. ಅಂದರೆ 100 ಗಾಳಿಪಟ ಆಡಿಸುವಷ್ಟು ಶಕ್ತಿ ನೀವು ಮಾಡಿರುವ ಕಾನೂನಿಗೆ ಇದೆ. ನಾನು ಇದನ್ನು ಪೂರ್ಣವಾಗಿ ನೋಡಲಿಕ್ಕೆ ಆಗಿರುವುದಿಲ್ಲ. ಕಮಿಟಿಗೆ ಏನು ಮಾಡಿದ್ದಾರೆ, ಏನು ಬಿಟ್ಟಿದ್ದಾರೆಂದು ನಾನು ಹಳೆಯದನ್ನು ನೋಡಿದ್ದೇನೆ. ಆದ್ದರಿಂದ, ನಾನು ಈಗ ಇದನ್ನು ತರಿಸಿಕೊಂಡು ನೋಡಿದ್ದೇನೆ. By and large, we welcome it. ಅಮೇಲೆ ಏನಾದರೂ ನಡೆಯುತ್ತಾ ನಡೆಯುತ್ತಾ ತಪ್ಪಾದರೆ, ಅದನ್ನು ತಿದ್ದಿಕೊಳ್ಳುವುದಕ್ಕೆ ಅವಕಾಶ ಇದೆ.

**ಸಭಾಪತಿಯವರು:-** ಮತ್ತೆ ಅದಕ್ಕೆ ಅವಕಾಶ ಇದೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಅದಕ್ಕೆ ಅವಕಾಶ ಇದೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಮ್ಮ ರಾಜ್ಯದ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಪಟ್ಟ ಹಾಗೆ ಈಗಾಗಲೇ 7 ವಿವಿಧ ಬಗೆಯ ಕಾಯಿದೆಗಳಿದ್ದವು. ಇಡೀ ವಿಶ್ವವಿದ್ಯಾಲಯಗಳಿಗೆ ಸಂಬಂಧಪಟ್ಟ ಹಾಗೆ ಒಂದು ಸಮಗ್ರ ಕಾಯಿದೆಯನ್ನು ತರಬೇಕೆನ್ನುವ ವಿಚಾರ ನಮ್ಮ ಮುಂದೆ ಬಂತು. ನಾವೆಲ್ಲರೂ ಸಾಕಷ್ಟು ರಚನಾತ್ಮಕ ಸಲಹೆಗಳನ್ನು ಸಚಿವರ ಮುಂದೆ ಸರ್ಕಾರದ ಮುಂದೆ ತಮ್ಮ ಸಮಕ್ಷಮ ಇಟ್ಟೆವು. ಈ ನಿಟ್ಟಿನಲ್ಲಿ ನಾನು ಸಚಿವರನ್ನು ಅಭಿನಂದಿಸಬೇಕಾಗುತ್ತದೆ. ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ 12 ಜನರ ಸಮಿತಿಯು 5 ಸಭೆಗಳನ್ನು ಮಾಡಿದೆ. ನಾನು ಸೇರಿದಂತೆ ಮಾನ್ಯ ಸದಸ್ಯರುಗಳಾದ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ರವರು, ಶ್ರೀಯುತ ಪುಟ್ಟಣ್ಣನವರು, ಶ್ರೀಯುತ ಅರುಣ್ ಶಹಾಪುರ್‌ರವರು, ಶ್ರೀ ಎಸ್‌ವ್ಹಿ ಸಂಕನೂರ ರವರು ಈ ರೀತಿಯಲ್ಲಿ ನಾವೆಲ್ಲರೂ ಕೊಟ್ಟಂತಹ ಸಲಹೆಗಳನ್ನು ಮಾನ್ಯ ಸಚಿವರು ಬಹಳ ಮುಕ್ತ ಮನಸ್ಸಿನಿಂದ ಸ್ವಾಗತ ಮಾಡಿದ್ದಾರೆ. ಹೀಗಾಗಿ, ತಿದ್ದುಪಡಿಯ ವಿಚಾರವೇ ಪುಟ 1 ರಿಂದ ಪುಟ 28 ರಲ್ಲಿದೆ. ನಮ್ಮ ವರದಿಯಲ್ಲಿದೆ. ಸಚಿವರ ಆಶಯ ಒಳ್ಳೆಯದು ಇದೆ, ಆ ಒಂದು ಆಶಯಕ್ಕೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪೂರಕವಾಗಿ ಒಂದು ದೊಡ್ಡ ಪ್ರಯತ್ನವನ್ನು ಕರ್ನಾಟಕದಲ್ಲಿ ಸಮಗ್ರ ಕಾಯಿದೆಯನ್ನು ತರುವುದರ ಮೂಲಕ ನಾವು ಮಾಡುತ್ತಿದ್ದೇವೆ. ಅದಕ್ಕಾಗಿ ಮಾನ್ಯ ಸಚಿವರು ಅತ್ಯಂತ ಮುಕ್ತ ಮನಸ್ಸಿನಿಂದ ನಮ್ಮ ಎಲ್ಲಾ ಸಲಹೆಗಳನ್ನು ಸ್ವಾಗತಿಸಬೇಕೆಂದು ಹೇಳಿದಾಗ ನಾವು ಅಷ್ಟೇ ಅಲ್ಲಾ, ಬಹಳಷ್ಟು ಶೈಕ್ಷಣಿಕ ತಜ್ಞರನ್ನೂ ನಾವು ಸಮಿತಿಗೆ ಬರಮಾಡಿಕೊಂಡೆವು.

ಮುಂದು.

**(175) 21.02.2018 03.40 ಎಸ್‌ವಿ-ಆರ್‌ಎನ್**

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು):-**

ಡಾ.ವಿ.ಬಿ.ಕುಟಿನ್ಹೋ, ಡಾ.ಬಿ.ಎಸ್.ಸೋಂದೆ (ಗೋವಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳು), ಶ್ರೀಮತಿ ಗೀತಾ ಬಾಲಿ, ಶ್ರೀ ಎನ್.ಆರ್.ಶೆಟ್ಟಿ, ಶ್ರೀ ಎ.ಎಂ.ಪಠಾಣ್ ಈ ರೀತಿ ಹಲವು ಮಂದಿ ಅತಿರಥ ಮಹಾರಥ ಶೈಕ್ಷಣಿಕ ತಜ್ಞರನ್ನು ಕರೆಯಿಸಿ ಸಭೆಯಲ್ಲಿ ಸಮಗ್ರವಾದ ಚರ್ಚೆಯನ್ನು ಮಾಡಲಾಯಿತು. ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ. ಆದರೆ ನನಗೆ ಇನ್ನೂ ಪೂರ್ಣ ಸಮಾಧಾನವಿರುವುದಿಲ್ಲ. ಸ್ವಾಯತ್ತ ಖಾಸಗಿ ವಿಶ್ವವಿದ್ಯಾಲಯಗಳು ನಮ್ಮ ವ್ಯಾಪ್ತಿಯಿಂದ ದೂರವಿದ್ದು ಅವು ಈ ಕಾಯ್ದೆಯಡಿಯಲ್ಲಿ ಬರುತ್ತಿಲ್ಲ. ಒಂದು ರೀತಿಯ ಅನಾರೋಗ್ಯಕರ ಸ್ಪರ್ಧೆಯನ್ನು ಖಾಸಗಿ ವಿಶ್ವವಿದ್ಯಾಲಯಗಳು ನಮ್ಮ ವಿಶ್ವವಿದ್ಯಾಲಯಗಳ ಒಟ್ಟಿಗೆ ಮಾಡುತ್ತಿವೆ. ಆ ಬಗ್ಗೆಯೂ ನಾವು ಯೋಚಿಸಬೇಕಾಗಿದೆ. ಇನ್ನು ಮೇಲೆ ಬಹಳ ಜನ ವಿದ್ಯಾರ್ಥಿಗಳು ನಮ್ಮ ವಿಶ್ವವಿದ್ಯಾಲಯಗಳ ಕಡೆ ಮುಖ ಮಾಡುವುದು ಕಡಿಮೆ ಆಗುತ್ತದೆ. ಏಕೆ ಕಡಿಮೆಯಾಗುತ್ತದೆಯೆಂದರೆ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಅವರು ಪರ್ಸೆಂಟೇಜ್ ಅನ್ನು ಕನಿಷ್ಠ ಶೇ.70ರಿಂದ ಪ್ರಾರಂಭ ಮಾಡುತ್ತಾರೆ. 70-75, 80-90 ಹೀಗೆ ಕೊಡುತ್ತಾರೆ. ನಮ್ಮ ವಿಶ್ವವಿದ್ಯಾಲಯಗಳು ಶೈಕ್ಷಣಿಕ ನೆಲೆಗಟ್ಟಿನಡಿಯಲ್ಲಿ, ವಾಸ್ತವದ ನೆಲೆಗಟ್ಟಿನಡಿಯಲ್ಲಿ ಮಕ್ಕಳಿಗೆ ಅಂಕವನ್ನು ಕೊಡುವ ಸಂಪ್ರದಾಯವನ್ನು ಇಟ್ಟುಕೊಂಡಿವೆ. ಇವತ್ತು ಹೇಳಿ ಕೇಳಿ competitive world. Percentage and criteria ಕೇಳುತ್ತಾರೆ. ಎಲ್ಲಿ percentage ಸುಖಾಸುಮ್ಮನೆ ಸಿಗುತ್ತದೆಯೋ ಅಲ್ಲಿಗೆ ವಿದ್ಯಾರ್ಥಿಗಳು ಹೊರಟು ಹೋಗುತ್ತಾರೆ. ಸರ್ಕಾರ ನಮ್ಮ ವಿಶ್ವವಿದ್ಯಾಲಯಗಳನ್ನು ನಿಯಂತ್ರಿಸುವಂತಹ ಸಮಗ್ರ ಕಾಯ್ದೆಯನ್ನು ತಂದಿದೆ. ಇದರಲ್ಲಿ 28 ತಿದ್ದುಪಡಿಗಳನ್ನು ಮಾಡುವ ನಿರ್ಣಯ ಇಲ್ಲಿ ಅಂಗೀಕಾರವಾಗಿದೆ. ಇದು ವಿಧೇಯಕದಲ್ಲಿ ಸೇರ್ಪಡೆಗೊಳ್ಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ ಹಾಗೂ ವಿಧೇಯಕವನ್ನು ಸ್ವಾಗತಿಸುತ್ತೇನೆ. At the same time, ಖಾಸಗಿ ವಿಶ್ವವಿದ್ಯಾಲಯಗಳನ್ನು ನಿಯಂತ್ರಿಸುವಂತಹ ಕಾಯಿದೆಯನ್ನು ತರುವಂತಹ ಒಂದು ದೊಡ್ಡ ಕೆಲಸಕ್ಕೆ ಸರ್ಕಾರ ಮುಂದಾಗಬೇಕಿದೆ. ಇಲ್ಲವಾದಲ್ಲಿ annul the competition. ನಮ್ಮ ರಾಜ್ಯದಲ್ಲಿ ಕನ್ನಡಶಾಲೆಗಳಿಗೆ ಬಂದಿರುವ ಗತಿಯೇ ನಮ್ಮ ವಿಶ್ವವಿದ್ಯಾಲಯಗಳಿಗೂ ಬರುವಂತಹ ಕಾಲ ಬಹಳ ದೂರ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇಲ್ಲ. ಮಾನ್ಯ ಸಚಿವರು ದಯಮಾಡಿ ಆ ಬಗ್ಗೆಯೂ ಗಮನ ಹರಿಸಬೇಕು. ನಮ್ಮ ವಿಶ್ವವಿದ್ಯಾಲಯಗಳನ್ನು ಹೇಗಾದರೂ ನಿಯಂತ್ರಿಸಬಹುದು. ಆದರೆ ಖಾಸಗಿ ವಿಶ್ವವಿದ್ಯಾಲಯಗಳು ಸರ್ಕಾರದ ಅಧೀನದಲ್ಲಿ ಇಲ್ಲ. ಒಂದು ಬಾರಿ ಇಲ್ಲಿ ಬಂದು ವಿಧೇಯಕ ಪಾಸ್ ಮಾಡಿದರೆ ಮುಗಿದು ಹೋಯಿತು. ಮಂಡ್ಯ ಜಿಲ್ಲೆಗೆ Integrated Universityಗಾಗಿ UGC recommend ಮಾಡಿದೆ. ಮೈಸೂರು ವಿಶ್ವವಿದ್ಯಾಲಯದಡಿಯಲ್ಲಿರಬೇಕೆಂದು ಮುಂಚೆ ಇತ್ತು. ನಾವು ಮನವಿ ಮಾಡಿಕೊಂಡೆವು. ಈಗ ಅದಕ್ಕೆ ವಿಶ್ವವಿದ್ಯಾಲಯದ ಸಂಪೂರ್ಣ ಸ್ಥಾನಮಾನ ಕೊಡುವಂತಹ ನಿರ್ಣಯ ಆಗಿದೆ. ಬೆಂಗಳೂರಿನ ಮಹಾರಾಣಿ ಕಾಲೇಜು Cluster University ಆಗಿದ್ದು, ಇದು ಒಂದು ಹೊಸ ಪ್ರಯೋಗವಾಗಿದೆ. ಈಗಾಗಲೇ ಜಮ್ಮು ಮತ್ತು ಕಾಶ್ಮೀರ ಹಾಗೂ ಬೇರೆ ಬೇರೆ ಕಾಲೇಜುಗಳಲ್ಲಿ ಈ ರೀತಿಯ ಪ್ರಯೋಗಗಳಾಗಿವೆ. ನಮ್ಮ ವಿಶ್ವವಿದ್ಯಾಲಯಕ್ಕೆ ಸಂಪೂರ್ಣ ಸ್ಥಾನಮಾನವನ್ನು ನೀಡಲು ಸರ್ಕಾರ ಒಪ್ಪಿದ್ದು, ಅದಕ್ಕಾಗಿ ಮಾನ್ಯ ಸಚಿವರನ್ನು ಅಭಿನಂದಿಸಲಿಚ್ಛಿಸುತ್ತೇನೆ. ಇಂಥದೇ ಪ್ರಯತ್ನವನ್ನು ಖಾಸಗಿ ವಿಶ್ವವಿದ್ಯಾಲಯಗಳ ವಿಷಯದಲ್ಲಿಯೂ ಸರ್ಕಾರ ಮಾಡಬೇಕು. ಖಾಸಗಿ ವಿಶ್ವವಿದ್ಯಾಲಯಗಳ ಬಗ್ಗೆ ಬರುವ ಗಂಡಾಂತರವನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ನಿಯಂತ್ರಿಸತಕ್ಕಂತಹ ಮತ್ತೊಂದು ಸಮಗ್ರ ಕಾಯ್ದೆ ಬರಬೇಕಾದುದು ಅನಿವಾರ್ಯ ಎಂದು ಹೇಳುತ್ತಾ ಈ ಬಿಲ್ ಅನ್ನು ನಾನು ಸ್ವಾಗತಿಸುತ್ತೇನೆ. ಒಂದರಿಂದ ಇಪ್ಪತ್ತೆಂಟು ಪುಟಗಳ ತಿದ್ದುಪಡಿಗಳ

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,..

**ಸಭಾಪತಿಯವರು:-** ಮಾನ್ಯ ಮಟ್ಟೂರ ಅವರೇ, ನೀವು ಸಮಿತಿಯ ಸದಸ್ಯರಾಗಿದ್ದಿರಿ. ಈಗಲೂ ಪುನಃ ಏನು ಮಾತನಾಡುವುದಿದೆ? ಸಮಿತಿಯ ಸದಸ್ಯರಿಗೆಲ್ಲಾ ಅವಕಾಶವನ್ನು ಕೊಟ್ಟರೆ ಗತಿ ಏನು? ನೀವು ಬಿಲ್ ಅನ್ನು ಸ್ವಾಗತ ಮಾಡುವುದಷ್ಟೇ ಆದರೆ ಆಗಬಹುದು. ಎರಡು ಮಾತುಗಳಲ್ಲಿ ಮುಗಿಸಿ. ಉದ್ದ ಭಾಷಣದ ಅವಶ್ಯಕತೆ ಇಲ್ಲ. ಸ್ವಾಗತ ಮಾಡುತ್ತೇನೆ ಎಂದರೆ ಅದು ದಾಖಲೆಗೆ ಹೋಗುತ್ತದೆ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರಲ್ಲಿ ಉದ್ದ ಭಾಷಣದ ಪ್ರಶ್ನೆಯೇ ಬರುವುದಿಲ್ಲವೆಂಬುದು ತಮಗೆ ಚೆನ್ನಾಗಿ ತಿಳಿದಿದೆ. Wholeheartedly, I welcome the Bill brought by our Hon'ble Minister. In order to avoid the so many inconsistencies with regard to the independent laws holding by individual universities. To avoid all these things, at the same time to curb the expenditure, purchase, appointments, recruitments. To bring the transparency in administration and also to get the quality of education in the university as well as in the

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

higher education. ಮಾನ್ಯ ಸಚಿವರು ತಂದಿರುವ ಈ ವಿಧೇಯಕ ಬಹಳ ಒಳ್ಳೆಯದಾಗಿದ್ದು, ಇದನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧಪಕ್ಷದ ಮುಖ್ಯ ಸಚೇತಕರು)**:- ಮಾನ್ಯ ಸಭಾಪತಿಯವರೇ, ಬದಲಾವಣೆಯನ್ನು ಮನಸ್ಸಿನಲ್ಲಿಟ್ಟುಕೊಂಡು ತಂದಿರುವಂತಹ ಬಿಲ್ ಅನ್ನು ನಾನು ಸ್ವಾಗತ ಮಾಡುತ್ತೇನೆ. ಇಲ್ಲಿ ಎರಡು technicalities ಇವೆ. ತಾವು ಕೊಟ್ಟಿರುವ ಪುಸ್ತಕದಲ್ಲಿ ವಿಶ್ವವಿದ್ಯಾಲಯದ ಪ್ರಾದೇಶಿಕ ಅಧಿಕಾರ ವ್ಯಾಪ್ತಿ ಎಂಬುವಲ್ಲಿ ವಿಶ್ವವಿದ್ಯಾನಿಲಯ ಎಂದು ಇದೆ. ಇದನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೆನು. ಆದರೆ ಎಲ್ಲಾ ಕಡೆಗಳಲ್ಲಿಯೂ ವಿಶ್ವವಿದ್ಯಾನಿಲಯ ಎಂದು ಇದೆ. ಇದು ಒಂದು ಸಣ್ಣ ತಪ್ಪು ಆದರೂ ಸಹ ಗೊಂದಲ ಮೂಡಿಸುತ್ತದೆ. ಮುಂದುವರೆದು ಒಂದು ಕಡೆ ಸಂಸ್ಕೃತ ವಿಶ್ವವಿದ್ಯಾಲಯ ಎಂದು ಇದೆ. ಇನ್ನೊಂದು ಕಡೆ ವಿಶ್ವವಿದ್ಯಾನಿಲಯ ಎಂದು ಇದೆ. ಅದನ್ನು ತಿದ್ದುಪಡಿಗೊಳಿಸಬೇಕು.

ಎರಡನೆಯ technicality ಏನೆಂದರೆ ನಮಗೆ ಕೊಟ್ಟಿರುವಂತಹ ಸಮಿತಿಯ ವರದಿಯು ನಿನ್ನೆ ಸಲ್ಲಿಕೆಯಾಗಿರುವಂಥದ್ದಾಗಿದೆ. ಇದಕ್ಕೆ ಸದನ ಒಪ್ಪಿಗೆ ಕೊಡಬೇಕಲ್ಲವೆ? ಸರ್ಕಾರ ಕೊಟ್ಟಿರುವ ಕರಡು ವಿಧೇಯಕದ ಪ್ರತಿಯಲ್ಲಿ ಇದು reflect ಆಗಿರುವುದಿಲ್ಲ.

**ಶ್ರೀ ಬಸವರಾಜ ರಾಯರಡ್ಡಿ (ಉನ್ನತ ಶಿಕ್ಷಣ ಸಚಿವರು)**:- ಮಾನ್ಯ ಸಭಾಪತಿಯವರೇ, ವಿಧೇಯಕ ಕೆಳಮನೆಯಲ್ಲಿ ಪಾಸ್ ಆಗಿದೆ. ಇದಕ್ಕೆ ಪರ್ಯಾಯವಾಗಿ ಮಾನ್ಯ ಸದಸ್ಯರಿಗೆ ನೀಡಲಾಗಿರುವ ಸಮಿತಿಯ ವರದಿಯನ್ನು incorporate ಮಾಡಲಾಗುವುದು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉಲ್ಲೇಖ ಮಾಡುವ ಸಂದರ್ಭದಲ್ಲಿ ಈ ವಿಧೇಯಕವನ್ನು ಮಂಡನೆ ಮಾಡುತ್ತೇನೆಂದು ಹೇಳಿದ್ದರು. ಇದರ ಬಗ್ಗೆ ಎಲ್ಲಿಯೂ ಉಲ್ಲೇಖ ಮಾಡಿರುವುದಿಲ್ಲ. ಈ ಸದನದಲ್ಲಿ ಕರಡು ವಿಧೇಯಕ ಮಂಡನೆಯಾಗಿ ಅದಕ್ಕೆ ಸದನದ ಒಪ್ಪಿಗೆ ಸಿಗಬೇಕಲ್ಲವೆ? ಇದು ಮಂಡನೆಯಾಗಿದೆಯಷ್ಟೆ, ಇನ್ನೂ ಒಪ್ಪಿಗೆಯಾಗಿರುವುದಿಲ್ಲ. ಇದು ನಿನ್ನೆಯಷ್ಟೇ ಸಿಕ್ಕಿರುವುದು. I personally feel that this House has to approve this report.

**ಶ್ರೀ ಬಸವರಾಜ ರಾಯರಡ್ಡಿ**:- ಮಾನ್ಯ ಸಭಾಪತಿಯವರೇ, ಇದು ಮಂಡನೆಯಾಗಿದೆ. ಈಗ approve ಸಿಗಬೇಕು.

**ಸಭಾಪತಿಯವರು**:- ಮಾನ್ಯ ಕಾರ್ಣಿಕ್ ಅವರೇ, ನಾನು ಅದನ್ನು ಉಲ್ಲೇಖ ಮಾಡುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**:- ಆಗಲಿ ಮಾನ್ಯ ಸಭಾಪತಿಯವರೇ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಬಿ.ಶಾಣಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದರ ಬಗ್ಗೆ ಹೇಳುವುದಾದರೆ, ಎಲ್ಲ ಸದಸ್ಯರೂ ಈ ವಿಧೇಯಕವನ್ನು ಸ್ವಾಗತಿಸಿದ್ದಾರೆ., Executive Council ಗೆ ಎಂ.ಎಲ್.ಎ./ಎಂ.ಎಲ್.ಸಿ.ಗಳನ್ನು nominate ಮಾಡುವುದಾಗಿ ಮಾನ್ಯ ಸಚಿವರು ಹೇಳಿದ್ದರು.

**ಶ್ರೀ ಬಸವರಾಜ ರಾಯರಡ್ಡಿ:-** ಮಾನ್ಯ ಸಭಾಪತಿಯವರೇ, ನಾಮನಿರ್ದೇಶನವನ್ನು ತಾವು ಮಾಡಬೇಕು.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಅದು ನನಗೆ ತಿಳಿದಿದೆ. ಇಲ್ಲಿ ತಾವು ನಾಮನಿರ್ದೇಶನ ಮಾಡುತ್ತೀರಿ. ಕೆಳಮನೆಯಲ್ಲಿ ಮಾನ್ಯ ಸಭಾಧ್ಯಕ್ಷರು ಮಾಡುತ್ತಾರೆ. ಮಾನ್ಯ ಸಚಿವರಲ್ಲಿ ನನ್ನ ಮನವಿ ಏನೆಂದರೆ ಆಯಾ ಸ್ಥಳೀಯ ಎಂ.ಎಲ್.ಎ/ಎಂ.ಎಲ್.ಸಿ.ಗಳು ಅಲ್ಲಿನ ವಿಶ್ವವಿದ್ಯಾಲಯಗಳಿಗಿದ್ದರೆಂದರೆ ಸರ್ಕಾರದ ಮೇಲೆ ಒತ್ತಡ ಹಾಕುವುದಕ್ಕೆ, ಆರ್ಥಿಕ ಸೌಲಭ್ಯವನ್ನು ಪಡೆಯುವುದಕ್ಕೆ ಈ ರೀತಿ ಹಲವು ಅನುಕೂಲಗಳಾಗುತ್ತದೆ. ವಿಶ್ವವಿದ್ಯಾಲಯ ಬೆಳೆಯುವುದಕ್ಕೆ ಬಹಳ ಅನುಕೂಲವಾಗುತ್ತದೆ. ಮಾನ್ಯ ಸಚಿವರು ಎಲ್ಲಿಯಾದರೂ ಹಾಕಬಹುದು ಎಂದು ಹೇಳಿದರು. That should be compelled.

**ಶ್ರೀ ಬಸವರಾಜ ರಾಯರಡ್ಡಿ:-** ಮಾನ್ಯ ಸಭಾಪತಿಯವರೇ, ನಾನು ಹಾಗೆ ಹೇಳಲೇ ಇಲ್ಲ. ಕಾಯ್ದೆಯಲ್ಲಿ ಹೀಗೆಯೇ ಹಾಕಬೇಕೆಂದು ನಾವು ಮಾಡಿಲ್ಲ ಎಂದು ನಾನು ಹೇಳಿದೆನು. ಸಾಂಪ್ರದಾಯಿಕವಾಗಿ...

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಅದು option ಆಯಿತು.

**ಶ್ರೀ ಬಸವರಾಜ ರಾಯರಡ್ಡಿ:-** ಮಾನ್ಯ ಸಭಾಪತಿಯವರೇ, ಹಾಗೆ ಹಾಕಲಿಕ್ಕೆ ಬರುವುದಿಲ್ಲ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, ನನ್ನನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಹಾಕಿದರೆ ನನಗೇನು ಆಸಕ್ತಿ ಇರುತ್ತದೆ. ಸುಮ್ಮನೆ ಹೋಗಿ ಹಾಜರಾಗಿ ಬರುತ್ತೇನೆ.

**ಸಭಾಪತಿಯವರು:-** ಮಾನ್ಯ ಶಾಣಪ್ಪನವರೆ, ಇದನ್ನು Presiding Officers ಗೆ ಜವಾಬ್ದಾರಿ ಕೊಟ್ಟಿರುವಾಗ ಈ restriction ಅನ್ನು ಕಾನೂನಿನ ಚೌಕಟ್ಟಿನಡಿಯಲ್ಲಿ ಹಾಕಲು ಬರುವುದಿಲ್ಲ. ಮಾನ್ಯ ಸಚಿವರು ಉಲ್ಲೇಖ ಮಾಡಿರುವುದು proceeding ನಲ್ಲಿ ಇರುತ್ತದೆ. ಆದ್ದರಿಂದ Presiding Officers nominate ಮಾಡುವಾಗ ಆ ಪದವನ್ನು ನೆನಪಿಟ್ಟುಕೊಂಡು ಮಾಡಬೇಕು. It is their responsibility.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಬಸವರಾಜ ರಾಯರಡ್ಡಿ:-** ಮಾನ್ಯ ಸಭಾಪತಿಯವರೇ, ಅದನ್ನು Rule Book ನಲ್ಲಿ ಸೇರಿಸಲಾಗುವುದು.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಒಂದು ಕಾಯ್ದೆಯನ್ನು ರೂಪಿಸುವ ನಿಟ್ಟಿನಲ್ಲಿ ಮಾನ್ಯ ಸಚಿವರು ನಮ್ಮೆಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಏನೇನು ಬದಲಾವಣೆಗಳನ್ನು ತರಬೇಕೋ, ಅವುಗಳನ್ನು ತಂದಿದ್ದಾರೆ. ಅದಕ್ಕೆ ನಾನು ಮಾನ್ಯ ಸಚಿವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ನನ್ನ ಒಂದು ಸಲಹೆ ಎಂದರೆ, ತಮಗೆ ತಿಳಿದಿರುವಂತೆ ಸರ್ಕಾರದಿಂದ ನಡೆಸಲ್ಪಡುವ ವಿಶ್ವವಿದ್ಯಾಲಯಗಳು ಏನಿವೆ, ಅವು ಅವನತಿಯತ್ತ ಸಾಗುತ್ತಿವೆ. ಏಕೆಂದರೆ ಎಲ್ಲಿಯೂ ನೇಮಕಾತಿಗಳು ನಡೆಯುತ್ತಿಲ್ಲ. ಮಾನ್ಯ ಸಚಿವರು ವಿಶ್ವವಿದ್ಯಾಲಯಗಳ ಕರ್ಮಕಾಂಡವನ್ನು ತೊಳೆಯಬೇಕೆಂದು ಈ ಬದಲಾವಣೆಯನ್ನು ತಂದಿದ್ದಾರೆ. ಇದನ್ನು ನಾವು ಒಪ್ಪುತ್ತೇವೆ. ಜೊತೆಗೆ ಖಾಸಗಿ ವಿಶ್ವವಿದ್ಯಾಲಯಗಳ ಜೊತೆಯಲ್ಲಿ ನಮ್ಮ ವಿಶ್ವವಿದ್ಯಾಲಯಗಳು ಸ್ಪರ್ಧಿಸಬೇಕು ಎಂದರೆ, ಪ್ರತಿವರ್ಷ ಖಾಲಿಯಾದ ಹುದ್ದೆಗಳಿಗೆ ಅಲ್ಲಿ ನೇಮಕಾತಿಯು ನಡೆಯುವಂತೆ ಮಾಡಬೇಕು. ಖಾಲಿಯಿರುವ ಹುದ್ದೆಗಳನ್ನು ಭರ್ತಿಗೊಳಿಸುವ ಪ್ರಕ್ರಿಯೆಯನ್ನು ಕಾಯ್ದೆಯ ರೂಪದಲ್ಲಿ ಮಾಡಿದರೆ ಮಾತ್ರ ಸರ್ಕಾರಿ ವಿಶ್ವವಿದ್ಯಾಲಯಗಳು ಖಾಸಗಿ ವಿಶ್ವವಿದ್ಯಾಲಯಗಳೊಂದಿಗೆ ಸ್ಪರ್ಧಿಸಲು ಸಾಧ್ಯವಾಗುತ್ತದೆ. ತಮಗೆ ತಿಳಿದಿರುವಂತೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿಯೇ ಶೇ.70 ಸಿಬ್ಬಂದಿ ಇಲ್ಲ.

**ಸಭಾಪತಿಯವರು:-** ಹೀಗಿದ್ದಾಗ ಏನು ಗುಣಮಟ್ಟವನ್ನು ನಿರೀಕ್ಷಿಸಲು ಸಾಧ್ಯ?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಈಗ ಪ್ರಸ್ತುತ ಏಳು ವಿಶ್ವವಿದ್ಯಾಲಯಗಳಲ್ಲಿ ಉಪಕುಲಪತಿಗಳು ಇರುವುದಿಲ್ಲ. ಮಾನ್ಯ ಶ್ರೀಕಂಠೇಗೌಡರು ಹೇಳಿದ ರೀತಿಯಲ್ಲಿ ಖಾಸಗಿ ವಿಶ್ವವಿದ್ಯಾಲಯಗಳು ಶೇ.95ರಷ್ಟು ಫಲಿತಾಂಶವನ್ನು ಕೊಡುತ್ತಿವೆ. ನಮ್ಮ ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿ 60%, 65%, 70% ಈ ರೀತಿಯ ಫಲಿತಾಂಶವನ್ನು ಕೊಡುತ್ತಿವೆ. ಏಕೆ ಹೀಗೆ ಕೊಡುತ್ತಾರೆ? ಎಂಬುದು ನಮಗೆ ಗೊತ್ತಿಲ್ಲ. ಈ ಮಕ್ಕಳು ಖಾಸಗಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೊಡನೆ ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ. ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಓದುವ ಮಕ್ಕಳೆಲ್ಲಾ ಮಧ್ಯಮ ವರ್ಗ ಹಾಗೂ ಮೇಲ್ಮಧ್ಯಮ ವರ್ಗದ ವಿದ್ಯಾರ್ಥಿಗಳಾಗಿರುತ್ತಾರೆ. ಸಾಂಪ್ರದಾಯಿಕ ವಿಶ್ವವಿದ್ಯಾಲಯಗಳಲ್ಲಿ ಓದುತ್ತಿರುವವರು ಕೆಳಮಧ್ಯಮ ವರ್ಗದ ವಿದ್ಯಾರ್ಥಿಗಳಾಗಿರುತ್ತಾರೆ. ಇವರಿಗೆ ಸ್ಪರ್ಧಿಸಲಾಗುತ್ತಿಲ್ಲ. ಈ ತಾರತಮ್ಯವನ್ನು ಹೋಗಲಾಡಿಸಲಿಕ್ಕೆ, ಹುದ್ದೆಗಳನ್ನು ತುಂಬಲಿಕ್ಕೆ ಕಾನೂನು ರೀತ್ಯಾ ಸರಿದೂಗಿಸಿಕೊಂಡು ಹೋಗುವಂತೆ ಮಾಡಬೇಕೆಂದು ಹೇಳುತ್ತಾ, ಈ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ.

**(...ಮುಂದು)**



ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2017 ಈಗಾಗಲೇ ಬೆಳಗಾಂ ಅಧಿವೇಶನದಲ್ಲಿ ಮಂಡನೆಯಾಗಿ ನಮ್ಮ ಪಕ್ಷದ ಹಾಗೂ ಬೇರೆ ಪಕ್ಷದ ಸದಸ್ಯರನ್ನು ಒಟ್ಟಿಗೆ ಸೇರಿಸಿ ಅನೇಕ ಸಭೆಗಳನ್ನು ಮಾಡಿದ್ದೇವೆಂದು ಹೇಳಿದ್ದಾರೆ. ಇಲ್ಲಿ ಬಹಳ ಪ್ರಮುಖವಾದ ವಿಷಯ ಏನೆಂದರೆ, ಸುಮಾರು 07 ವಿಶ್ವವಿದ್ಯಾನಿಲಯಗಳಲ್ಲಿ ಕುಲಪತಿಗಳು ಇಲ್ಲ. ಇದರ ಬಗ್ಗೆ ಸರ್ಕಾರ ಮತ್ತು ಮಂತ್ರಿಗಳು ಚಿಂತನೆ ಮಾಡಬೇಕು. ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿ ಇರುವಂತಹ ಬಿಇಎಲ್ ಮತ್ತು ಬಿಇಎಂಎಲ್ ಈ ನವರತ್ನ ಕಾರ್ಖಾನೆಗಳಲ್ಲಿ ಕೆಲವೊಂದು ಪದ್ಧತಿಗಳು ಇವೆ. ಅವರು ಕಾರ್ಯಕಾರಿ ನಿರ್ದೇಶಕರು ನಿವೃತ್ತಿಯಾಗುವ ಸುಮಾರು ಎರಡು ತಿಂಗಳ ಮೊದಲೇ ಆ ಕಾರ್ಯಕಾರಿ ನಿರ್ದೇಶಕರನ್ನು ನೇಮಕ ಮಾಡುವಂತಹ ಪದ್ಧತಿ ಅಲ್ಲಿ ಇದೆ. ಈ ಒಂದು ಪದ್ಧತಿಯನ್ನು ವಿಶ್ವವಿದ್ಯಾನಿಲಯಗಳಲ್ಲಿಯೂ ಅಳವಡಿಸಿಕೊಳ್ಳಬೇಕು. ಮಾನ್ಯ ರಾಮಚಂದ್ರಗೌಡರು ಹೇಳಿದಂತೆ ಒಂದು ದಿವಸವು ಸಹ ಖಾಲಿ ಬಿಡದ ರೀತಿಯಲ್ಲಿ permanent Vice-Chancellor ಅನ್ನು ನೇಮಕ ಮಾಡಬೇಕು. ಆದರೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಂದು ವರ್ಷ ಮೂರು ತಿಂಗಳಿಂದ ಆ ಹುದ್ದೆ ಖಾಲಿ ಇದೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಒಂದು ವರ್ಷದಿಂದ ಖಾಲಿ ಇದೆ. ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಒಂದು ವರ್ಷಕ್ಕಿಂತಲೂ ಹೆಚ್ಚಿನ ಅವಧಿಯಿಂದ ಖಾಲಿ ಇದೆ. ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಸುಮಾರು ಆರು ತಿಂಗಳಿನಿಂದ ಖಾಲಿ ಇದೆ. ಈ ರೀತಿ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ adhoc, ಅಲ್ಲಿಯ Senior Professor and Dean ಗಳನ್ನು ನೇಮಕ ಮಾಡುತ್ತಾ ಹೋದರೆ, ವಿಶ್ವವಿದ್ಯಾನಿಲಯಗಳಲ್ಲಿ ಎಷ್ಟರ ಮಟ್ಟಿಗೆ ಕೆಲಸ ಆಗುತ್ತದೆ ಎನ್ನುವುದು ಒಂದು ಪ್ರಶ್ನೆ.

ಮಾನ್ಯ ಸಭಾಪತಿಯವರೇ ಜೊತೆಗೆ ಈಗಾಗಲೇ ಮಾನ್ಯ ಸದಸ್ಯರಾದ ಪುಟ್ಟಣ್ಣನವರು ಮತ್ತು ಶ್ರೀಕಂಠೇಗೌಡರವರು ಮಾತನಾಡಿದ್ದಾರೆ. ವಿಶ್ವವಿದ್ಯಾನಿಲಯದ guidelines ಪ್ರಕಾರ, ಕನಿಷ್ಠ 50% ಬೋಧಕ ಸಿಬ್ಬಂದಿ ಇಲ್ಲದೆ ಇದ್ದರೆ, ವಿಶ್ವವಿದ್ಯಾನಿಲಯಗಳಿಗೆ ಅನುದಾನ ಬರುವುದು ಕಷ್ಟವಾಗುತ್ತದೆ. 70% ಕ್ಕಿಂತ ಹೆಚ್ಚಿಗೆ ವಿಶ್ವವಿದ್ಯಾನಿಲಯಗಳಲ್ಲಿ ಹುದ್ದೆಗಳು ಖಾಲಿ ಇವೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯಿದೆಯನ್ನು ತಂದಿದ್ದಾರೆ, ಅದು ಬಹಳ ಸಂತೋಷದ ವಿಚಾರ. ಅದರ ಅಗತ್ಯವು ಇದೆ. ಆದರೆ, ಇದು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬರುತ್ತದೆ ಎನ್ನುವುದು ಮುಖ್ಯ. ಅದನ್ನು ನಾವು ಮುಂದಿನ ದಿವಸಗಳಲ್ಲಿ ನೋಡಬೇಕಾಗುತ್ತದೆ. ಮಾನ್ಯ ಉನ್ನತ ಶಿಕ್ಷಣ ಸಚಿವರಲ್ಲಿ ನನ್ನ ಒಂದು ಮನವಿ ಏನೆಂದರೆ, ವಿಶ್ವವಿದ್ಯಾನಿಲಯಗಳಲ್ಲಿ ಕುಲಪತಿಗಳ ಹುದ್ದೆ ಬಹಳ ಪವಿತ್ರವಾದಂತಹ ಹುದ್ದೆಯಾಗಿದೆ. ಆದರೆ, ಕೇವಲ ಒಂದು ತಿಂಗಳಿಗೆ ಅಥವಾ ಎರಡು ತಿಂಗಳಿಗೆ ಪ್ರಭಾರ ಕುಲಪತಿಗಳ ನೇಮಕವಾಗುತ್ತಿದೆ. ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಮುಂದಾದರೂ ಸಹ, ನಾನು ಈಗಾಗಲೇ ಉಲ್ಲೇಖ ಮಾಡಿದಂತೆ ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವಂತಹ ನವರತ್ನ ಕಂಪನಿಗಳ ಪೈಕಿ ಬಿಇಎಲ್ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಿಇಎಂಎಲ್ ಗಳಲ್ಲಿ ಎರಡು ತಿಂಗಳ ಮುಂಚೆಯೇ ನೇಮಕವಾಗಿ ಅದು ಒಂದು secret ballot ನಲ್ಲಿ ಇರುತ್ತದೆ. ಆ ಒಂದು ನಿಟ್ಟಿನಲ್ಲಿ ಸರ್ಕಾರ ಇದನ್ನು ಯೋಚನೆ ಮಾಡಬೇಕು. ಮಾನ್ಯ ಸಚಿವರು ತಂದಿರುವಂತಹ ವಿಶ್ವವಿದ್ಯಾನಿಲಗಳ ಸಮಗ್ರ ತಿದ್ದುಪಡಿಯನ್ನು ನಾನು ಬಹಳ ಸಂತೋಷದಿಂದ ಸ್ವಾಗತಿಸುತ್ತಾ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಸಭಾಪತಿಯವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ 7 ವಿಶ್ವವಿದ್ಯಾನಿಲಯಗಳಿಗೆ ಒಂದು ಏಕರೂಪದ ಸಮಗ್ರವಾದಂತಹ ಕಾಯಿದೆಯನ್ನು ತಂದಂತಹ ಮತ್ತು ಇದನ್ನು ಸಿದ್ಧಪಡಿಸುವಲ್ಲಿ ಎಲ್ಲಾ ಮಾನ್ಯ ಸದಸ್ಯರ ಸಲಹೆಗಳನ್ನು ಪಡೆದುಕೊಂಡು ಇವತ್ತು ಸದನದೊಳಗೆ ವಿಧೇಯಕ ಮಂಡನೆಯಾಗಿದೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ, ಇದರಲ್ಲಿ 2 ತಾಂತ್ರಿಕವಾದಂತಹ ತೊಂದರೆಗಳು ಇವೆ. ನಾನು ಅವುಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಕನ್ನಡ ವಿಶ್ವವಿದ್ಯಾನಿಲಯವನ್ನು ಬೇರೆ ಇಟ್ಟಿದ್ದಾರೆ, ಅದು ಒಂದನ್ನೇ ಬೇರೆ ಇಟ್ಟಿದ್ದಾರೆ.

**ಸಭಾಪತಿಯವರು:-** ಕನ್ನಡ ವಿಶ್ವವಿದ್ಯಾನಿಲಯವನ್ನು ಮಾತ್ರ ಬೇರೆ ಇಟ್ಟಿದ್ದಾರೆ.

**ಶ್ರೀ ಎಸ್.ವ್ಹಿ.ಸಂಕನೂರ:- ಮಾನ್ಯ ಸಭಾಪತಿಯವರೇ,** ನನ್ನ ಅನುಮಾನ ಮತ್ತು ಭಯ ಏನೆಂದರೆ, ನಾಳೆ ದಿವಸ ಸಂಸ್ಕೃತ ವಿಶ್ವವಿದ್ಯಾನಿಲಯದವರು ಪ್ರತ್ಯೇಕ ಮಾಡಿ ಎಂದು ಕೇಳಬಹುದು.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈಗ ಬೇರೆ ಇಟ್ಟಿಲ್ಲ. ಅವರನ್ನೆಲ್ಲಾ ಸೇರಿಸಿದ್ದಾರೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಇಲ್ಲಿ ಪ್ರಶ್ನೆ ಅದಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಅದರ ಬಗ್ಗೆ ಆ ಸಂದರ್ಭದಲ್ಲಿ ಚರ್ಚೆ ಮಾಡೋಣ ಬಿಡಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಇಲ್ಲಿ ನನ್ನ ಪ್ರಶ್ನೆ ಏನೆಂದರೆ, ಕನ್ನಡದವರು ಕೇಳಿದ್ದಾರೆ. ಅದರ ಬಗ್ಗೆ ಸರ್ಕಾರ ಗಮನ ಹರಿಸಬೇಕು. ನಾಳೆ ದಿವಸ ಸಂಸ್ಕೃತದ್ದೊಂದು ಪ್ರತ್ಯೇಕ ಮಾಡಿ ಮತ್ತು ಸಂಗೀತದ್ದೊಂದು ಪ್ರತ್ಯೇಕ ಮಾಡಿ ಎಂದು ಬರುತ್ತಾರೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಈ ಕಾಯಿದೆಯನ್ನು ತಿದ್ದುತ್ತೇನೆ ಎನ್ನುವುದಕ್ಕೆ ಕಾರಣಗಳನ್ನು ಹೇಳುತ್ತೇನೆ. ಈ ವಿಧೇಯಕದಲ್ಲಿ ಏನಿದೆ ಎಂದರೆ, ಕನ್ನಡ ವಿಶ್ವವಿದ್ಯಾನಿಲಯಕ್ಕೆ ಅವರು ಕಾರಣಗಳನ್ನು ಕೊಟ್ಟು ಹೇಳಿದ್ದಾರೆ. ಬೇರೆ ಯಾರಾದರೂ ಈ ರೀತಿ ಕೇಳಿದರೆ ಆಗ ಅದು ಸದನದಲ್ಲಿ ಮತ್ತೆ ಚರ್ಚೆಗೆ ಬರಬೇಕು. ಆಗ ನಿಮ್ಮಂತಹವರು ಅದನ್ನು ಬೆಂಬಲ ಮಾಡಬಹುದು ಅಥವಾ ಅದನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿರೋಧ ಮಾಡಬಹುದು. ನಾವು ಈ ರೀತಿಯ ತಿದ್ದುಪಡಿಗಳಿಗೆ ಒಳಪಟ್ಟೆ ಇದನ್ನು ಒಪ್ಪಿಕೊಳ್ಳುವುದು. ಆದ್ದರಿಂದ, ಈಗ ಆ ಚರ್ಚೆ ಬೇಡ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಅದರ ಬಗ್ಗೆ ಚರ್ಚೆ ಬೇಡ..

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ .. ನಾನು ನನ್ನ ಮಾತನ್ನು ಮುಗಿಸುತ್ತೇನೆ. ನಾನು ನನ್ನ ಅನುಮಾನವನ್ನು ಹೇಳಿದ್ದೇನೆ.

**ಸಭಾಪತಿಯವರು:-** ಮಾನ್ಯ ಹೊರಟ್ಟಿಯವರೇ, ಮೊದಲು ಮಾನ್ಯ ಸಂಕನೂರರವರು ಅವರ ಮಾತನ್ನು ಮುಗಿಸಲಿ. ದಯವಿಟ್ಟು ಕುಳಿತುಕೊಳ್ಳಿ. ಆಯಿತು ಬಿಡಿ. ಸಂಕನೂರರವರೇ, ತಾವು ಮಾತನಾಡಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಎರಡನೆಯ ವಿಷಯವೇನೆಂದರೆ, ರಾಜ್ಯಪಾಲರ ಅಧಿಕಾರವನ್ನು ಮೊಟಕುಗೊಳಿಸಿದ್ದಾರೆ. Search Committee ಗೆ ಮುಂಚೆ ಮೂರು ಜನರ ಹೆಸರನ್ನು ಕೊಡುತ್ತಿದ್ದರು. ಸರ್ಕಾರ ಅದನ್ನು ಮಾನ್ಯ ರಾಜ್ಯಪಾಲರಿಗೆ ಕಳುಹಿಸಿ ಕೊಡುತ್ತಿತ್ತು. ಈಗ ಮೂರು ಜನರ ಹೆಸರನ್ನು ಕಳುಹಿಸುವಂತೆ ಇಲ್ಲ. Out of three, the Government will send only one name. ಇದು ನಾಳೆ ದಿವಸ ತಾಂತ್ರಿಕ ತೊಂದರೆಯಾಗುತ್ತದೆಯೇ ಎಂಬುದನ್ನು ದಯವಿಟ್ಟು ಸರ್ಕಾರ ಚಿಂತನೆ ಮಾಡಬೇಕು. ಏಕೆಂದರೆ ಮಾನ್ಯ ರಾಜ್ಯಪಾಲರು ಯಾವಾಗಲೂ impartial ಆಗಿ ಇರುತ್ತಾರೆ. ಅವರು ಒಳ್ಳೆಯದನ್ನೇ ಮಾಡುತ್ತಿರುತ್ತಾರೆ. ನಾವು ಅವರ ವಿಶ್ವಾಸವನ್ನು ಕಡಿಮೆ ಮಾಡಿದಂತೆ ಆಗುತ್ತದೆ. ಮಾನ್ಯ ಸಭಾಪತಿಯವರೇ, ನಾವು ಎಲ್ಲದಕ್ಕೂ ಒಪ್ಪಿಕೊಂಡಿದ್ದೇವೆ. ಇದಕ್ಕೆ ನಾವು 'Note of Dissent' ಕೊಟ್ಟಿದ್ದೇವೆ. ಇದಕ್ಕೆ ನಾನು ಮತ್ತು ಶ್ರೀ ಅರುಣಾ ಶಹಾಪುರ ರವರು 'Note of Dissent' ಕೊಟ್ಟಿದ್ದೇವೆ.

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು);-** ಮಾನ್ಯ ಸಭಾಪತಿಯವರೇ, ಅವರು 'Note of Dissent' ಕೊಟ್ಟಿರುವುದಿಲ್ಲ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಆ ಬಗ್ಗೆ ದಾಖಲೆ ಆಗಿದೆ. ದಾಖಲೆ ಇಲ್ಲವೆಂದರೆ ಹೇಗೆ..

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಚಿವರೇ, ಈಗ ಅವರು ಅವರ ಅಭಿಪ್ರಾಯವನ್ನು ಹೇಳಲಿ ಬಿಡಿ. ಮಾನ್ಯ ಸದಸ್ಯರೇ, ಅದನ್ನು ಈಗ ಹೇಳಿದ್ದೀರಿ ಅಲ್ಲವೇ, ಪುನಃ ಅದನ್ನೇ ಹೇಳಬೇಡಿ. ಈಗ ಮುಂದಕ್ಕೆ ಹೋಗಿ.

(ಗೊಂದಲ)

**ಶ್ರೀ ಎಸ್.ವಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಈಗ ಮಾನ್ಯ ರಾಜ್ಯಪಾಲರ ಅಧಿಕಾರವನ್ನು ಮೊಟಕುಗೊಳಸಿದ್ದಾರೆ. ಈ ಹಿಂದೆ ಮೂರು ಜನರ ಹೆಸರನ್ನು ಕಳುಹಿಸುತ್ತಿದ್ದರು. ಈಗ ಒಬ್ಬರ ಹೆಸರನ್ನು ಮಾತ್ರ ಕಳುಹಿಸುತ್ತಾರೆ. ಇದರಿಂದ ಸರ್ಕಾರಕ್ಕೆ ತಾಂತ್ರಿಕ ತೊಂದರೆ ಬರುತ್ತದೆ. ಹಾಗಾಗಿ ಇದನ್ನು ಸರ್ಕಾರ ಸ್ವಲ್ಪ ಚಿಂತನೆ ಮಾಡಬೇಕಾಗುತ್ತದೆ. ನಾವು ಇದನ್ನು ಸ್ವಾಗತ ಮಾಡುತ್ತೇವೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ಬಹಳ ಕಳಕಳಿಯಿಂದ ಪ್ರಮಾಣಿಕವಾಗಿ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಮಾನ್ಯ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು. ಮಾನ್ಯ ಐವನ್ ಡಿ' ಸೋಜರವರೇ, ತಾವೀಗ ಮಾತನಾಡಿ.

**ಶ್ರೀ ಐವನ್ ಡಿ' ಸೋಜಾ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಸುಮಾರು 17 ವರ್ಷಗಳ ನಂತರ ಒಂದು ಸಮಗ್ರವಾದಂತಹ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2017 ಅನ್ನು ಮಾನ್ಯ ಉನ್ನತ ಶಿಕ್ಷಣ ಸಚಿವರು ತಂದಿದ್ದಾರೆ. ಅದಕ್ಕೆ ನಾನು ಸ್ವಾಗತವನ್ನು ಬಯಸುತ್ತೇನೆ. ಈ ಕಾನೂನನ್ನು ರಚನೆ ಮಾಡುವಂತಹ ಸಂದರ್ಭದಲ್ಲಿ ಸದನ ಸಮಿತಿಯೊಂದನ್ನು ರಚನೆ ಮಾಡಿತ್ತು. ಆ ಸದನ ಸಮಿತಿಯ ಎಲ್ಲಾ ಮಾನ್ಯ ಸದಸ್ಯರು ಕೊಟ್ಟಂತಹ ಸಲಹೆ ಸೂಚನೆಗಳನ್ನು ತೆಗೆದುಕೊಂಡು ಇದು ಒಂದು ಉತ್ತಮವಾದಂತಹ ಮಸೂದೆ ಆಗಬೇಕು ಎನ್ನುವಂತಹ ದೃಷ್ಟಿಯಿಂದ ಅದನ್ನು ಅಳವಡಿಕೆ ಮಾಡಿದ್ದಾರೆ. ಹಾಗಾಗಿ, ಇದು ಒಂದು ಉತ್ತಮ ಕಾನೂನು ಆಗಿ ಬಂದಿದೆ. ನಾನು ಇದನ್ನು ಸ್ವಾಗತ ಮಾಡುತ್ತೇನೆ. ಹಾಗೆಯೇ, ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರು ಇದಕ್ಕೆ ಏನಾದರೂ ಹೇಳುವುದು ಇದ್ದರೆ ಹೇಳಬಹುದು.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ರಾಮಚಂದ್ರಗೌಡರು, ಮಾನ್ಯ ಸಂಕನೂರರವರು, ಮಾನ್ಯ ಐವನ್ ಡಿ'ಸೋಜರವರು ಹಾಗೂ ನಮ್ಮ ಎಲ್ಲ ಹಿರಿಯ ಮುಖಂಡರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅಲ್ಲದೇ, ಸಂಪೂರ್ಣವಾಗಿ ವಿಧೇಯಕವನ್ನು ಸ್ವಾಗತ ಮಾಡಿದ್ದಾರೆ. ನಾನು ಅದಕ್ಕೆ ಅವರೆಲ್ಲರಿಗೂ ವೈಯಕ್ತಿಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸದಸ್ಯರು ಕೆಲವು ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೆ. ನಾನು ಅವುಗಳನ್ನು ಒಪ್ಪಿಕೊಂಡಿದ್ದೇನೆ. ಉದಾಹರಣೆಗೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವವಿದ್ಯಾನಿಲಯಗಳಲ್ಲಿ ವರ್ಷಗಟ್ಟಲೇ ನೇಮಕಾತಿ ಮಾಡಿಲ್ಲ. I admit, ಅದಕ್ಕಾಗಿ ಕಾನೂನನ್ನು ತಂದಿರುವುದು, ಇದರ ಮೇಲೆ mandatory ಮಾಡಿದ್ದೇವೆ. ಸರ್ಕಾರದಿಂದ ಮೂರು ತಿಂಗಳ ಮೊದಲೇ ಕಮಿಟಿ ಆಗಬೇಕು. compulsory ಆಗಿ ಎರಡು ತಿಂಗಳೊಳಗೆ ಕೊಡಲೇ ಬೇಕು, ಒಂದು ತಿಂಗಳೊಳಗೆ ನೇಮಕಾತಿ ಆಗಲೇ ಬೇಕು. It is an Act. Act means, it is a mandatory.

**ಸಭಾಪತಿಯವರು:-** ಅಲ್ಲಿಗೆ ಮುಗಿದು ಹೋಯಿತು.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಈ ವಿಧೇಯಕ ಪಾಸ್ ಆಗಿಬಿಟ್ಟರೆ ಇನ್ನು ಮುಂದೆ ವಿಶ್ವವಿದ್ಯಾನಿಲಯಗಳಲ್ಲಿ ಹುದ್ದೆಗಳು ಖಾಲಿ ಇರುವುದಕ್ಕೆ ಅವಕಾಶವೇ ಇರುವುದಿಲ್ಲ. ಸುಮಾರು 60 ರಿಂದ 70% ಪ್ರಾಧ್ಯಾಪಕರ ಹುದ್ದೆಗಳನ್ನು ಹಾಗೂ ಇತರೆ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಆಗಲಿಲ್ಲವೆಂದರೆ, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಇದಕ್ಕೆ ಪಾರದರ್ಶಕತೆ ಇಲ್ಲದೆ ಇರುವುದು ಮತ್ತು ಭ್ರಷ್ಟಾಚಾರದ ಅವ್ಯವಹಾರ ಕಾರಣವಾಗಿದೆ. ನಿನ್ನೆ ದಿವಸ ಸಹ ಇದು ಚರ್ಚೆ ಆಗಿದೆ. ಹೀಗಾಗಿ, ಇದು ತೊಂದರೆಯಾಗಿದೆ. ನಾನು ಉನ್ನತ ಶಿಕ್ಷಣ ಮಂತ್ರಿಯಾದ ಮೇಲೆ ಬಹುತೇಕ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಪ್ರೊಫೆಸರ್‌ಗಳನ್ನು ಹಾಗೂ ಸಹಾಯಕ ಪ್ರೊಫೆಸರ್‌ಗಳನ್ನು ನೇಮಕಾತಿ ಮಾಡುವುದಕ್ಕೆ ಅನುಮತಿ ನೀಡಿದೆ. ನಾನು ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ. ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ. ಅದು ತಮಗೂ ಗೊತ್ತಿದೆ, ನಾವು ಖಾಸಗಿ ಕಾಲೇಜುಗಳಲ್ಲಿ ಸಹ ಕೊಟ್ಟಿದ್ದೇವೆ. ಹೀಗಾಗಿ ನಮಗೆ ತೊಂದರೆ ಇರಲಿಲ್ಲ. The problem is that, ಅಲ್ಲಿ ನೇಮಕಾತಿಯಲ್ಲಿ ಭ್ರಷ್ಟಾಚಾರ ಆಗುತ್ತಿದೆ ಅದನ್ನು ತಡೆಯಿರಿ ಎಂದು ಹೇಳಿದ್ದಕ್ಕೆ 4-5 ವಿಶ್ವವಿದ್ಯಾನಿಲಯಗಳಲ್ಲಿ ನೇಮಕಾತಿಯನ್ನು ತಡೆಹಿಡಿದಿದ್ದೇವೆ. ಈ ಹೊಸ ಕಾನೂನಿನ ಪ್ರಕಾರ ನೇಮಕಾತಿ ಮಾಡಿದರೆ ಬಹುತೇಕ ಮೈಸೂರು, ಬೆಂಗಳೂರು, ಕರ್ನಾಟಕ ಮತ್ತು ಗುಲ್ಬರ್ಗಾ ವಿಶ್ವವಿದ್ಯಾನಿಲಯಗಳಲ್ಲಿ ಎಲ್ಲಿ ಹುದ್ದೆಗಳು ಖಾಲಿ ಇವೆಯೋ ಅಲ್ಲೆಲ್ಲ ಭರ್ತಿ ಆಗುತ್ತದೆ. ಈಗ ಶಿವಮೊಗ್ಗದಲ್ಲಿ ಮಾಡಿದ್ದೇವೆ. ಶಿವಮೊಗ್ಗ ವಿಶ್ವವಿದ್ಯಾನಿಲಯದಲ್ಲಿ ನೇಮಕಾತಿ ಮುಗಿಯುತ್ತಾ ಬಂತು. ಅದು ತಮಗೂ ಗೊತ್ತಿದೆ. ಹೊಸ ಕಾಯಿದೆಯನ್ನು transparency ಯಾಗಿ ಮಾಡಬೇಕು ಎಂದು ಹೇಳಿದ್ದರಿಂದ ಅದೇ ಪ್ರಕಾರ ಮಾಡಿದ್ದೇವೆ. ಈಗ ದಾವಣಗೆರೆಯಲ್ಲಿ ನೇಮಕಾತಿ ಪ್ರಾರಂಭವಾಗುತ್ತಿದೆ. ಹೀಗಾಗಿ, ಮುಂದಿನ ವರ್ಷಗಳಲ್ಲಿ ಯಾವುದೇ ಬಹುತೇಕ ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಧ್ಯಾಪಕರ ಕೊರತೆ ಹಾಗೂ ಇತರೆ ಹುದ್ದೆಗಳು ಖಾಲಿ ಇರುವುದಿಲ್ಲ ಎಂಬುದನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ. ಇದಾದ ಮೇಲೆ ಅವಶ್ಯಕತೆ ಇರಲಿಲ್ಲ. ಆದರೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಹ ಮಾನ್ಯ ಸಂಕನೂರರವರು ತಮ್ಮದೊಂದು ಸ್ಯಾಂಪಲ್ ಇರಲಿ ಎಂದು ಹೇಳಿ ಸಹಿ ಮಾಡಿದ್ದಾರೆ, ಅವರು ಯಾವುದೇ Dissent Note ಕೊಟ್ಟಿಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೇ, ಅದು ಬೇಡ ಬಿಡಿ. ಅದನ್ನು ಏಕೆ ಚರ್ಚೆ ಮಾಡುತ್ತೀರಿ?

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಂಕನೂರರವನ್ನು ಅಭಿನಂದಿಸುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.. 'Note of Dissent' ಇಂಥದ್ದನ್ನು ದಯಮಾಡಿ ತರಬೇಡಿ. ಕನ್ನಡ ವಿಶ್ವವಿದ್ಯಾನಿಲಯಕ್ಕೆ ಏನು ಪ್ರತ್ಯೇಕವಾಗಿ ಕೊಡಬೇಕೋ, ಅದನ್ನು ನಮ್ಮ ಕರ್ನಾಟಕದಲ್ಲಿ ಕೊಡಲೇ ಬೇಕು. ಅದಕ್ಕೆ ದಯಮಾಡಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ 'Note of Dissent' ಬೇಡ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ನಾವು ಅದನ್ನೇ ಹೇಳಿದ್ದೇವೆ. ಅದಕ್ಕೆ ಅದನ್ನು ಕೊಟ್ಟಿದ್ದೇವೆ. ನಾನು ಮಾನ್ಯ ಸದಸ್ಯರಾದ ಸಂಕನೂರರವರು ಹೇಳಿದ್ದಕ್ಕೆ ಹೇಳಬೇಕಾಗುತ್ತದೆ.

**ಸಭಾಪತಿಯವರು:-** ಮಾನ್ಯ ಸದಸ್ಯರೇ, ಸರಿ ಇದೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರ ಅಧಿಕಾರವನ್ನು ಮೊಟಕುಗೊಳಿಸಿಲ್ಲ. ರಾಜ್ಯಪಾಲರು valid reason ನಿಂದ ಏನಾದರೂ ಇದ್ದರೆ ವಾಪಸ್ಸು ಕಳುಹಿಸುವಂತಹ ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆ. ಹಾಗಾಗಿ, ಈ ವಿಧೇಯಕ ಸರಿಯಾಗಿ ಇದೆ. ತಾವೆಲ್ಲರೂ ಇದನ್ನು ಸ್ವಾಗತ ಮಾಡಿದ್ದೀರಿ. ಹಾಗೆಯೇ, ಇದನ್ನು ದಯವಿಟ್ಟು ಪಾಸು ಮಾಡಬೇಕು. ವಂದನೆಗಳು.

**ಶ್ರೀ ಎಸ್.ವಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ರಾಜ್ಯಪಾಲರ ಅಧಿಕಾರವನ್ನು ಮೊಟಕುಗೊಳಿಸಿದ್ದಕ್ಕೆ ನಾವು 'Note of Dissent' ಅನ್ನು ಕೊಟ್ಟಿದ್ದೇವೆ. ಆದ್ದರಿಂದ ಮತ್ತೆ ತಪ್ಪು ಸಂದೇಶ ಹೋಗಬಾರದು ಮತ್ತು ಸದನದ ಕಡತಕ್ಕೆ ತಪ್ಪಾಗಿ ದಾಖಲಾಗಬಾರದು.

**ಸಭಾಪತಿಯವರು:-** ಮಾನ್ಯ ಸಂಕನೂರರವರೇ, ಆಯಿತು ಬಿಡಿ. ತಾವು ಹೇಳಿದ್ದು ದಾಖಲೆಗೆ ಹೋಗಿದೆ.

(ಮುಂದು...)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ವಿಶ್ವವಿದ್ಯಾನಿಲಯದ ಕುಲಪತಿಗಳಿಗೆ ಕಟ್ಟಡ ಕಟ್ಟುವಂತಹ ಅಧಿಕಾರವನ್ನು ಹಿಂದಕ್ಕೆ ತೆಗೆದುಕೊಳ್ಳುವುದು ಒಳ್ಳೆಯದು. ಈ ವಿಧೇಯಕದಲ್ಲಿ ಅದು ಸರಿಯಾಗಿ clear ಇಲ್ಲ.

**ಸಭಾಪತಿಯವರು:-** ಅದನ್ನು ಸಹ ಮಾಡಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಅವರು ಬರಿ ಕಟ್ಟಡವನ್ನು ಕಟ್ಟಿಕೊಂಡು ಹೋಗುತ್ತಿದ್ದಾರೆ.

**ಸಭಾಪತಿಯವರು:-** ವಿಧೇಯಕದಲ್ಲಿ ಅದನ್ನು ಸಹ ಅವರು ಹೇಳಿದ್ದಾರೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಪರ್ಯಾಲೋಚಿಸುವುದು"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>.**

<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.</u>

<u>ಖಂಡ 2 ರಿಂದ 95 ವರೆಗೆ</u>

**ಸಭಾಪತಿಯವರು:-** "ಖಂಡ 2 ರಿಂದ 95ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಭಾಗವಾಗಿರುತ್ತದೆ"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

(ಖಂಡ 2 ರಿಂದ 95ರ ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

<u>ಖಂಡ 1 ಇತ್ಯಾದಿ</u>

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ

“ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**ಸಭಾಪತಿಯವರು:–** ಒಂದು ವಿಷಯವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸದನದಲ್ಲಿ ಬಹಳಷ್ಟು ಬಾರಿ, ಬಹಳ ಉನ್ನತ ಮಟ್ಟದ ಚರ್ಚೆಗಳನ್ನು ನಾವು ಮಾಡುತ್ತೇವೆ. ಇವತ್ತಿನ ದಿವಸ ಈ ವಿಧೇಯಕಕ್ಕೆ ಈಗ ತಾನೆ ಅಂಗೀಕಾರವನ್ನು ಕೊಟ್ಟಿದ್ದೇವೆ. ಇದನ್ನು ಬಹಳಷ್ಟು ಜನ recognize ಮಾಡುವುದಿಲ್ಲ. ಅದಕ್ಕಾಗಿ ನನಗೆ ನಾನೆ ನಮ್ಮ ಸದನದ ಒಂದು “feather in the cap” ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾರಣವೇನೆಂದರೆ ಈ ವಿಶ್ವವಿದ್ಯಾನಿಲಯದ ವಿಧೇಯಕ ಕೆಳಮನೆಯಲ್ಲಿ ಯಾವುದೋ ಕಾರಣಕ್ಕೆ ಪೂರ್ಣ ಪರಿಶೀಲನೆಗೆ ಒಳಪಡದೆ ಪಾಸ್ ಆಗಿ ಬಂದಾಗ ಇಲ್ಲಿ ಕುಳಿತ್ತಿದ್ದಂತಹ ಎಲ್ಲರೂ ಆಡಳಿತ ಪಕ್ಷದವರು ಮತ್ತು ವಿರೋಧಪಕ್ಷದವರು ಭಿನ್ನಾಭಿಪ್ರಾಯವನ್ನು ಮರೆತು, ಇದರಲ್ಲಿ ಬದಲಾವಣೆಗಳ ಅವಶ್ಯಕತೆ ಇದೆ ಎಂದು, ನಾನು ಸಭಾಪತಿ ಸ್ಥಾನದಲ್ಲಿ ಕುಳಿತಿರುವಾಗ, ಅದನ್ನು ನನ್ನ ಗಮನಕ್ಕೆ ತಂದಾಗ, ನಾನು ಸರ್ಕಾರಕ್ಕೆ ಬಹಳ ಸೂಚ್ಯವಾಗಿ ಸೂಚನೆಯನ್ನು ನೀಡಿದೆ. ನೋಡಿ ಈ ವಿಧೇಯಕ ಸರಿ ಇರುವ ಹಾಗೆ ಕಾಣುತ್ತಿಲ್ಲವೆಂದು. ಇದರಲ್ಲಿ ಬಹಳ ಚರ್ಚೆಯಾಗುವಂತಹ ಅವಶ್ಯಕತೆ ಇದೆ, ಇದರ ಬಗ್ಗೆ ಬಹಳ ಗಂಭೀರವಾದಂತಹ ಚಿಂತನೆ ಬೇಕು. ಇದಕ್ಕೆ ಸಂಬಂಧಪಟ್ಟಂತೆ ಬಹಳ ದೊಡ್ಡ ಹೆಜ್ಜೆ ಇಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ ಎಂದು ಹೇಳಿದಾಗ, ಅವತ್ತಿನ ದಿವಸ ಮಾನ್ಯ ಉನ್ನತ ಶಿಕ್ಷಣ ಸಚಿವರು ಮತ್ತು ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಎಲ್ಲರೂ ಸೇರಿ, ಇದನ್ನು ಪರಿಶೀಲನಾ ಸಮಿತಿಗೆ ನೀಡಿ ಎಂದು ಹೇಳಿದ ಹಿನ್ನೆಲೆಯಲ್ಲಿ, ಪರಿಶೀಲನಾ ಸಮಿತಿಯಲ್ಲಿ ಮತ್ತೆ ಪಕ್ಷಭೇದ ಮರೆತು, ಇಷ್ಟು ಚೆನ್ನಾಗಿರುವಂತಹ, ಅಂದರೆ ಇದರ ಒಳಗೂ ಶೇಕಡ 100ರಷ್ಟು ಇದೆ ಎಂದು ಹೇಳುವುದಿಲ್ಲ. ಇದನ್ನು ನಾನು ತುಂಬಾ detail ಆಗಿ ನೋಡಿದ್ದೇನೆ. ಇದು ಇಷ್ಟು ಚೆನ್ನಾಗಿರುವಂತಹ ಒಂದು ವಿಧೇಯಕ ಇದು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬಹಳ ವರ್ಷಗಳ ಕನಸು ಎಂದು ಅವರು ಉಲ್ಲೇಖ ಮಾಡಿದರು. ಈ ಹಿಂದೆ ನಾನು ಉನ್ನತ ಶಿಕ್ಷಣ ಸಚಿವನಾಗಿದ್ದಾಗ ಈ ರೀತಿಯ ಒಂದು ಮಸೂದೆ ತರುವುದಕ್ಕೆ ಪ್ರಯತ್ನ ಮಾಡಿ ವಿಫಲಗೊಂಡಿದ್ದೆ. ಇವತ್ತಿನ ದಿವಸ ಮಾನ್ಯ ಸಚಿವರಾದ ಬಸವರಾಜ ರಾಯರೆಡ್ಡಿಯವರಿಗೆ ಮತ್ತು ಇಡೀ ಸದನಕ್ಕೆ ನನ್ನ ಮನಸಿನ ಒಳಗೆ ಬಂದಂತಹ ಭಾವನೆಗಳನ್ನು ವ್ಯಕ್ತ ಮಾಡುತ್ತಿದ್ದೇನೆ ಮತ್ತು ಎಲ್ಲರನ್ನು ಅಭಿನಂದಿಸುತ್ತೇನೆ.

**7.ಪ್ರಕಟಣೆಗಳು**

ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿ –

– – – –

**ಸಭಾಪತಿಯವರು:–** ಬೆಳಗ್ಗೆ ಕಾರ್ಯಕಲಾಪಗಳ ಸಲಹಾ ಸಮಿತಿ ಸೇರಿತ್ತು. ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಸಲಹಾ ಸಮಿತಿಯು ದಿನಾಂಕ:21.02.2018ರಂದು ಸಭೆ ಸೇರಿ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿರುತ್ತದೆ ಎಂದು ಸದನದ ಗಮನಕ್ಕೆ ತರುತ್ತಿದ್ದೇನೆ.

- ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ದಿನಾಂಕ: 22.02.2018ರಂದು ಮಧ್ಯಾಹ್ನ ಸರ್ಕಾರದಿಂದ ಉತ್ತರ;
- ಆಯವ್ಯಯಕ್ಕೆ ಸಂಬಂಧಿಸಿದ ಹಾಗೂ ಇತರೆ ವಿಧೇಯಕಗಳ ಮಂಡನೆ ಹಾಗೂ ಪರ್ಯಾಲೋಚನೆ;
- ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆಗೆ ದಿನಾಂಕ:23.02.2018ರಂದು ಮಧ್ಯಾಹ್ನ ಸರ್ಕಾರದಿಂದ ಉತ್ತರ;
- ದಿನಾಂಕ:22.02.2018ರಂದು ಹಾಗೂ ದಿನಾಂಕ23.02.2018ರಂದು ಬೆಳಗ್ಗೆ 10.00 ಗಂಟೆಗೆ ಅಧಿವೇಶನ ಪ್ರಾರಂಭಗೊಳ್ಳುತ್ತದೆ;

ಈ ವರದಿಗೆ ಸದನದ ಅಂಗೀಕಾರವಿದೆ ಎಂದು ನಾನು ಭಾವಿಸುತ್ತೇನೆ.

ಇನ್ನೊಂದು ಪ್ರಕಟಣೆ ಇದೆ. ವಿಶ್ವಕ್ಕೆ ಶಾಂತಿ ಸಂದೇಶವನ್ನು ಶತಮಾನಗಳಿಂದ ಸಾರುತ್ತಿರುವ ಶ್ರೀ ಗೋಮಟೇಶ್ವರ ಭಗವಾನ್ ಬಾಹುಬಲಿ ಸ್ವಾಮಿಯ 88ನೇ ಐತಿಹಾಸಿಕ ಮಹಾ ಮಸ್ತಕಾಭಿಷೇಕದ ಕಾರ್ಯಕ್ರಮಕ್ಕೆ ದಿನಾಂಕ 24.02.2018ರಂದು ಶಾಸಕರ ಭವನದಿಂದ ಸಾರಿಗೆ ಸೌಲಭ್ಯವನ್ನು ಬೆಳಗ್ಗೆ 8.00 ಗಂಟೆಗೆ ಏರ್ಪಡಿಸಲಾಗಿರುತ್ತದೆ. ಮಾನ್ಯ ಸದಸ್ಯರುಗಳು ಸದರಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಈ ಮೂಲಕ ಕೋರಲಾಗಿದೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಪಾಸ್ ಕೊಡಿಸಿ ಎಂದು ಸುಮಾರು ಬಾರಿ ಕೇಳಿದ್ದೇವೆ. ಪ್ರತಿಬಾರಿ ಎಲ್ಲರನ್ನು ಸಹ ಕಳುಹಿಸುತ್ತಿದ್ದರು. ಆದರೆ, ನೀವು ಪಾಸ್‌ಗಳನ್ನು ಕೊಡಿಸುವುದಿಲ್ಲವೆಂದರೆ ಹೇಗೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದು ಅಪರೂಪಕ್ಕೆ ಒಂದು ಬಾರಿ ನಡೆಯುವಂಥದ್ದು. ಲಕ್ಷಾಂತರ ಜನ ಭಾಗವಹಿಸುತ್ತಾರೆ, ನೀವು ಒಂದು ಪಾಸ್ ಅನ್ನು ಕೊಡಿಸುವುದಿಲ್ಲವೆಂದರೆ ಹೇಗೆ? ನೀವು ನಮ್ಮ ಪರವಾಗಿ ನಮಗೆ ಸಹಾಯ ಮಾಡಬೇಕಲ್ಲವೆ?

**ಸಭಾಪತಿಯವರು:-** ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ ಹಾಗೂ ತಮಗೆ ಗೊತ್ತಿದೆಯೋ ಅಥವಾ ಗೊತ್ತಿಲ್ಲವೋ, ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಸಹ ತಂದಿದ್ದೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಇಲ್ಲಿ ಮಾನ್ಯ ಸಚಿವರು ಇದ್ದಾರೆ, ಕರೆಕ್ಟ್ ಆಗಿ ಹೇಳಿಸಿ. ಅವರ ಕೈಯಲ್ಲಿ ಕೊಡುವುದಕ್ಕೆ ಆಗುವುದಿಲ್ಲವೆಂದು ಅವರು ಹೇಳಲಿ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಗಳ ಜೊತೆ ಕುರಿತು ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಅವರು ಸೂಚನೆಯನ್ನು ಕೊಟ್ಟಿದ್ದಾರೆ. ನಮ್ಮ ನೀರಾವರಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಅದಕ್ಕೆ in-charge ಇದ್ದಾರೆ. ಅವರ ಬಳಿ ಪಡೆಯಬಹುದೆಂದು ಸೂಚನೆಯನ್ನು ಕೊಟ್ಟಿದ್ದಾರೆ. ನಾನು ಅವರ ಬಳಿ ಮಾತನಾಡಿ ಎಲ್ಲರಿಗೂ ಪಾಸ್ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಶ್ರವಣಬೆಳಗೊಳದಲ್ಲಿ ಐದು ಸಾವಿರ ಪಾಸ್‌ಗಳನ್ನು ಮಾಡಿರುವುದು, ಅದರಲ್ಲಿ ನಾಲ್ಕು ಸಾವಿರ ಪಾಸ್‌ಗಳನ್ನು religion ಎಂದು ಅವರುಗಳೇ ಇಟ್ಟುಕೊಳ್ಳುತ್ತಾರೆ. ಅದರಲ್ಲಿ ಒಂದು ಸಾವಿರ ಪಾಸ್‌ಗಳನ್ನು ಮಾತ್ರ ಸರ್ಕಾರಕ್ಕೆ ಕೊಡುವಂಥದ್ದು. ಅದರಲ್ಲಿ 250 ಪಾಸ್‌ಗಳು ಬೆಂಗಳೂರಿಗೆ ಬರುತ್ತವೆ. ಕ್ಷೇತ್ರದ ಶಾಸಕರುಗಳಿಗೆ ಹತ್ತು ಪಾಸ್‌ಗಳನ್ನು ಕೊಡುತ್ತಾರೆ ಮತ್ತು ಯಾರ್ಯಾರು ಪತ್ರಗಳನ್ನು ಕೊಟ್ಟಿದ್ದಾರೆ ಅವರಿಗೆ ಒಂದು, ಎರಡು ಮತ್ತು ಮೂರು ಎಂದು ಕೊಡುತ್ತಿದ್ದಾರೆ.

**ಸಭಾಪತಿಯವರು:-** ಇನ್ನು ಯಾರಿಗೂ ಸಹ ಪಾಸ್‌ಗಳನ್ನು ಕೊಟ್ಟಿಲ್ಲ.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಖಂಡಿತವಾಗಿ ಕೊಡುವಂಥದ್ದು ಆಗಬೇಕು.

**ಸಭಾಪತಿಯವರು:-** ನೋಡೋಣ ಈ ವಿಷಯ ಸಚಿವರ ಗಮನಕ್ಕೆ ಬಂದಿದೆ. ಮಾನ್ಯ ಪುಟ್ಟಣ್ಣನವರೆ ತಾವು ದಯವಿಟ್ಟು ಕುಳಿತುಕೊಳ್ಳಿ. ಬೆಳಗ್ಗೆ ನಿಮ್ಮೆಲ್ಲರ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಸಿಕ್ಕಾಗ ನಾನು ಅವರಿಗೆ ನೇರವಾಗಿ ಹೇಳಿದ್ದೇನೆ. ಪಾಸ್‌ಗಳನ್ನು ಎಲ್ಲರೂ ಕೇಳುತ್ತಿದ್ದಾರೆ, ದಯಮಾಡಿ ಪಾಸ್‌ಗಳನ್ನು ಕೊಡಿಸಿಕೊಡಬೇಕೆಂದು. ನಾನು ಮಾನ್ಯ ಮುಖ್ಯಮಂತ್ರಿಗಳ ಬಳಿ ಪಾಸುಗಳನ್ನು ಕೇಳಿದಾಗ, ಮಾನ್ಯ ಸದಸ್ಯರಾದ ಬಸವರಾಜ ಹೊರಟ್ಟಿಯವರು, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು, ಐವನ್ ಡಿ'ಸೋಜಾ ಹಾಗೂ ನಮ್ಮ ಕಾನೂನು ಮಂತ್ರಿಗಳು ಸಹ ಇದ್ದರು. ಆಗ ಮುಖ್ಯಮಂತ್ರಿಗಳು ಹೇಳಿದರು, ಅವರ ಹೆಸರನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿ, ಆ ಮೂಲಕ ತರಿಸಿಕೊಳ್ಳಿ ಎಂದು ಹೇಳಿದ್ದಾರೆ. ನಮ್ಮ ಕಾನೂನು ಮಂತ್ರಿಗಳು ಇದನ್ನು follow up ಮಾಡುತ್ತಾರೆ. Let us see, what best could be done.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಒಂದು ವಿಷಯವನ್ನು ಹೇಳುತ್ತೇನೆ, ದಯಮಾಡಿ ಎಲ್ಲಾ ರೀತಿಯ ಪಾಸುಗಳ ಬಗ್ಗೆ ಭಿಕ್ಷೆ ಬೇಡುವಂತಹ ಕೆಲಸ ಆಗಬಾರದು. ಈಗ ಕ್ರಿಕೆಟ್‌ಗೆ ಪಾಸ್ ಕೇಳುತ್ತಾರೆ ಮತ್ತೊಂದಕ್ಕೆ ಪಾಸ್ ಕೇಳುತ್ತಾರೆ.

**ಶ್ರೀ ಎಂ.ಎ.ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಪಾಸ್‌ಗಳನ್ನು ಕೇಳಲೇಬೇಕು. ಏಕೆಂದರೆ ಅದಕ್ಕೆ ಸರ್ಕಾರದಿಂದ ಹಣವನ್ನು ಕೊಟ್ಟಿರುವುದು. ಸರ್ಕಾರ 250 ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡಿದೆ. ಅವರು ಪಾಸುಗಳನ್ನು ಕೊಡಲೇಬೇಕು. ಅದು ಏನು ಭಿಕ್ಷೆ ಬೇಡುವಂಥದ್ದಲ್ಲ, ಅದನ್ನು ಕೊಡುವಂಥದ್ದಾಗಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ನನ್ನ ಅಭಿಪ್ರಾಯವನ್ನು ಹೇಳಬಾರದೆ? ನಾನು ಒಂದು ವಿಚಾರವನ್ನು ಹೇಳುತ್ತೇನೆ. ನಾವೆಲ್ಲರೂ ಶಾಸಕರಾಗಿ ಪಾಸ್‌ಗಳನ್ನು ಕೇಳಬಾರದು. ದಯಮಾಡಿ ಪಾಸ್‌ಗಳ ಬಗ್ಗೆ ಸದನದಲ್ಲಿ ಯಾರೂ ಚರ್ಚೆ ಮಾಡಬಾರದು.

**ಸಭಾಪತಿಯವರು:-** ಆ ಪಾಸ್‌ಗಳು ತಾನಾಗಿಯೇ ಬರಬೇಕು, ಅದನ್ನು ನಾವು ಕೇಳಬಾರದು, ಇದರ ಬಗ್ಗೆ ಯಾರು ಚರ್ಚೆ ಮಾಡಬಾರದು. I agree.

**ಆ)ವಿಧಾನಸಭೆಯಿಂದ ಅಂಗೀಕೃತವಾಗಿ ಬಂದಂತಹ ವಿಧೇಯಕಗಳ ಮಂಡನೆ**

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡೆವಳಿಕೆಯ ನಿಯಮ 104ರ ಮೇರೆಗೆ ವಿಧಾನಸಭೆಯು ದಿನಾಂಕ 21.02.2018ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆ ಎಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

- ಕರ್ನಾಟಕ ಆಧಾರ್ ಹಣಕಾಸು ಮತ್ತು ಇತರೆ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ ವಿಧೇಯಕ 2018.
- ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವಿಶ್ವವಿದ್ಯಾನಿಲಯ ವಿಧೇಯಕ 2018.
- ಖಾಜಾ ಬಾಂದನವಾಜ್ ವಿಶ್ವವಿದ್ಯಾನಿಲಯ ವಿಧೇಯಕ 2018.

**(ಮುಂದು...)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(178)21.02.2018-04.10-ಎಲ್‌ಎಲ್/ಬಿಎನ್‌ಎಸ್ **ಸಭಾಪತಿಯವರ ಉಪಸ್ಥಿತಿ**

**ಇ)ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳ ನಿಯಮಗಳಿಗೆ ಮಧ್ಯಂತರ ವರದಿಯಲ್ಲಿ ಸಮಿತಿಯು ಮಾಡಿರುವ ತಿದ್ದುಪಡಿಗಳು**

**ಪರ್ಯಾಲೋಚನಾ ಪ್ರಸ್ತಾಪ**

**ಶ್ರೀ ಟಿ.ಬಿ. ಜಯಚಂದ್ರ(ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಮಂಡಲ ಜಂಟಿ ನಿಯಮಾವಳಿ ಸಮಿತಿಯು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಾವಳಿಗಳ ನಿಯಮಗಳಿಗೆ ಮಧ್ಯಂತರ ವರದಿಯಲ್ಲಿ ಸಮಿತಿಯು ಮಾಡಿರುವ ಶಿಫಾರಸ್ಸುಗಳನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:-** ವಿಧಾನಮಂಡಲದ ಜಂಟಿ ನಿಯಮಾವಳಿಗಳ ಸಮಿತಿಯು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಾವಳಿಗಳ ನಿಯಮಗಳಿಗೆ ಮಧ್ಯಂತರ ವರದಿಯಲ್ಲಿ ಮಾಡಿರುವ ಶಿಫಾರಸ್ಸುಗಳನ್ನು ಪರ್ಯಾಲೋಚಿಸಬೇಕೆಂಬ ಪ್ರಸ್ತಾವನೆಯನ್ನು ಮಂಡಿಸಲಾಯಿತು. ಈ ಬಗ್ಗೆ ಮಾನ್ಯ ಸಚಿವರು ಏನಾದರೂ ಹೇಳುವುದಿದ್ದರೆ ಹೇಳಬಹುದು.

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಕರ್ನಾಟಕ ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯ ಜಂಟಿ ನಿಯಮಾವಳಿ ಸಮಿತಿ ವತಿಯಿಂದ ಒಂದು ವರದಿ ಕೂಡ ಬಂದಿತ್ತು. ಹಿಂದಿನ ಅಧಿವೇಶನದಲ್ಲಿ ಇದು ಮಂಡನೆ ಕೂಡ ಆಗಿದೆ. ಈಗಾಗಲೇ ವಿಧಾನ ಸಭೆಯಲ್ಲಿ ಈ ಮಸೂದೆ ಅಂಗೀಕಾರವಾಗಿದೆ. ಇದನ್ನು ಚರ್ಚೆ ಮಾಡುವ ಪೂರ್ವಭಾವಿಯಲ್ಲಿ ಜಂಟಿ ಸಲಹಾ ಸಮಿತಿಯಲ್ಲಿ ಇರತಕ್ಕಂತಹ ಜಂಟಿ ಸಲಹಾ ಸಮಿತಿ ಸದಸ್ಯರೊಂದಿಗೆ ಸುಧೀರ್ಘವಾಗಿ ಚರ್ಚೆ ಮಾಡಿ, ಅದಕ್ಕೆ ಅನುಮೋದನೆ ಕೊಟ್ಟಿದೆ. ಈಗಾಗಲೇ ಕೆಳಮನೆಯಲ್ಲಿ ಈ ವಿಧೇಯಕ ಪಾಸ್ ಆಗಿದೆ. ಅದೇ ರೀತಿಯಲ್ಲಿ ಮೇಲ್ಮನೆಯಲ್ಲಿ ಈ ವಿಧೇಯಕವನ್ನು ಮಂಡನೆ ಮಾಡುತ್ತಿದ್ದೇವೆ. ಅದಕ್ಕೆ ಎಲ್ಲಾ ಸದಸ್ಯರು ಒಪ್ಪಿಗೆ ಕೊಡಬೇಕೆಂದು ಕೋರುತ್ತೇನೆ.

ಇದರಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದೆ. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಈ ಮೊದಲು ಏನಾಗಿತ್ತೆಂದರೆ, **'ವಿಧಾನ ಪರಿಷತ್ತಿನ ಆವರಣ'** ಎಂದು ಹೇಳಿದರೆ, ಬೆಳಗಾವಿ ಸುವರ್ಣಸೌಧ ಸೇರಿರಲಿಲ್ಲ. ಈಗ ಅದೊಂದು ಸೇರಿದೆ. ಅದೊಂದು ಸಣ್ಣ ತಿದ್ದುಪಡಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದೇ ರೀತಿಯಾಗಿ, **'ಉಪವೇಶನ'** ಎಂದು ಹೇಳಿದರೆ ಸದನವು ಪ್ರಾರಂಭವಾದಾಗಿನಿಂದ ಸದನವನ್ನು ಮುಂದೂಡುವವರೆಗೂ ಯಾವುದೇ ದಿನದಂದು ಸದನದ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗಿ ಸದನದಲ್ಲಿ ಸದಸ್ಯರು ಉಪವೇಶನ ನಡೆಸುವುದು ಎನ್ನತಕ್ಕಂತಹ ಒಂದು ತಿದ್ದುಪಡಿ ಇದೆ.

**'ಸಭೆಯ ಗಣಪೂರ್ತಿ'** ಎಂದರೆ, ಸದನದ ಒಟ್ಟು ಸದಸ್ಯರ ಸಂಖ್ಯೆಯ ಹತ್ತನೆಯ ಒಂದು ಭಾಗದ ಸದಸ್ಯರು ಅಥವಾ ಸದನದ 10 ಮಂದಿ ಸದಸ್ಯರು ಯಾವುದು ಹೆಚ್ಚೋ ಅದು, ಆ ಸದನದ ಸಭೆಗೆ ಬೇಕಾದ ಕೋರಂ ಆಗಿರತಕ್ಕದ್ದು ಎನ್ನುವಂತಹ ತಿದ್ದುಪಡಿ.

**'ಶೂನ್ಯವೇಳೆ'** ಎಂದರೆ,

**"Zero Hour"** means the period immediately after the Question Hour, laying of Secretary's report, papers to be laid on the table and committee's reports, if any, and before the list of business of the day is entered upon, ಎನ್ನತಕ್ಕಂತಹ ಒಂದು ತಿದ್ದುಪಡಿ.

ಅದೇ ರೀತಿಯಾಗಿ,

**'ಪರಿಷತ್ತಿನ ಉಪವೇಶನಗಳು'** ಸಭಾಪತಿಯವರು ಅನ್ಯಥಾ ನಿರ್ದೇಶಿಸಿದ ಹೊರತು ಸದನದ ಉಪವೇಶನಗಳು ಸಾಮಾನ್ಯವಾಗಿ ಬೆಳಗ್ಗೆ 10.30 ಘಂಟೆಯಿಂದ ಮಧ್ಯಾಹ್ನ 14.00 ಘಂಟೆಯವರೆಗೆ(ಬೆಳಗಿನ ಉಪವೇಶನ) ಮತ್ತು ಮಧ್ಯಾಹ್ನ 15.00 ಘಂಟೆಯಿಂದ ಸಂಜೆ 18.00 ಘಂಟೆಯವರೆಗೆ(ಮಧ್ಯಾಹ್ನದ ಉಪವೇಶನ) ನಡೆಯತಕ್ಕದ್ದು ಎನ್ನತಕ್ಕಂತಹ ಒಂದು ತಿದ್ದುಪಡಿ. ಅಂದರೆ, ಬೆಳಗ್ಗೆ 10.30 ಘಂಟೆ ಎಂದು ತಿದ್ದುಪಡಿ ಆಗಿದೆ.

**ಸಭಾಪತಿಯವರು:-** 11.00 ಘಂಟೆ ಎಂದು ಇದ್ದ ಸಮಯವನ್ನು 10.30 ಘಂಟೆ ಎಂದು ತಿದ್ದುಪಡಿ ಮಾಡಲಾಗಿದೆ. ಇದನ್ನು ವಿಧಾನ ಸಭೆಯಲ್ಲಿಯೂ ಸಹ ಮಾಡಿದ್ದಾರೆ. ಅದರಂತೆ, ನಾವು ಸಹ 10.30 ಘಂಟೆ ಮಾಡಿದ್ದೇವೆ.

**'ನಿಯಮ-35'** ರಲ್ಲಿ ಅಧಿವೇಶನಗಳ ನಡುವಿನ ಅವಧಿಯಲ್ಲಿ ಸದಸ್ಯರುಗಳು ನೀಡಲಾದ ಪ್ರಶ್ನೆಗಳನ್ನು ಸದಸ್ಯರು ಸೂಚಿಸಿದ ಆದ್ಯತೆಗನುಗುಣವಾಗಿ ಪರಿಗಣಿಸತಕ್ಕದ್ದು, ಆದ್ಯತೆಯನ್ನು ಸೂಚಿಸದ ಪಕ್ಷದಲ್ಲಿ, ಸೂಚನಾಪತ್ರ ಸ್ವೀಕರಿಸಿದ ಸಮಯದ ಆಧಾರದ ಮೇಲೆ ಪರಿಗಣಿಸತಕ್ಕದ್ದು. ಅಂದರೆ, ಯಾವಾಗ ಬೇಕಾದರೂ ಪ್ರಶ್ನೆ ಕೊಡಬಹುದು.

**'ನಿಯಮ 37'** ರಲ್ಲಿ;

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**After the Rule-37 the following shall be inserted as 37(A)**

**"Rule-37(A) Reply is compulsory."**

Replies to all the Questions listed for Oral and Written Answers shall be furnished at least by 15 hours on the day prior to the date on which the question is listed for answer.

Provided that If the House is adjourned sine die, for any reason, before the actual date of adjournment as per the provisional programme, the questions admitted either for oral or written answers for that period shall be deemed as tabled on the last day of closure of the House, and the answers to the same shall, unless otherwise permitted be furnished to the Karnataka Legislative Council Secretariat within 15 days from the originally declared closure of the session as per the bulletin for onward transmission to Members.

ಅಂದರೆ, ಉತ್ತರವನ್ನು ಕಡ್ಡಾಯವಾಗಿ ಒದಗಿಸಬೇಕು ಎನ್ನುವಂಥದ್ದು.

ಶೂನ್ಯ ವೇಳೆ ಈ ಮೊದಲು ಇರಲಿಲ್ಲ. ಅದನ್ನೂ ಕೂಡ ಸೇರಿಸಿದ್ದೇವೆ. ಈ ಬಗ್ಗೆ ವಿವರಣೆ ನೀಡಬೇಕೇ?

**ಸಭಾಪತಿಯವರು:-** ಬೇಡ. ನಿಯಮ-59 ಅನ್ನು ಓದಿ. ಅದನ್ನು ಓದಿ ಹೇಳಲೇಬೇಕು.

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಕೆಲವೊಂದು ವಿಷಯಗಳನ್ನು drop ಮಾಡಿದ್ದೇವೆ. ಅವುಗಳನ್ನು ಚರ್ಚೆ ಸಹ ಮಾಡಿದ್ದೆವು. ಅದರಂತೆ, "Karnataka Legislature Committee on Safeguard of Land, Water and official Language of the State" ಎಂಬ ಪ್ರಸ್ತಾಪ ಇತ್ತು, ಅದು ಬೇಡ ಎಂದು ತೀರ್ಮಾನವಾಗಿದೆ. ಅದನ್ನು ಬಿಟ್ಟು ...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಸದರಿ ಪ್ರಸ್ತಾಪವನ್ನು ಏತಕ್ಕೆ ಕೈಬಿಟ್ಟಿರುತ್ತಾರೆ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಪಬ್ಲಿಕ್ ಅಕೌಂಟ್ಸ್ ಕಮಿಟಿ ಇದ್ದ ರೀತಿಯಲ್ಲಿ "Karnataka Legislature Committee on Safeguard of Land, Water and official Language of the State" ಎಂಬ ಒಂದು ಕಮಿಟಿ ರಚನೆ ಮಾಡಬೇಕೆಂಬ ಶಿಫಾರಸ್ಸು ಇತ್ತು, ನಂತರ ಅದು ಬೇಡವೆಂದು BAC (Business Advisory Committee) ಯಲ್ಲಿ ತೀರ್ಮಾನವಾಯಿತು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯ ಬಗ್ಗೆ ಆಗಿರುವ ತಿದ್ದುಪಡಿಯನ್ನು ಸದನಕ್ಕೆ ವಿವರವಾಗಿ ತಿಳಿಸಬೇಕು.

**ಸಭಾಪತಿಯವರು:-** ಈ ಮೊದಲು ಶೂನ್ಯವೇಳೆಯಲ್ಲಿ ಇದ್ದ 5 ವಿಷಯಗಳ ಬದಲಾಗಿ 10 ವಿಷಯಗಳನ್ನು ಪ್ರಸ್ತಾಪ ಮಾಡಲು ತಿದ್ದುಪಡಿ ಮಾಡಲಾಗಿದೆ.

**(ಗೊಂದಲ)**

**ಶ್ರೀಮತಿ ಮೋಟಮ್ಮ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಕೇಳಿದಂತಹ ಪ್ರಶ್ನೆಗಳಿಗೆ ಸಂಬಂಧಪಟ್ಟ ಸಚಿವರು ಎರಡು ದಿನಗಳಲ್ಲಿ ಉತ್ತರ ನೀಡದೇ ಇದ್ದರೆ, ಅವರ ವಿರುದ್ಧ ಏನು ಕ್ರಮ ಇದೆ?

**ಸಭಾಪತಿಯವರು:-** ಉತ್ತರ ಕೊಡದೇ ಇದ್ದರೆ ಎನ್ನುವುದು ಬೇಡವೇ ಬೇಡ, ಉತ್ತರ ಕೊಡಬೇಕು ಅಷ್ಟೇ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಪುಟ ಸಂಖ್ಯೆ:14, ನಿಯಮ 58-ಬಿ ನಲ್ಲಿ ...

**(ಗೊಂದಲ)**

**ಶ್ರೀ ಕೆ.ಬಿ. ಶಾಣಪ್ಪ(ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, in Parliament, there is a limit for number of words in the notice of Zero Hour. 100 words ಇದ್ದರೆ ಮಾತ್ರ it should be received otherwise it has to be rejected ಎಂಬುದಾಗಿ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ತಾವು ಹೇಳುವುದನ್ನು ತಿದ್ದುಪಡಿಯಲ್ಲಿ ಸೇರಿಸಲಾಗಿದೆ. ತಾವು ಹೇಳುವುದು ಸರಿಯಿದೆ. ಶೂನ್ಯವೇಳೆಯ ವಿಷಯವನ್ನು ಓದುವುದಕ್ಕೆ 3 ನಿಮಿಷಕ್ಕಿಂತಲೂ ಜಾಸ್ತಿ ಸಮಯ ಕೊಡುವ ಹಾಗಿಲ್ಲವೆಂದು ತಿದ್ದುಪಡಿ ಮಾಡಲಾಗಿದೆ.

**ಶ್ರೀ ಕೆ.ಬಿ. ಶಾಣಪ್ಪ:-** ಮಾನ್ಯ ಸಭಾಪತಿಯವರೇ, ಸಂಸತ್ತಿನಲ್ಲಿ ಶೂನ್ಯವೇಳೆಯ ಸೂಚನಾ ಪತ್ರವು 100 ಪದಗಳು ಮಾತ್ರ ಇರಬೇಕೆಂದು ನಿಗದಿ ಮಾಡಿದ್ದಾರೆ.

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಿಯಮ 58-ಬಿ ನಲ್ಲಿ ಶೂನ್ಯ ವೇಳೆಯ ಸೂಚನಾ ಪತ್ರವು 150 ಪದಗಳಿಗೆ ಮೀರತಕ್ಕದ್ದಲ್ಲ ಮತ್ತು ಯಾವ ದಿನಾಂಕದಂದು ಪ್ರಸ್ತಾಪಿಸಲು ಉದ್ದೇಶಿಸಲಾಗಿದೆಯೋ ಆ ದಿನದ ಉಪವೇಶನವು ಪ್ರಾರಂಭವಾಗುವುದಕ್ಕೆ ಒಂದು ಘಂಟೆ ಮುಂಚಿತವಾಗಿ ಸದಸ್ಯರು ಲಿಖಿತ ಮೂಲಕ ಖುದ್ದಾಗಿ ಅಥವಾ ಅವರ ಪ್ರತಿನಿಧಿಯ ಮೂಲಕ ಸಭಾಪತಿಯವರಿಗೆ ಅಥವಾ ಅವರ ಕಛೇರಿಗೆ ನೀಡತಕ್ಕದ್ದು, ಜೊತೆಗೆ ಒಬ್ಬ ಸದಸ್ಯರು ಒಂದು ದಿನಕ್ಕೆ ಒಂದಕ್ಕಿಂತ ಹೆಚ್ಚಿನ ಸೂಚನೆಯನ್ನು ನೀಡತಕ್ಕದ್ದಲ್ಲ ಎಂದು ತಿದ್ದುಪಡಿ ಮಾಡಲಾಗಿದೆ.

**(ಗೊಂದಲ)**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಚಿವರುಗಳು ಕಡ್ಡಾಯವಾಗಿ ಉತ್ತರ ಕೊಡದೇ ಹೋದರೆ ಏನು ಕ್ರಮ ಎಂದು ನಿಯಮ ತಿದ್ದುಪಡಿ ಮಾಡಬೇಕು, ಇಲ್ಲವಾದರೆ ಇದು ineffective. ಯಾವುದೇ ಪ್ರಯೋಜನಕ್ಕೆ ಬರುವುದಿಲ್ಲ.

**ಸಭಾಪತಿಯವರು:-** ಇದು ಶೂನ್ಯವೇಳೆಗೆ ಸಂಬಂಧಿಸಿದ ವಿಷಯವಲ್ಲ. ಮಾನ್ಯ ಸಚಿವರು ಮುಂದೆ ಓದುತ್ತಾರೆ.

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೇ, **'ನಿಯಮ-58-ಸಿ'**: ಶೂನ್ಯವೇಳೆಯ ಸೂಚನಾ ಪತ್ರದ ಮೇಲಿನ ಭಾಷಣವು, ಸಭಾಪತಿಯವರ ಅನುಮತಿಯನ್ನು ಹೊರತುಪಡಿಸಿ, ಮೂರು ನಿಮಿಷಗಳಿಗೆ ಮೀರತಕ್ಕದ್ದಲ್ಲ.

**'ನಿಯಮ-58-ಬಿ'** ನಲ್ಲಿ ಕಾರ್ಯಕಲಾಪ ನಡೆಯುವ ದಿನದಲ್ಲಿ ಅಂತಹ 10 ಸೂಚನಾ ಪತ್ರಗಳಿಗೆ ಮಾತ್ರ ಅವಕಾಶ ನೀಡತಕ್ಕದ್ದು ಹಾಗೂ ಅದರಲ್ಲಿ 05 ಸೂಚನಾ ಪತ್ರಗಳನ್ನು ಆದ್ಯತೆಯ ಮೇರೆಗೆ ಹಾಗೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

೦5 ಸೂಚನಾ ಪತ್ರಗಳನ್ನು ಸಭಾಪತಿಯವರ ವಿವೇಚನೆ ಮೇರೆಗೆ ತೆಗೆದುಕೊಳ್ಳತಕ್ಕದ್ದು. ಶೂನ್ಯವೇಳೆಯಲ್ಲಿ ಇಷ್ಟು ತಿದ್ದುಪಡಿ ಇರತಕ್ಕಂಥದ್ದು.

ಇದಕ್ಕೆ ಸದನ ಒಪ್ಪಿಗೆ ಕೊಡಬೇಕೆಂದು ಕೋರುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ ಮಾನ್ಯ ಸಚಿವರು ‘ನಿಯಮ-59’ ಅನ್ನು ಓದುತ್ತಾರೆ.

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೇ, ನಿಯಮ 59

## Chairman’s consent necessary to make motion:-

**Rule 59**.Subject to the provisions of these rules, a motion for an adjournment of the business of the House for the purpose of discussing a definite matter of urgent public importance only when there is failure on the part of Government to perform the duties enjoined by the Constitution and the law shall be made with the consent of the Chairman **after Question Hour and Zero Hour.**

(ಮುಂದುವರೆದಿದೆ...)

(179) 21.02.2018/ವೈಎಲ್-ಬಿಎನ್ಎಸ್/4.20 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಟಿ.ಬಿ.ಜಯಚಂದ್ರ(ಮುಂದು):-** ಇಷ್ಟಾದರೂ ಸಹ preliminary submission ಇರಬಾರದು ಎಂಬುದಾಗಿದೆ.

**ಶ್ರೀ ಶರಣಪ್ಪ ಮಟ್ಟೂರ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇದರಲ್ಲಿ, we have constituted our own law to discuss about these issues. In spite of that we have taken a decision in the BAC (Business Advisory Committee). Therefore, after hearing preliminarily for five minutes...

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಸಭಾಪತಿಯವರು:–** ಇನ್ನು ಮುಂದೆ ಅದೆಲ್ಲಾ ಇರುವುದಿಲ್ಲ. This law comes into force.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಅದಕ್ಕಾಗಿಯೇ ದಯಮಾಡಿ, I want to know with regard to violation of Rule 59 of the Rules of Procedure and Conduct of Business in the Karnataka Legislative Council, in view of the decision taken in the B.A.C. Hon'ble Speaker used to grant about 10 to 15 minutes time by exercising his discretion to discuss about the submission made by opposition party. Whether will it be continued here onwards?

**Mr.CHAIRMAN**:- No.

**ಶ್ರೀ ಶರಣಪ್ಪ ಮಟ್ಟೂರ:-** ಮಾನ್ಯ ಸಭಾಪತಿಯವರೇ, ತಾವು ಹೇಳಿದ ಹಾಗೆ ಇದ್ದರೆ, I am very greatful to you sir.

**ಸಭಾಪತಿಯವರು:–** ಅದಕ್ಕಾಗಿಯೇ ತಿದ್ದುಪಡಿಯನ್ನು ಮಾಡಲಾಗುತ್ತಿದೆ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ಹೌದು ಮಾಡಬೇಕು. I really welcome the proposed amendment to Rule 59. It is a very good proposal.

**ಸಭಾಪತಿಯವರು:-** ಈಗ specific ಆಗಿ ಇದೆ. Now, this will become the law. ಹಳೆಯದೆಲ್ಲಾ ತೆಗೆದು ಹಾಕಲಾಗುತ್ತದೆ. Whatever happened has happened. ಇನ್ನು ಮುಂದೆ ಇದೆ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, ನಾನು ಹೇಳುವುದು, I am not talking about the past. Irrespective of the urgency of the matter, mandatorily it should be taken only after the question hour.

**Mr. CHAIRMAN** :- If the Members of this House approve it, this will become law.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**Sri SHARANAPPA MATTUR**:- Much obliged.

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಅನುಮಾನವೇನೆಂದರೆ, ಇಷ್ಟೆಲ್ಲಾ ಆದ ಮೇಲೆಯೂ ಪ್ರಸ್ತಾಪ ಮಾಡಿದರೆ ಹೇಗೆ ರೆಕಾರ್ಡ್‌ಗೆ ಹೋಗುವುದಿಲ್ಲ ಎಂಬುದಾಗಿದೆ.

**ಶ್ರೀ ಶರಣಪ್ಪ ಮಟ್ಟೂರ:–** ಮಾನ್ಯ ಸಭಾಪತಿಯವರೇ, this was my apprehension. I really appreciate that the Hon'ble Law Minister understood my apprehension and made a convincing statement. ನನಗೆ ಅದೇ ಅನುಮಾನವಿದೆ. ತಾವೂ ಸಹ 5 ನಿಮಿಷ ಮಾನ್ಯ ಸದಸ್ಯರುಗಳು ಮಾತನಾಡುವುದನ್ನು ಕೇಳೋಣ ಎನ್ನತಕ್ಕಂಥ ವ್ಯವಸ್ಥೆ ಬೇಡ. ಆ ರೀತಿ ಮಾಡಬೇಕೆನ್ನುವುದೇ ನನ್ನ ಆಸೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ವಾಸ್ತವವಾಗಿ ಹಳೆಯ ನಿಯಮಾವಳಿಯನ್ನು ಓದಿದ್ದೇವೆ. ಅದರಲ್ಲಿಯೂ ಸಹ exactly same implication ಇತ್ತು. ಆದರೆ, by convention, preliminary submission ಗೆ 5 ನಿಮಿಷ ಎಂದೆಲ್ಲಾ ಮಾಡಲಾಗಿತ್ತು. ಹಳೆಯ ನಿಯಮದಲ್ಲಿರುವುದನ್ನು ಈ ತಿದ್ದುಪಡಿಯಲ್ಲಿಯೂ ಉಲ್ಲೇಖಿಸಿದ್ದೇವೆ. ಹಳೆಯ ನಿಯಮವನ್ನು ತಿದ್ದುಪಡಿ ಮಾಡುವುದಕ್ಕೆ ಅವಕಾಶ ಇರಲಿಲ್ಲ. ಆದರೆ, ಯಾಕೋ BAC ನಲ್ಲಿ ಪ್ರಾರಂಭದಲ್ಲಿ 10 ನಿಮಿಷ, 5 ನಿಮಿಷ ಪೂರ್ವಭಾವಿ ಚರ್ಚೆಗೆ ಅವಕಾಶ ಕೊಡಬೇಕೆಂದು ಇತ್ತು.

**ಸಭಾಪತಿಯವರು:–** ಮಾನ್ಯ ಕೆ.ಬಿ.ಶಾಣಪ್ಪನವರು ಸಚಿವರಿಗೆ ನಮಸ್ಕಾರ ಮಾಡಿ ಒಂದು ಮಾತನ್ನು ಹೇಳಿದರು. ನಾಳೆಯಿಂದ ಇವತ್ತು ಏನು ತಾವೆಲ್ಲರೂ ಒಪ್ಪಿಗೆ ನೀಡುತ್ತೀರಿ ಅದು ಕಾರ್ಯಗತವಾಗುತ್ತದೆ. ಇದರಲ್ಲಿ ಯಾವುದೇ ಬದಲಾವಣೆಗಳು ಇಲ್ಲ. ಹಾಗಾದರೆ, ಹಳೆಯದರ ಮೇಲೆ ಏಕೆ ಚರ್ಚೆ ಮಾಡುವುದು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ, ತಮಗೆ ಒಂದು submission ಮಾಡುವುದೇನೆಂದರೆ, ಹಳೆಯ ನಿಯಮ ಇತ್ತು.....

**ಸಭಾಪತಿಯವರು:–** ಈಗ ಅದೆಲ್ಲಾ ತೆಗೆದು ಹಾಕಲಾಗಿದೆ. ಹಳೆಯದನ್ನೇ ಮಾಡಲಾಗಿದೆಯೋ ಅಥವಾ ಹೊಸದಾಗಿಯೇ ಮಾಡಲಾಗಿದೆಯೋ ಅದೆಲ್ಲಾ ಬೇಡ. ತಾವೆಲ್ಲರೂ ಏನು ನಿಯಮಕ್ಕೆ ತಿದ್ದುಪಡಿ ಮಾಡುತ್ತೀರಿ ಅದರಂತೆ ನಡೆಯುತ್ತದೆ. ಹಳೆಯದರ ಬಗ್ಗೆ ಚರ್ಚೆ ಬೇಡ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಎಸ್ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ನಿಯಮದ ಮೇಲೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಈಗ ಏನು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿಗಳನ್ನು ತರಲಾಗುತ್ತಿದೆ ಅದನ್ನು ಸ್ವಾಗತ ಮಾಡುತ್ತೇನೆ. ಆದರೆ, ದಿನನಿತ್ಯ ಪತ್ರಿಕೆಯಲ್ಲಿ ವಿಧಾನಮಂಡಲ ಮತ್ತು P.W.D. (Public Works Department) ನವರು maintenance ಮಾಡುವ ವಿಚಾರಗಳೇನು ಬರುತ್ತಿದೆ. ಇದರ ಬಗ್ಗೆ ಏನು ಮಾಡುತ್ತೀರಿ? ಇದೆಲ್ಲವೂ ವಿಧಾನ ಪರಿಷತ್ತು ಮತ್ತು ವಿಧಾನಸಭೆಯ ಚರ್ಚೆಗಳು ಆಗುವುದಕ್ಕೆ ಬೇಕು. ಅದನ್ನು ಬಿಟ್ಟು ಬೆಳಗಾವಿಯ ಸುವರ್ಣಸೌಧ, ವಿಕಾಸಸೌಧ ಕಟ್ಟಡಗಳಿಗೆ ಹಚ್ಚುವ ಸುಣ್ಣ-ಬಣ್ಣದ ವ್ಯವಹಾರವನ್ನು ವಿಧಾನಮಂಡಲದ ಅಧೀನಕ್ಕೆ ವಹಿಸಬೇಕೆಂದು ಮಾಡಿದರೆ ಹೇಗೆ?

**ಸಭಾಪತಿಯವರು:-** ಅದು ಯಾವುದು ಸದರಿ ನಿಯಮದಲ್ಲಿ ಇಲ್ಲ. ಈಗ ಮಾಡಿರುವ ತಿದ್ದುಪಡಿ ಏನೆಂದರೆ,...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಸದರಿ ನಿಯಮಾವಳಿಯಲ್ಲಿ ಬಂದಿರುವುದಿಲ್ಲ. ಆದರೆ, ನಾನು ಹೇಳುವುದೇನೆಂದರೆ, ಇದಕ್ಕೂ ಏನಾದರೂ ಒಂದು ನಿಯಮವನ್ನು ತರಬೇಕೆಂದು ಹೇಳುತ್ತೇನೆ. "ಸಭಾಪತಿಯವರ ಕಛೇರಿಗೂ P.W.D. ಗೂ ತಿಕ್ಕಾಟ. ವಿಧಾನಸೌಧ ಕಾಮಗಾರಿಯಲ್ಲಿ ಹಸ್ತಕ್ಷೇಪ ಎಂದೆಲ್ಲಾ ಪತ್ರಿಕೆಯಲ್ಲಿ ವರದಿಯಾಗಿದೆ." ಇದೆಲ್ಲಾ ನಮಗೆ ಏಕೆ ಬೇಕು? ಸದರಿ ನಿಯಮಾವಳಿಯಲ್ಲಿ ತಿದ್ದುಪಡಿಗಳು ಆಗಿರುವುದು ಸರಿಯೋ, ತಪ್ಪೋ ಎಂಬುದು ಗೊತ್ತಿಲ್ಲ. ಆದರೆ, ಇದೆಲ್ಲಾ ಏಕೆ ಬೇಕು? ವಿಧಾನಮಂಡಲವನ್ನು ನಡೆಸುವುದು ಇಲ್ಲಿಯ ಕಲಾಪಗಳು, ಸಮಸ್ಯೆಗಳು ಬಗೆಹರಿಸುವುದಕ್ಕಾಗಿ. ಸುಣ್ಣ-ಬಣ್ಣ ಹಚ್ಚುವುದೆಲ್ಲಾ ನಮಗೆ ಏಕೆ ಬೇಕು?

**ಸಭಾಪತಿಯವರು:-** ಹೌದು ತಾವು ಹೇಳುವುದು ಸರಿ. ಅದೆಲ್ಲಾ ನಮ್ಮ ಕೆಲಸವಾಗುವುದಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಇದು ತಪ್ಪು. ಇವತ್ತಿನವರೆಗೂ P.W.D. ಯವರಿಗೆ ಸಂಬಂಧಿಸಿತ್ತು. ಆದರೆ, ಇವತ್ತಿನ ದಿನ ವಿಧಾನಮಂಡಲದ ಸಭಾಪತಿಯವರ ಮತ್ತು ಸಭಾಧ್ಯಕ್ಷರ ಹೆಸರು, ಬೇರೆಯವರ ಹೆಸರುಗಳು ಪತ್ರಿಕೆಯಲ್ಲಿ ಬರುತ್ತಿದೆ. ಇದರಿಂದಾಗಿ P.W.D. ಸಚಿವರು ಬಂದು ಮತ್ತೆ ವಾದ ಮಾಡಿ, ಕಾಯ್ದೆ ಮಾಡುತ್ತಾರೆ. ಅದನ್ನು ಮತ್ತೆ ಪತ್ರಿಕೆಯಲ್ಲಿ ವರದಿಯಾಗುತ್ತದೆ. ಆದರೆ, ಮಾನ-ಮರ್ಯಾದೆ ಏನಾಗುತ್ತದೆ? ಇದಕ್ಕೇನಾದರೂ ಮಾಡಬೇಕು. ವಿಧಾನಸಭೆ ಮತ್ತು ವಿಧಾನಪರಿಷತ್ತಿನವರು ಯಾರೇ ಇರಲಿ ಸುಣ್ಣ-ಬಣ್ಣ ಹಚ್ಚುವ ಕೆಲಸ ನಮ್ಮದಲ್ಲ. P.W.D. ಯವರು ನೋಡಿಕೊಳ್ಳುತ್ತಾರೆ. ಅವರು ಏನಾದರೂ ಮಾಡಿಕೊಳ್ಳಲಿ. ನೀರು ಒದಗಿಸುವ ಕೆಲಸವನ್ನೆಲ್ಲಾ ನಾವೇ ತೆಗೆದುಕೊಂಡರೆ ಬೇರೆ ಅರ್ಥ ಬರುತ್ತದೆ. ವಿಧಾನಮಂಡಲದ ಘನತೆ-ಗೌರವ ಕಡಿಮೆಯಾಗುತ್ತದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಜಾವಾಣಿ ದಿನಪತ್ರಿಕೆಯಲ್ಲಿ ಹೇಗೆ ಬರೆದಿದ್ದಾರೆ ಎಂಬುದನ್ನು ನೋಡಿ. ನೀವು ಖಾಯಂ ಅಲ್ಲ. ನಾನು ಖಾಯಂ ಅಲ್ಲ. ಆದರೆ, ಪೀಠಗಳ ಮೇಲೆ ಅನಗತ್ಯವಾದ ಸಮಸ್ಯೆ ಉದ್ಭವಿಸುತ್ತದೆ. ಇದು ಬಹಳ ಮಹತ್ವದಾಗಿದೆ. ಶ್ರೀ ಕೆಂಗಲ್ ಹನುಮಂತಯ್ಯನವರು ವಿಧಾನಸೌಧ ಕಟ್ಟಿದ ದಿನದಿಂದ ಹಿಡಿದು ಇಲ್ಲಿಯವರೆಗೂ ಏನು ಸಂಬಂಧ ಇರಲಿಲ್ಲ. ಆದರೆ, ಈಗ ಬೇರೆಯವರು ಮಾಡುವ ಕೆಲಸವನ್ನು ನೀವು ಮಾಡಿದರೆ ಹೇಗೆ? ನಾಳೆ ದಿವಸ ಶಿಕ್ಷಣ ಇಲಾಖೆ, ಕಂದಾಯ ಇಲಾಖೆಗಳನ್ನು ನಾವೇ ನಡೆಸುತ್ತೇವೆ ಎಂದರೆ ಏನು ಮಾಡುವುದು? ಇದಕ್ಕೆ ಏನಾದರೂ ಪದ್ಧತಿ ಬೇಕಲ್ಲವೇ? ಅದಕ್ಕಾಗಿ ನಾನು ಹೇಳುವುದೇನೆಂದರೆ, ಈಗ ತಿದ್ದುಪಡಿಯಾಗಿರುವ ವಿಧೇಯಕ ಇರಲಿ. ದಯಮಾಡಿ ವಿಧಾನಮಂಡಲದಲ್ಲಿ ಕಟ್ಟಡ ಕಟ್ಟುವುದು, ಸುಣ್ಣ-ಬಣ್ಣ ಹಚ್ಚುವುದನ್ನು ನಿಲ್ಲಿಸುವುದು ಬಹಳ ಯೋಗ್ಯವಾದ ಕೆಲಸ. P.W.D. ಸಚಿವರಿಗೂ ಮತ್ತು ಸ್ಪೀಕರ್‌ಗೂ ಇರುವ ಜಗಳ ಎಂದು ಪತ್ರಿಕೆಯಲ್ಲಿ ವರದಿಯಾಗಿರುವುದನ್ನು ನೀವೇ ಓದಿ. "ಸಭಾಧ್ಯಕ್ಷರ ಕಛೇರಿ-P.W.D. ಕಛೇರಿ ಮಧ್ಯ ತಿಕ್ಕಾಟ" ಎಂದೆಲ್ಲಾ ವರದಿ ಬರುತ್ತದೆ. ಇದೆಲ್ಲಾ ಏಕೆ ಬೇಕು? ಮಾನ-ಮರ್ಯಾದೆ ಕಳೆದುಕೊಳ್ಳುವ ಕೆಲಸವಾಗಿದೆ. ಯಾವ ಪದ್ಧತಿ ಇದೆ ಎಂಬುದನ್ನು ನೋಡಿ ಹೇಳಿ. ಬೇರೆ ಬೇರೆ ಅರ್ಥ ಬರುತ್ತದೆ. ಬೆಳಗಾವಿ ಸುವರ್ಣಸೌಧಕ್ಕೆ ಹೋಗಿ ಕಟ್ಟಡ ಕಟ್ಟುವ ಕೆಲಸವನ್ನೂ ಏಕೆ ಮಾಡಬೇಕು? ಅದಕ್ಕಾಗಿ ಬೇರೆ ಇಲಾಖೆ ಇದೆ. ನಾನು ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಇದರಿಂದ ಎಲ್ಲರಿಗೂ ಕೆಟ್ಟ ಹೆಸರು ಬರುವುದು ಬೇಡ. ಭ್ರಷ್ಟಾಚಾರವಾಗುತ್ತಿದೆ ಎಂದೆಲ್ಲಾ ಪತ್ರಿಕೆಯಲ್ಲಿ ವರದಿಯಾಗುವುದು ಬೇಡ. ಹಾಗಾಗಿ ಕಾನೂನು ಸಚಿವರಿಗೂ ಹೇಳುತ್ತಿದ್ದೇನೆ. ದಯವಿಟ್ಟು ತಿದ್ದುಪಡಿ ನಿಯಮವನ್ನು ಪಾಸ್ ಮಾಡುವುದು ಒಂದು ಕಡೆ ಇರಲಿ ಅಥವಾ ಹಿಂದೆ ಇದ್ದಂತಹ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗುವುದು ಒಳ್ಳೆಯದು. ಏಕೆಂದರೆ, ಬೇರೆ ಇಲಾಖೆಯಲ್ಲಿ ಏನಾದರೂ ಮಾಡಿಕೊಳ್ಳಲಿ. ಆದರೆ ವಿಧಾನ ಮಂಡಲದಲ್ಲಿಯೇ ಈ ರೀತಿ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದರೆ ನಾಚಿಕೆಯಾಗುತ್ತದೆ. ಇಂತಹ ಕೆಲಸ ಮಾಡುವುದನ್ನು ನಿಲ್ಲಿಸಬೇಕು. ಯಾವುದೇ ಪರಿಸ್ಥಿತಿಯಲ್ಲಿ ವಿಧಾನಮಂಡಲದ ಸಭಾಪತಿಯವರಾಗಲಿ, ಸಭಾಧ್ಯಕ್ಷರಾಗಲಿ, ಯಾರೇ ಆಗಲಿ ಇನ್ನು ಮುಂದೆ ಸುಣ್ಣ-ಬಣ್ಣದ ವ್ಯವಹಾರವನ್ನು ಕಡಿಮೆ ಮಾಡಬೇಕೆಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇಲ್ಲವೆಂದರೆ, ವಿಧಾನಮಂಡಲದ ಮಾನ-ಮರ್ಯಾದೆ ಹರಾಜು ಆಗುತ್ತದೆ. ಏನು ಮಾಡುತ್ತೀರೊ ನೋಡಿ.

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಇನ್ನು ಮುಂದೆ ಆ ರೀತಿ ಆಗುವುದಕ್ಕೆ ಅವಕಾಶ ಇಲ್ಲ. ಬಹುಶಃ ನನಗೂ ಸಹ ಪತ್ರಿಕೆಯಲ್ಲಿ ವರದಿಯಾಗಿರುವ ವಿಶ್ಲೇಷಣೆಯನ್ನು ನೋಡಿ ಬಹಳ ಬೇಸರವಾಗಿದೆ. ಉಭಯ ಸದನದಲ್ಲಿ ಯಾವುದೇ ನಿರ್ಧಾರವನ್ನು ತೆಗೆದುಕೊಂಡಾಗ ಸರ್ಕಾರದಲ್ಲಿರತಕ್ಕಂತಹ ಯಾವುದೇ ಇಲಾಖೆಯವರು ಸಹ ಅದನ್ನು ಅನುಸರಿಸಿ ಮಾಡುತ್ತಾರೆ. ಏಕೆಂದರೆ, ಎಲ್ಲೋ ಒಂದು ಕಡೆ, ನಮ್ಮ ಎರಡು

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದನದ ಘನತೆ-ಗೌರವವನ್ನು ಕಾಪಾಡುವುದು ಬಹಳ ಮುಖ್ಯವಾಗಿದೆ. ಮಾನ್ಯ ಸದಸ್ಯರು ಹೇಳಿರುವುದನ್ನು ಒಪ್ಪುತ್ತೇನೆ. ಇನ್ನು ಮುಂದೆ ಅದಕ್ಕೆಲ್ಲಾ ಅವಕಾಶ ಇರುವುದಿಲ್ಲ.

**ಶ್ರೀ ಕೆ.ಬಿ.ಶಾಣಪ್ಪ:-** ಮಾನ್ಯ ಸಭಾಪತಿಯವರೇ, legislation ಮಾಡುವ business ನಮ್ಮದು. We are not supposed to look after the buildings, painting, furniture and others. There is a separate Department for this purpose. Why has it been assigned to the Hon'ble Speaker and the Chairman of the Legislature. Hon'ble Member has rightly mentioned it. Kindly separate it.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, 100ಕ್ಕೆ 100ರಷ್ಟು ಮಾನ್ಯ ಸದಸ್ಯರುಗಳು ಹೇಳುವ ಮಾತನ್ನು ಒಪ್ಪುತ್ತೇನೆ.

**ಸಭಾಪತಿಯವರು:-** ಅದರ ಬಗ್ಗೆ ಚರ್ಚೆ ಮಾಡುವುದು ಬೇಡ.

(ಗೊಂದಲ)

**ಶ್ರೀ ಬಸವರಾಜ ಎಸ್ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಚರ್ಚೆ ಮಾಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ, ಪಿಡಬ್ಲ್ಯೂಡಿ ಸಚಿವರ ಹತ್ತಿರ, ಸಭಾಧ್ಯಕ್ಷರ ಹತ್ತಿರ ಹೋಗಿ ಚರ್ಚೆಯಾಗಿ ಮತ್ತೆ ವಾಪಸ್ಸು ಪಿ.ಡಬ್ಲ್ಯೂ.ಡಿ. ಗೆ ವಾಪಸ್ಸು ಬಂದಿದೆ. ಇದೆಲ್ಲಾ ನಮಗೆ ಏಕೆ ಬೇಕು. ಇದರಲ್ಲಿ ಭ್ರಷ್ಟಚಾರ ಬಿಟ್ಟು ಬೇರೆ ಏನಾಗುತ್ತದೆ?

**ಸಭಾಪತಿಯವರು:-** ಆ ರೀತಿ ಆಗುವುದಿಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಅಷ್ಟೇ ಸಾಕು. ಜಾಸ್ತಿ ಚರ್ಚೆ ಮಾಡುವುದು ಬೇಡ.

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಇನ್ನು ಮುಂದೆ ಈ ರೀತಿಯ ಚರ್ಚೆಗೆ ಅವಕಾಶ ಬರುವುದಿಲ್ಲ. ಆ ರೀತಿ ಆಗುವುದಿಲ್ಲ. ಇದಕ್ಕಾಗಿಯೇ ಸ್ಪೆಷಲ್ ಬೋರ್ಡ್ ಇರುತ್ತದೆ. ಸ್ಪೆಷಲ್ ಬೋರ್ಡ್‌ನಲ್ಲಿ ವಿಧಾನಸಭೆಯ ಸಭಾಧ್ಯಕ್ಷರು, ವಿಧಾನ ಪರಿಷತ್ತಿನ ಸಭಾಪತಿಯವರಿರುತ್ತಾರೆ, ನಾನು ಮತ್ತು ಮುಖ್ಯಮಂತ್ರಿಗಳು ಸೇರಿರುತ್ತೇವೆ. ಆ ಹಂತದಲ್ಲಿ ನಿರ್ಧಾರವಾಗಬೇಕೇ ವಿನಃ ಏಕಾಏಕಿಯಾಗಿ ನಿರ್ಧಾರವಾಗುವುದು ತಪ್ಪು. ಹಸ್ತಕ್ಷೇಪ ಎನ್ನುವ ಪ್ರಶ್ನೆ ಉದ್ಭವಿಸುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಯವರೇ, ವಿಧಾನಮಂಡಲದ ಜಂಟಿ ನಿಯಮಾವಳಿ ಸಮಿತಿಯು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಾವಳಿಗಳ ನಿಯಮಗಳಿಗೆ ಮಧ್ಯಂತರ ವರದಿಯಲ್ಲಿ ಮಾಡಿರುವ ಶಿಫಾರಸ್ಸುಗಳನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

> **"ವಿಧಾನಮಂಡಲದ ಜಂಟಿ ನಿಯಮಾವಳಿ ಸಮಿತಿಯು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಾವಳಿಗಳ ನಿಯಮಗಳಿಗೆ ಮಧ್ಯಂತರ ವರದಿಯಲ್ಲಿ ಮಾಡಿರುವ ಶಿಫಾರಸ್ಸುಗಳನ್ನು ಅಂಗೀಕರಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಪ್ರಸ್ತಾವದ ಅಂಗೀಕಾರ**

**ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೇ,

> **"ವಿಧಾನಮಂಡಲದ ಜಂಟಿ ನಿಯಮಾವಳಿ ಸಮಿತಿಯು ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಾವಳಿಗಳ ನಿಯಮಗಳಿಗೆ ಮಧ್ಯಂತರ ವರದಿಯಲ್ಲಿ ಮಾಡಿರುವ ಶಿಫಾರಸ್ಸುಗಳನ್ನು ಅಂಗೀಕರಿಸಬೇಕೆಂದು" ಕೋರುತ್ತೇನೆ.**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

> **"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಗಳ ನಿಯಮಾವಳಿಗಳ ನಿಯಮಗಳಿಗೆ ಮಧ್ಯಂತರ ವರದಿಯಲ್ಲಿ ಸಮಿತಿಯು ಮಾಡಿರುವ ಶಿಫಾರಸ್ಸುಗಳನ್ನು ಅಂಗೀಕರಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ತಿದ್ದುಪಡಿ ನಿಯಮಾವಳಿಗೆ ಒಪ್ಪಿಗೆ ನೀಡಲಾಯಿತು**

(ಮುಂದು) . . .

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(180)/21.02.2018/4.30/ಎಸ್‌ಕೆ-ಕೆಎಸ್

**ಸಭಾಪತಿಯವರು:-** ಈಗ ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಲಾಗುವ ವಿಷಯಕ್ಕೆ ಉತ್ತರ ನೀಡಲು ಸಚಿವರು ಇರಬೇಕು ಅಲ್ಲವೇ, ಆದ್ದರಿಂದ ಸಂಬಂಧಪಟ್ಟ ಸಚಿವರು ಸದನದಲ್ಲಿ ಉಪಸ್ಥಿತರಿದ್ದಾರೆಯೇ?

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರು ಇದ್ದಾರೆ.

**ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ ನಿಯಮ 330ರಡಿಯಲ್ಲಿನ ವಿಷಯದ ಬಗ್ಗೆ ತಾವು ಪ್ರಸ್ತಾಪ ಮಾಡಿ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡುತ್ತಾರೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಜೆಂಡಾದ ಪ್ರಕಾರ ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳಬೇಕು.

**ಸಭಾಪತಿಯವರು:-** ಅಜೆಂಡಾದಲ್ಲಿ ನಿಯಮ 330 ಸಹ ಇದೆ ನೋಡಿ. ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಲು concerned minister ಇಲ್ಲದ ಕಾರಣ, ಸಚಿವರು ಬಂದ ತಕ್ಷಣ ಅದನ್ನು ತೆಗೆದುಕೊಳ್ಳಲಾಗುತ್ತದೆ. ಆ ವೇಳೆಗೆ ಸಂಬಂಧಪಟ್ಟ ಸಚಿವರನ್ನು ಕರೆಸಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾ ನಾಯಕರೇ ಅವರನ್ನು ಕರೆಸಿ important issue ಇದೆ.

**ಸಭಾಪತಿಯವರು:-** ಅವರು ಬರುತ್ತಾರೆ. ಇದು ಮುಗಿದ ತಕ್ಷಣ ವಾಪಸ್ಸು calling attention ಗೆ ಹೋಗೋಣ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಎಲ್ಲಾ ಸಚಿವರು ಇಲ್ಲಿ ಇರಬೇಕಲ್ಲವೇ

**ಸಭಾಪತಿಯವರು:-** ಹಾಜರಿರಬೇಕಾದ ಸಚಿವರ ಲಿಸ್ಟ್ ಹಾಕಿದ್ದೇವೆ. ಆ ಸಚಿವರು ಬೇಕಲ್ಲವೇ

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಬರಬೇಕು ಎಂದರೆ ಏನು?

**ಸಭಾಪತಿಯವರು:-** ನನ್ನ ಕೈಯಲ್ಲಿ ಏನಿದೆ, ಪೋಲೀಸ್ ...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಅದು ಅವರೇ ಹೇಳಲಿ.

**ಸಭಾಪತಿಯವರು:-** ಮುಖ್ಯ ಸಚೇತಕರು ಹೇಳಿದ್ದಾರೆ, ಸಚಿವರು ಬರುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಐವನ್ ಡಿ'ಸೋಜಾರವರೇ ಅವರು ಬೀಗರ ಮನೆಗೆ ಬಂದಂತೆ ಬರುತ್ತಾರೆಯೇ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ:-** ಬೆಳಗ್ಗೆ ಸಚಿವರು ಇದೇ ಸದನದಲ್ಲಿದ್ದರು ...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಬೆಳಗ್ಗೆ ಇದ್ದರೆ ಈಗ ಇರಬಾರದು ಎಂಬ ಕಾಯಿದೆ ಇದೆಯೇ?

**ಸಭಾಪತಿಯವರು:-** ಆಯಿತು ಬರುತ್ತಾರೆ ಬಿಡಿ. ನೀವು ಮಾತನಾಡಬೇಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ ಅದು ತಪ್ಪು. ಅಧಿಕಾರಿಗಳೆಂದರೆ ... ಅಲ್ಲಿ ಹೋಗಿದ್ದಾರೆ; ಇಲ್ಲಿ ಹೋಗಿದ್ದಾರೆ ಎಂಬುದು ಸರಿಯಲ್ಲ.

**ಶ್ರೀ ಎಂ.ಆರ್. ಸೀತಾರಾಂ (ಸಭಾ ನಾಯಕರು):-** ಕೆಳಮನೆಯಲ್ಲಿ ಇದ್ದಾರೆ. ನಮ್ಮ ಕಾನೂನು ಸಚಿವರಿಗೆ ಹೇಳಿ ಕಳುಹಿಸಿದ್ದೇನೆ. ಇಬ್ಬರೂ ಬರುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ ನನ್ನದು calling attention ಇದೆ. ನಾನು ಅದಕ್ಕೆ ಉತ್ತರ ತೆಗೆದುಕೊಂಡು ಹೋಗಬೇಕು. ನಾನು ಕೇಳುತ್ತಿರುವುದು calling attention ಅನ್ನು skip ಮಾಡಿ, ಏಕೆ ನಿಯಮ 330ಕ್ಕೆ ಹೋಗುತ್ತೀರಿ? ಸಚಿವರು ಇದ್ದು ನಾವು ಸದನದಲ್ಲಿ ಹಾಜರಿಲ್ಲ ಎಂದಾಗ ಸದಸ್ಯರು ಗೈರು ಹಾಜರಿ ಎಂದು ತಾವು ಹೇಳಿಬಿಡುತ್ತೀರಿ. ಅದೇ ರೀತಿ ಸದನದಲ್ಲಿ ಸಚಿವರು ಸಹ ಇರಬೇಕಾದುದು ಅವರ ಜವಾಬ್ದಾರಿ.

**ಶ್ರೀ ಎಂ.ಆರ್. ಸೀತಾರಾಂ:-** ಸದನದಲ್ಲಿ ಬೆಳಗ್ಗೆ ಅವರಿಬ್ಬರೂ ಸಚಿವರು ಇದ್ದರು. ಈಗ ಕೆಳಮನೆಯಲ್ಲಿ ಅವರ ಇಲಾಖೆಗೆ ಸಂಬಂಧಿಸಿದ ವಿಷಯಗಳಿರುವುದರಿಂದ ಅವರು ವಾಪಸ್ಸು ಹೋಗಿದ್ದಾರೆ. ಈಗ ಅವರು ಬರುತ್ತಾರೆ ಸಾರ್.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾನಾಯಕರೇ, ಬೆಳಗ್ಗೆ ಇದ್ದರು; ಈಗ ಇದ್ದರು ಎನ್ನುವ ಕಾರಣವಲ್ಲ. ಇದು ಕೆಳಮನೆಯಲ್ಲ ಸಾರ್.

**ಸಭಾಪತಿಯವರು:-** ಆಯಿತು ಬಿಡಿ.

**ಶ್ರೀ ಎಂ.ಆರ್. ಸೀತಾರಾಂ:-** ಎರಡು ವಿಧೇಯಕಗಳಾದ ಮೇಲೆ ಅಷ್ಟರೊಳಗೆ ಅವರು ಬರಬೇಕಾಗಿತ್ತು.

**ಶ್ರೀ ಬಸವರಾಜ ರಾಯರೆಡ್ಡಿ:-** ಸದನದಲ್ಲಿ ...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಬಸವರಾಜ ರಾಯರೆಡ್ಡಿಯವರೇ ಅಲ್ಲಿಯೇ ಇರಿ. ನಮ್ಮದು ಏನೂ ಇಲ್ಲ. ಸದನದಲ್ಲಿ ಸುಮ್ಮನೆ ಸುಳ್ಳು ಹೇಳುವುದಕ್ಕೆ ಹೋಗಬೇಡಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಆಯಿತು. ಮಾನ್ಯ ಪುಟ್ಟಣ್ಣನವರೇ ನೀವು ಪ್ರಾರಂಭ ಮಾಡಿ.

**ಶ್ರೀ ಬಸವರಾಜ ರಾಯರೆಡ್ಡಿ:-** ನಾನು ಏಕೆ ಸುಳ್ಳು ಹೇಳಲಿ?

**ಸಭಾಪತಿಯವರು:-** ನಿಯಮ 330 ರಡಿಯಲ್ಲಿನ ವಿಷಯವನ್ನು ಮಾನ್ಯ ಪುಟ್ಟಣ್ಣನವರು ಈಗ ಪ್ರಸ್ತಾಪ ಮಾಡುತ್ತಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ,...

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ,...

**ಸಭಾಪತಿಯವರು:-** ಬೇಡ ಸಾರ್ ಸುಮ್ಮನೇ ಏಕೆ ಚರ್ಚೆ?

**(ಗೊಂದಲ)**

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ನಾನು ಹೋಗಬೇಕಾಗುತ್ತದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರಿಗೆ ತಾವು ತಿಳಿಸಬೇಕಲ್ಲವೇ?

**ಶ್ರೀ ಕಾಗೋಡು ತಿಮ್ಮಪ್ಪ:-** ನಾನು ತಿಳಿಸೇ ಹೋಗುವುದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಚೀಫ್ ವಿಪ್ ಏತಕ್ಕೆ ಇದ್ದಾರೆ? ನೀವು ತಿಳಿಸಿ ಹೋಗಬೇಕಲ್ಲ. ನಿಮ್ಮನ್ನು defend ಮಾಡಿಕೊಳ್ಳುವುದಕ್ಕೆ ಹೋಗಬೇಡಿ.

**(ಗೊಂದಲ)**

**ಸಭಾಪತಿಯವರು:-** ಆಯಿತು, ಮಾನ್ಯ ಪುಟ್ಟಣ್ಣನವರೇ, ತಾವೀಗ ಮಾತನಾಡಿ. ದಯವಿಟ್ಟು, ಬೇರೆಯವರು ಮಾತನಾಡಬೇಡಿ.

**8. ನಿಯಮ 330ರ ಮೇರೆಗೆ ನಡೆದ ಚರ್ಚೆ**

**ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಸಹಾಯಕ ಉಪನ್ಯಾಸಕರ ಹುದ್ದೆಗಳ ನೇಮಕಾತಿಯಲ್ಲಿ ಆಗಿರುವ ಅನ್ಯಾಯದ ಬಗ್ಗೆ –**

\- - - - - -

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಕರ್ನಾಟಕ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಸುಮಾರು 1,298 ನೇಮಕಾತಿಗಾಗಿ ದಿನಾಂಕ: 22.01.2015 ರಲ್ಲಿ ಮತ್ತು ದಿನಾಂಕ:

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

೦5.೦3.2015 ರಂದು ಸುಮಾರು 852 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿಗೆ ಇವರು ಅಧಿಸೂಚನೆಯನ್ನು ಹೊರಡಿಸಿ ಅರ್ಜಿಗಳನ್ನು ಕರೆದಿದ್ದಾರೆ. K.E.A. (Karnataka Examination Authority) ನಿಂದ ಪ್ರಾಧ್ಯಾಪಕರ ಹುದ್ದೆಗೆ ದಿನಾಂಕ: 22-01-2015ರ ನೋಟಿಫಿಕೇಷನ್‌ನಲ್ಲಿ ಏನು ಅರ್ಜಿಗಳನ್ನು ಕರೆದಿದ್ದಾರೆಯೋ, ಆ ಸಂದರ್ಭದಲ್ಲಿಯೇ ಅರ್ಹತೆ ಮತ್ತು ವಿದ್ಯಾರ್ಹತೆ fix ಮಾಡಿದ್ದಾರೆ. ಆದರೆ ಇದರಲ್ಲಿ ಒಟ್ಟು 2,160 ಹುದ್ದೆಗಳಲ್ಲಿ ಇವರು ದಿನಾಂಕ: ೦3.೦5.2017 ರಂದು ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ, genuinity ಕುರಿತು ಬರೆದು, ಅಲ್ಲಿಂದ ಮಾಹಿತಿ ಬಂದ ನಂತರ ದಿನಾಂಕ: 18.07.2017ರಂದು ಸುಮಾರು 1489 ಸಹಾಯಕ ಪ್ರಾಧ್ಯಾಪಕರುಗಳಿಗೆ ಈ ಲಿಸ್ಟ್‌ನ್ನು announce ಮಾಡಿದ್ದಾರೆ. ಆದರೆ ಇಲ್ಲಿ ಏನು K.E.A. ಯಿಂದ ಬಂತೋ, ಆ ಹುದ್ದೆಗಳಿಗೆ ರಾಜ್ಯ ಪತ್ರದ ಪ್ರಕಟಣೆ ಮಾಡಿದ ನಂತರ ಮತ್ತು ಪರಿಶೀಲನೆ ಕೂಡ ಆದ ನಂತರ, ದಿನಾಂಕ: 18.07.2017 ರಂದು ಅಂದರೆ ಸುಮಾರು ಎರಡು ವರ್ಷಗಳ ನಂತರ 1,489 ಸಹಾಯಕ ಪ್ರಾಧ್ಯಾಪಕರುಗಳಿಗೆ ನೇಮಕಾತಿ ಆದೇಶವನ್ನು ಕೊಡುತ್ತಾರೆ. ಇದನ್ನು ಮಾಡಿಸಬೇಕಾದರೆ, ನಾವು ನೂರು ಬಾರಿ ಹೋಗಿರಬೇಕು. 'ನೀವು ಏಕೆ ಹೋಗಬೇಕು ಮತ್ತು ನೀವು ಏಕೆ ಕೇಳುತ್ತೀರಾ? ನೀವು ಹೋಗಕೂಡದು' ಎಂದು ಹೇಳಿ ನಮ್ಮ ಬಗ್ಗೆ ಮಾಧ್ಯಮಗಳಲ್ಲಿ ಟೀಕೆ ಮಾಡಿದರು. ಸುಮಾರು 1,489 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ದಿನಾಂಕ: 18.07.2017 ರಂದು ಆದೇಶ ಮಾಡಿದಂತಹ ಸಂದರ್ಭದಲ್ಲಿ ಕೌನ್ಸಿಲಿಂಗ್ ಮಾಡಿದರು. ಅದನ್ನು ಯಾವ ರೀತಿ ಮಾಡಿದ್ದಾರೆಂಬುದು ನನ್ನ ಮೊಬೈಲ್‌ನಲ್ಲಿದೆ. ಆದರೆ ಅದನ್ನು ಇಲ್ಲಿ ತೋರಿಸುವುದಕ್ಕೆ ಆಗುತ್ತಿಲ್ಲ ಏಕೆಂದರೆ ಇಲ್ಲಿ ಮೊಬೈಲ್ ತೆಗೆಯುವ ಹಾಗಿಲ್ಲ. ಅಂಗವಿಕಲರು ನಡೆಯುವುದಕ್ಕೆ ಆಗಲಿಲ್ಲ. ಅವರಿಗೂ ಸಹ ಆದ್ಯತೆ ಕೊಡಲಿಲ್ಲ. ಇದು ಸರ್ಕಾರಿ ನಿಯಮಗಳಲ್ಲಿ ಇದೆ. ನೀವು ಕೌನ್ಸಿಲಿಂಗ್ ಮಾಡಬೇಕಾದರೆ, ಹೇಗೆ ಕೊಡಬೇಕೆಂಬುದು ಇದೆ. ಇದನ್ನು ನೀವೇ ನಿಯಮಾವಳಿಗಳನ್ನು ಮಾಡಿದ್ದೀರಿ. ನಾವೆಲ್ಲರೂ ಕೂಡ ಅದರಲ್ಲಿ ಯಾವುದೇ ರೀತಿಯಾದಂತಹ ಆಸೆ-ಅಮಿಷಕ್ಕೆ ಒಳಗಾಗಿ, ಅದಕ್ಕೆ ಶಿಫಾರಸ್ಸು ಕೊಡಬಾರದೆಂಬ ದೃಷ್ಟಿಯಿಂದ ನಾವು ಮತ್ತು ನೀವೆಲ್ಲ ಈ ಕೌನ್ಸಿಲಿಂಗ್‌ನ್ನು ತಂದಿದ್ದೇವೆ. ಯಾವುದೂ ಕೂಡ ನೀವು ಪಾಲನೆ ಮಾಡಲಿಲ್ಲ. ಇಲ್ಲದ್ದಂತಹವರು ಇವರುಗಳಿಗೆ ಬೇಕಾದಂತಹ ಸಂದರ್ಭದಲ್ಲಿ ಪತಿ-ಪತ್ನಿಯರು ಒಟ್ಟಿಗೆ ಇರಬೇಕು, ಒಂದೇ ಜಾಗದಲ್ಲಿ ಕೆಲಸ ಮಾಡಬೇಕು ಎಂದು ಹೇಳುತ್ತಾರೆ..

ಮಾನ್ಯ ಸಭಾಪತಿಯವರೇ, ಮುನ್ನೂರು ಕಿಲೋ ಮೀಟರ್ ದೂರಕ್ಕೆ ಕೆಲಸ ಮಾಡುವುದಕ್ಕೆ ಹಾಕುತ್ತಾರೆ. ಮೂರು ತಿಂಗಳ ಮಗು ಇದೆ. ನಾಲ್ಕು ತಿಂಗಳ ಮಗು, ಒಂಭತ್ತು ತಿಂಗಳ ಮಗು, ಎರಡು ವರ್ಷಗಳ ಮಕ್ಕಳು ಸಹ ಇವೆ. ನಾಲ್ಕು ನೂರು ಕಿಲೋ ಮೀಟರ್, ಮುನ್ನೂರು ಕಿಲೋ ಮೀಟರ್ ದೂರಕ್ಕೆ ಹಾಕಿದ್ದಾರೆ. ಇದು ಸರಿಯೇ? ಈ ತರಹ ಮಾಡುವುದಕ್ಕೆ ಇವರಿಗೆ ಅಧಿಕಾರ ಕೊಟ್ಟವರು ಯಾರು? ನೀವು ಏನು monitor ಮಾಡುತ್ತಿದ್ದೀರಿ? ಎಲ್ಲವನ್ನು ಸರ್ಕಾರದ ಗಮನಕ್ಕೆ ತಂದರೂ ಕೂಡ ಆ ಬಗ್ಗೆ ಕ್ರಮ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳುವಲ್ಲಿ ಸಹ ಸರ್ಕಾರ ವಿಫಲವಾಗಿದೆ. ಇದು ಏನಾಗಿದೆ ಎಂದರೆ 'ಕಾಸು ಕೊಟ್ಟರೆ ಕಡಲೆಕಾಯಿ' ಎನ್ನುವ ರೀತಿಯಾಗಿದೆ. ದಿನಾಂಕ: 18.07.2017 ರಲ್ಲಿ ಸುಮಾರು 1,489 ಅಭ್ಯರ್ಥಿಗಳಿಗೆ, ದಿನಾಂಕ: 07.08.2009 ರಂದು ಸುಮಾರು 103 ಅಭ್ಯರ್ಥಿಗಳಿಗೆ, ಮತ್ತು ದಿನಾಂಕ: 08.08.2017 ರಂದು ಸುಮಾರು 69 ಅಭ್ಯರ್ಥಿಗಳಿಗೆ, ನೇಮಕಾತಿ ಆದೇಶ ಕೊಡಲಾಗಿದೆ. ನಂತರ ದಿನಾಂಕ: 30.08.2017ರಂದು 98 ಅಭ್ಯರ್ಥಿಗಳಿಗೆ ನಂತರ ದಿನಾಂಕ: 11.09.2017ರಂದು 121 ಅಭ್ಯರ್ಥಿಗಳಿಗೆ, ದಿನಾಂಕ: 02.11.2017 ರಂದು 17 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ನೀಡಿದ್ದಾರೆ. ಮತ್ತೆ ದಿನಾಂಕ: 07.08.2017 ರಲ್ಲಿ ಸಹ ಕೆಲವರಿಗೆ ನೇಮಕಾತಿ ಆದೇಶಗಳನ್ನು ನೀಡಿದ್ದಾರೆ. ಇದು ಏನಾಗಿದೆ ಎಂದರೆ, ಏನೇ ಆದರೂ ಕೂಡ ಸರಿಯಾಗಿದ್ದರೂ ಕೂಡ ಇದನ್ನು ಕೊಡುತ್ತಿಲ್ಲ. ನೀವು ನೋಟಿಫಿಕೇಷನ್‌ನಲ್ಲಿ ಅರ್ಹತೆ ಏನು ಇರಬೇಕೆಂದು ಕೇಳಿದ್ದೀರಿ, ಅದರ ಅರ್ಹತೆಯ ಮೇಲೆ ನೀವು ಕೊಡಬೇಕಲ್ಲವೇ? ಅರ್ಹತೆ ಇದ್ದಾಗ, ನೀವು ಮೂಲ ದಾಖಲಾತಿಗಳನ್ನು ಪರಿಶೀಲಿಸಿ ಅ ದಾಖಲಾತಿಗಳು genuine ಇದ್ದರೆ ನೀವು ನೇಮಕಾತಿ ಆದೇಶಗಳನ್ನು ಕೊಡಬೇಕು. ನೀವು ಅಷ್ಟೇ ತಾನೇ ಮಾಡಬೇಕಾಗಿರುವುದು. ಇದಕ್ಕೆ ಇನ್ನೂ ಏನು ಮಾಡಬೇಕು? ಮೂರು ವರ್ಷ ಮಾಡುವಂಥದ್ದು ಇದರಲ್ಲಿ ಏನಿದೆ? ಐ.ಎ.ಎಸ್ ಮತ್ತು ಕೆ.ಎ.ಎಸ್ ನೇಮಕಾತಿಯಾದ ನಂತರ ಲಿಸ್ಟ್‌ನ್ನು ಪ್ರಕಟಣೆ ಮಾಡಿದ ಮೇಲೆ ಮತ್ತೆ ಇವರು ಅರ್ಹತೆ ಕೇಳುತ್ತಾರೆ. ನೋಟಿಫಿಕೇಷನ್ ಕೇಳುತ್ತಾರೆ. ನೋಟಿಫಿಕೇಷನ್ ಇಲ್ಲದೇ, competitive exam ಅನ್ನು ಹೇಗೆ ಬರೆಸಿದ್ದಾರೆ. ಆ ಸಂದರ್ಭದಲ್ಲಿ ದಾಖಲಾತಿಗಳನ್ನು ಪರಿಶೀಲನೆ ಮಾಡಲಿಲ್ಲವೇ? ದಾಖಲಾತಿ ಪರೀಶಿಲನೆ ಮಾಡಿ, ನೀವು ರಾಜ್ಯ ಪತ್ರದಲ್ಲಿ ಪ್ರಕಟಣೆ ಮಾಡಿದ ಮೇಲೂ ಕೂಡ ನೇಮಕಾತಿ ಆದೇಶಗಳನ್ನು ಇನ್ನೂ ಕೊಟ್ಟಿಲ್ಲ. ನೀವು ಮೂರು ವರ್ಷಗಳಾದರೂ ಕೂಡ ಸಂಪೂರ್ಣವಾಗಿ ಕೊಡಲಿಲ್ಲ.

(ಮುಂದು...)

(181)21/02/2018/ಟಿಸಿಹೆಚ್-ಕೆಎಸ್/4.40

**ಶ್ರೀ ಪುಟ್ಟಣ್ಣ (ಮುಂದು)**

ಮಾನ್ಯ ಸಭಾಪತಿಯವರೇ, ಮೂರು ವರ್ಷವಾದರೂ ಸಹ ಇನ್ನೂ ಕೂಡ ಸಂಪೂರ್ಣವಾಗಿ ಆಗಿಲ್ಲ. ಅವರು ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ. ವಿವಿಧ ತಾಲ್ಲೂಕುಗಳು ಹಾಗೂ ವಿವಿಧ ಜಿಲ್ಲೆಗಳು ಅಂದರೆ, ಬೀದರ್, ಗುಲ್ಬರ್ಗಾ, ರಾಯಚೂರು ಬೆಳಗಾಂ, ಚಾಮರಾಜನಗರ ಈ ಎಲ್ಲಾ ಜಿಲ್ಲೆಯವರು ಕಡಲೆ ಕಾಯಿ ಮಾರುವ ಕೆಲಸವೊಂದನ್ನು ಬಿಟ್ಟು ಉಳಿದ ಎಲ್ಲಾ ಕೆಲಸವನ್ನು ಮಾಡುತ್ತಿದ್ದಾರೆ. ಅವರೆಲ್ಲರೂ ಕೂಡ ರಾಜ್ಯ ಮಟ್ಟದ competitive exam ಬರೆದು ರ್‍ಯಾಂಕ್ ಬಂದಿದ್ದಾರೆ. ಈಗಾಗಲೇ ಅವರಿಗೆ ಕೌನ್ಸಿಲಿಂಗ್ ಆಗಿದೆ. ಮಾನ್ಯ ಸಭಾಪತಿಯವರೇ, ಕೌನ್ಸಿಲಿಂಗ್ ಆದ ನಂತರ ಎಲ್ಲಿಯಾದರೂ verification

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುವುದನ್ನು ನೋಡಿದ್ದೀರಾ? ಇದೊಂದು ಇತಿಹಾಸ. ಕಮೀಷನರ್‌ರವರ ಬಗ್ಗೆ ಅಲ್ಲಿದ್ದಂತಹ ಒಬ್ಬ ನಮ್ಮ ಉಪನ್ಯಾಸಕರು ಏನು ಹೇಳುತ್ತಾರೆಂದರೆ, ಸರ್, ಅವರು M.B.B.S ಮಾಡಿರುವುದು ಅವರೇನಾದರೂ ವೈದ್ಯಕೀಯ ವೃತ್ತಿ ಪ್ರಾರಂಭ ಮಾಡಿದರೆ, ಅವರ ಬಳಗೆ ಹೋದಂತಹ ಪ್ರತಿಯೊಬ್ಬ patientಗೂ ಒಂದೊಂದು ಸಮಿತಿಯನ್ನು ರಚನೆ ಮಾಡುತ್ತಿದ್ದರು. ಮೊದಲನೆಯದಾಗಿ, ಅವರುಗಳು ಎಲ್ಲಿಂದ ಬಂದಿದ್ದಾರೆ, ಅವರ ತಂದೆ-ತಾಯಿ ಯಾರು? ಅವರ ಹೆಸರೇನು? ಯಾವ ಊರು, ಯಾವ ತಾಲ್ಲೂಕು ಮತ್ತು ಯಾವ ಜಿಲ್ಲೆಯಿಂದ ಬಂದಿದ್ದಾರೆಂದು, ನಂತರ ಅವರಿಗೆ ಏನು ಚಿಕಿತ್ಸೆ ಕೊಡಬೇಕು ಎಂಬುದರ ಬಗ್ಗೆ ಒಂದು ಸಮಿತಿ, ನಂತರ, ಅವರಿಗೆ ಏನು ಕಾಯಿಲೆ ಇದೆ ಎಂದು ತಿಳಿದುಕೊಳ್ಳುವುದಕ್ಕೆ ಇನ್ನೊಂದು ಸಮಿತಿಯನ್ನು ರಚನೆ ಮಾಡುತ್ತಿದ್ದರು. ಅಷ್ಟರೊಳಗೆ patient ಜೀವಂತ ಇರುವುದಿಲ್ಲ. ಇದಕ್ಕೆ ಎಷ್ಟು ಸಮಿತಿಗಳು ಬೇಕು? ಒಬ್ಬರು ಗುಮಾಸ್ತ ಮಾಡುವಂತಹ ಕೆಲಸಕ್ಕೆ ವೈಸ್ ಛಾನ್ಸಲರ್‌ಗಳ ನೇತೃತ್ವದಲ್ಲಿ 3 ಜನರ ಸಮಿತಿ ಮಾಡಿದ್ದಾರೆ. ರಿಜಿಸ್ಟ್ರಾರ್‌ಗಳ ಸಮಿತಿ ಮಾಡಿದ್ದಾರೆ. ಆದರೆ ಇದನ್ನು ಮಾಡಲು ನಿಮಗೆ ಯೋಗ್ಯತೆ ಇಲವೇ? ನಿಮಗೆ ಅರ್ಹತೆ ಇಲ್ಲವೇ? ನೀವ್ಯಾಕೆ ಇರುವುದು? ಯಾರಾದರೂ ಕೂಡ ನಿಮಗೆ ಮೋಸ ಮಾಡಿದ್ದರೆ, ಅದರಲ್ಲಿ ಯಾರಾದರೂ ತಪ್ಪನ್ನು ಮಾಡಿದ್ದರೆ, ಯಾರೂ genuine ಇಲ್ಲವಾದಲ್ಲಿ ತಾವು ಏನು ಬೇಕಾದರೂ ಅವರ ಮೇಲೆ ಕ್ರಮ ಕೈಗೊಳ್ಳಿ. ಅದು ಬಿಟ್ಟು ಅನಗತ್ಯವಾಗಿ ಎಷ್ಟು ತೊಂದರೆ ಕೊಡಬೇಕೋ ಅಷ್ಟು ತೊಂದರೆಯನ್ನು ಕೊಡುತ್ತಿದ್ದಾರೆ. ಆಮೇಲೆ distance modeನಲ್ಲಿ ಪಾಸ್ ಆಗಿರುವವರಿಗೆ ಸರ್ಕಾರದ ಕಾರ್ಯದರ್ಶಿಯವರಿಂದ ಹಾಗೂ ಮಾನ್ಯ ಮಂತ್ರಿಗಳಿಂದ ಸರ್ಕಾರಿ ಆದೇಶವಾಗಿದ್ದರೂ ಕೂಡ ಆದೇಶ ಪತ್ರವನ್ನು ಕೊಡುವುದಕ್ಕೆ ಏಕೆ ಆಗುತ್ತಿಲ್ಲ ಸ್ವಾಮಿ? ಇದಕ್ಕೆ ಏನು ಕಾರಣ ಹೇಳಿ? ಉನ್ನತ ಶಿಕ್ಷಣ ಇಲಾಖೆ ಯಾವ ರೀತಿ ಆಗಿದೆ ಎಂದರೆ, ಇತ್ತೀಚೆಗೆ ಮಾನ್ಯ ಸಚಿವರು ನನಗೆ ಒಳ್ಳೆಯ ಆಯುಕ್ತರು ಹಾಗೂ ಒಳ್ಳೆಯ ಕಾರ್ಯದರ್ಶಿಯವರು ಸಿಗಲಿಲ್ಲ ಎನ್ನುವ ಅಸಹಾಯಕತೆಯ ಹೇಳಿಕೆ ನೀಡಿರುವುದನ್ನು ನಾನು ಪತ್ರಿಕೆಗಳಲ್ಲಿ ನೋಡಿದ್ದೇನೆ. ಈಗ ಇಲಾಖೆಯಲ್ಲಿ ಯಾವ ರೀತಿಯಾದಂತಹ ಪರಿಸ್ಥಿತಿ ಇದೆ ಎಂದರೆ, ಒಂದೂ ಕಡತವೂ ಸಹ ವಿಲೇವಾರಿಯಾಗುತ್ತಿಲ್ಲ. ಶ್ರೀಮತಿ ಸದಾ ನಕ್ಷತ್ರ ಎನ್ನುವ ಒಬ್ಬರು ವಿಚ್ಛೇದಿತ ಮಹಿಳೆ ತನ್ನ ತಂದೆಯ ಆದಾಯ ಪ್ರಮಾಣ ಪತ್ರವನ್ನು ಕೊಡುತ್ತಾರೆ. ಈ ಆದಾಯ ಪ್ರಮಾಣ ಪತ್ರದ ಬಗ್ಗೆ ಸ್ಪಷ್ಟೀಕರಣ ನೀಡಿ, ಸರ್ಕಾರದಲ್ಲಿ ಆದೇಶವಾಗಿ ಒಂದು ವರ್ಷ ಕಳೆದಿದೆ. ಈ ಸಂಬಂಧ ಕಡತ ಉನ್ನತ ಶಿಕ್ಷಣ ಇಲಾಖೆಯ ಆಯುಕ್ತರವರ ಕಛೇರಿಗೆ ರವಾನೆಯಾಗಿ ಸುಮಾರು 2 ತಿಂಗಳು ಕಳೆದಿದೆ. ಆದರೆ, ಇದುವರೆಗೂ ಅವರಿಗೆ ಆದೇಶ ನೀಡಿಲ್ಲ. ಇದಕ್ಕೆ ಏನು ಮಾಡುವುದು ಸ್ವಾಮಿ? ಈ ರೀತಿಯಾದರೆ ಆ ಮಹಿಳೆ ಏನು ಮಾಡಬೇಕು ಹೇಳಿ? ನಾವೇನಾದರೂ ಮಾತನಾಡಿದರೆ, ನೀವೇಕೆ ಅಲ್ಲಿಗೆ ಹೋಗುತ್ತೀರಿ ಎಂದು ನಮ್ಮನ್ನು ಕೇಳುತ್ತಾರೆ. ಜನರು ನಮ್ಮನ್ನು ಚುನಾವಣೆಯಲ್ಲಿ ಗೆಲ್ಲಿಸಿರುವುದು ಏಕೆ? ನಾವೇನು ಅಲ್ಲಿಗೆ ಹೋಗಬಾರದೇ? ನಾವು ಅವರಿಂದ ಮತವನ್ನು ಪಡೆದುಕೊಂಡಿದ್ದೇವೆ. ಅದಕ್ಕೆ ನಮಗೆ ಹಕ್ಕಿಲ್ಲವೇ? ಶ್ರೀಮತಿ ಸದಾ ನಕ್ಷತ್ರ ಎಂಬುವ ಮಹಿಳೆ ಏನು ಇದ್ದಾರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಮಾನ್ಯ ಸಭಾಪತಿಯವರ ಪೀಠವನ್ನು ಅಲಂಕರಿಸಿದರು)**

ಅವರು ಕಣ್ಣಿರಿನಲ್ಲಿ ಕೈ ತೊಳೆಯುತ್ತಿದ್ದಾರೆ. ಅದಕ್ಕೆ ನಾವು ಏನು ಮಾಡಬೇಕು? ಮಾನ್ಯ ಸಚಿವರು ಇದನ್ನು ಕೇಳಿ ತಿಳಿದುಕೊಳ್ಳಬೇಕು. ನಾವ್ಯಾರಾದರೂ ಶಾಸಕರುಗಳು ಇವರ ಇಲಾಖೆಗೆ ಹೋಗಿ ಬಂದಿರುತ್ತೇವೆ. ಮತ್ತೆ ಅವರಿಗೆ "ರೀ ಏನು, ನೀವು ಶಾಸಕರನ್ನು ಕರೆದುಕೊಂಡು ಬರುತ್ತೀರಾ? ಅವರಾ ನಿಮಗೆ ಸಂಬಳ ಕೊಡುವುದು. ನಿಮಗೆ ಸಂಬಳ ಕೊಡುವುದು ನಾನು. ಅವರ ಕೈಯಲ್ಲೇ ಕೆಲಸ ಮಾಡಿಸಿಕೊ ಹೋಗು." ಈ ಮಾತನ್ನು ಅವರಿಗೆ ಕೇಳುವುದೇ ಸ್ವಾಮಿ? ಈ ರೀತಿಯ ವ್ಯವಸ್ಥೆ ಹೊಂದಿರುವ ಇಂತಹ ಕ್ಯುಲಗೆಟ್ಟ ಅಧಿಕಾರಿಗಳನ್ನು ನಾವು ಯಾವ ಇಲಾಖೆಯಲ್ಲಿಯೂ ನೋಡಿಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಈ ರೀತಿ ಯಾವುದೇ ಅಧಿಕಾರಿಯು ಉದ್ಧಟತನದಿಂದ ಮಾತನಾಡಿದ್ದರೆ, ದಯಮಾಡಿ ಆ ಅಧಿಕಾರಿಯ ಹೆಸರನ್ನು ತಾವು ಲಿಖಿತವಾಗಿ ಬರೆದುಕೊಡಿ ಕ್ರಮ ತೆಗೆದುಕೊಳ್ಳಲಾಗುವುದು. ..

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಡಾ|| ಅಜಯ್‌ನಾಗಭೂಷಣ್ ಈ ಅಧಿಕಾರಿಯ ಹೆಸರನ್ನು ನಾನು ಹೇಳುತ್ತಿದ್ದೇನೆ. ನಿಮ್ಮ ಇಲಾಖೆಯಲ್ಲಿದ್ದ ಅಜಯ್‌ನಾಗಭೂಷಣ್‌ರವರು ಏನು ಮಾಡಿದ್ದಾರೆಂದು ತೆಗೆಯಿರಿ ಸ್ವಾಮಿ. ನಾನು ಅವರ ಹೆಸರನ್ನೇ ಹೇಳುತ್ತಿದ್ದೇನೆ. ಇದರಿಂದ ನನಗೇನು ಮುಜುಗರವಿಲ್ಲ.

**ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಹೇಳಿದ್ದು ಸರಿಯಾಗಿದೆ. ಅದನ್ನು ಅವರು ಮೊಬೈಲ್ ಫೋನ್‌ನಲ್ಲಿ ರೆಕಾರ್ಡ್ ಮಾಡಿದ್ದಾರೆ. ಇಂತಹ ಅಧಿಕಾರಿಗಳು ಆ ಇಲಾಖೆಯಲ್ಲಿದ್ದಾರೆ. ಇಂತಹ ಉದ್ಧಟತನದ ವಿಚಾರವನ್ನು ಅವರು ಪ್ರದರ್ಶಿಸುತ್ತಿದ್ದಾರೆ. ಮಾನ್ಯ ಸಚಿವರ ಪಿ.ಯು ಬೋರ್ಡ್ ಹಾಗೂ ಸಚಿವಾಲಯದಲ್ಲಿ ಇಂತಹ ಕೆಲವು ಅಧಿಕಾರಿಗಳು ಇದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

**Sri SHARANAPPA MATTUR:-** Hon'ble Chairman, it is a very serious matter. Hon'ble Minister should initiate action against them.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಬಿ.ಎ, ಬಿ.ಇ.ಡಿ. ಕಾಲೇಜು ಉಪನ್ಯಾಸಕರುಗಳಿಗೆ 6 ತಿಂಗಳ ಆಗಿಲ್ಲ. ನಾನು ಅವರನ್ನು ಕರೆದುಕೊಂಡು ಹೋದೆನು. ನನ್ನೆದುರಿಗೇನೇ ಆ ಉಪನ್ಯಾಸಕರನ್ನು ಹೇಗೆ ಬೈದರು ಗೊತ್ತೇ ಸ್ವಾಮಿ. ನಾನೇನಾದರೂ ಮಾಡುವುದಾದರೇ ಮಾಡಬಹುದಿತ್ತು, ಅದನ್ನು ಬೇರೆ ರೀತಿ ಬಿಲ್ಡಪ್ ಮಾಡಿದರು. ಹೌದು, ನನ್ನೆದುರುಗಡೆ ಅವರನ್ನು ನಿಲ್ಲಿಸಿ ಮನಸೋ ಇಚ್ಛೆ ಬೈದರು. ಏನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ವಾಮಿ, ಇದೇನಾ ಈ ಸರ್ಕಾರದ ಅಧಿಕಾರಿಗಳು ಮಾನ್ಯ ಶಾಸಕರುಗಳಿಗೆ ಕೊಡುತ್ತಿರುವ ಮರ್ಯಾದೆ? ಹೀಗಾದರೆ, ನಾವು ಹೇಗೆ ಕೆಲಸ ಮಾಡುವುದು ಹೇಳಿ?

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರಲ್ಲಿ ಒಂದು ಮನವಿ. ತಾವು ಆ ಬಗ್ಗೆ ಲಿಖಿತವಾಗಿ ಒಂದು ಅರ್ಜಿಯನ್ನು ಕೊಟ್ಟರೆ, ನಾನು ತಕ್ಷಣವೇ ತನಿಖೆ ಮಾಡಿ, ಕ್ರಮ ಕೈಗೊಳ್ಳುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಶಿಫಾರಸ್ಸು ಮಾಡುತ್ತೇನೆ. ಅದಕ್ಕೆ ಒಂದು ಲಿಖಿತವಾದ ಅರ್ಜಿಯನ್ನು ಕೊಟ್ಟುಬಿಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ನಾನು ಒಂದು ಲಿಖಿತವಾದ ಅರ್ಜಿಯನ್ನು ಕೊಡುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಆಯಿತು. ದಯವಿಟ್ಟು ಒಂದು ನಿಮಿಷ ಈ ಸದನದಲ್ಲಿ . . . ಮಾನ್ಯ ಪುಟ್ಟಣ್ಣನವರೇ. . .

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಸದನದಲ್ಲಿಯೇ ಹೇಳುತ್ತಿದ್ದೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರೇನು ಸದನದಲ್ಲಿ ಗಂಭೀರವಾದಂತಹ ವಿಚಾರವನ್ನು ಹೇಳಿದ್ದಾರೆ. We will take this matter seriously. It is on record. ಈಗ ಪ್ರತ್ಯೇಕವಾಗಿ ಲಿಖಿತವಾಗಿ ಒಂದು ಅರ್ಜಿಯನ್ನು ಕೊಟ್ಟರೆ, ಅದರಿಂದ ಇನ್ನೂ ನನಗೆ ಸಹಾಯವಾಗುತ್ತದೆ ಎನ್ನುವ ದೃಷ್ಟಿಕೋನದಿಂದ ಹೇಳುತ್ತಿದ್ದೇನೆ. ಇದನ್ನೇ ನಾನು ಯಥಾವತ್ತಾಗಿ ರೆಕಾರ್ಡ್ ಮಾಡಿಕೊಂಡು ಈಗಲೂ ಕಳುಹಿಸುತ್ತೇನೆ. ಆದರೆ, ನಾಳೆ ದಿವಸ ಅದನ್ನು ಗಂಭೀರವಾಗಿ ವಿಚಾರಣೆ ಮಾಡಬೇಕಾದ ಸಂದರ್ಭದಲ್ಲಿ ಅವರ ಪತ್ರ ಬೇಕಾಗುತ್ತದೆ. ಅದಕ್ಕೆ ದಯಮಾಡಿ ಮಾನ್ಯ ಪುಟ್ಟಣ್ಣನವರು ಒಂದು ಅರ್ಜಿ ಕೊಡಲಿ. ನಮ್ಮ ಇಲಾಖೆಯಲ್ಲಿ ಯಾರೇ ಅಧಿಕಾರಿಗಳು ಈ ರೀತಿಯ ಉದ್ಧಟತನದಿಂದ ಮಾತನಾಡುತ್ತಾರೆಂದರೆ, It amounts to privilege. ಮಾನ್ಯ ಸದಸ್ಯರು ಇಲ್ಲಿ ಅವರ ಮೇಲೆ ಹಕ್ಕುಚ್ಯುತಿ ತರಬಹುದು. ಆಮೇಲೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲು ಸಹಾಯವಾಗುತ್ತದೆ. ಆದ್ದರಿಂದ ತಾವು ದಯವಿಟ್ಟು ಒಂದು ಅರ್ಜಿಯನ್ನು ಕೊಡಬೇಕೆಂದು ಕೋರುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಈ ಬಿ.ಇ.ಡಿ ಉಪನ್ಯಾಸಕರುಗಳಿಗೆ ನನ್ನೆದುರಿಗೆ ಆ ರೀತಿ ಆಯಿತಲ್ಲಾ, ಆರ್ಥಿಕ ಇಲಾಖೆಗೆ ಉಪನ್ಯಾಸಕರುಗಳು ಕಡತಕ್ಕೆ ಸಂಬಂಧಪಟ್ಟಂತೆ ಹೋಗಿ ಬಂದರೆ, ಇಲಾಖೆಯಲ್ಲಿನ ಅಧಿಕಾರಿಗಳು ಅವರಿಗೆ ನೀವ್ಯಾಕ್ರೀ ಅಲ್ಲಿಗೆ ಹೋಗುತ್ತೀರಿ? ನಾನು ಇರುವುದು ಏಕೆ? ನಾನು ನಿಮಗೆ ಸಂಬಳ ಕೊಡುವುದು ಎಂದೆಲ್ಲಾ ಆಯಿತು. ಆಗ ನಾವು ಆಯಿತು ಎಂದು ವಾಪಸ್ಸು ಬಂದೆವು. ಮೂರು ದಿವಸದೊಳಗೆ ನಿಮ್ಮ ಕೆಲಸ ಮಾಡಿಕೊಡುತ್ತೇನೆಂದು ಹೇಳಿದರು. 3 ದಿವಸಗಳ ನಂತರ ಬಿ.ಇ.ಡಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲೇಜು ಉಪನ್ಯಾಸಕರ ಸಂಘದವರು ಅಲ್ಲಿಗೆ ಹೋದರೆ, ಏನ್ರೀ ನೀವು ಮಾನ್ಯ ಶಾಸಕರನ್ನು ಕರೆದುಕೊಂಡು ಬರುತ್ತೀರಾ? ನೀವು ಅವರ ಹತ್ತಿರವೇ ಹೋಗಿ ಸಂಬಳ ಪಡೆದುಕೊಳ್ಳಿ? ಎಂದು ಹೇಳಿದ್ದಾರೆ. ಈಗ ನಮಗೆ ಹೇಗಾಗಿದೆ ಎಂದರೆ, ನಾವು ಕೆಲಸ ಮಾಡುವುದಕ್ಕೆ ಆಗುತ್ತಲೇ ಇಲ್ಲ. ನಾನು ಅವರಿಗೆ ನ್ಯಾಯ ಒದಗಿಸುವುದಕ್ಕೆ ಆಗುತ್ತಿಲ್ಲ. ನಾನು ಈಗ ಹೇಳುತ್ತಿದ್ದೀನಲ್ಲಾ, ಇದರಲ್ಲಿ ಒಬ್ಬರಿಗೂ ಕೂಡ ನಾವು ಕಾನೂನು ಬಾಹಿರವಾಗಿ ಮಾಡಿಕೊಡಿ ಎಂದು ಹೇಳುತ್ತಿಲ್ಲ. ಇವರು ಏನು ನೋಟಿಫಿಕೇಷನ್ ಮಾಡಿದ್ದಾರೆ. ಯಾವ ರೀತಿಯ ಅರ್ಹತೆ ಆಧಾರದ ಮೇಲೆ ನೋಟಿಫಿಕೇಷನ್ ಕರೆದಿದ್ದರು. ಆ ಅರ್ಹತೆ ಇರುವ ಮೆರಿಟ್ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ಕೊಡಬೇಕಲ್ಲವೇ? ಇವರು " ವಿದ್ಯಾರ್ಹತೆ ಕುರಿತಂತೆ ಯೂನಿವರ್ಸಿಟಿ ಗ್ರಾಂಟ್ ಕಮಿಷನ್ (ಯುಜಿಸಿ) ಕಾಲ ಕಾಲಕ್ಕೆ ನಿಗದಿಪಡಿಸುವ ನೀಡಲಾಗುವ ನಿರ್ದೇಶನ ಮಾರ್ಗಸೂಚಿಗಳು ಅರ್ಹತೆಯನ್ನು ನಿರ್ಧರಿಸಲು ಅನ್ವಯವಾಗುತ್ತವೆಂದು" ಇದರಲ್ಲೊಂದು ಷರತ್ತು ಹಾಕಿದ್ದಾರೆ. ಇದು ವಿಶೇಷ ಸೂಚನೆ. ಇದು ಇದ್ದ ಮೇಲೆ ನೀವು ಅವರಿಗೆ ಕೊಡಬೇಕಲ್ಲವೇ? ಈ ಅರ್ಹತೆ ಹೊಂದಿದ್ದರೂ ಕೂಡ ನೀವು ಏಕೆ ಅವರಿಗೆ ಕೊಡುತ್ತಿಲ್ಲ ಹೇಳಿ ಸ್ವಾಮಿ? ಹೀಗಾದರೆ ಆ ಅಭ್ಯರ್ಥಿಗಳು ಏನು ಮಾಡಬೇಕು? ಈಗಲೂ ಕೂಡ ಮಾನ್ಯ ಸಚಿವರ ಕಛೇರಿಗೂ ಕೂಡ ಅವರು ಎಡತಾಕುತ್ತಿದ್ದಾರೆ. ನಾವು ಮಾನ್ಯ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರನ್ನು ಸಹ ಅಲ್ಲಿಗೆ ಕರೆದುಕೊಂಡು ಹೋಗಿದ್ದೆವು. ಈಗ ಬಂದಿರುವಂತಹ ಕಾರ್ಯದರ್ಶಿಯವರನ್ನು ಸಹ ಭೇಟಿ ಮಾಡಿದ್ದೇವೆ. ಇಂದಿಗೂ ಕೂಡ ನಾವು ನಿಮ್ಮ ಕಛೇರಿಗೆ ಬಂದು ಅವರಿಗೆ ನೇಮಕಾತಿ ಆದೇಶ ಕೊಡಿಸಿ ಎಂದು ಹೇಳಿ ಬಂದಿದ್ದೇವೆ. ದಯವಿಟ್ಟು ನನ್ನ ಮನವಿಯೇನೆಂದರೆ, ತಮಗೆ ಗೊತ್ತಿರುವಂತೆ, ಈ ಹೆಚ್ಚುವರಿ ಹುದ್ದೆಗಳು ಇದ್ದವಲ್ಲಾ, ಅಂದರೆ work load ಇಲ್ಲವೆಂದು 280-300 ಹುದ್ದೆಗಳನ್ನು ಗುರುತಿಸಿದರು. ಹೇಗೆ ನೀವು ಹುದ್ದೆಗಳನ್ನು ವರ್ಗಾಯಿಸುತ್ತೀರಿ? ಅವರಿಗೆ ಕೌನ್ಸಿಲಿಂಗ್ ಮಾಡಿದ್ದಾರೆ. ಕೌನ್ಸಿಲಿಂಗ್ ಮಾಡಿದಂತೆ ಬೇಕಾದ ಕಡೆಗೆ ಹುದ್ದೆಗಳನ್ನು ತುಂಬಿದ್ದಾರೆ. ಈ ವಿಚಾರ ಮಾನ್ಯ ಸಚಿವರ ಗಮನಕ್ಕೆ ಬಂದರೂ ಕೂಡ ಅದನ್ನು ಏಕೆ ಕೇಳಲಿಲ್ಲ? ಅದನ್ನು ಮಾಡಿದಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕಿತ್ತಲ್ಲವೇ? ಅವರು ಅವರಿಗೆ ಇಷ್ಟ ಬಂದಂತಹವರಿಗೆ ಹುದ್ದೆಗಳನ್ನು ಕೊಟ್ಟರೆ ಹೇಗೆ? ಅದಕ್ಕೆ ಮಾನ್ಯ ಸಚಿವರಲ್ಲಿ ದಯಮಾಡಿ ಇದರ ಬಗ್ಗೆ ಸಂಪೂರ್ಣವಾಗಿ ವಿಚಾರಣೆ ಆಗಬೇಕು ಎಂದು ವಿನಂತಿಸುತ್ತೇನೆ. ಇದರಿಂದ ಎಷ್ಟು ತೊಂದರೆ ಕೊಟ್ಟಿದ್ದಾರೆ, ಯಾರು ತೊಂದರೆ ಕೊಟ್ಟಿದ್ದಾರೆ, ಮತ್ತು ಏಕೆ ತೊಂದರೆ ಕೊಟ್ಟಿದ್ದಾರೆ ಎಂಬ ಅಂಶಗಳು ಬೆಳಕಿಗೆ ಬರುತ್ತವೆ. ಈ ಹಿಂದೆ ಇದ್ದಂತಹ ಕಾರ್ಯದರ್ಶಿಯವರು ಏನೆಂದು ಕಡತದಲ್ಲಿ ಬರೆದಿದ್ದಾರೆಂದರೆ, 'All the problems have been created from commissionCrate only. ಅಂದರೆ, ಆಯುಕ್ತರ ಕಛೇರಿಯಿಂದಲೇ ಎಲ್ಲಾ ಸಮಸ್ಯೆಗಳು ಉದ್ಭವವಾಗುತ್ತಿದೆ ಎಂದು ಆಖಿತವಾಗಿ ಬರೆದಿದ್ದಾರೆ. ಆಮೇಲೆ ಕೆಲವು ಅಭ್ಯರ್ಥಿಗಳ distance mode ಪರಿಶೀಲನೆ ಆಗಿ ಬಂದಿದೆ. ಆ ಅಭ್ಯರ್ಥಿಗಳು ಓದಿದಂತಹ ಸಂದರ್ಭದಲ್ಲಿ ವಿಶ್ವವಿದ್ಯಾಲಯಗಳು ಯುಜಿಸಿಯಿಂದ recognition ಪಡೆದಿತ್ತೇ ಅಥವಾ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಲ್ಲವೇ ಎಂದು ಇದನ್ನು ಖಚಿತಪಡಿಸಿಕೊಂಡು ಕೊಡಲಾಗುವುದೆಂದು ಒಂದು ಸಮಿತಿಯವರು ಬರೆಯುತ್ತಾರೆ. Vice-Chancellors ಸಮಿತಿಯವರು ಅವರು ಅರ್ಹರಿದ್ದಾರೆ ಅವರಿಗೆ ಕೊಡಬೇಕೆಂದು ಪತ್ರ ಬರೆದರು.

**(ಮುಂದು**

**(182)21.2.2018/ಎಂಎಂ/ಜಿಆರ್/4.50**

**ಶ್ರೀ ಪುಟ್ಟಣ್ಣ (ಮುಂದು):-**

ಮತ್ತೆ ಅಲ್ಲಿಂದ ಹೋಯಿತು. ಅದು ಬಂದು ಮರಿ ಹಾಕುವಷ್ಟರಲ್ಲಿ ಮೂರು ತಿಂಗಳಾಯಿತು. ಮರಿ ಹಾಕಿದ ನಂತರ ರಿಜಿಸ್ಟ್ರಾರ್ ಕಮಿಟಿಯವರು ಅಲ್ಲಿ ಪ್ರಾರಂಭ ಮಾಡಿದರು. ಇದನ್ನು ದೃಢೀಕರಣ ಮಾಡಿಕೊಂಡು ಕೊಡಿ ಎಂದು ಹೇಳಿದರು. ದೃಢೀಕರಣ ಮಾಡಲು ಎಲ್ಲಿಗೆ ಹೋಗಬೇಕು? ಯುಜಿಸಿ ಅವರದ್ದು ಒಂದು ವೆಬ್‌ಸೈಟ್ ಇದೆ. ಯಾವ ವಿಶ್ವವಿದ್ಯಾನಿಲಯಗಳು ಯಾವ ವರ್ಷದಲ್ಲಿ ಎಲ್ಲೆಲ್ಲಿ recognition ಇವೆಯೆಂಬ ಬಗ್ಗೆ ಐದು ನಿಮಿಷದಲ್ಲಿ ಅದರ ಪ್ರತಿಯನ್ನು ತೆಗೆದುಕೊಳ್ಳಬಹುದು. ಅವರಿಗೆ ತೊಂದರೆ ಕೊಡುತ್ತಿರುವುದು ಒಂದೆರಡಲ್ಲ, ದಯಮಾಡಿ ತಮ್ಮ ಮೂಲಕ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದು ಸಂಪೂರ್ಣವಾಗಿ ತನಿಖೆಯಾಗಬೇಕು, ಇದಕ್ಕೆ ಸದನ ಸಮಿತಿಯೊಂದನ್ನು ಮಾಡಬೇಕು, ಸದನ ಸಮಿತಿಯ ಮುಖಾಂತರ ನೊಂದ ಅಭ್ಯರ್ಥಿಗಳಿಗೆ ನ್ಯಾಯ ಸಿಗಬೇಕು, ಇನ್ನೂ ನ್ಯಾಯ ಸಿಗದೇ ಇರುವಂತಹವರಿಗೆ ನೀವು ನ್ಯಾಯವನ್ನು ಕೊಡಿಸಬೇಕು. ಜೊತೆಗೆ ಶೇ.10ರಷ್ಟು additional list ಮಾಡುತ್ತಾರೆಂಬುದು ನಮಗೆ ಗೊತ್ತು. ಶೇ.10 additional list ಕೂಡ Karnataka Examination Authority ಯವರು ಕಳುಹಿಸಿದ್ದಾರೆ. ಆದರೆ ಇದುವರೆಗೂ ಅದನ್ನು ಮುಟ್ಟಿಲ್ಲ. ಆರ್ಥಿಕ ಇಲಾಖೆಯವರು ಅನುಮತಿ ಕೊಡುವುದೇ ಕಷ್ಟ. ಇಷ್ಟು ಹುದ್ದೆಗಳನ್ನು ಮಂಜೂರು ಮಾಡುವುದೇ ಕಷ್ಟ. ಮಂಜೂರು ಮಾಡಿದ ಮೇಲೆ, ಕಾಲ್ ಮಾಡಿದ ಮೇಲೆ, ಆಯ್ಕೆಯಾದ ಅಭ್ಯರ್ಥಿಗಳನ್ನು ತೆಗೆದುಕೊಳ್ಳುವುದಕ್ಕೆ ಮೀನಮೇಷ ಎಣಿಸಿದರೆ ಹೇಗೆ? ಬೆಂಗಳೂರಿನಲ್ಲಿ ಬಹಳಷ್ಟು ಜನರಿಗೆ ಶಾಸಕರ ಭವನ ಸೇರಿದಂತೆ ಕೊಠಡಿಗಳನ್ನು ಕೊಡಿಸಿದ್ದೇವೆ. ಅವರು ಕೊಠಡಿ ಬಾಡಿಗೆಗೆ ಹಣವನ್ನು ಕಟ್ಟಲಾರದ ಸ್ಥಿತಿಯಲ್ಲಿರುತ್ತಾರೆ. ಬೀದರ್, ರಾಯಚೂರು, ಗುಲ್ಬರ್ಗಾ ಜಿಲ್ಲೆಗಳಿಂದೆಲ್ಲಾ ಬಂದಿರುತ್ತಾರೆ. ಅವರು ಇನ್ನೂ ಓಡಾಡುತ್ತಿದ್ದಾರೆ. ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ದಯವಿಟ್ಟು ಇದನ್ನು ಒಂದು ತನಿಖೆ ಮಾಡಿ, ಸದನ ಸಮಿತಿಯೊಂದನ್ನು ಮಾಡಬೇಕು, ಜೊತೆಗೆ ಯಾರು ಉಳಿದಿದ್ದಾರೆ ಅವರಿಗೆ; ನಿಮಗೆ ಇಚ್ಛಾಶಕ್ತಿ ಇದೆ. ನೀವು ಕೇವಲ ಒಂದು ಗಂಟೆಯ ಕಾಲ ಸಭೆಯನ್ನು ನಡೆಸಿ ತೀರ್ಮಾನ ಮಾಡಿದರೆ ಅವರೆಲ್ಲರಿಗೂ ನ್ಯಾಯ ಸಿಗುತ್ತದೆ. ಯಾವ ಕಾರ್ಯದರ್ಶಿಯನ್ನು ನೋಡಿದರೂ ಅವರೆಲ್ಲಾ ಪ್ರಭಾರದಲ್ಲಿದ್ದಾರೆ, ಆಯುಕ್ತರೂ ಪ್ರಭಾರದಲ್ಲಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೀವೊಬ್ಬರು ಮಾತ್ರ full-time ಇದ್ದೀರಿ ಎಂದು ತಿಳಿದುಕೊಂಡಿದ್ದೇವೆ. ಚುನಾವಣೆ ಹತ್ತಿರ ಬಂದು ನೀವು ಕೂಡ part-time ಆಗಿ ಬಿಟ್ಟಿದ್ದೀರಿ. ವಾರದಲ್ಲಿ 3-4 ದಿವಸ ಅಲ್ಲಿಗೆ ಹೋಗುತ್ತೀರಿ. ಇಲ್ಲಿರುವುದು ಒಂದೆರಡು ದಿವಸ ಮಾತ್ರ. ಆದ್ದರಿಂದ ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಚುನಾವಣೆ ಘೋಷಣೆಯಾದರೆ Code of Conduct ಬರುತ್ತದೆ. ಎಲ್ಲಾ ಅಭ್ಯರ್ಥಿಗಳೂ ಚಾತಕ ಪಕ್ಷಿಗಳ ರೀತಿ ಹೊರಗಡೆ ಕಾಯುತ್ತಿದ್ದಾರೆ. ದಯವಿಟ್ಟು ನಾಳೆಯೇ ಒಂದು ಗಂಟೆ ಮೀಟಿಂಗ್ ಕರೆಯಿರಿ, ನಿಮ್ಮ ಆಯುಕ್ತರ ಕಛೇರಿಯವರನ್ನು ಮತ್ತು ಸಚಿವಾಲಯದವರನ್ನು ಕರೆದು ನಾಳೆಯೇ ಇದನ್ನು ತೀರ್ಮಾನ ಮಾಡುವಂತಹ ಕೆಲಸ ಮಾಡಿ. ಅರ್ಹತೆಯಿಲ್ಲದವರಿಗೆ ಕೊಡಬೇಡಿ, genuine ಅಲ್ಲದವರಿಗೆ ಕೊಡಬೇಡಿ, ಅವರ ಮೇಲೆ ಯಾವ ಕ್ರಮಗಳನ್ನಾದರೂ ತೆಗೆದುಕೊಳ್ಳಿ, ನಮ್ಮದೇನೂ ಆಕ್ಷೇಪಣೆ ಇಲ್ಲ. ಯಾರು ranking ಮೇಲೆ ಬಂದಿದ್ದಾರೆ ಅವರೆಲ್ಲರಿಗೂ ಕೂಡ ನೇಮಕಾತಿ ಆದೇಶ ಕೊಡಿಸುವ ಕೆಲಸವನ್ನು ದಯವಿಟ್ಟು ಮಾಡಬೇಕು. ಸಂಪೂರ್ಣವಾಗಿ ಮೂರು ವರ್ಷವಾಗುವುದಕ್ಕೆ ಯಾರು ಕಾರಣ, ಈ ಅಭ್ಯರ್ಥಿಗಳು ಇಷ್ಟೊಂದು ನರಳುವುದಕ್ಕೆ ಯಾರು ಕಾರಣ ಏನೇನಾಗಿದೆ, ಇದೆಲ್ಲವೂ ಸಂಪೂರ್ಣವಾಗಿ ತನಿಖೆಯಾಗಬೇಕೆಂದು ಒತ್ತಾಯಿಸುತ್ತಾ, ಉಳಿದಿರುವ ಅಭ್ಯರ್ಥಿಗಳಿಗೆ ನಿಮ್ಮ ಮುಖಾಂತರ ನ್ಯಾಯವನ್ನು ಕೊಡಬೇಕು, ನಾಳೆಯೇ ಆ ಅಭ್ಯರ್ಥಿಗಳೆಲ್ಲರಿಗೂ ನೇಮಕಾತಿ ಆದೇಶವನ್ನು ಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಮಂತ್ರಿ):-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಓದುತ್ತೇನೆ, ಅವರಿಗೆ ತೃಪ್ತಿಯಾಗದಿದ್ದರೆ ನಂತರ ಅವರಿಗೆ ಸ್ಪಷ್ಟನೆ ಮಾಡುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸಚಿವರು ಸರ್ಕಾರದ ಹೇಳಿಕೆಯನ್ನು ಓದಿದರು)**

ಇಷ್ಟೆಲ್ಲಾ ಇದ್ದಾಗ ಕೂಡ ತಾವು ಕೆಲವೊಂದು ಅನುಭವಗಳನ್ನು, ತಮ್ಮ ವಿಚಾರಗಳನ್ನು ಹೇಳಿದ್ದೀರಿ. ನಾನು ಸ್ಪಷ್ಟಪಡಿಸುವುದೇನೆಂದರೆ, ಕೆಲವು ಅಂಗವಿಕಲ ಅಭ್ಯರ್ಥಿಗಳಿಗೆ ಸ್ಥಳನಿಯುಕ್ತಿ ಮಾಡುವಂತಹ ಸಂದರ್ಭದಲ್ಲಿ ಕೆಲವು ಅಧಿಕಾರಿಗಳು ಕಿರುಕುಳ ಕೊಟ್ಟಿದ್ದಾರೆ ಎಂಬುದನ್ನು ನನ್ನ ಗಮನಕ್ಕೆ ಸದನದಲ್ಲಿ ತಂದಿದ್ದಾರೆ. ಅವರ ಬಗ್ಗೆ ಸ್ಪಷ್ಟವಾದ ಮಾಹಿತಿ ಕೊಟ್ಟರೆ ಅವರ ಮೇಲೆ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ದಯವಿಟ್ಟು ಅವರ ಮಾಹಿತಿಗಳನ್ನು ಕೊಡಿ. ಪತಿ ಪತ್ನಿ ಪ್ರಕರಣದಲ್ಲಿ ತಮಗೆ ಗೊತ್ತಿದೆ.

**ಉಪಸಭಾಪತಿಯವರು:-** ಶ್ರೀ ಬಸವರಾಜ ಹೊರಟ್ಟಿಯವರು ಮಾತನಾಡಬಯಸುತ್ತಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಪತಿ ಪತ್ನಿಯರೆಂದರೆ, ಸರ್ಕಾರಿ ನೌಕರರಿಗೆ ಮಾತ್ರ ಪತಿ ಪತ್ನಿಯರೆಂದು ಹೇಳಿದರೆ ಉಳಿದವರು ಏನು ಮಾಡಬೇಕು?ಪತಿ ಪತ್ನಿಯರೆಂದರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲರೂ ಪತಿ ಪತ್ನಿಯರೇ ಸರ್ಕಾರಿ ನೌಕರರು ಮಾತ್ರ ಅಲ್ಲ. ಉದಾಹರಣೆಗೆ ಒಬ್ಬ ರೈತ ಅಥವಾ ವ್ಯಾಪಾರಸ್ಥ ಇರುತ್ತಾನೆ; ನಮ್ಮ ಕಾಲದಲ್ಲಿ ಮಾಡಿಲ್ಲವೆಂದು ನಿಮ್ಮ ಕಾಲದಲ್ಲಿ ಮಾಡಬಾರದೇ? ಯಾವುದೇ ಟೈಂ ಇರಲಿ, ನಾನು ಸಚಿವನಾಗಿದ್ದ ಸಮಯದಲ್ಲಿ ಆ ರೀತಿ ಮಾಡಿದ್ದೆ. ಪತಿ ಪತ್ನಿಯರೆಂದರೆ ಎಲ್ಲರೂ ಬರುತ್ತಾರೆ. ಒಂದು ಸಲ ಒಬ್ಬ ರಿಕ್ಷಾ ಚಾಲಕನು ನನ್ನ ಬಳಿ ಬಂದು ತನ್ನ ಹೆಂಡತಿ ಗುಲ್ಬರ್ಗಾ ಜಿಲ್ಲೆಯಲ್ಲಿದ್ದಾಳೆ, ನಾನು ಬೆಂಗಳೂರಿನಲ್ಲಿ ರಿಕ್ಷಾ ಚಾಲಕನಾಗಿದ್ದೇನೆ ತನ್ನ ಹೆಂಡತಿಗೆ ಸ್ಥಳ ಮಾರ್ಪಾಡು ಮಾಡಿಸಿಕೊಡಿ ಎಂದು ಕೋರಿದನು. ಆಗ ನಾನು ಅಮೆಂಡ್ ಮಾಡಿ ಯಾರೇ ಆಗಿದ್ದರೂ ಸೀನಿಯ್ಯಾರಿಟಿ ಪ್ರಕಾರ ಪತಿ ಪತ್ನಿಯರಿಗೆ ಕೊಡಬೇಕೆಂದು ಮಾಡಿದೆ. ಪತಿ ಪತ್ನಿ ಯಾರೇ ಆಗಿದ್ದರೂ ಸೀನಿಯ್ಯಾರಿಟಿ ಪ್ರಕಾರ ಕೊಡಬೇಕು. ಪತಿ ಅಥವಾ ಪತ್ನಿ ಹಳ್ಳಿಯಲ್ಲಿದ್ದರೆ ಅವನ ಗತಿ ಏನು? ಸರ್ಕಾರಿ ನೌಕರರಷ್ಟೇ ಪತಿ ಪತ್ನಿಯರು ಉಳಿದವರು ಅಲ್ಲ ಎಂದರೆ ಅದು ಬೇರೆ ಅರ್ಥವಾಗುತ್ತದೆ. ದಯವಿಟ್ಟು ಅದನ್ನು ಕ್ಲ್ಯಾರಿಫೈ ಮಾಡಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ತಾವು ಹೇಳಿರುವ ಪತಿ ಪತ್ನಿ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಯಮಾವಳಿಯಲ್ಲಿ ಎಲ್ಲವನ್ನೂ ಯಥಾವತ್ತಾಗಿ ಪಾಲಿಸಲು ಆಗುವುದಿಲ್ಲ. ಕೆಲವು ಸಲ ಆಡಳಿತಾತ್ಮಕವಾದ ತೊಂದರೆಗಳಿರುತ್ತವೆ. ಪತಿ ಒಂದು ಕಡೆ ಕೆಲಸ ಮಾಡುತ್ತಿದ್ದು, ಅಲ್ಲಿ ಪತ್ನಿಗೆ posting ಕೊಡಲು ಆಡಳಿತಾತ್ಮಕವಾದ ಸಮಸ್ಯೆಗಳಿರುತ್ತವೆ. ಅಲ್ಲಿ ಅವರ post ಅಥವಾ subject ಇರುವುದಿಲ್ಲ. ಹೀಗಾಗಿ ಕೆಲವು ತೊಂದರೆಗಳಿಂದ ಅದು ಆಗುವುದಿಲ್ಲ. ಆದಾಗ್ಯೂ ಮಾನವೀಯತೆ ದೃಷ್ಟಿಯಿಂದ ಮಾಡುವುದಕ್ಕೆ ಸಾಧ್ಯವಿದೆ. ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದಂತೆ ಪತಿ ಪತ್ನಿಯರೆಂದರೆ ಇಬ್ಬರೂ ಸರ್ಕಾರಿ ನೌಕರಿ ಮಾಡುತ್ತಾರೆಂದಲ್ಲ. ಇದಕ್ಕೆ ಸೂಕ್ತವಾದ ನಿಯಮಾವಳಿಗಳು ರಚನೆಯಾಗಬೇಕು, ಜೊತೆಗೆ ಇದನ್ನು ನಿರ್ದಿಷ್ಟವಾಗಿ ಮಾಡಲೇಬೇಕೆನ್ನುವುದು ಕಷ್ಟವಾಗುತ್ತದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಅಮೆಂಡ್‌ಮೆಂಟ್ ತಂದದ್ದು ಏನೆಂದರೆ, ಕೆ.ಎಸ್.ಆರ್.ಟಿ.ಸಿ ಯಲ್ಲಿ ಕೆಲಸಮಾಡುವವರು ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ಅವರನ್ನು ಸಹಿತ ಪತಿ ಪತ್ನಿ ಎಂದು ಪರಿಗಣಿಸಿ ಅಮೆಂಡ್‌ಮೆಂಟ್ ಮಾಡಬೇಕೆಂದು ಹೇಳುತ್ತೇನೆ. ಅದೇ ರೀತಿ ಬೇರೆ ವರ್ಗದವರನ್ನೂ ಮಾಡಬೇಕೆಂದು ಹೇಳುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಬಸವರಾಜ ಹೊರಟ್ಟಿಯವರೇ, ಅದನ್ನು ಒಪ್ಪಬಹುದು. ನಾನು ಹೇಳುವುದೇನೆಂದರೆ, ಆಡಳಿತಾತ್ಮಕ ದೃಷ್ಟಿಯಿಂದ ಇದನ್ನು ಕಾನೂನು ಮಾಡಲು ಸಾಧ್ಯವಿಲ್ಲ ಎಂದು ಹೇಳಿದ್ದೇನೆ. ಆದಾಗ್ಯೂ ಮಾನವೀಯತೆ ದೃಷ್ಟಿಯಿಂದ ಅವರಿಗೆ ಅನುಕೂಲ ಮಾಡಿಕೊಡುವುದಕ್ಕೆ ಹೇಗೆಲ್ಲಾ ಸಾಧ್ಯವಿದೆಯೋ ಅದನ್ನು ಇಲಾಖೆಗಳು ಮಾಡುತ್ತವೆ. ತಾವು ಒಂದು ಮಾತನ್ನು ಹೇಳಿದಿರಿ. 2160 ಹುದ್ದೆಗಳಿಗೆ ಒಂದೇ ಬಾರಿ ಆದೇಶವನ್ನು ಕೊಡಲಿಲ್ಲ, ಮೊದಲು ಸ್ವಲ್ಪ ಕೊಟ್ಟಿರಿ, ನಂತರ ಸ್ವಲ್ಪ ಸ್ವಲ್ಪ ಕೊಟ್ಟಿರಿ ಎಂದು ಹೇಳಿದಿರಿ. ಏಕೆಂದರೆ, ಅವರ ಅರ್ಹತೆ, ಜಾತಿ ಪ್ರಮಾಣ ಪತ್ರ; ಕೆಲವು ಪದವೀಧರರು ಮಣಿಪುರ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವವಿದ್ಯಾನಿಲಯದಿಂದ ಪದವಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತಾರೆ. ಮಧ್ಯಪ್ರದೇಶದಿಂದ ಪಿ.ಹೆಚ್.ಡಿ., ಮಾಡಿಕೊಂಡು ಬಂದಿರುತ್ತಾರೆ. ಕೆಲವರು ದಕ್ಷಿಣ ಆಫ್ರಿಕಾ, ಯು.ಎಸ್., ಮುಂತಾದ ವಿದೇಶಗಳಿಂದೆಲ್ಲಾ ಪದವಿ ಪಡೆದುಕೊಂಡಿರುತ್ತಾರೆ ಇದೆಲ್ಲಾ ತಮಗೆ ಗೊತ್ತಿದೆ. ಅವನ್ನೆಲ್ಲಾ ನಾವು ಪರಿಶೀಲನೆ ಮಾಡಬೇಕಾಗುತ್ತದೆ. ಅಲ್ಲಿ ಫೇಕ್ ಇದೆಯೋ, University exist ಇದೆಯೋ ಇಲ್ಲವೋ ಅಥವಾ ಅಲ್ಲಿ ಆ ಕೋರ್ಸ್ ಇದೆಯೋ ಇಲ್ಲವೋ ಇವನ್ನೆಲ್ಲಾ ನೋಡಿಕೊಂಡು ಕ್ಲಿಯರೆನ್ಸ್ ಮಾಡುವಲ್ಲಿ ವಿಳಂಬವಾಗಿರುತ್ತದೆಯೇ ಹೊರತು ಅನಾವಶ್ಯಕವಾಗಿ ಯಾವುದನ್ನು ವಿಳಂಬ ಮಾಡಿಲ್ಲ.

(ಮುಂದು . . .

183/21.02.2018/ಕೆಹೆಚ್/ಜಿಆರ್/5-00

**ಶ್ರೀ ಬಸವರಾಜ ರಾಯರೆಡ್ಡಿ (ಮುಂದು):-**

ಈ ಬಾರಿ 24 ಅಭ್ಯರ್ಥಿಗಳನ್ನು ಅನರ್ಹರು ಮತ್ತು fit ಅಲ್ಲವೆಂದು ಗುರುತಿಸಿದ್ದೇವೆಯಲ್ಲವೇ, ನಾವು ಸ್ವತಃ ಖುದ್ದಾಗಿ ಆ ವಿಶ್ವವಿದ್ಯಾನಿಲಯದಲ್ಲಿಯೇ ಪದವಿಯನ್ನು ತೆಗೆದುಕೊಂಡಿದ್ದಾರೆಯೋ ಇಲ್ಲವೋ ಅಥವಾ ಆ ವಿಶ್ವವಿದ್ಯಾನಿಲಯವು ಯು.ಜಿ.ಸಿ.,ಯಿಂದ recognize ಆಗಿದೆಯೋ, ಇಲ್ಲವೋ, ಇವುಗಳನ್ನೆಲ್ಲಾ ಪರಿಶೀಲನೆಯನ್ನು ಮಾಡಿಸಿದ್ದೇವೆ. ಇದರಲ್ಲಿ ಕೆಲವು ಪ್ರಮಾಣ ಪತ್ರಗಳು ಬೋಗಸ್ ಇವೆ. ಈ ಬಾರಿ ಅವರಿಗೆ ಹೊಸ ಕಾನೂನು ಏನು ಮಾಡಿದ್ದೇವೆ ಎಂದರೆ, ಯಾರು ಬೋಗಸ್ ಪ್ರಮಾಣ ಪತ್ರವನ್ನು ತೆಗೆದುಕೊಂಡು ಅರ್ಜಿಯನ್ನು ಹಾಕಿದ್ದಾರೆ, ಮೊದಲ ಬಾರಿಗೆ ಮುಂದೆ ಈ ರೀತಿಯ ಪ್ರಕರಣಗಳು ಆಗಬಾರದೆಂದು ಅವರ ಮೇಲೆ ಕ್ರಿಮಿನಲ್ ಕೇಸ್‌ನ್ನು ಹಾಕಿದ್ದೇವೆ. ಇದರಿಂದ ತಾವು ಅರ್ಹರಲ್ಲರೆಂದು ತೆಗೆದು ಹಾಕಲಾಯಿತು. ನಂತರ ಮತ್ತೆ ಅವನು ಅಪ್ಲೈ ಮಾಡುತ್ತಾನೆ. 24 ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಕೇಸ್‌ನ್ನು ದಾಖಲೆ ಮಾಡಿದ್ದೇವೆ. ಹೀಗಾಗಿ ಅವರ ಮೇಲೆ cheating case ಮತ್ತು fake certificate case ಆಗುತ್ತದೆ. ಇದರಿಂದ ಮುಂಬರುವಂತಹ ವರ್ಷಗಳಲ್ಲಿ ಇಂತಹ ನಕಲಿ ಪ್ರಮಾಣ ಪತ್ರವನ್ನು ತೆಗೆದುಕೊಳ್ಳುವಂತಹ ಅಭ್ಯರ್ಥಿಗಳು ಕಡಿಮೆಯಾಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಹಿಂದೆ ಈ ರೀತಿಯಾಗಿ ಯಾರೂ ಮಾಡಿರಲಿಲ್ಲ. ಆದರೆ ಎಷ್ಟೋ ಜನ ಬೋಗಸ್ ಪ್ರಮಾಣ ಪತ್ರವನ್ನು ಮಾಡುವಂತಹ ಕೆಲಸದಲ್ಲಿ ತೊಡಗಿರುವುದನ್ನು ನಾನು ಕೇಳಿದ್ದೇನೆ. ಮುಂದೆ ಈ ರೀತಿಯ ಪ್ರಕರಣಗಳು ಆಗಬಾರದು ಎಂದು ಇದೆಲ್ಲವನ್ನೂ ಕಡ್ಡಾಯವಾಗಿ ಮಾಡಿದ್ದೇವೆ. ಹೀಗಾಗಿ ಇದು ವಿಳಂಬವಾಗಿದೆ.

ಇನ್ನೂ ಅರ್ಹತೆ ಇರುವವರಿಗೆ ಪೋಸ್ಟಿಂಗ್ ಕೊಟ್ಟಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಿರ್ದಿಷ್ಟವಾಗಿ ಯಾರ್ಯಾರು ಅರ್ಹತೆ ಇರುವವರಿಗೆ ಪೋಸ್ಟಿಂಗ್ ಕೊಟ್ಟಿಲ್ಲ ಎಂದು ಖಂಡಿತವಾಗಿ ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸದಸ್ಯರು ಹೇಳಿದರೆ, ಅವರಿಗೆ ನಾಳೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ನಾನು ಈಗಾಗಲೇ ಹೇಳಿರುವಂತೆ 107 ಅಭ್ಯರ್ಥಿಗಳಿಗೆ ಇನ್ನೂ ಪೋಸ್ಟಿಂಗ್ ಆದೇಶವನ್ನು ಕೊಡಬೇಕು. 107 ಅಭ್ಯರ್ಥಿಗಳಿಗೆ ಪೋಸ್ಟಿಂಗ್ ಆದೇಶವನ್ನು ಕೊಟ್ಟರೆ, ನಮ್ಮ ಒಟ್ಟಾರೆಯ ಪ್ರಕ್ರಿಯೆ ಮುಗಿಯುತ್ತದೆ. ಇದರಲ್ಲಿ ಏನಾಗಿದೆ ಎಂದರೆ, 107 ಅಭ್ಯರ್ಥಿಗಳ ಪೈಕಿ 9 ಅಭ್ಯರ್ಥಿಗಳ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ ಮತ್ತು 23 Distance Education Course ನಲ್ಲಿ ಏನು ಮಾಡಿದ್ದಾರೆಯಲ್ಲವೇ, ಪದವಿಯನ್ನು ತೆಗೆದುಕೊಂಡಿರುವವರು ಅರ್ಹರೇ, ಆದರೆ ಅದನ್ನು ಪರಿಶೀಲನೆ ಮಾಡುವುದರಲ್ಲಿ ಸ್ವಲ್ಪ ವಿಳಂಬವಾಗಿದೆ. ಅದನ್ನು ಕೂಡಲೇ ಮಾಡಿಸುತ್ತೇನೆ ಹಾಗೂ ಇನ್ನೂ 75 ಬೇರೆ ಬೇರೆ ಕಾರಣಕ್ಕಾಗಿ ಅಂದರೆ, ಕೆಲವು ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರವನ್ನು ತಂದು ಕೊಟ್ಟಿರುವುದಿಲ್ಲ. For various reasons, 107 ಅಭ್ಯರ್ಥಿಗಳು ಆಗಬೇಕು. ನಾನು ನನ್ನ ಸಮಯವನ್ನು ನೋಡಿಕೊಂಡು, ತಾವು ಇದರ ಬಗ್ಗೆ ಒಂದು ಸಭೆಯನ್ನು ಮಾಡಿಸಿ ಎಂದು ಹೇಳಿದರೆ, ಒಂದು ಸಭೆಯನ್ನು ಮಾಡಿಸುತ್ತೇನೆ. Before this Saturday, I will try to call a meeting inviting the Principal Secretary and the Commissioner. ತಾವು ಕೂಡ ಆ ಸಭೆಗೆ ಬರಬಹುದು. ನಮ್ಮ ಸಚಿವಾಲಯದ ಕಡೆಯಿಂದ ಇದರ ಬಗ್ಗೆ ಮಾಹಿತಿಯನ್ನು ಕೊಡಿಸುತ್ತೇನೆ. ಇದನ್ನು ಶನಿವಾರದೊಳಗೆ ಮಾಡಿ, ಅಭ್ಯರ್ಥಿಗಳಿಗೆ ಸಹಾಯ ಮಾಡುವುದಕ್ಕೆ ಖಂಡಿತವಾಗಿ ಸರ್ಕಾರದ ನಿಲುವನ್ನು ಹೇಳುತ್ತೇನೆ.

ಎರಡನೆಯದಾಗಿ, ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದೇವೆ. ಆಯ್ಕೆ ಪಟ್ಟಿಗೆ ಶೇಕಡಾ 10 ರಷ್ಟು ನಿಯಮಾವಳಿಯಲ್ಲಿ ಮೀಸಲಾತಿಯನ್ನು ಕೊಡಬೇಕೆಂದು ಅಂದುಕೊಂಡಿದ್ದೇವೆ. 216 ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಸಿದ್ಧ ಮಾಡಬೇಕು. ಈ ಆಯ್ಕೆ ಪ್ರಕ್ರಿಯೆ ಇನ್ನು ಪೂರ್ಣಗೊಂಡಿಲ್ಲ, because of this reasons. ತಾವು ಹೇಳಿರುವುದನ್ನು ನಾನು ಬಹುತೇಕವಾಗಿ ಒಪ್ಪುತ್ತೇನೆ. Commissionarate ನಲ್ಲಿ ಬಹಳ ತೊಂದರೆಯಾಗಿದೆ. ಅಧಿಕಾರಿಗಳ ಉದ್ಧಟತನ ಇವೆಲ್ಲಾ ಇದ್ದೇ ಇರುತ್ತದೆ. I have also noticed. ತಾವು ಹೇಳುವುದು ನನಗೂ ಸಹ ಗೊತ್ತಿದೆ. ತಾವು ಹೇಳಿದ ಹಾಗೆ ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ, ನಮ್ಮ ರಾಜ್ಯದಲ್ಲಿ 95 ಐ.ಎ.ಎಸ್., ಅಧಿಕಾರಿಗಳ ಕೊರತೆ ಇದೆ. ಹೀಗಾಗಿ ಅನಿವಾರ್ಯವಾಗಿ ಒಂದೊಂದು ಇಲಾಖೆ, ಎರಡೆರಡು ಇಲಾಖೆ, ಮೂರುಮೂರು ಇಲಾಖೆಗಳು ಒಬ್ಬ ಅಧಿಕಾರಿಯ ಕೆಳಗಡೆ ಇದೆ. Even in case of my Principal Secretary, he is in-charge of Animal Husbandry Department. My Commissioner is in-charge of Tourism Department. Our Bangalore Special Deputy Commissioner is working as the Executive Director of K.E.A., ಹೀಗಾಗಿ ಮಾನ್ಯ ಸದಸ್ಯರು ಏನು ಹೇಳಿದ್ದಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ಸರ್ಕಾರವು ನಮ್ಮ ಇಲಾಖೆಯಲ್ಲಿ ಇದನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದ್ದೇಶಪೂರ್ವಕವಾಗಿ ಮಾಡಿಲ್ಲ. ಇನ್ನು ಹಲವಾರು ಇಲಾಖೆಗಳಲ್ಲಿ ಈ ರೀತಿಯಲ್ಲಿದೆ. ನಮ್ಮ ರಾಜ್ಯದಲ್ಲಿ ೨೧೨ ಐ.ಎ.ಎಸ್., ಅಧಿಕಾರಿಗಳ ಹುದ್ದೆ ಖಾಲಿ ಇದೆ. All-India level ನಲ್ಲಿ 1500 ಐ.ಎ.ಎಸ್., ಅಧಿಕಾರಿಗಳ ನೇಮಕಾತಿಯಾಗಬೇಕು. ಹೀಗಾಗಿ ತೊಂದರೆಯಾಗಿದೆ. ಆದ್ಯಾಗ್ಯೂ ಕೂಡ ಇದರ ಬಗ್ಗೆ ಪ್ರಯತ್ನವನ್ನು ಮಾಡಿ ತ್ವರಿತವಾಗಿ ಈ ವಾರದಲ್ಲಿಯೇ before the Code of Conduct ಬರುವುದಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

ಮೂರನೆಯದಾಗಿ, ಶ್ರೀ ಪುಟ್ಟಣ್ಣನವರು ಮತ್ತು ಶ್ರೀ ಶರಣಪ್ಪ ಮಟ್ಟೂರರವರು ಗಂಭೀರವಾದ ವಿಚಾರವನ್ನು ಹೇಳಿದ್ದಾರೆ. ಅಧಿಕಾರಿಗಳು ಬಹಳ ಉದ್ಧಟತನದಿಂದ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಮತ್ತು ಶಾಸಕರುಗಳಿಗೆ ಅಷ್ಟೇ ಅಲ್ಲ, ಸಾರ್ವಜನಿಕರಿಗೂ ಕೂಡ ಗೌರವವನ್ನು ಕೊಡಬೇಕಾಗಿರುವಂಥದ್ದು ಅವರ ಆದ್ಯಕರ್ತವ್ಯವಾಗಿದೆ. Because, they are called as public servants, they are not masters. ಮಾನ್ಯ ಸದಸ್ಯರೇ ಈಗಲೂ ಇದೆ. ಯಾರು ಹೇಳಿದ್ದು? ಏನಾದರೂ ಕಾನೂನು ತಿದ್ದುಪಡಿಯಾಗಿದೆಯೇ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಆಗಲೇ ಹೇಳಿದರಲ್ಲವೇ, ಅದಕ್ಕಿಂತ ಸಾಕ್ಷಿ ಬೇಕೇ?

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಸ್ವಾಮಿಯವರೇ ಕಾನೂನು ಏನಾದರೂ ತಿದ್ದುಪಡಿಯಾಗಿದೆಯೇ ಎಂದು ಕೇಳುತ್ತಿದ್ದೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗಲೂ ಕೂಡ ಬಹಳಷ್ಟು ಜನ ಅಧಿಕಾರಿಗಳು ಬಹಳ ಗೌರವದಿಂದ ನಡೆದುಕೊಳ್ಳುತ್ತಾರೆ. ಕೆಲಸವನ್ನು ಮಾಡವಂತಹವರು ಬೇಕಾದಷ್ಟು ಜನ ಇದ್ದಾರೆ. ಅದರ ಬಗ್ಗೆ ತಕರಾರು ಇಲ್ಲ.

**ಸಭಾಪತಿಯವರು:-** ಶ್ರೀ ಪುಟ್ಟಣ್ಣನವರೇ ಮಾನ್ಯ ಸಚಿವರು ಮಾತನಾಡಿ ಮುಗಿಸಲಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, they are public servants. ಹೀಗಾಗಿ ಅಧಿಕಾರಿಗಳು ಸಾರ್ವಜನಿಕರಿಗೂ ಕೂಡ ಗೌರವವನ್ನು ಕೊಡಬೇಕು ಮತ್ತು ಶಾಸಕರಿಗೂ ಕೂಡ ಗೌರವವನ್ನು ಕೊಡಬೇಕು. ಇದು ಅವರ ಆದ್ಯ ಕರ್ತವ್ಯವಾಗಿದೆ. ಮಾನ್ಯ ಸದಸ್ಯರಿಗೆ ಅಧಿಕಾರಿಗಳು ಏನಾದರೂ ಅಗೌರವದಿಂದ ವರ್ತಿಸಿದರೆ ಮತ್ತು ತಮ್ಮ ಬಗ್ಗೆ ಇನ್ನೊಬ್ಬರ ಹತ್ತಿರ ಅಗೌರವದಿಂದ ಮಾತನಾಡಿದರೆ ಅದು ತಪ್ಪು. ಅದರ ಬಗ್ಗೆ ತಾವು ಬರವಣಿಗೆಯ ರೂಪದಲ್ಲಿ ಕೊಟ್ಟರೆ ವಿಚಾರಣೆಯನ್ನು ಮಾಡಿಸುವುದಕ್ಕೆ ಅನುಕೂಲವಾಗುತ್ತದೆ. ತಾವು ಮತ್ತು ಶ್ರೀ ಶರಣಪ್ಪ ಮಟ್ಟೂರರವರು ವಿಚಾರಣೆಯನ್ನು ಮಾಡಿಸಿ, ಅದರಲ್ಲಿ ಏನು ತಪ್ಪಿಲ್ಲ. ಈ ಹಿನ್ನಲೆಯಲ್ಲಿ ನನ್ನದೇನು ಅಭ್ಯಂತರವಿಲ್ಲ. ಈ ವಿಷಯಕ್ಕೆ ಸದನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಮಿತಿಯನ್ನು ಮಾಡಿ ಎಂದು ಹೇಳಿದ್ದಾರೆ. ನಿಯಮದ ಪ್ರಕಾರ ಸದನ ಸಮಿತಿಯನ್ನು ಮಾಡುವುದಕ್ಕೆ ಬರುವುದೇ ಇಲ್ಲ. ತಮಗೇನಾದರೂ ವಿಚಾರಣೆಯನ್ನು ಮಾಡಬೇಕೆಂದರೆ there should be specific charges and specific reasons.

**ಶ್ರೀ ಎಂ.ಆರ್. ಸೀತಾರಾಂ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಹಕ್ಕುಬಾಧ್ಯತಾ ಸಮಿತಿಗೆ ಸೂಚಿಸಬಹುದಲ್ಲವೇ?

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಹಕ್ಕುಬಾಧ್ಯತಾ ಪ್ರಸ್ತಾವವನ್ನು ಮಂಡಿಸಬಹುದು. That I can't advise them. It is their right. I can't advise them. Move a breach of privilege motion or file a demotion case ಎಂದು ಹೇಳುವುದಕ್ಕೆ I am not a Lawyer. They will only decide it. But, as a Minister, ಅವರು ನಿರ್ದಿಷ್ಟವಾಗಿ ದೂರನ್ನು ನನಗೆ ಕೊಟ್ಟರೆ ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಮತ್ತು ವಿಳಂಬ ನೀತಿಯಲ್ಲಿ ಈ ರೀತಿಯಾಗಿದ್ದೆ, ನಮ್ಮ ಕಾರ್ಯದರ್ಶಿಯವರಾದ ಶ್ರೀ ರಾಜ್‌ಕುಮಾರ್ ಕತ್ರಿ ಯವರು ಬಹಳ ಆಸಕ್ತಿಯಿಂದ ಕೆಲಸವನ್ನು ಮಾಡುತ್ತಿದ್ದಾರೆ. He is also a very good Officer. ಬಹಳ ಪರಿಣಾಮಕಾರಿಯಾಗಿ ಕೆಲಸವನ್ನು ಮಾಡುತ್ತಾರೆ. Our Commissioner is also a very good lady. ಅಧಿಕಾರಿಗಳನ್ನು ಹೊಗಳಬೇಕಾಗಿಲ್ಲ. ಕೆಲವು ಅಧಿಕಾರಿಗಳು ಸರಿ ಇರುವುದಿಲ್ಲ. ಕೆಲವು ಅಧಿಕಾರಿಗಳು ಸರಿಯಾಗಿ ಇರುತ್ತಾರೆ. Dr.Manjula, Commissioner for Collegiate Education, is a very good lady. She is very effective and efficient. ತಾವು ಹೇಳಿದ ಹಾಗೆ ಮೊದಲು ಇದ್ದ ಆಯುಕ್ತರಿಂದ ಬಹಳ ಒತ್ತಡವಾಗುತ್ತಿತ್ತು. ನಾನೇ ಹೋಗಿ ಕೆಲಸ ಮಾಡುವಂತಹ ಪ್ರಸಂಗ ಇರುತ್ತಿತ್ತು. ಡಾ|| ಅಜಯ್ ನಾಗಭೂಷಣ್ ರವರ ಕಥೆ ಕೂಡ ಹೇಳುತ್ತೇನೆ. ರಾಷ್ಟ್ರಪತಿಯವರ function ನಲ್ಲಿ ಕುರ್ಚಿ ಹಾಕುವುದಕ್ಕೂ ಕೂಡ ನಾನು ಹೋಗಿದ್ದೇನೆ. ಇವೆಲ್ಲಾ ಕಥೆಗಳನ್ನು ಹೇಳಿದರೆ ಅವರು ನಮಗೆ ಏಕೆ ಕುರ್ಚಿಯನ್ನು ಹಾಕಿಲ್ಲ ಎಂದು ಕೇಳಿದ್ದಾರೆ. ಇವೆಲ್ಲಾ ವಿಷಯಗಳು ತಮಗೆ ಗೊತ್ತೆ, ಸದನದಲ್ಲಿ ಇದೆಲ್ಲಾ ವಿಷಯಗಳನ್ನು ಹೇಳುವುದು ಬೇಕಾಗಿಲ್ಲ. ಅಂತಹ ಅಧಿಕಾರಿಗಳಿಂದಲೇ ಇಲಾಖೆಯಲ್ಲಿ ಕೆಲವು ತಪ್ಪುಗಳು ಆಗಿವೆ. ಇವೆಲ್ಲಾ ತಮಗೂ ಸಹ ಗೊತ್ತಿದೆ. Laptop ವಿಚಾರ, ಎಲ್ಲಾ ವಿಚಾರಗಳು ತಮಗೂ ಸಹ ಗೊತ್ತಿದೆ. ಮಾನ್ಯ ಸದಸ್ಯರು ಏನು ಮಾತನಾಡಿದ್ದಾರೆ ಎಂಬುದು ಅವರಿಗೆ ಗೊತ್ತಿಲ್ಲ. ನಾನು ಸಚಿವರಾಗಿ ಈ ರೀತಿ ಮಾತನಾಡುವುದು ತಪ್ಪಾಗುತ್ತದೆ. ಹಾಗಾಗಿ ನಿರ್ದಿಷ್ಟವಾಗಿ ಏನಾದರೂ ಇದ್ದರೆ ದಯಮಾಡಿ ಕೊಡಿ, ಕಾನೂನು ರೀತಿಯಲ್ಲಿ ಕ್ರಮವನ್ನು ಜರುಗಿಸುವುದಕ್ಕೆ ಸಾಧ್ಯವಾಗುತ್ತದೆ. ಖಂಡಿತವಾಗಿ ಕ್ರಮವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆಗೆದುಕೊಳ್ಳುತ್ತೇವೆ. ನಮ್ಮ ಇಲಾಖೆಯ ಆಯುಕ್ತರು ಕೂಡ ಬಹಳ ಪರಿಣಾಮಕಾರಿಯಾಗಿ ಕೆಲಸವನ್ನು ಮಾಡುತ್ತಿದ್ದಾರೆ. ಕಾರ್ಯದರ್ಶಿಯವರು ಸಹ ಚೆನ್ನಾಗಿ ಕೆಲಸವನ್ನು ಮಾಡುತ್ತಿದ್ದಾರೆ. ಇವರುಗಳನ್ನು ನಾಳೆ ಕರೆಸಿ 107 ಅಭ್ಯರ್ಥಿಗಳು ಮತ್ತು ತಮ್ಮ ಸಮಸ್ಯೆಗಳು ಏನಿವೆ. ಅದನ್ನು ಅವರ ಕಡೆಯಿಂದಲೇ ವಿಚಾರಣೆಯನ್ನು ಮಾಡಿಸುತ್ತೇನೆ. ಏಕೆಂದರೆ, ಬೇರೆಯವರನ್ನು ನೇಮಕಾತಿಯನ್ನು ಮಾಡಿಸಿ ಮಾಡುವುದಕ್ಕೆ ಸರಿಯಲ್ಲ. Our Principal Secretary is very efficient and he is capable. ಅವರು ಮಾಡುವುದಕ್ಕೆ ಸಾಧ್ಯತೆ ಆಗುತ್ತದೆ. ಈಗಾಗಲೇ ಇಲಾಖಾ ವಿಚಾರಣೆಯನ್ನು ಮಾಡುವುದಕ್ಕೆ ಪತ್ರವನ್ನು ಸಹ ಬರೆದಿದ್ದೇನೆ. ನಮ್ಮ ಇಲಾಖೆಯಲ್ಲಿ ಏನಾಗಿದೆ, ಒಂದು ವರ್ಷದಿಂದ ಯಾವುದೇ ಕಾರ್ಯಕ್ರಮಗಳಾಗಿಲ್ಲ. There is a total failure in my Collegiate Education Department. ಎಸ್.ಡಿ.ಪಿ ಹಣ ಖರ್ಚಾಗಿಲ್ಲ. ಎಸ್.ಸಿ.ಪಿ., ಟಿ.ಎಸ್.ಪಿ., ಹಣ ಖರ್ಚಾಗಿಲ್ಲ. ಲ್ಯಾಪ್‌ಟಾಪ್ ಖರೀದಿ ವಿಷಯದಲ್ಲಿ ತೊಂದರೆಯಾಯಿತು. There are series of problems. ಈಗ ಎಲ್ಲಾ ಚಾಲನೆಯನ್ನು ಕೊಟ್ಟು I am happy. ನಾಳೆಗೆ ಎಲ್ಲವೂ ಪೂರ್ಣವಾಗುತ್ತದೆ. ಇದು ಆರು ತಿಂಗಳ ಮೊದಲೇ ಆಗಬೇಕಾಗಿತ್ತು. ನನ್ನ ವೇಗಕ್ಕೆ ಅವರ್‍ಯಾರು ಓಡಲಿಲ್ಲ. ನನ್ನ ಮೇಲೆಯೇ ಆಪಾಧನೆ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಹೀಗಾಗಿ ಆ ವೇಗವನ್ನು ಕೊಡುವುದಕ್ಕೆ ಆಯುಕ್ತರು ಮತ್ತು ಕಾರ್ಯದರ್ಶಿಯವರು ಬಹಳ ಸಹಾಯವನ್ನು ಮಾಡಿದ್ದಾರೆ. ಖಂಡಿತವಾಗಿ ಇದೆಲ್ಲಾ ಮಾಡಿಸಿಕೊಡುತ್ತೇನೆ. ತಾವು ನನ್ನ ಮೇಲೆ ನಂಬಿಕೆ ಇಡಬೇಕು. ತಮಗೆ ಏನೇನು ಅಗೌರವ ಉಂಟಾಗಿದೆ. ಇದರ ಬಗ್ಗೆ ವಿಚಾರಣೆಯಲ್ಲಿ ನಿರ್ದಿಷ್ಟವಾಗಿ ವಿಚಾರಣೆಯನ್ನು ಮಾಡಿಸೋಣ. ಇದನ್ನು ಕೂಡ ಇಲಾಖೆಯ ಮಟ್ಟದಲ್ಲಿ ವಿಚಾರಣೆಯನ್ನು ಮಾಡಿ ತಮಗೆ ನ್ಯಾಯವನ್ನು ಒದಗಿಸಿಕೊಡುತ್ತೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ನಾನು ಕೇಳಿದ ಮೇಲೆ ಮಾನ್ಯ ಸಚಿವರು ಇದರ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಇನ್ನೂ ನನಗೆ ಸಮಧಾನವಾಗಬೇಕಲ್ಲವೇ?

**ಉಪಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ ದಯವಿಟ್ಟು ಎರಡು ನಿಮಿಷ ಕುಳಿತುಕೊಳ್ಳಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಲ್ಲಿ ಎರಡು-ಮೂರು ಪ್ರಶ್ನೆಗಳನ್ನು ಕೇಳಬೇಕೆಂದಿದ್ದೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಪ್ರಶ್ನೆಯನ್ನು ಕೇಳಲಿ.

**ಉಪಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ ಕೇಳಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನನ್ನ ಎರಡು-ಮೂರು ಪ್ರಶ್ನೆಗಳೇಂದರೆ, ಈಗ ಇಲಾಖೆಗೆ ಬಂದಿರುವಂತಹ ಕಾರ್ಯದರ್ಶಿಯವರು ಮತ್ತು ಆಯುಕ್ತರು ಒಳ್ಳೆಯವರು ಇದ್ದಾರೆ. ಚೆನ್ನಾಗಿ ಕೆಲಸವನ್ನು ಮಾಡುತ್ತಾರೆ ಎಂದು ಖಂಡಿತವಾಗಿ ನಾನು ಒಪ್ಪುತ್ತೇನೆ. ನಾವು ಇಲ್ಲದೆ ಇರುವವವರ ಬಗ್ಗೆ ಎಲ್ಲಾ ಏನು ಹೇಳುವುದಿಲ್ಲ. ಕೆಲಸ ಮಾಡುವವರ ಬಗ್ಗೆ ಬಹಳ ಗೌರವ ಇದೆ. ಇದೇ ಇಲಾಖೆಯಲ್ಲಿಯೇ ಬಹಳಷ್ಟು ಒಳ್ಳೆಯ ಅಧಿಕಾರಿಗಳನ್ನು ನೋಡಿದ್ದೇನೆ. ಮಾನ್ಯ ಸಚಿವರು ಉದ್ದೇಶ ಪೂರಕವಾಗಿ ವಿಳಂಬವಾಗಿಲ್ಲವೆಂದು ಹೇಳಿದ್ದಾರಲ್ಲವೇ Karnataka Examination Authority ಯಿಂದ ಬಂದ ಮೇಲೆ ಇಷ್ಟು ದಿವಸ ನಿಧಾನ ಏಕಾಯಿತು. ನಿಮ್ಮ ಹತ್ತಿರವೇ ಎಲ್ಲಾ ದಾಖಲಾತಿಗಳು ಇದೆಯಲ್ಲವೇ? ನಾನು ಏಕೆ ತಮಗೆ ಪುರಾವೆಗಳನ್ನು ಕೊಡಬೇಕು. ತಾವು ಒಂದು ವಿಚಾರಣೆಯನ್ನು ಮಾಡಿಸಬೇಕು.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರೇ ಒಂದು ನಿಮಿಷ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಒಂದು ನಿಮಿಷ. ನಾನು ಹೇಳುವುದನ್ನು ಕೇಳಬೇಕು.

(ಮುಂದು)

184) 21/02/2018/ಎಸ್‌ಪಿಆರ್/ಎಂ.ಡಿ./5:10

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಾನು ಈಗಾಗಲೇ ಹೇಳಿದ್ದೇನೆ. ನೀವು ವಿಷಯವನ್ನು ಪ್ರಸ್ತಾಪ ಮಾಡುವ ಮೊದಲೇ ನಾನು ನಮ್ಮ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಒಂದು ವಾರ ಹತ್ತು ದಿನಗಳ ಹಿಂದೆ ಪತ್ರವನ್ನು ಬರೆದಿದ್ದೇನೆ. *SCP* and *TSP* (Special Component Plan) and (Tribal Sub-Plan) ಯೋಜನೆಗಳಲ್ಲಿ ಹಣವನ್ನು ಬಿಡುಗಡೆ ಮಾಡುವಲ್ಲಿ ಮತ್ತು ಲ್ಯಾಪ್‌ಟಾಪ್‌ಗಳನ್ನು ಹಂಚಿಕೆ ಮಾಡುವುದರಲ್ಲಿ ಏಕೆ ವಿಳಂಬವಾಗಿದೆ ಎಂಬುದರ ಬಗ್ಗೆ ಈಗಾಗಲೇ ಮಾಹಿತಿಯನ್ನು ಒದಗಿಸುವಂತೆ ತಿಳಿಸಲಾಗಿದೆ. ಕಾಲೇಜು ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಇಂತಹ ಎಲ್ಲಾ ವಿಚಾರಗಳಲ್ಲಿ ಏಕೆ ವಿಳಂಬವಾಗಿದೆ ಹಾಗೂ ಇದಕ್ಕೆ ಯಾರು ಜವಾಬ್ದಾರರು ಎಂಬಿತ್ಯಾದಿ ವಿಷಯಗಳ ಬಗ್ಗೆ ವರದಿಯನ್ನು ನೀಡುವಂತೆ ಈಗಾಗಲೇ ತಿಳಿಸಲಾಗಿದೆ.

**ಉಪಸಭಾಪತಿಯವರು:-** ಮಾನ್ಯ ಸದಸ್ಯರಾದ ಪುಟ್ಟಣ್ಣನವರು ಏನು ಹೇಳುತ್ತಾರೆ ಮೊದಲು ಹೇಳಲಿ.

ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಇಂತಹ ವಿಚಾರಗಳ ಬಗ್ಗೆ ವರದಿಯನ್ನು ನೀಡುವಂತೆ ಈಗಾಗಲೇ ತಿಳಿಸಲಾಗಿದೆ. I have asked report to my Principal Secretary.

**ಉಪಸಭಾಪತಿಯವರು:-** ಇನ್ನು ಏನು ವಿಚಾರವಿದೆ ಅದನ್ನೂ ಸಹ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಲಿ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಈ ವಿಷಯದಲ್ಲಿ ಮಾನ್ಯ ಮಂತ್ರಿಗಳ ವಿರುದ್ಧ ಆಪಾದನೆಗಳನ್ನು ಮಾಡುತ್ತಿಲ್ಲ. ಅವರು ತಪ್ಪು ಮಾಡಿದ್ದಾರೆ ಎಂಬುದಾಗಿ ನಾನು ಹೇಳುತ್ತಿಲ್ಲ.

**ಉಪಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಈ ವಿಚಾರದಲ್ಲಿ ಸಾಕಷ್ಟು ಅಂಶಗಳನ್ನು ಈಗಾಗಲೇ ಹೇಳಲಾಗಿದೆ. ನೀವು ಈ ವಿಚಾರದಲ್ಲಿ ಸಂಕ್ಷಿಪ್ತವಾಗಿ ಮಾತನಾಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಹೇಳುವುದೇನೆಂದರೆ, ಮಾನ್ಯ ಮಂತ್ರಿಗಳು ವಿಳಂಬವಾಗಿಲ್ಲವೆಂದು ಹೇಳಿದ್ದಾರೆ. ಆದರೆ ಮಂತ್ರಿಗಳಿಂದ ಆದೇಶವಾದರೂ ಕೂಡ ಕೆಲಸಗಳು ಆಗಿಲ್ಲ. ಹಾಲಿ ಇರುವ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹುದ್ದೆಯ ಪ್ರಭಾರವನ್ನು ವಹಿಸಿಕೊಂಡ ತಕ್ಷಣ ನಿಗದಿತ ಸಮಯವೊಂದನ್ನು ನಿಗದಿಪಡಿಸಿ ಇಲಾಖೆಯ ಆಯುಕ್ತರ ಕಛೇರಿಗೆ ಬನ್ನಿ, ಅಲ್ಲಿಗೆ ನಾನೂ ಸಹ ಬರುತ್ತೇನೆ ಎಂಬುದಾಗಿ ನನಗೆ ತಿಳಿಸಿದರು. ಅದರಂತೆ ನಾನು ಆಯುಕ್ತರ ಕಛೇರಿಗೆ ನಿಗದಿತ ಸಮಯಕ್ಕೆ ಹೋದೆನು. ಅಲ್ಲಿಗೆ ಇಲಾಖೆಯ ಅಧಿಕಾರಿಗಳನ್ನೆಲ್ಲಾ ಕರೆಸಿದ್ದರು. ನೀವುಗಳು ಏನು ಕೆಲಸ ಮಾಡುತ್ತಿರೋ ನನಗೆ ಗೊತ್ತಿಲ್ಲ; ಆದರೆ, 5ನೇ ತಾರೀಖಿನೊಳಗಾಗಿ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಳ್ಳಬೇಕೆಂದು ನಿರ್ದೇಶನ ನೀಡಿದರು. ಆದರೆ ಈವರೆವಿಗೂ ಸಹ ಕೆಲಸಗಳಾಗಿಲ್ಲ. ದೂರ ಶಿಕ್ಷಣ ಹಾಗೂ ಇವುಗಳನ್ನು ಯಾವ ರೀತಿಯಾಗಿ ಪರಿಶೀಲನೆ ಮಾಡಬೇಕು ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ಪ್ರಸ್ತಾಪಿಸಿದರು. ದೂರ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಯಾವುದೇ ಪತ್ರವ್ಯವಹಾರಗಳನ್ನು ಮಾಡಬೇಕಿಲ್ಲ. UGC website open ಮಾಡಿದರೆ, ಅಲ್ಲಿ ಎಲ್ಲಾ ಮಾಹಿತಿಗಳು ಲಭ್ಯವಾಗುತ್ತವೆ. ಆದರೆ ಇದೇ ಷರಾವನ್ನು ಕಡತದಲ್ಲಿ ನಮೂದಿಸಿ, ಕಡತವನ್ನು ಇಲಾಖೆಯ ಸಚಿವಾಲಯಕ್ಕೆ ಹಿಂದಿರುಗಿಸಿದ್ದಾರೆ. ಸದರಿ ಷರಾವನ್ನು ಸರಿಪಡಿಸಿ ಎಂಬುದಾಗಿ ನಮೂದು ಮಾಡಿ ಪುನ: ಕಡತವನ್ನು ಕಳುಹಿಸಿದ್ದಾರೆ. ಇದೇ ರೀತಿ ಕಡತ ಒಂದು ಕಛೇರಿಯಿಂದ ಮತ್ತೊಂದು ಕಛೇರಿಗೆ ಓಡಾಡುತ್ತಿದೆಯೇ ವಿನಃ ಯಾವುದೇ ಕೆಲಸಗಳಾಗಿಲ್ಲ. ಇಂತಹ ಸಂಗತಿಗಳು ಮಾನ್ಯ ಇಲಾಖೆಯ ಮಂತ್ರಿಗಳಿಗೆ ಗೊತ್ತಾಗಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಿಗದಿತ ಸಮಯದಲ್ಲಿ ದಾಖಲೆಗಳನ್ನು ಒದಗಿಸಿದ್ದಾರೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಯಾವ ಕೆಲಸವನ್ನು ವಹಿಸಲಾಗಿದೆಯೋ ಅದರನ್ವಯ ಅವರು ಕೆಲಸವನ್ನು ಮಾಡಿ ಕೊಟ್ಟಿದ್ದಾರೆ. ಇಂತಹ ಕಡತಗಳ ಓಡಾಟವು ಮುಗಿಯುವುದೇ ಇಲ್ಲ ಹಾಗೂ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು ಇದನ್ನು ಮುಗಿಸುವುದೇ ಇಲ್ಲ. ಇಲಾಖೆಯಲ್ಲಿ ಏನೇನು ಆಗುತ್ತಿದೆ ಎಂಬುದು ನಿಮ್ಮ ಗಮನಕ್ಕೆ ಬರುವುದಿಲ್ಲ. ಇಲಾಖೆಯ ಕೆಳ ಹಂತದ ಸಿಬ್ಬಂದಿಗಳ ಹತ್ತಿರ ಯಾವ ರೀತಿಯಾಗಿ ಕೆಲಸಗಳು ನಡೆಯುತ್ತವೆ ಎನ್ನುವುದು ನಮಗೆ ಗೊತ್ತಿದೆ. ಇಲಾಖೆಯ ಕಾರ್ಯದರ್ಶಿಗಳು, ಆಯುಕ್ತರ ಹತ್ತಿರ ದುಡ್ಡು ನಡೆಯುವುದಿಲ್ಲ. ಅವರುಗಳು ಪ್ರಾಮಾಣಿಕವಾಗಿ ಕೆಲಸವನ್ನು ನಿರ್ವಹಿಸುತ್ತಾರೆ. ಮಂತ್ರಿಗಳ ಕಛೇರಿಯಲ್ಲಿಯೂ ಸಹ ಕೆಲಸವನ್ನು ಮಾಡುತ್ತಾರೆ. ಆದರೆ ಇಲಾಖೆಯ ಕೆಳ ಹಂತದ ಅಧಿಕಾರಿ/ಸಿಬ್ಬಂದಿಗಳ ಹತ್ತಿರ ಕೆಲಸಗಳಾಗುವುದಿಲ್ಲ. ಒಬ್ಬ ಕಾರ್ಕೂನ ಹೊಡೆಯುವ ಗೂಟವನ್ನು ಒಬ್ಬ ಮಂತ್ರಿಯೂ ಸಹ ಕಿತ್ತುಹಾಕುವುದಕ್ಕೆ ಆಗುವುದಿಲ್ಲ ಎಂಬುದಾಗಿ ಹೇಳುತ್ತಾರೆ. ಅದೇ ರೀತಿಯಾಗಿ ನಿಮ್ಮ ಇಲಾಖೆಯ Secretariat and Commissionerate ನಲ್ಲಿ ಕರ್ತವ್ಯ ನಿರ್ವಹಿಸುವ ಕೆಳಹಂತದ ಅಧಿಕಾರಿ/ಸಿಬ್ಬಂದಿಗಳಿಗೆ ದುಡ್ಡನ್ನು ಕೊಡದೇ ಹೋದರೆ, ಅವರುಗಳು ಕೆಲಸವನ್ನೇ ಮಾಡುವುದಿಲ್ಲ. ಬೇರೆಯವರ ಮುಖಾಂತರ ದುಡ್ಡನ್ನು ಸಂಗ್ರಹಿಸುತ್ತಾರೆ. ಅವರುಗಳಿಗೆ ದುಡ್ಡನ್ನು ಕೊಡದೇ ಹೋದರೆ, ಕೆಲಸಗಳು ವಿಳಂಬವಾಗುತ್ತವೆ. ಈ ವಿಚಾರವನ್ನು ಇಲಾಖೆಯ ಮಾನ್ಯ ಮಂತ್ರಿಗಳು ತಿಳಿದುಕೊಳ್ಳಲಿ. ಈ ಸಂಗತಿಯನ್ನು ನಾನು ಮಂತ್ರಿಗಳಿಗೆ ಮುಕ್ತವಾಗಿ ಹೇಳುತ್ತಿದ್ದೇನೆ. ಕಡತವು ಎಲ್ಲಿಯಾದರೂ ವಿಳಂಬವಾದರೆ ಅದಕ್ಕೆ ದುಡ್ಡೇ ಕಾರಣವಾಗಿದ್ದೆ ಎನ್ನುವುದು ನನ್ನ ಅನಿಸಿಕೆಯಾಗಿದೆ. Delay means money. ಕಡತ ವಿಲೇವಾರಿಗೆ ಸಂಬಂಧಪಟ್ಟಂತೆ ಯಾವುದೇ ಹಂತದಲ್ಲಾದರೂ ವಿಳಂಬವಾದರೆ ಅದು ದುಡ್ಡಿಗಾಗಿಯೇ ಆಗಿರುತ್ತದೆ ಎಂಬುದು ನನ್ನ ಅನಿಸಿಕೆಯಾಗಿದೆ. ಆದರೆ ಈ ವಿಚಾರದಲ್ಲಿ ನಾನು ನೇರವಾಗಿ ಹೇಳುವುದೇನೆಂದರೆ, ನಿಮ್ಮ ಇಲಾಖೆಯ ಕಾರ್ಯದರ್ಶಿಗಳು, ಆಯುಕ್ತರು ಹಾಲಿ ಅಥವಾ ಮಾಜಿ ಯಾರೇ ಇರಬಹುದು, ಇಲಾಖೆಯ ಮಂತ್ರಿಗಳಾದ ನೀವು ಇರಬಹುದು, ಶ್ರೀ ಅಜಯ್ ನಾಗಭೂಷಣ್ ಇವರನ್ನೂ ಸಹ ಒಳಗೊಂಡಂತೆ ಯಾರೇ ಇರಬಹುದು ದುಡ್ಡಿನ ವಿಚಾರದಲ್ಲಿ ಯಾರದೇ ಕೈವಾಡವಿಲ್ಲ. ಇಲ್ಲದಿರುವ ಸಂಗತಿಗಳು ಇದೆ ಎಂದು ನಾನು ಹೇಳುವುದಿಲ್ಲ. ಆದರೆ ಶ್ರೀ ಅಜಯ್ ನಾಗಭೂಷಣ್ ಇವರದ್ದು ವಿಕೃತ ಮನಸ್ಸು ಇದೆ. ಅಂದರೆ ಬೇರೆಯವರು ಚೆನ್ನಾಗಿ ಇರಬಾರದು, ಬೇರೆಯವರು ಊಟವನ್ನು ಮಾಡಬಾರದು, ಬೇರೆಯವರು ಚೆನ್ನಾಗಿರುವಂತಹ ಬಟ್ಟೆಯನ್ನು ಧರಿಸಬಾರದು, ಅವರ ಎದುರುಗಡೆ ನಿಂತುಕೊಳ್ಳಬಾರದು ಇತ್ಯಾದಿ ಇಂತಹ ಸ್ವಭಾವ ಅವರದ್ದಾಗಿದೆ. ಇದು ಮಾನ್ಯ ಮಂತ್ರಿಗಳಿಗೆ ಅರ್ಥವಾಯಿತೇ? ಅವರ ಪ್ರಾಮಾಣಿಕತೆಯ ಬಗ್ಗೆ ನಾನು ಪ್ರಶ್ನೆಯನ್ನು ಮಾಡುವುದಿಲ್ಲ. ಅವರದ್ದು ಒಳ್ಳೆಯ ಪ್ರಾಮಾಣಿಕವಾದ ವ್ಯಕ್ತಿತ್ವ. ಒಂದೇ ಬಾರಿಗೆ ಅವಶ್ಯಕವಾದ ಎಲ್ಲಾ ದಾಖಲೆಗಳನ್ನು ಕೇಳಲಿ. ಉದಾಹರಣೆಗೆ, ಭೂಮಿಗೆ ಸಂಬಂಧಪಟ್ಟಂತೆ ಯಾವುದಾದರೂ ದಾಖಲೆಗಳನ್ನು ಪರಿಶೀಲನೆ ಮಾಡಿಕೊಡಿ ಎಂದು ವಕೀಲರನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೇಳಿದರೆ, ಅವರು ಒಂದು ವಾರಕ್ಕೆ ಎರಡು ದಾಖಲೆಗಳನ್ನು ಕೇಳುತ್ತಾರೆ. ಅದೇ ರೀತಿಯಾಗಿ ಇಲಾಖೆಯ ಅಧಿಕಾರಿ/ನೌಕರರು ತಿಂಗಳಿಗೊಂದು ದಾಖಲೆಗಳನ್ನು ಕೇಳುತ್ತಾರೆ. ಈ ರೀತಿಯಾಗಿ ಎಲ್ಲಿಯಾದರೂ ಉಂಟೇ? ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಹೇಳಲಿ. ದಯಮಾಡಿ ಈ ವಿಚಾರದಲ್ಲಿ ನಾನು ಮನವಿ ಮಾಡಿಕೊಳ್ಳುವುದು ಏನೆಂದರೆ, ನಮಗೆ ಯಾರ ಬಗ್ಗೆಯೂ ಸಹ ಯಾವುದೇ ರೀತಿಯಾದ ದ್ವೇಷ-ಅಸೂಯೆ ಇಲ್ಲ. ರಾಜ್ಯದ ಬೀದರ, ವಿಜಯಪುರ ಜಿಲ್ಲೆಗಳಿಂದ ಬಂದಂತಹ ನೊಂದಿರುವ ಅಭ್ಯರ್ಥಿಗಳು ಬೆಂಗಳೂರು ನಗರದಲ್ಲಿ ಕಳೆದ ಆರೆಂಟು ತಿಂಗಳುಗಳಿಂದ ರೂಮ್‌ನ್ನು ಮಾಡಿಕೊಂಡು ವಾಸವಿದ್ದಾರೆ. ಮಾನ್ಯ ಮಂತ್ರಿಗಳಲ್ಲಿ ನಾನು ಕೈ ಮುಗಿದು ಪ್ರಾರ್ಥಿಸುವುದೇನೆಂದರೆ, ದಯಮಾಡಿ ನೊಂದ ಅಭ್ಯರ್ಥಿಗಳಿಗೆ. . .

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ನೀವು ಏಕೆ ಕೈಯ್ಯನ್ನು ಮುಗಿಯುತ್ತೀರಿ? ಮುಂದಿನ ಶುಕ್ರವಾರದಂದು ನಿಗದಿಗೊಂಡಿರುವ ಸಭೆಗೆ ನಿಮ್ಮನ್ನು ಕರೆಯುತ್ತೇನೆ ಎಂಬುದಾಗಿ ನಾನು ಈಗಾಗಲೇ ತಿಳಿಸಿದ್ದೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಏಕೆ ವಿಳಂಬವಾಗಿದೆ ಎನ್ನುವ ಬಗ್ಗೆ ತನಿಖೆಯನ್ನು ಮಾಡಿಸಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ನಾನು ತನಿಖೆಯನ್ನು ಮಾಡಿಸುತ್ತೇನೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ತಪ್ಪಿತಸ್ಥರಿಗೆ ಶಿಕ್ಷೆಯನ್ನು ವಿಧಿಸಿ ಎಂಬುದಾಗಿ ನಾನು ಹೇಳುವುದಿಲ್ಲ. ಆದರೆ ಈ ವಿಚಾರದಲ್ಲಿ ಏಕೆ ವಿಳಂಬವಾಗಿದೆ ಎನ್ನುವುದು ಈ ಸಮಾಜಕ್ಕೆ, ವ್ಯವಸ್ಥೆಗೆ ಗೊತ್ತಾಗಬೇಕು.

**ಶ್ರೀಮತಿ ಮೋಟಮ್ಮ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಳೆದ ಒಂದು ಗಂಟೆಯಿಂದ ಮಾನ್ಯ ಪುಟ್ಟಣ್ಣನವರು ಮಾತನಾಡುತ್ತಿದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಕಳೆದ ಮೂರು ವರ್ಷಗಳಿಂದ ನೊಂದ ಅಭ್ಯರ್ಥಿಗಳು ಸಾಯುತ್ತಿದ್ದಾರೆ. ನೊಂದ ಹೆಣ್ಣು ಮಕ್ಕಳನ್ನು ನಿಮ್ಮ ಬಳಿಗೆ ಕಳುಹಿಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಇಲಾಖೆಯ ಮಂತ್ರಿಗಳ ಮೇಲೆ ದೂಷಣೆ ಮಾಡುತ್ತಿದ್ದೇವೆ ಎಂದು ದಯವಿಟ್ಟು ತಪ್ಪಾಗಿ ತಿಳಿದುಕೊಳ್ಳಬೇಡಿ. ಮಂತ್ರಿಗಳು ಇಲಾಖೆಯ ಪ್ರಭಾರವನ್ನು ವಹಿಸಿಕೊಂಡ ನಂತರ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಪ್ರಯತ್ನಿಸಲಾಗಿದೆ. ಇವೆಲ್ಲವೂ ಸತ್ಯವಾಗಿದೆ. ಆದರೆ ನೊಂದ ಅಭ್ಯರ್ಥಿಗಳಿಗಿರುವ ಆಕ್ರೋಶವೇನೆಂದರೆ, ಈ ಪ್ರಕ್ರಿಯೆಗೆ ಎಷ್ಟು ಸಮಯವನ್ನು ತೆಗೆದುಕೊಳ್ಳಲಾಗಿದೆ ಹಾಗೂ ಈ ರೀತಿಯ ವಿಳಂಬಕ್ಕೆ ಕಾರಣವೇನು ಎಂಬುದಾಗಿದೆ. ಮಾನ್ಯ ಮಂತ್ರಿಗಳು ಶುಕ್ರವಾರದೊಳಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಭೆಯನ್ನು ಮಾಡುತ್ತೇನೆಂದು ಹೇಳಿದ್ದಾರೆ. ಇದನ್ನು ಕೇಳಿ ನಮಗೆ ಬಹಳ ಸಂತೋಷವಾಗಿದೆ. ಆದರೆ ವಿಳಂಬಕ್ಕೆ ಕಾರಣವೇನು ಎಂಬುದನ್ನು ನೋಡಬೇಕಲ್ಲವೇ? ಇಲಾಖೆಯ ಕೆಳಹಂತದಲ್ಲಿ ಯಾವ ರೀತಿಯ ಕೆಲಸಗಳಾಗುತ್ತಿವೆ ಎಂಬುದನ್ನು ಕೇಳಬೇಕಲ್ಲವೇ? ಮಾನ್ಯ ಸದಸ್ಯರು ಮುಕ್ತವಾಗಿ ಅಲ್ಲಿನ ಸಂಗತಿಗಳನ್ನೆಲ್ಲಾ ಹೇಳುತ್ತಿದ್ದಾರೆ. ಇಲಾಖೆಯ ಕಾರ್ಯದರ್ಶಿಗಳಿಂದಾಗಲೀ, ಆಯುಕ್ತರಿಂದಾಗಲೀ ಅಥವಾ ಹಿರಿಯ ಅಧಿಕಾರಿಗಳಿಂದಾಗಲೀ ಯಾವುದೇ ರೀತಿಯಾದ ಸಮಸ್ಯೆಗಳಿಲ್ಲ. Intentionally to harass somebody with purpose ಈ ರೀತಿ ಮಾಡುತ್ತಿರಬೇಕಾದರೆ, ಅಂತಹ ಸಂಗತಿಗಳನ್ನು ಪತ್ತೆ ಹಚ್ಚಬೇಕಲ್ಲವೇ? ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತೆ ಎಲ್ಲಾ ಕಡೆಗಳಲ್ಲಿಯೂ ಸಹ ಇದೇ ರೀತಿಯ ಸಮಸ್ಯೆಯುಂಟಾಗಿದೆ. ಮಾನ್ಯ ಮಂತ್ರಿಗಳು ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಪ್ರಯತ್ನಿಸಿದರೆ, ಇನ್ನೂ ಕೆಲಸವು ಪೂರ್ಣಗೊಂಡಿಲ್ಲ. ಇಲಾಖೆಯಲ್ಲಿನ ವ್ಯವಸ್ಥೆಗಳು ಮಾನ್ಯ ಮಂತ್ರಿಗಳ ಗಮನಕ್ಕೆ ಬರಬೇಕು. ಅಪೂರ್ಣವಾಗಿರುವ ಕೆಲಸಗಳಿಗೆ ಇಲಾಖೆಯಲ್ಲಿನ ಅಧಿಕಾರಿ/ಸಿಬ್ಬಂದಿಗಳು ಒಂದು ಕಾರಣವನ್ನು ನೀಡುತ್ತಾರೆ, ಅದನ್ನು ನಾವುಗಳು ನಂಬಿಬಿಡುತ್ತೇವೆ. ಮಾನ್ಯ ಮಂತ್ರಿಗಳು ಹೇಳಿರುವಂತೆ ಶುಕ್ರವಾರದೊಳಗೆ ಸಭೆಯನ್ನು ಮಾಡುತ್ತಾರೆ, ಈ ಬಗ್ಗೆ ನಮಗೆ ವಿಶ್ವಾಸವಿದೆ. ಆದರೆ ಪ್ರಕ್ರಿಯೆಗಳು ಏಕೆ ವಿಳಂಬವಾಯಿತು? ಇದರ ಹಿಂದೆ ಯಾರು ಇದ್ದಾರೆ ಎಂಬುದನ್ನು ನಾವು ಪತ್ತೆ ಹಚ್ಚಬೇಕಲ್ಲವೇ? ಈ ಕಾರಣಕ್ಕಾಗಿ ಸಮಿತಿಯನ್ನು ರಚನೆ ಮಾಡಿ, ಇದರಲ್ಲಿನ ಎಲ್ಲಾ ಸಂಗತಿಗಳನ್ನು ಪೂರ್ಣವಾಗಿ ಬಯಲಿಗೆಳೆಯೋಣ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ House Committeeಯನ್ನು ರಚನೆ ಮಾಡುವುದಕ್ಕಾಗುತ್ತದೆಯೇ? ಇಲಾಖಾ ವಿಚಾರಣೆಯನ್ನು ಮಾಡಬಹುದು.

**ಉಪಸಭಾಪತಿಯವರು:-** ಮಾನ್ಯ ಸಚಿವರೇ, ಈಗ ಮಾತನಾಡುವುದು ಬೇಡ. ಮಾನ್ಯ ಶ್ರೀಕಂಠೇಗೌಡರೇ ತಾವು ಮಾತನಾಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪುಟ್ಟಣ್ಣರವರು ಪತಿ-ಪತ್ನಿ ಪ್ರಕರಣಗಳ ಬಗ್ಗೆ ಪ್ರಸ್ತಾಪಿಸಿದರು.

**ಉಪಸಭಾಪತಿಯವರು:-** ಪತಿ-ಪತ್ನಿ ಪ್ರಕರಣಗಳ ಬಗ್ಗೆ ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿರವರು ಪ್ರಸ್ತಾಪ ಮಾಡಿದರು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪುಟ್ಟಣ್ಣರವರು ಈ ವಿಚಾರದಲ್ಲಿ ತಮ್ಮ ಭಾಷಣದ ಪ್ರಾರಂಭದಲ್ಲಿ ಪ್ರಸ್ತಾಪಿಸಿದರು. ಪಾಠವನ್ನು ಮಾಡುವುದು ಎಂದರೆ Tape Recorder on ಮಾಡುವುದು ಅಂತಲ್ಲ. Tape Recorder on ಮಾಡಿದರೆ ನಾವು ಯಾವ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ರೀತಿಯಾಗಿ feed ಮಾಡಿರುತ್ತೇವೆಯೋ ಅದೇ ರೀತಿಯಾಗಿ ಅದು ಪಾಠವನ್ನು ಮಾಡುತ್ತಾ ಹೋಗುತ್ತದೆ. ಪಾಠವನ್ನು ಮಾಡುವ ಮನುಷ್ಯ ಸಮಾಧಾನವಾಗಿರಬೇಕು. ನಾನು 32 ವರ್ಷಗಳ ಕಾಲ ಪಾಠವನ್ನು ಮಾಡಿದ್ದೇನೆ ಹಾಗೂ ಈಗಲೂ ಸಹ ಮಾಡುತ್ತಿದ್ದೇನೆ. ಪಾಠ ಮಾಡುವುದನ್ನು ನಾನು ಬಹಳವಾಗಿ ಪ್ರೀತಿಸುತ್ತೇನೆ. ಒಟ್ಟಿನಲ್ಲಿ ಪಾಠ ಮಾಡುವವರು ಸಮಾಧಾನವಾಗಿರಬೇಕು. ಅವನು ಸಮಾಧಾನದಿಂದ ಇರದಿದ್ದರೆ ವಿದ್ಯಾರ್ಥಿಗಳಿಗೆ ನ್ಯಾಯವನ್ನು ಒದಗಿಸಿಕೊಡುವುದಕ್ಕಾಗುವುದಿಲ್ಲ. ಹೆಂಡತಿ ಒಂದು ಕಡೆ, ಗಂಡ ಒಂದು ಕಡೆ ಹಾಗೂ ಇವರ ಮಕ್ಕಳು ಒಂದು ಕಡೆ ಪ್ರತ್ಯೇಕವಾಗಿ ಇದ್ದರೆ ಆ ವ್ಯಕ್ತಿ ಮತ್ತು ಆತನ ಪತ್ನಿ ಹೇಗೆ ಪಾಠವನ್ನು ಮಾಡುತ್ತಾರೆ? ಪತಿ-ಪತ್ನಿ ರವರುಗಳನ್ನು ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸಲು ಅನುವು ಮಾಡಿಕೊಡಬೇಕು. ಆದರೆ ಅದನ್ನು ನೀವು ಮಾಡಿಕೊಡಲಿಲ್ಲ. ಆದರೆ ವರ್ಗಾವಣೆಗೆ ಸಂಬಂಧಪಟ್ಟಂತೆ ನೀವು ಕೌನ್ಸಿಲಿಂಗ್ ದಿನಾಂಕವನ್ನು ನಿಗದಿಪಡಿಸಿದ್ದೀರಿ. ವರ್ಗಾವಣೆ ಪ್ರಕ್ರಿಯೆಯು ಮುಂದಕ್ಕೆ ಹೋಯಿತು. ನಂತರದಲ್ಲಿ ಕಡತವನ್ನು ಪುನಃ ಮಂಡಿಸಲಾಯಿತು. ಈ ವಿಚಾರದಲ್ಲಿ ಇಲಾಖೆಯ ಮಾನ್ಯ ಮಂತ್ರಿಗಳು, ಪ್ರಧಾನ ಕಾರ್ಯದರ್ಶಿಗಳು ಒಪ್ಪಿಕೊಂಡರು. ಆದರೆ ಇದುವರೆವಿಗೂ ಸಹ ಯಾವುದೇ ರೀತಿಯ ವರ್ಗಾವಣೆ ಆದೇಶಗಳನ್ನು ಹೊರಡಿಸಲಿಲ್ಲ. ಈ ವರ್ಷದ ಕೊನೆಗಾದರೂ ಸರಿ, ಆದೇಶಗಳು ಬರಬೇಕು. ಇಲಾಖೆಯ ಮಂತ್ರಿಗಳ ಬಳಿ ಒಂದೆರೆಡು ಗಂಟೆಗಳಲ್ಲಿ, ಪ್ರಧಾನ ಕಾರ್ಯದರ್ಶಿಗಳ ಬಳಿ ಒಂದು ಗಂಟೆಯಲ್ಲಿ ಆದೇಶಗಳಾಗುತ್ತವೆ. ಆದರೆ ಕಛೇರಿಗಳಲ್ಲಿ ಒಂದು ವಾರ ಕಳೆದರೂ ಸಹ ಕೆಲಸಗಳಾಗುವುದಿಲ್ಲ. ಇದಕ್ಕೆ ಕಾರಣವೇನು? ಇದಕ್ಕೆ ನಾನು ಯಾರನ್ನೂ ದೂಷಿಸುವುದಿಲ್ಲ. ಇಲಾಖೆಯ ಕೆಳಹಂತದ ಅಧಿಕಾರಿ/ಸಿಬ್ಬಂದಿಗಳು ಮಾಡಬೇಕಾದ ಕೆಲಸಗಳನ್ನು ಮಾಡುವುದಿಲ್ಲ. ಇದಕ್ಕೆ ಕಾರಣವೇನು? ಹೀಗಾಗಿ ನಿಮ್ಮ ಮೂಗಿನ ಕೆಳಗಡೆಯೂ ಸಹ ಸರಿಯಾಗಿ ಕೆಲಸಗಳಾಗುವುದಿಲ್ಲ ಎನ್ನುವುದಾದರೆ ಇನ್ನು ಯಾರನ್ನು ತಂದು ಇಲ್ಲಿ ಕೂಡಿಸೋಣ?

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರ ಪ್ರಕಾರ ಪತಿ-ಪತ್ನಿ ದೂರವಿದ್ದರೆ ಸರಿಯಾಗಿ ಪಾಠ ಮಾಡುವುದಕ್ಕಾಗುವುದಿಲ್ಲ ಎನ್ನುವುದು ಅವರ ಭಾವನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಪತಿ-ಪತ್ನಿ ದೂರವಿದ್ದರೆ ಸರಿಯಾಗಿ ಪಾಠ ಮಾಡುವುದಕ್ಕಾಗುವುದಿಲ್ಲ. ಅದು ಹೇಗೆ ಸಾಧ್ಯವಾಗುತ್ತದೆ?

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ನಾನು lighter wayನಲ್ಲಿ ಕೇಳುತ್ತೇನೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಆ ಕಾರಣಕ್ಕಾಗಿ ಪತಿ-ಪತ್ನಿ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸಲು ಅನುವು ಮಾಡಿಕೊಡಬೇಕು.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಪತಿ-ಪತ್ನಿ ಪ್ರಕರಣದನ್ವಯ ಅವರುಗಳನ್ನು ಒಂದೇ ಊರಿನಲ್ಲಿ, ಒಂದೇ ಜಿಲ್ಲೆಯಲ್ಲಿ ಕೆಲಸ ನಿರ್ವಹಿಸಲು ಅನುವು ಮಾಡಿಕೊಡಿ ಎಂದು ನಾವು ಕೇಳುವುದಿಲ್ಲ. ಆದರೆ ನಾನು ಹೇಳುವುದೇನೆಂದರೆ, ಅವರಿಗೆ ಅವಶ್ಯಕವಿರುವ ಸ್ಥಳಗಳಲ್ಲಿ ಖಾಲಿಯಿರುವ ಹುದ್ದೆಗಳಲ್ಲಿ ಅನುವು ಮಾಡಿಕೊಡಿ ಎಂದು ಕೇಳುತ್ತಿದ್ದೇವೆ. ಅವರುಗಳು ತಮ್ಮ ಸ್ಥಳಗಳಿಂದ 50-100 ಕಿಲೋಮೀಟರ್‌ಗಳ ಅಂತರದಲ್ಲಿರುವ ಖಾಲಿಯಿರುವ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, In the lighter way ನಾನು ಹೇಳಲಿಕ್ಕೆ ಬಯಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರು ತಮ್ಮ ಮೊಬೈಲ್‌ನಲ್ಲಿರುವ ಛಾಯಾಚಿತ್ರವನ್ನು ಇಲಾಖೆಯ ಮಂತ್ರಿಗಳಿಗೆ ತೋರಿಸಿದರು)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಈ ಫೋಟೋದಲ್ಲಿರುವ ವ್ಯಕ್ತಿಗೆ ಎರಡೂ ಕಾಲುಗಳಿಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಈ ಸಂಗತಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವ್ಯವಸ್ಥೆಗಳನ್ನು ಸರಿ ಮಾಡೋಣ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಇಂತಹ ಅವ್ಯವಸ್ಥೆಗಳಿಗೆ ಕಾರಣರಾಗಿರುವವರನ್ನು sadist ಎಂದು ಕರೆಯೋಣವೇ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರಿಂದ ನನಗೆ ಉತ್ತರವೊಂದು ಬೇಕಾಗಿದೆ.

**(ಗೊಂದಲ)**

**ಉಪಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ ನಿಮ್ಮ ಮೊಬೈಲ್‌ನ್ನು ಮಾನ್ಯ ಮಂತ್ರಿಗಳಿಗೆ ಒಪ್ಪಿಸಬೇಕು.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಒಂದು ವಿಚಾರದಲ್ಲಿ ಮಾನ್ಯ ಶ್ರೀಕಂಠೇಗೌಡರು ನನಗೆ ಉತ್ತರವನ್ನು ನೀಡಬೇಕು. ಪತಿ-ಪತ್ನಿ ದೂರದಲ್ಲಿದ್ದರೆ ಸಂಕಟವಾಗುತ್ತದೆ, ಬಹಳ ಸಮಸ್ಯೆಗಳುಂಟಾಗುತ್ತವೆ ಎಂಬುದಾಗಿ ಹೇಳಿದ್ದಾರೆ. ಆದರೆ ಶ್ರೀಕಂಠೇಗೌಡರು ತಮ್ಮ ಪತ್ನಿಯನ್ನು ಏಕೆ ದೂರವಿಟ್ಟಿದ್ದಾರೆ ಎಂಬುದು ನನಗೆ ಗೊತ್ತಾಗಲಿಲ್ಲ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಎಲ್ಲಿ ನನ್ನ ಪತ್ನಿಯನ್ನು ದೂರವಿಟ್ಟಿದ್ದೇನೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಶ್ರೀಕಂಠೇಗೌಡರ ಪತ್ನಿ ಮೈಸೂರಿನಲ್ಲಿ ಹಾಗೂ ಇವರು ಬೆಂಗಳೂರಿನಲ್ಲಿ ಇದ್ದಾರೆ. ಅವರ ಶ್ರೀಮತಿಯವರೂ ಸಹ ಪ್ರೋಫೆಸರ್ ಆಗಿದ್ದಾರೆ. ಆದರೆ ಅವರ ಪೋಸ್ಟಿಂಗ್‌ನ್ನು ಬೆಂಗಳೂರಿನಲ್ಲಿ ಏಕೆ ಕೇಳುತ್ತಿಲ್ಲ? ಅವರ ನಡವಳಿಕೆಯ ಮೇಲೆ ನನಗೆ ಸಂಶಯವುಂಟಾಗುತ್ತಿದೆ.

**ಉಪಸಭಾಪತಿಯವರು:-** ಮಾನ್ಯ ಸದಸ್ಯರಾದ ಪುಟ್ಟಣ್ಣನವರು ಹಾಗೂ ಇತರೆ ಸದಸ್ಯರುಗಳು ಇವತ್ತಿನ ದಿವಸ ಪ್ರಸ್ತಾಪಿಸಿರುವ ವಿಚಾರದಲ್ಲಿ ನೈಜ ಸತ್ಯವಿದೆ. ಈ ವಿಚಾರವು ನನ್ನ ಗಮನಕ್ಕೂ ಸಹ ಬಂದಿದೆ. ಮಾನ್ಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಹಾಗೂ ಪುಟ್ಟಣ್ಣರವರುಗಳು ಈ ಹಿಂದೆ ಒಂದು ಬಾರಿ ಬಿ.ಎಡ್. ಕಾಲೇಜಿನ ಉಪನ್ಯಾಸಕರಿಗೆ ನಾಲ್ಕು ತಿಂಗಳುಗಳಿಂದ ವೇತನವನ್ನು ಬಿಡುಗಡೆ ಮಾಡಿಲ್ಲ, ಹೀಗಾಗಿ ಅದನ್ನು ಬಿಡುಗಡೆ ಮಾಡಬೇಕೆಂದು ಇಲಾಖೆಯ ಹಿಂದಿನ ಆಯುಕ್ತರ ಹತ್ತಿರ ಹೋಗಿ ಕೇಳಿದಾಗ, ಸದರಿ ಆಯುಕ್ತರು ಕೆಲಸವನ್ನು ಮಾಡುವುದಾಗಿ ಹೇಳಿ ಮಾನ್ಯ ಸದಸ್ಯರುಗಳನ್ನು ಕಳುಹಿಸಿದರು. ಮಾರನೆಯ ದಿನ ಸದರಿ ಉಪನ್ಯಾಸಕರು ಆಯುಕ್ತರ ಕಛೇರಿಗೆ ತೆರಳಿ ಬಿಡುಗಡೆ ಮಾಡಬೇಕಾಗಿರುವ ವೇತನದ ಬಗ್ಗೆ ವಿಚಾರಿಸಿದಾಗ, ಮಾನ್ಯ ಬಸವರಾಜ ಹೊರಟ್ಟಿಯವರು ಹಾಗೂ ಪುಟ್ಟಣ್ಣನವರು ಬಂದು ಹೇಳಿದರೆ, ವೇತನವನ್ನು ಬಿಡುಗಡೆ ಮಾಡುತ್ತೇವೆಯೋ? ಹಾಗಾದರೆ ಅವರುಗಳ ಬಳಿಯೇ ನಿಮ್ಮ ವೇತನವನ್ನು ಪಡೆದುಕೊಳ್ಳಿ ಎಂಬುದಾಗಿ ಇಲಾಖಾಧಿಕಾರಿಯು ಪ್ರತಿಕ್ರಿಯಿಸಿದ್ದಾರೆ. ಸದರಿ ಅಧಿಕಾರಿಯು ಬಹಳ ಉದ್ಧಟತನದಿಂದ ಮಾತನಾಡಿದ್ದಾರೆ. ಇಂತಹ ಎಲ್ಲಾ ಸಂಗತಿಗಳಾಗಿದ್ದರೂ ಸಹ ಮಾನ್ಯ ಸದಸ್ಯರುಗಳು ಮಾನವೀಯತೆಯ ದೃಷ್ಟಿಯಿಂದ ಸದರಿ ಅಧಿಕಾರಿಯ ವಿರುದ್ಧ ಹಕ್ಕುಚ್ಯುತಿ ಪ್ರಸ್ತಾವನೆಯನ್ನು ಮಂಡಿಸಲಿಲ್ಲ. ಅವತ್ತಿನ ದಿನವೇ ಮಾನ್ಯ ಸದಸ್ಯರುಗಳು ಹಕ್ಕುಚ್ಯುತಿ ಪ್ರಸ್ತಾವನೆಯನ್ನು ಮಂಡಿಸಿದಿದ್ದರೆ ಇದರ ಪರಿಣಾಮವೇ ಬೇರೆಯಾಗುತ್ತಿತ್ತು. ಇಲಾಖೆಯ ಅಧಿಕಾರಿಗಳು ಬಹಳ ಉದ್ಧಟತನದಿಂದ ವರ್ತಿಸುತ್ತಾರೆ.

(185) 21-02-2018/ ಸಿಎಸ್/ಎಂಡಿ/ 05:20

**ಉಪಸಭಾಪತಿಯವರು(ಮುಂದು):-**

ಇಲಾಖೆಯಲ್ಲಿ ಕಾರ್ಯದರ್ಶಿಯವರು ಆದೇಶವನ್ನು ಮಾಡಿದರೂ ಸಹ ಅಯುಕ್ತರು ಒಂದು movement order ಅನ್ನು ಜಾರಿಗೊಳಿಸುತ್ತಾ ಇರಲಿಲ್ಲ. ಕಾರ್ಯದರ್ಶಿಯವರು ಮಾಡಿದಂತಹ ಆದೇಶಕ್ಕೆ ಆಯುಕ್ತರು ವ್ಯತಿರಿಕ್ತವಾಗಿ ಬರೆಯುತ್ತಿದ್ದರು. ಕಾರ್ಯದರ್ಶಿಯವರ ಆದೇಶವನ್ನು ಜಾರಿಗೊಳಿಸುತ್ತಲೇ ಇರಲಿಲ್ಲ. ಎಷ್ಟೊಂದು ಉದ್ದಟತನ. ಒಂದು ಇಲಾಖೆಯ ಕಾರ್ಯದರ್ಶಿ ಆದೇಶ ಮಾಡಿದ್ದನ್ನು ಆಯುಕ್ತರು ಜಾರಿಗೊಳಿಸಬೇಕೆ ಬೇಡವೇ? 2160 ಜನರ ನೇಮಕಾತಿಯ ಆದೇಶ ಹೊರಡಿಸಿ 3 ವರ್ಷಗಳಾಗಿವೆ. 3 ವರ್ಷ ಕಳೆದರೂ ಸಹ ಅದು ಅಂತಿಮ ರೂಪ ತಳೆದಿಲ್ಲವೆಂದರೆ ಅರ್ಜಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಲ್ಲಿಸಿದವರಿಗೆ, ನೇಮಕಾತಿ ಪಟ್ಟಿಯ ಅಂತಿಮ ಆದೇಶದಲ್ಲಿ ಆಯ್ಕೆ ಆಗಿರುವವರಿಗೆ ಎಷ್ಟು ತಾಳ್ಮೆ ಇರಬೇಕು? ನೇಮಕಾತಿಯ ಪ್ರಕ್ರಿಯೆಗಳನ್ನು ಕಂತಿನ ರೂಪದಲ್ಲಿ ನಡೆಲಾಗುತ್ತಿದೆ. ಈ ವಿಚಾರದಲ್ಲಿ ತಮಗೆ ಅನ್ಯಾಯ ಆಗಿದೆ ಎಂದು ಯಾವುದೇ ಅಭ್ಯರ್ಥಿ ಕೋರ್ಟ್‌ಗೆ ಹೋಗಿರುವುದಿಲ್ಲ. Suo moto ಇಲಾಖೆಯ ಆಯುಕ್ತರೆ, ಗುಜರಾತಿನ ಹೈಕೋರ್ಟ್‌ನಲ್ಲಿ ಈ ರೀತಿ ಆದೇಶ ಆಗಿದೆ, ಎಂದು ಕಡತದಲ್ಲಿ ಬರೆದು ಕಾರ್ಯದರ್ಶಿಯವರಿಗೆ ಕಳುಹಿಸಿಕೊಡುತ್ತಾರೆ. ಆಯುಕ್ತರಿಗೆ ಬೇರೆ ರಾಜ್ಯದಲ್ಲಿನ ಆದೇಶದ ವಿಚಾರ ಏಕೆ ಬೇಕು. ಇವತ್ತು ಮೂರು ವರ್ಷಗಳ ಹಿಂದೆ ನೋಟಿಫಿಕೇಷನ್ ಆಗಿರುವುದು. ಇದರಲ್ಲಿ ಏನಾದರೂ ತಪ್ಪಾಗಿದ್ದಲ್ಲಿ ಅದಕ್ಕೆ ಇಲಾಖಾ ಅಧಿಕಾರಿಗಳೇ ಹೊಣೆಗಾರರಾಗಿರುತ್ತಾರೆ. ಆದರೆ ಮಾನ್ಯ ಹೊರಟ್ಟಿಯವರು, ಮಾನ್ಯ ಪುಟ್ಟಣ್ಣನವರು ಮತ್ತು ನಾವು ಕೇಳುತ್ತಿರುವ ವಿಚಾರಕ್ಕೆ ಅರ್ಥ ಇಲ್ಲವೇ? ಆದರೆ ಇಲಾಖೆಯವರು ಇದರಲ್ಲಿ genuinity ಇಲ್ಲ, ದಾಖಲೆಗಳು ಸರಿಯಾಗಿಲ್ಲ ಎಂದರೆ ಆದೇಶ ಕೊಡುವುದು ಬೇಡ. ಆದರೆ ಎಷ್ಟು ದಿನ? ಅಂತಿಮ ಪಟ್ಟಿ ಆಯ್ಕೆ ಮಾಡಿ ನೋಟಿಫಿಕೇಷನ್ ಹೊರಡಿಸಿ, ಒಂದು ವರ್ಷ ಆಗಿದೆ. ಆಯ್ಕೆಯಾದವರು ದಾಖಲೆಗಳನ್ನು ಕೂಡ verification ಗೆ ಕೊಟ್ಟಿದ್ದಾರೆ. ಆದರೂ ಸಹ ಇದು ಸಮಿತಿಯ ಮುಂದಿದೆ, ಇನ್ನೂ ಕೆಲವು ಮಾಹಿತಿಗಳ ಅವಶ್ಯಕತೆ ಇದೆ ಎಂದು ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿರುವುದಿಲ್ಲ. ಅದರಲ್ಲಿ 24 ಜನರಿಗೆ ನಿಮ್ಮ ದಾಖಲೆಗಳು ಸರಿಯಿಲ್ಲದ ಕಾರಣ ಎಂದು ಅವರ ನೇಮಕಾತಿ ತಿರಸ್ಕರಿಸಿರುವುದನ್ನು ನಾವು ಸ್ವಾಗತ ಮಾಡುತ್ತೇವೆ. ಅಂತಹವರಿಗೆ ನೇಮಕಾತಿ ಆದೇಶ ಕೊಡಿ ಎಂದು ನಾವು ಯಾರೂ ಹೇಳುವುದಿಲ್ಲ. 107 ಜನರಿಗೂ ಸಹ ದಾಖಲೆ ಸರಿಯಿಲ್ಲದಿದ್ದರೆ give endorsement to that. ಅವರ ದಾಖಲೆ ಸರಿಯಿದ್ದರೆ ಅವರಿಗೆ ತಕ್ಷಣ ಆದೇಶ ನೀಡಬೇಕಲ್ಲವೇ? ನೀವು ಈ ಕ್ರಮವನ್ನು ಏಕೆ ಜರುಗಿಸುವುದಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, 107 ಸರಿಯಿಲ್ಲದಿದ್ದರೆ ಅವರ ಮೇಲೆ ಸೆಕ್ಷನ್ 307 ಹಾಕಬೇ.

**ಉಪಸಭಾಪತಿಯವರು:-** ಈ ವಿಚಾರ ಸಚಿವರ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಇಲಾಖೆಯಲ್ಲಿ ಆಯುಕ್ತರು OOD ಮೇಲಿದ್ದಾರೆ, ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರು OOD ಮೇಲಿದ್ದಾರೆ, ಕಾರ್ಯದರ್ಶಿಯವರು ಪ್ರಭಾದಲ್ಲಿದ್ದಾರೆ, ಎಷ್ಟೇ ಪ್ರಯತ್ನಗಳನ್ನು ಮಾಡಿದರೂ ಸಹ ಈ ಇಲಾಖೆಗೆ ಒಬ್ಬ ಖಾಯಂ ಕಾರ್ಯದರ್ಶಿಯವರನ್ನು ನೇಮಕ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಖಾಯಂ ಆಗಿ ಒಬ್ಬ ಆಯುಕ್ತರು, ಅಥವಾ ನಿರ್ದೇಶಕರನ್ನು ಈ ಇಲಾಖೆಗೆ ನೇಮಕ ಮಾಡಲು ಸಾಧ್ಯವಾಗಿರುವುದಿಲ್ಲ. ವಿಧೇಯಕದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಸಚಿವರು ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ ಎಷ್ಟು ವಿಸಿ ಗಳ ಹುದ್ದೆ ಖಾಲಿಯಿವೆ ಎನ್ನುವುದನ್ನು ಹೇಳಿದರು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕದ ಇತಿಹಾಸದಲ್ಲಿಯೇ ಇಷ್ಟು ವಿಸಿ ಗಳ ಹುದ್ದೆಗಳಿಗೆ ನೇಮಕಾತಿ ಮಾಡಲು ವಿಳಂಬ ಮಾಡಿರಲೇ ಇಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಈ ಇಲಾಖೆಯಲ್ಲಿ ಜಂಟಿ ನಿರ್ದೇಶಕರ್ರುಗಳು ಕೂಡ ಪ್ರಭಾರದಲ್ಲಿದ್ದಾರೆ. ಗುಲ್ಬರ್ಗಾ ಜಿಲ್ಲೆಯವರನ್ನು ಬೆಂಗಳೂರಿಗೆ ತಂದು ಹಾಕಿದ್ದಾರೆ. ಬೆಂಗಳೂರಿನವರನ್ನು ಚಿತ್ರದುರ್ಗ ಮತ್ತು ಧಾರವಾಡಕ್ಕೆ ಹಾಕಿದ್ದಾರೆ. ಮಂಗಳೂರಿನಲ್ಲಿ ಇದ್ದವರು ಮೈಸೂರಿಗೆ ಜಂಟಿ ನಿರ್ದೇಶಕರು, ಇರುವವರ ಕಡೆಯಿಂದ ಇಲ್ಲದಿರುವ ಕಡೆಗೆ ಜಂಟಿ ನಿರ್ದೇಶಕರುಗಳನ್ನು ಹಾಕುತ್ತಲೇ ಇರುತ್ತಾರೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಗಳೇ, ಇವರುಗಳು ವಾರಕ್ಕೆ ಮೂರು ದಿವಸ ಜಂಟಿ ನಿರ್ದೇಶಕರುಗಳಾಗಿ ಕೆಲಸ ಮಾಡಿದರೆ, ಇನ್ನೂ ಮೂರು ದಿವಸ ಪ್ರಾಂಶುಪಾಲರಾಗಿ ಕೆಲಸ ಮಾಡುತ್ತಿದ್ದಾರೆ. ಒಂದು ರೀತಿಯಲ್ಲಿ ಸರ್ಕಸ್ ಮಾಡುತ್ತಿದ್ದಾರೆ.

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೇ, ಇಷ್ಟೆಲ್ಲಾ ತೊಂದರೆಗಳಿದ್ದರೂ ಸಹ ನಾವು ಇಲಾಖೆಯನ್ನು ನಡೆಸುತ್ತಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೇ, ಮಾನ್ಯ ಸಚಿವರು ಇಲಾಖೆ ನಡೆಯುತ್ತಿದೆ ಎಂದು ಅಂದುಕೊಂಡಿದ್ದಾರೆ. ಇಲಾಖೆ ಎಲ್ಲಿ ಕಾರ್ಯ ನಿರ್ವಹಿಸುತ್ತಿದೆ? ವಿದ್ಯಾ ಮಂತ್ರಿಗಳು ಎಷ್ಟು ದಡ್ಡರೆಂದು ಇದರಿಂದಲೇ ತಿಳಿಯುತ್ತದೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಶಿಕ್ಷಣ ಇಲಾಖೆಯಲ್ಲಿ ಪ್ರಾಂಶುಪಾಲರು ಇಲ್ಲ, ವಿಸಿ ಇಲ್ಲ, ಜಂಟಿ ನಿರ್ದೇಶಕರುಗಳಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಬಸವರಾಜ ರಾಯರೆಡ್ಡಿಗೆ ಉನ್ನತ ಶಿಕ್ಷಣ ಬೇಡ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ತೆಗೆದುಕೊಳ್ಳಿ ಎಂದು ಹೇಳಿದ್ದೆನು, ಆದರೂ ಸಹ ಜಗಿದಾಡಿ ಈ ಖಾತೆ ತೆಗೆದುಕೊಂಡಿರುವ ಕಾರಣ ಪರಿಸ್ಥಿತಿ ಹೀಗಾಗಿದೆ.

**ಉಪಸಭಾಪತಿಯವರು:-** ಮಾನ್ಯ ಹೊರಟ್ಟಿಯವರು, ಹಾಗೂ ಮಾನ್ಯ ಪುಟ್ಟಣ್ಣನವರು ಇಲಾಖೆಗೆ ಹೋಗಿ ವೇತನ ಬಿಡುಗಡೆ ಮಾಡುವಂತೆ ಇಲಾಖಾಧಿಕಾರಿಗಳಿಗೆ ಹೇಳಿದಾಗ, ಅವರು ಇನ್ನು ಎರಡು ದಿನದಲ್ಲಿ ಬಿಡುಗಡೆ ಮಾಡುತ್ತೇವೆಂದು ಹೇಳಿದರೂ ಸಹ ಅವರನ್ನು ವರ್ಗಾಯಿಸಿದರೂ ಕೂಸ ವೇತನ ಬಿಡುಗಡೆ ಮಾಡಲಿಲ್ಲ. ಬೇರೆ ಆಯುಕ್ತರು ಬಂದ ಮೇಲೆ ಆ ವೇತನ ಬಿಡುಗಡೆ ಮಾಡಲಾಯಿತು. ಇಂತಹ ಅಧಿಕಾರಿಗಳು ಶಿಕ್ಷಣ ಇಲಾಖೆಯಲ್ಲಿ ಇದ್ದರೆ ಇಲಾಖೆ ಏನಾಗಬೇಕು. ಸಚಿವರು ಎಷ್ಟೇ ಒಳ್ಳೆ ಯೋಜನೆ ಜಾರಿ ತಂದರೂ ಸಹ ಅಧಿಕಾರಿಗಳ ಮನಸ್ಥಿತಿ ಈ ರೀತಿ ಇದ್ದಲ್ಲಿ ಇಲಾಖೆಗೆ ಒಳ್ಳೆಯ ಹೆಸರು ಎಲ್ಲಿ ಬರುತ್ತದೆ?

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

107 ಜನರ ವಿಚಾರದಲ್ಲಿ ನಮ್ಮೆಲ್ಲ ಶಾಸಕರನ್ನು ಕರೆದು ಚರ್ಚೆ ಮಾಡಿ, ಇನ್ನೆರಡು ದಿವಸಗಳಲ್ಲಿ ಇತ್ಯರ್ಥಗೊಳಿಸುವುದಾಗಿ ಸದನದಲ್ಲಿ ಹೇಳಿದ್ದೀರಿ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಹಾಗೆಯೇ ಈಗಾಗಲೇ ಎರಡನೇ ಹೆಚ್ಚುವರಿ ಆಯ್ಕೆ ಪಟ್ಟಿಗೆ ಚಾಲನೆ ನೀಡಲಾಗಿದೆ. ಅದನ್ನು ಚುನಾವಣೆಯ ನೀತಿಸಂಹಿತೆ ಜಾರಿಗೊಳ್ಳುವ ಪೂರ್ವದಲ್ಲಿಯೇ ಈ ಹುದ್ದೆಗಳ ನೇಮಕಾತಿಗೆ ಹೆಚ್ಚುವರಿ ಪಟ್ಟಿಗೆ ಒಂದು ಅನುಮೋದನೆ ದೊರೆಯುವಂತೆ ತುರ್ತಾಗಿ ಸಚಿವರು ಇಲಾಖಾಧಿಕಾರಿಗಳ ಜೊತೆಯಲ್ಲಿ ಸಭೆ ನಡೆಸಿ, ಈ ಬಗ್ಗೆ ಒಂದು ನಿರ್ದೇಶನ ಹೊರಡಿಸಬೇಕು.

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೇ, ಈ ವಿಚಾರದಲ್ಲಿ ನಾನು ಈಗಾಗಲೇ ಸ್ಪಷ್ಟೀಕರಣ ಕೊಟ್ಟಿದ್ದೇನೆ. ಈ ಶುಕ್ರವಾರದೊಳಗೆ ಮಾನ್ಯ ಸದಸ್ಯರುಗಳನ್ನು ಕರೆದು ಚರ್ಚೆ ಮಾಡಿ ಅವಶ್ಯ ಕ್ರಮಗಳನ್ನು ಕೈಗೊಳ್ಳುತ್ತೇನೆ. ಹಾಗಾಗಿ ಈ ವಿಕೃತ ಮನಸ್ಸಿನ ಅಧಿಕಾರಿಗಳಿದ್ದಲ್ಲಿ, they are more dangerous than corrupt officers. Sadistic character people are more dangerous. ಇದೆಲ್ಲರ ಬಗ್ಗೆ ಚರ್ಚೆ ಮಾಡೋಣ. ಈ ಬಗ್ಗೆ ನನಗೆ ಉಚಿತ ಮಾಹಿತಿ ಮಾನ್ಯ ಸದಸ್ಯರುಗಳಿಂದ ಬಂದರೆ ಅನುಕೂಲವಾಗುತ್ತದೆ.

**ಉಪಸಭಾಪತಿಯವರು:-** ಇಲ್ಲಿಗೆ ನಿಯಮ 330ರ ಅಡಿಯಲ್ಲಿನ ಚರ್ಚೆ ಮುಕ್ತಾಯಗೊಂಡಿದೆ. ಇನ್ನು ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳಬೇಕು. ಆದರೆ ಸದನದಲ್ಲಿ ಕೃಷಿ ಸಚಿವರು ಇಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಸದನದಲ್ಲಿ ಯಾರು ಇರಲಿ, ಇಲ್ಲದಿರಲಿ ನಾನು ಪ್ರಸ್ತಾಪಿಸಬೇಕೆಂದಿರುವ ವಿಚಾರದ ಬಗ್ಗೆ ಈ ಸದನದ ಗಮನ ಸೆಳೆಯುತ್ತೇನೆ. ಇಲ್ಲದಿದ್ದರೆ ನನ್ನ ವಿಚಾರ ಸುಮ್ಮನೆ lapse ಆಗುತ್ತದೆ. ಸರ್ಕಾರದ ಕಡೆಯಿಂದ ಯಾರಾದರೂ ಉತ್ತರ ನೀಡಲಿ, ನಾನು ಪ್ರಸ್ತಾಪಿಸುತ್ತೇನೆ. ಸಚಿವರ ಗೈರುಹಾಜರಿಯಿಂದ ನಮ್ಮ ವಿಚಾರಗಳನ್ನು lapse ಮಾಡುವುದು ಸರಿಯಲ್ಲ, ನಮ್ಮ ವಿಚಾರಗಳು ಬಂದಾಗ ನಾವು ಸದನದಲ್ಲಿ ಇರದಿದ್ದಾಗ ಅವು lapse ಆಗುತ್ತವೆ. ಈಗ ನಾವಿದ್ದರೂ ಸಚಿವರು ಇಲ್ಲ ಎನ್ನುವ ಕಾರಣಕ್ಕೆ lapse ಆಗುವುದು ಬೇಡ. ಡಾ॥ಸ್ವಾಮಿನಾಥನ್ ವರದಿಯ ಬಗ್ಗೆ ಚರ್ಚೆ ಮಾಡಬೇಕೆಂದು ಬಂದಿದ್ದೇನೆ, ರಾಜ್ಯದ ರೈತರು ಸಾಯಿತ್ತಿದ್ದಾರೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಗಳೇ, ಈ ಗಮನ ಸೆಳೆಯುವ ಸೂಚನೆಯನ್ನು ನಾಳೆ ತೆಗೆದುಕೊಳ್ಳೋಣ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಇದು ಬಹಳ ಪ್ರಮುಖವಾದ ವಿಚಾರ, ಇಡೀ ರಾಜ್ಯದ ರೈತರ ಸಮಸ್ಯೆಯ ವಿಚಾರ. ಇದರಲ್ಲಿ ರೈತರ ಜೀವನ್ಮರಣೆಯ ಪ್ರಶ್ನೆ ಇದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ಸಂಜೆ 4 ಗಂಟೆಯಿಂದಲೂ ಈ ಬಗ್ಗೆ ಸರ್ಕಾರದ ಮುಖ್ಯ ಸಚೇತಕರಿಗೆ ಹೇಳಿದ್ದರೂ ಅವರಿನ್ನೂ ಸಚಿವರನ್ನು ಕರೆಸಿರುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಕೆಳಗಿನ ಮನೆಯಲ್ಲಿ ರೈತರ ವಿಮೆ ಬಿಲ್‌ನ ಬಗ್ಗೆ ಚರ್ಚೆ ನಡೆಯುತ್ತಿದೆ. ಸಭಾಧ್ಯಕ್ಷರ ಆದೇಶದ ಮೇರೆಗೆ ಕೃಷಿ ಸಚಿವರು ಅಲ್ಲಿದ್ದಾರೆ. ಅದಾದ ಕೂಡಲೇ ಸಚಿವರು ನಮ್ಮ ಸದನಕ್ಕೆ ಬಂದು ಉತ್ತರ ನೀಡುತ್ತಾರೆ.

**ಉಪಸಭಾಪತಿಯವರು:-** ಈ ದಿನ ಸದನ ಮುಗಿಯುವುದರೊಳಗೆ ಮಾನ್ಯ ಕೃಷಿ ಸಚಿವರು ಬಂದರೆ ಮಾನ್ಯ ಹೊರಟ್ಟಿಯವರ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ. ಇಲ್ಲದಿದ್ದರೆ ಅವರಿಗೆ ನಾನು ನಾಳೆ ಅವಕಾಶ ಮಾಡಿಕೊಡುತ್ತೇನೆ.

(186)/21-2-2018/ಎಲ್‌ಎಂ/ಎಕೆ/5-30

**9.ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾರ್ಪಣಾ ಪ್ರಸ್ತಾವದ ಬಗ್ಗೆ ಮುಂದುವರೆದ ಚರ್ಚೆ**

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿ ಮಾನ್ಯ ಸಿದ್ಧರಾಮಯ್ಯನವರು ಕೊನೆಯ ವರ್ಷಕ್ಕೆ ಬಂದಿದ್ದಾರೆ. ಇದು ರಾಜ್ಯದಲ್ಲಿ ಕಾಂಗ್ರೆಸ್‌ನ ಕೊನೆ ಬಜೆಟ್, ರಾಜ್ಯದ ಕೊನೆಯ ಮುಖ್ಯಮಂತ್ರಿ ಮಾನ್ಯ ಸಿದ್ಧರಾಮಯ್ಯನವರು ಕೊನೆಯ ಬಜೆಟ್‌ನ್ನು ಮಂಡನೆ ಮಾಡಿದ್ದಾರೆ. ಅವರು ಮುಖ್ಯಮಂತ್ರಿಗಳಾಗಿ ಬರುವ ಸಂದರ್ಭದಲ್ಲಿ ರಾಜ್ಯದ ಎಲ್ಲ ಜನರಲ್ಲಿ ಒಂದು ರೀತಿಯ ಆಸಕ್ತಿ ಇತ್ತು. ಹಿಂದುಳಿದ ವರ್ಗದವರ ಬಗ್ಗೆ ಅವರಿಗೆ ಬಹಳ ಆಸಕ್ತಿ ಇದೆ ಎನ್ನುವುದಕ್ಕೆ ಉದಾಹರಣೆ ಎಂದರೆ ಅವರು 25-30 ವರ್ಷಗಳಿಂದ ತಪಸ್ಸು ಮಾಡಿಕೊಂಡು ಬಂದಿದ್ದಾರೆ. ತಪಸ್ಸು ಎನ್ನುವ ಪದವನ್ನು ನಾನು ಏಕೆ ಬಳಸುತ್ತಿದ್ದೇನೆ ಎಂದರೆ, ನನಗೆ ಒಮ್ಮೆ ಅಧಿಕಾರ ಸಿಕ್ಕರೆ ಈ ರಾಜ್ಯದಲ್ಲಿರುವ ಹಿಂದುಳಿದವರಿಗೆ, ದಲಿತರಿಗೆ ನ್ಯಾಯ ಕೊಡಬೇಕು ಎನ್ನುವ ಆಸೆಯನ್ನು ಅವರು ಇಟ್ಟುಕೊಂಡು ಬಂದರು, ಅದೇ ರೀತಿ ರಾಜ್ಯದ ಜನರು ಅವರ ಮೇಲೆ ಆಸೆಯನ್ನು ಇಟ್ಟುಕೊಂಡಿದ್ದರು. ನಾನು ಖಂಡಿತವಾಗಿ ಮಾಡುತ್ತೇನೆ, ಇಲ್ಲದಿದ್ದರೆ ಬಹಳ ಸಮಸ್ಯೆ ಬರುತ್ತದೆ ಎಂದು ಹೇಳಿದ್ದರು. 2013-14ರ ಮೊದಲನೆಯ ವರ್ಷದಲ್ಲಿ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದಿಂದ ಎಲ್ಲ ಜಾತಿಯ ಜಾತಿವಾರು ಸಮೀಕ್ಷೆಯನ್ನು ಕೈಗೊಳ್ಳಲಾಗುವುದು ಎಂದು ಹೇಳಿದರು. ಅದೇ ರೀತಿ 2015-16ನೇ ಸಾಲಿನಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಶಾಶ್ವತ ಹಿಂದುಳಿದ ಆಯೋಗದ ಮುಖಾಂತರ ಏಪ್ರಿಲ್ 11 2015ರಿಂದ ಏಪ್ರಿಲ್ 30ರ ವರೆಗೆ ನಡೆಸಲು ಉದ್ದೇಶಿಸಿದ್ದು, ಪ್ರಸಕ್ತ ಸಾಲಿನಲ್ಲಿ 116 ಕೋಟಿ ರೂ.ಗಳನ್ನು ಒದಗಿಸಿದ್ದು 2015-2016ನೇ ಸಾಲಿಗೆ 73 ಕೋಟಿ ರೂ.ಗಳನ್ನು ಒದಗಿಸಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರನ್ನು ಕುಳಿತುಕೊಳ್ಳಲು ಏಕೆ ಮನವಿ ಮಾಡಿಕೊಂಡೆ ಎಂದರೆ, ದಲಿತರ ಬಗ್ಗೆ, ಹಿಂದುಳಿದವರ ಬಗ್ಗೆ ಕಾಳಜಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವಂತಹ ವ್ಯಕ್ತಿ ಅವರು. ವಿಶೇಷವಾಗಿ ರೈತರ ಬಗರ್‌ಹುಕುಂ ಬಗ್ಗೆ ಇಡೀ ಜೀವನ ಹೋರಾಟ ಮಾಡಿಕೊಂಡು ಬಂದವರು. ಅವರು ಕುಳಿತು ಕೇಳಿದರೆ ನನಗೆ ಸ್ವಲ್ಪ ಸಮಾಧಾನ, ಇದಕ್ಕೆ ಪರಿಹಾರ ಸಿಗುತ್ತದೆ ಎಂದು ಅಲ್ಲ. ಮುಂದೆ 2016-17ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ನಡೆಸಲಾಗಿದೆ. ರಾಜ್ಯಪಾಲರ ಭಾಷಣದಲ್ಲಿ ಹೇಳಿಕೆಗಳನ್ನು ಕೊಡುವುದರಿಂದ, ಬಜೆಟ್‌ನಲ್ಲಿ ಹೇಳಿಕೆಯನ್ನು ಕೊಡುವುದರಿಂದ ಈ ಹೇಳಿಕೆಗಳ ತೂಕ ಹೋಗಿಬಿಡುತ್ತದೆಯೋ ಏನೋ ಅನ್ನಿಸುತ್ತದೆ. ಮಾನ್ಯ ರಾಜ್ಯಪಾಲರಿಂದ ಹೇಳಿಸಿರುವ ಹೇಳಿಕೆಗಳಿಗೆ ಒಂದು ತೂಕ ಇರುತ್ತದೆ. ಅದೇ ರೀತಿಯ ತೂಕ ಬಜೆಟ್ ಹೇಳಿಕೆಗಳಿಗೂ ಇರುತ್ತದೆ. ಚುನಾವಣಾ ಪ್ರಣಾಳಿಕೆ ಬಗ್ಗೆ ನಾವು ಹೇಳುವುದಿಲ್ಲ. ಮತ ಪಡೆಯಲು ಮಾಡಿರುವಂತಹ ಒಂದು ವ್ಯವಸ್ಥೆ ಅದು. ಅದನ್ನು ಕಾರ್ಯಗತ ಮಾಡಿದರೆ ಸಂತೋಷ, ಮಾಡದಿದ್ದರೆ ನಾನು ಏನು ಮಾಡಲು ಆಗುವುದಿಲ್ಲ. ಆದರೆ ಬಜೆಟ್ ಮತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದಂತಹ ಅಂಶಗಳ ಬಗ್ಗೆ ಏನು ಮಾಡಿದೆ ಸರ್ಕಾರ? ಒಂದೇ ಒಂದು ಉದಾಹರಣೆ ಹೇಳುತ್ತೇನೆ, ಮಾನ್ಯ ಉಗ್ರಪ್ಪನವರು ಪ್ರಸ್ತಾಪ ಮಾಡಿದ ಒಂದೇ ಒಂದು ವಿಚಾರವನ್ನು ಇಲ್ಲಿ ಎಲ್ಲರ ಗಮನಕ್ಕೆ ತರುತ್ತೇನೆ. 2005-06ನೇ ಸಾಲಿನಲ್ಲಿ ಹಣವನ್ನು ನಿಗದಿ ಮಾಡಲಾಗಿರುತ್ತದೆ. ನಂತರ 200 ಕೋಟಿ ರೂ.ಗಳನ್ನು ವೆಚ್ಚ ಮಾಡಿರುವಂತಹ ಹಿನ್ನೆಲೆ ಇದೆ. ಈಗ ನನಗೆ ಇರುವಂತಹ ಮಾಹಿತಿಯ ಪ್ರಕಾರ tabulation ನಡೆಯುತ್ತಿದೆ. ಆಯೋಗ ಕೊಟ್ಟಿರುವ ವರದಿಯನ್ನು ಜಾರಿಗೆ ಮಾಡದಿದ್ದರೆ, ವರದಿ ಸರ್ಕಾರದವರೆಗೆ ಬಂದಿದ್ದರೂ ರಾಜಕೀಯ ಉದ್ದೇಶದಿಂದ ತಡೆಹಿಡಿದಿದ್ದಾರೆ ಎಂದು ಹೇಳುವಂತಹ ಸಾಧ್ಯತೆ ಇದೆ. ನನಗೆ ಇರುವಂತಹ ಮಾಹಿತಿ ಪ್ರಕಾರ ಈ ವರದಿಯು ಅಂತಿಮ ಘಟ್ಟದಲ್ಲಿರು ಹಿನ್ನೆಲೆಯಲ್ಲಿ ಬಹುಷ: ಈ ವರದಿ ಬಂದಮೇಲೆ ನಿನ್ನೆ ಸಭೆಯಲ್ಲಿ ನಾನೂ ಇದ್ದೆನು, backward classes and minorities ಇರುವಂತಹ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಕೊಡಲು ಸರ್ಕಾರ ಬದ್ಧವಾಗಿದೆ ಎನ್ನಲಾಗಿದೆ. ಇದನ್ನು ಹೇಳಿರುವುದು ಮಾನ್ಯ ಉಗ್ರಪ್ಪನವರು, ನಾನಲ್ಲ. ಮುಂದುವರೆದು ಇದರ ಬಗ್ಗೆ ಅವರು ಏನು ambiguity ಇಟ್ಟುಕೊಳ್ಳುವ ಅವಶ್ಯಕತೆ ಇಲ್ಲ. ಸರ್ಕಾರ ಇದನ್ನು ಜಾರಿಗೆ ತರಲು ಪ್ರಮಾಣಿಕ ಪ್ರಯತ್ನ ಮಾಡುತ್ತಿದೆ ಎಂದು ಹೇಳಿದ್ದಾರೆ. ನಾನು ಬಹಳ ನೊಂದು ಹೇಳುತ್ತಿದ್ದೇನೆ, ಮಾನ್ಯ ಸಿದ್ಧರಾಮಯ್ಯನವರು ಬಂದಿದ್ದಾರೆ ಇಡೀ ಕರ್ನಾಟಕ ರಾಜ್ಯದಲ್ಲಿರುವ ಹಿಂದುಳಿದವರಿಗೆ, ದಲಿತರಿಗೆ ತುಂಬಾ ಅನುಕೂಲ ಮಾಡಿಕೊಡುತ್ತಾರೆ ಎಂದು ಅಂದುಕೊಂಡಿದ್ದೆವು, ಆದರೆ ಫೆಬ್ರವರಿ 14 ರಂದು ವಿಜಯವಾಣಿ ದಿನಪತ್ರಿಕೆಯಲ್ಲಿ " ಜಾತಿ ವರದಿಗೆ ಎಳ್ಳುನೀರು" " ಪ್ರತಿಯೊಂದು ಜಾತಿಗಳ ಜನಸಂಖ್ಯೆಯ ಸ್ಥಿತಿ-ಗತಿಗಳ ಅಧ್ಯಯನ ಸಾಧ್ಯ" "ಜನಸಂಖ್ಯೆ ಆಧಾರದ ಮೇಲೆ ಕಲ್ಯಾಣ ಯೋಜನೆಗಳ ಹಂಚಿಕೆ ಮಾಡಲು ಸಾಧ್ಯ" ಈ ವರದಿ ಬಿಡುಗಡೆಯಾದರೆ ಅದರ purpose ಒಳ್ಳೆಯದಾಗಿರುತ್ತದೆ. " ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ನ್ಯಾಯ ಕಲ್ಪಿಸಲು ಉಪಯೋಗ" ಇದನ್ನು ಯಾರೂ ಮಾಡಿರುವುದಿಲ್ಲ, ಇದು ಆಗಬೇಕು, ಆಗುತ್ತದೆ, ಇದು ಬರಬೇಕು ಎಂದು 80 ವರ್ಷಗಳಿಂದ ಎಲ್ಲರಿಗೂ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಸೆ ಇತ್ತು. 1931 ರಿಂದ ಜಾತಿ ಗಣತಿ ನಡೆದಿರಲಿಲ್ಲ, ಸ್ವಾತಂತ್ರ್ಯಾನಂತರ ಬಂದ ಯಾವ ಸರ್ಕಾರವು ಈ ಜಾತಿ ಸಮೀಕ್ಷೆಯ ತಂಟೆಗೆ ಹೋಗಿರಲಿಲ್ಲ. ದಶಕಗಳ ನಂತರ ರಾಜ್ಯದಲ್ಲಿ ಜಾತಿ ಸಮೀಕ್ಷೆ ನಡೆಯಿತು. ಇಡೀ ರಾಜ್ಯದಲ್ಲಿರುವ ಹಿಂದುಳಿದವರಿಗೆ, ದಲಿತರಿಗೆ ಏನೋ ಒಂದು ವರದಿ ಬರುತ್ತಿದೆ, ನಮ್ಮನ್ನು ಎಲ್ಲಿ ಬೇಕೋ ಅಲ್ಲಿ ಇಟ್ಟುಬಿಟ್ಟಿದ್ದಾರೆ, ನಮ್ಮ ಜನಸಂಖ್ಯೆಗೆ ತಕ್ಕಂತೆ ಮೀಸಲಾತಿ ಸಿಗುತ್ತದೆ, ಆರ್ಥಿಕ ನ್ಯಾಯ ಸಿಗುತ್ತದೆ ಎಂದು ಇಡೀ ರಾಜ್ಯದ ಜನರು ನಿರೀಕ್ಷೆ ಮಾಡುತ್ತಿರುವಂತಹ ಸಂದರ್ಭದಲ್ಲಿ.... ಇದರ ಬಗ್ಗೆ ನಾನು ಪ್ರಶ್ನೆ ಕೇಳಿದಾಗ, ಪ್ರತಿ ಬಾರಿಯು ಮಾನ್ಯ ಸಚಿವರಾದ ಆಂಜನೇಯರವರು ಈ ತಿಂಗಳ ಕೊನೆಯಲ್ಲಿ ಈ ವರದಿಯನ್ನು ಬಿಡುಗಡೆ ಮಾಡುತ್ತೇವೆ, ಎಲ್ಲವೂ ತಯಾರಾಗಿದೆ ಎಂದು ಹೇಳುತ್ತಾ ಬಂದರು. ಎಷ್ಟರಮಟ್ಟಿಗೆ ಎಂದರೆ ಹಿಂದುಳಿದ ವರ್ಗದ ಆಯೋಗದ ಅಧ್ಯಕ್ಷರಾದ ಶ್ರೀ ಕಾಂತರಾಜುರವರು "ಜಾತಿ ಸಮೀಕ್ಷೆ ಪೂರ್ಣಗೊಂಡ ಮೇಲೆ ನಾಲ್ಕೈದು ತಿಂಗಳಲ್ಲಿ ಅಂತಿಮ ಪಟ್ಟಿ ಸಿದ್ಧವಾಗಲಿದೆ ಎಂದು ತಿಳಿಸಿದ್ದಾರೆ" ಇದನ್ನು ಅವರು ಹೇಳಿರುವುದು ಏಪ್ರಿಲ್ 15 2015ರಲ್ಲಿ. ಆಗಲೇ ನಾಲ್ಕೈದು ತಿಂಗಳಲ್ಲಿ ಅಂತಿಮ ಪಟ್ಟಿ ಬಿಡುಗಡೆಯಾಗುತ್ತದೆ ಎಂದು ಹೇಳಿದ್ದರೂ, 2016ರಲ್ಲಿ ನಾನು ಅವರಿಗೆ ಫೋನ್ ಮಾಡಿ ನಾನು ವಿರೋಧ ಪಕ್ಷದ ನಾಯಕನಾಗಿ ಅವರ ಕಛೇರಿಗೆ ಹೋಗಿದೆ. ಅವರು ಸಹ ಸೌಜನ್ಯತೆಯಿಂದ ಸಮಿತಿಯ ಎಲ್ಲ ಸದಸ್ಯರನ್ನು ಸೇರಿಸಿದ್ದರು. ಆ ಸಭೆಯಲ್ಲಿ ಇದನ್ನು ಬಿಡುವುದಿಲ್ಲ ಸರ್ ನಾವು,ಮಾಡೇ ಮಾಡುತ್ತೇವೆ, ಹೆಚ್ಚು ಕಡಿಮೆ ಎಲ್ಲಾ ತಯಾರಾಗಿದೆ, ಇನ್ನೇನು ಬಿಡುಗಡೆ ಮಾಡಲು ಮಾನ್ಯ ಮುಖ್ಯಮಂತ್ರಿಗಳು date ಕೊಡಬೇಕು ಅಷ್ಟೇ ಎಂದು ಹೇಳಿದರು. ಆ ನಾಲ್ಕು ತಿಂಗಳು ಇನ್ನೂ ಬಂದಿಲ್ಲ. ಅದು ಯಾವಾಗ ಬರುತ್ತದೆ ಗೊತ್ತಿಲ್ಲ. ರಾಜ್ಯದ ಹಿಂದುಳಿದ ವರ್ಗಗಳ ಆಯೋಗ ಏಪ್ರಿಲ್ 2015ರಲ್ಲಿ 175 ಕೋಟಿ ರೂ.ಗಳ ವೆಚ್ಚದಲ್ಲಿ 1.33 ಲಕ್ಷ ಸಿಬ್ಬಂದಿಗಳ ಮೂಲಕ ಮನೆ-ಮನೆಗೆ ಹೋಗಿ ಸಮೀಕ್ಷೆ ನಡೆಸಿದೆ. 175 ಕೋಟಿ ರೂ.ಗಳನ್ನು ಖರ್ಚು ಮಾಡಿ, 1.33 ಲಕ್ಷ ಸಿಬ್ಬಂದಿಗಳ ಸಹಾಯದಿಂದ ಮನೆ-ಮನೆಗೆ ಹೋಗಿ ಸಮೀಕ್ಷೆ ಮಾಡಿದೆ. ಸಮೀಕ್ಷೆ ಮುಗಿದ ಮೇಲೆ ಅಂಕಿ-ಅಂಶಗಳನ್ನು ಬಿಡುಗಡೆ ಮಾಡಲು ಆಯೋಗ ತುದಿಗಾಲಿನಲ್ಲಿ ನಿಂತಿತ್ತು. ಆದರೆ ಸರ್ಕಾರ ಹಿಂಜರಿಯಿತು. ಮುಂದೆ ಬೇರೆ ಸರ್ಕಾರ ರಚನೆಯಾದರೆ ಈ ವರದಿಯನ್ನು ಬಿಡುಗಡೆ ಮಾಡುವ ಗೋಜಿಗೆ ಹೋಗದಿರಬಹುದು, ಹಾಲಿ ಪಕ್ಷವು ಮತ್ತೆ ಅಧಿಕಾರಕ್ಕೆ ಬಂದರೆ ಬಿಡುಗಡೆಯ ಭಾಗ್ಯ ಸಿಗಬಹುದು. ಇಲ್ಲದಿದ್ದರೆ ಸಮೀಕ್ಷೆಗೆ ಖರ್ಚು ಮಾಡಿದ 175 ಕೋಟಿ ರೂ.ಗಳನ್ನು ನೀರಿನಲ್ಲಿ ಹೋಮ ಮಾಡಿದ ಹಾಗೆ ಆಗುತ್ತದೆ. ಹಣ ಸಾವಿರಾರು ಕೋಟಿ ರೂ.ಗಳ ಲೂಟಿಯಾಗಿದೆ. 175 ಕೋಟಿ ರೂ.ಗಳು ಖರ್ಚಾಗಿರುವುದಕ್ಕೆ ನನಗೇನು ನೋವಿಲ್ಲ. ಆದರೆ ಹಿಂದುಳಿದವರಿಗೆ, ದಲಿತರಿಗೆ ನ್ಯಾಯ ಕೊಡುತ್ತೇವೆ ಎಂದು ಐದು ವರ್ಷಗಳಿಂದ ಹೇಳಿಕೊಂಡು ಬಂದರೂ ಏನು ಮಾಡಲಿಲ್ಲ. ಆದ್ದರಿಂದ ನಾನು ಮಾನ್ಯ ಸಚಿವರಾದ ಕಾಗೋಡು ತಿಮ್ಮಪ್ಪನವರಿಗೆ ಹೇಳುವುದು, ಅವರು ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚೆನ್ನಾಗಿದ್ದಾರೆ, ಮುಖ್ಯಮಂತ್ರಿಗಳಿಗೆ ಹಿಂದುಳಿದವರ ಬಗ್ಗೆ ಆಸಕ್ತಿ ಇದ್ದರೆ, ಯಾವ ಪರಿಸ್ಥಿತಿ ಬಂದರೂ ನಾನು ಮಾಡೇ ಮಾಡುತ್ತೇನೆ ಎಂದು ಏನು ಇಚ್ಛಾಶಕ್ತಿಯನ್ನು ತೋರಿಸಿದ್ದರು... ನಾನು ಪ್ರಶ್ನೆ ಕೇಳಿದಾಗಲೆಲ್ಲಾ ಅವರು ನಮ್ಮ ಮೇಲೆ ಟೀಕೆ ಮಾಡಿದ್ದಾರೆ, " ನಿಮ್ಮ ಪಕ್ಷ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಏನ್ರಿ ಮುಂದುವರೆದವರ ಪಕ್ಷ ನೀವು ಏನು ಮಾಡುತ್ತೀರಿ" ಎಂದು ಹೇಳುತ್ತಿದ್ದರು. ಇವರು ಮಾಡುತ್ತಾರೆಯೇ ಮಾಡಲಿ, ನಾವು ಏನು ಹೇಳುವುದಿಲ್ಲ. ಆದರೆ ಮುಂದುವರೆದ ಜನಾಂಗದ ಪಕ್ಷದ ಪ್ರಧಾನ ಮಂತ್ರಿಗಳು, ಹಿಂದುಳಿದ ವರ್ಗದ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರ ಮೋದಿಯವರು ಸ್ವಾತಂತ್ರ್ಯ ಬಂದಾಗಿನಿಂದ ಇವತ್ತಿನವರೆಗೂ ಕೂಡಾ ಸಂವಿಧಾನಬದ್ಧವಾದ ಹಕ್ಕನ್ನು ಕೊಡಲು ಹಿಂದೆ ಯಾವುದೇ ಸರ್ಕಾರ ತೀರ್ಮಾನ ಮಾಡಲು ಆಗದೇ ಇರುವಂತಹ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ವಿಧೇಯಕ ವನ್ನು ಲೋಕಸಭೆಯಲ್ಲಿ ಪಾಸ್ ಮಾಡಿದರು. ಈ ಬಿಲ್ ಲೋಕಸಭೆಯಲ್ಲಿ ಪಾಸ್ ಮಾಡುತ್ತಾರೆ, ಆದರೆ ರಾಜಸಭೆಯಲ್ಲಿ ಅಡ್ಡ ಹಾಕುತ್ತಾರೆ. ಕಾಂಗ್ರೆಸ್‌ನವರಿಗೆ ಹಿಂದುಳಿದವರಿಗೆ, ದಲಿತರಿಗೆ ಅನುಕೂಲ ಮಾಡಿ ಕೊಡುವ ಉದ್ದೇಶವಿಲ್ಲ. ಇವರದ್ದು ದ್ವಂದ್ವ ನೀತಿ. ಈಗ ಮಾನ್ಯ ರಾಹುಲ್ ಗಾಂಧಿಯವರು ಬರುತ್ತಾರೆ ಎಂದು ಅಧಿವೇಶನವನ್ನೇ ಮುಕ್ತಾಯ ಮಾಡುತ್ತಿದ್ದಾರೆ.

**ಶ್ರೀ ಎಂ.ಆರ್.ಸೀತಾರಾಂ(ಸಭಾನಾಯಕರು):-** ಮಾನ್ಯ ಸಭಾಪತಿಗಳೇ, ಮಾನ್ಯ ರಾಹುಲ್ ಗಾಂಧಿಯವರು ಬರುತ್ತಿದ್ದಾರೆ ಎಂದು ಅಧಿವೇಶನವನ್ನು ಮುಂದೂಡುತ್ತಿಲ್ಲ. ಚುನಾವಣೆಯ ಸಮಯ ಎಂದು ಕೆಳಮನೆಯಲ್ಲಿ ಸದಸ್ಯರ ಸಂಖ್ಯೆ ತುಂಬಾ ಕಡಿಮೆ ಅಂದರೆ, 8 ಜನ 10 ಜನ ಶಾಸಕರು ಅಧಿವೇಶನಕ್ಕೆ ಬರುತ್ತಿದ್ದಾರೆ. ನಿನ್ನೆ ನಾನು ಆ ಮನೆಗೆ ಹೋಗಿ ನೋಡಿದೆ ಅಲ್ಲಿ 8 ಜನ 10 ಜನ ಶಾಸಕರು ಮಾತ್ರ ಸದನದಲ್ಲಿ ಇರುತ್ತಾರೆ. ಎಲ್ಲ ಪಕ್ಷದ ಸದಸ್ಯರು ತಮ್ಮ ಕ್ಷೇತ್ರಗಳ ಕಡೆಗೆ ಹೋಗಿರುವುದರಿಂದ ವಿಧಾನಸಭಾ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ.

(187) 21-02-2018 BSD-AK (05-40)

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಸಭಾಪತಿವರೇ, ನಾನು ಕಾಂಗ್ರೆಸ್ ಪಕ್ಷದ ಸದಸ್ಯರು ಎಂದು ಬಾಯಿ ಬಿಟ್ಟು ಹೇಳಲಿಲ್ಲ. ಆದರೆ ಈ ಸರ್ಕಾರ ಬಂದಾಗಿನಿಂದಲೂ 5 ವರ್ಷದಿಂದ ಇದೇ ಹಣೆಬರಹ ಆಗಿದೆ. ಅವರು ಹೊಸದೇನೋ ಹೇಳುತ್ತಿದ್ದಾರೆ. ಅವರ ಪಕ್ಕದಲ್ಲಿರುವವರನ್ನೇ ಕೇಳಲಿ. ನಾನು ಮಾನ್ಯ ಸಭಾನಾಯಕರನ್ನು ಕೇಳುವುದೇನೆಂದರೆ, ದೇಶದ ಸ್ವಾತಂತ್ರ್ಯ ಬಂದಾಗಿನಿಂದ ಇಂದಿನವರೆಗೂ ಯಾವುದಾದರೂ ರಾಜ್ಯದಲ್ಲಿ ಬಜೆಟ್ ಅಧಿವೇಶನವನ್ನು ಮೂರುವರೆ ದಿವಸ ಮಾಡಿರುವುದನ್ನು ಕೇಳಿದ್ದಾರೆಯೇ? ದಿನಾಂಕ 16ರಂದು ಬಜೆಟ್ ಮಂಡನೆ ಮಾಡಿ, ದಿನಾಂಕ 17 ಮತ್ತು 18ರಂದು ಶನಿವಾರ ಭಾನುವಾರ ಆಗಿದ್ದು, ದಿನಾಂಕ 19ರಂದು ಮಾನ್ಯ ಕೆ.ಎಸ್. ಪುಟ್ಟಣ್ಣಯ್ಯನವರು ತೀರಿ ಹೋದರು. ನಂತರ ಉಳಿದ ದಿನಾಂಕ 20, 21, 22 ಹಾಗೂ 23ರಂದು ಅರ್ಧ ದಿವಸ ಸೇರಿ ಒಟ್ಟು ಮೂರುವರೆ ದಿವಸಗಳಲ್ಲಿ ಒಂದು Budget Session ಮಾಡುತ್ತಾರೆ. ಇದಕ್ಕಿಂತ ನಾಚಿಕೆಗೇಡು ಬೇರೆ ಇಲ್ಲ. ಯಾವ ಸದಸ್ಯರು ಮಾತನಾಡಬೇಕೋ, ಅವರು ಮಾತನಾಡುತ್ತಾರೆ ಮತ್ತು ಯಾವ ಮಂತ್ರಿಯವರು ಹಾಜರಿರಬೇಕೋ ಅವರು ಸದನದಲ್ಲಿ ಹಾಜರಿರುತ್ತಾರೆ. ಆದರೆ ಯಾರೋ ಶಾಸಕರು ಬರಲಿಲ್ಲ ಎಂದು ಅಧಿವೇಶನವನ್ನು ಮುಂದಾಕುವುದನ್ನು ಕೇಳಿದ್ದಾರೆಯೇ? Budget Session ಇಲ್ಲದೇ ಲೇಖಾನುದಾನ ತೆಗೆದುಕೊಂಡು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಮುಗಿಸಬಹುದಾಗಿತ್ತು. ಈಗ ಮಾನ್ಯ ಬಸವರಾಜ ರಾಯರೆಡ್ಡಿಯವರು ಸ್ಪಷ್ಟವಾಗಿ **' ನಾನು ವಿಫಲನಾಗಿದ್ದೇನೆ'** ಎಂದು ಹೇಳಿದರು. ಯಾವ ಇಲಾಖೆ ಈ ರೀತಿ ಇಲ್ಲ. ಆದ್ದರಿಂದ ಕನಿಷ್ಟ ಇನ್ನು 2 ತಿಂಗಳು ಇದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೊರಗೆ ಹೋಗುತ್ತಿದ್ದಾಗ ಒಳಗೆ ಬಂದು ಕುಳಿತುಕೊಳ್ಳಿ ಎಂದು ಏಕೆ ಹೇಳಿದೆ ಎಂದರೆ, ಪಾಪ, ಅವರಿಗೂ ಇನ್ನು ವಯಸ್ಸು ಉಳಿಯುವುದಿಲ್ಲ. ನಮಗೂ ಬಹಳ ಆಸಕ್ತಿ ಹಾಗೂ ರಾಜ್ಯದ ಜನರಿಗೆ ಬಹಳ ಆಸಕ್ತಿ. ಮಾನ್ಯ ಮುಖ್ಯಮಂತ್ರಿಗಳಿಗೆ ಆಸಕ್ತಿ ಇದ್ದ ವಿಷಯವನ್ನು ತಂದು, ಹಿಂದುಳಿದವರು, ದಲಿತರಿಗೆ ಅನ್ಯಾಯವಾಗುತ್ತದೆ, ನ್ಯಾಯ ಸಿಗುವುದಿಲ್ಲ ಎಂದು ಗೊತ್ತಿದ್ದರೂ 'ಈ ಜಾತಿ ವರದಿಗೆ ಎಳ್ಳು-ನೀರು' ಎಂದು ಪತ್ರಿಕೆಗಳಲ್ಲಿ ಓದುವ ಸ್ಥಿತಿ ನಮಗೆ ಬಂತಲ್ಲ!. ಅಷ್ಟೇ ಅಲ್ಲ ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಶ್ರೀ ಹೆಚ್. ಆಂಜನೇಯರವರು ' ಬಜೆಟ್ ಮಂಡನೆ ಬಳಿಕ ಮುಖ್ಯಮಂತ್ರಿಗಳು ಜಾತಿ ಗಣತಿ ಕುರಿತು ಚರ್ಚಿಸಲಿದ್ದಾರೆ, ಆಯೋಗದವರು ಎಲ್ಲಾ ಜಾತಿಗಳ ಸ್ಥಿತಿಗತಿ ಹಾಗೂ ಯಾವ ಸಮುದಾಯಕ್ಕೆ ಎಷ್ಟು ಮೀಸಲಾತಿ ನೀಡಬೇಕು ಎಂಬುದರ ಅಧ್ಯಯನ ನಡೆಸಿ, ಸರ್ಕಾರಕ್ಕೆ ವರದಿ ಸಲ್ಲಿಸಬೇಕು, ಈ ಅವಧಿಯಲ್ಲಿ ವರದಿ ಬಿಡುಗಡೆಗೆ ಪ್ರಯತ್ನಿಸಲಾಗುವುದು' ಎಂದು ಹೇಳಿದ್ದಾರೆ. ನಂತರ ಮುಂದುವರೆದು ' ಒಂದು ವೇಳೆ ಆಗದಿದ್ದರೆ ಮುಂದಿನ ಚುನಾವಣೆಯಲ್ಲಿ ನಾವೇ ಗೆದ್ದು ಅಧಿಕಾರಕ್ಕೆ ಬರುತ್ತೇವೆ, ಆಗ ವರದಿ ಬಿಡುಗಡೆ ಮಾಡುತ್ತೇವೆ' ಎಂದು ಹೇಳಿದ್ದಾರೆ. ಈ ರೀತಿ ಹೇಳಿಕೆ ಕೊಡಲು ಮಾನ-ಮರ್ಯಾದೆ ಬೇಡವೇ? ಕನಿಷ್ಟ ಒಂದು ನಾಚಿಕೆಯಾದರೂ ಇರಬೇಕಲ್ಲವೇ? ಐದು ವರ್ಷಗಳ ಬಜೆಟ್‌ನಲ್ಲಿ ಹೇಳಿದ್ದೇ ಹೇಳಿದ್ದು, ಹೇಳಿದ್ದೇ ಹೇಳಿದ್ದಾಗಿದೆ. ಇಡೀ ರಾಜ್ಯದ ಜನರಿಗೆ ಆರ್ಥಿಕವಾಗಿ ಅನುಕೂಲವಾಗುತ್ತದೆ, ಮೀಸಲಾತಿ ಸಿಗುತ್ತದೆ, ಮಕ್ಕಳಿಗೆ ಉದ್ಯೋಗ ಸಿಗುತ್ತದೆ, ಜನಸಂಖ್ಯೆಗನುಗುಣವಾಗಿ ಅನುಕೂಲಗಳು ಸಿಗುತ್ತವೆ ಎಂದು ಕನಸು ಕಾಣುತ್ತಿದ್ದರು. ಈಗ ಮುಂದಿನ ಚುನಾವಣೆಯಲ್ಲಿ ನಾವೇ ಬರುತ್ತೇವೆ, ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ. Bus stand ಮುಂದೆ ಗಿಳಿ ಅಂಗಡಿ ಇಟ್ಟುಕೊಂಡು, ಗಿಣಿಯನ್ನು basket ನಲ್ಲಿ ಇಟ್ಟುಕೊಂಡು ಕುಳಿತಿರುತ್ತಾರೆ. ಆ ಗಿಳಿ ಬಾಗಿಲು ತೆಗೆಯುತ್ತಿದ್ದ ಹಾಗೆ ಹೊರಗಡೆ ಬಂದು ' ಇಂತಹವನು ಅಧಿಕಾರಕ್ಕೆ ಬರುತ್ತಾನೆ, ಇಂತಹವನು ಅಧಿಕಾರಕ್ಕೆ ಬರುತ್ತಾನೆ' ಎಂದು ಹೇಳುತ್ತದೆ. ಆ ಕೆಲಸ ಮಾಡಲು ಶ್ರೀ ಆಂಜನೇಯ ರವರು ಸರಿ. ಅವರು ಈಗ ಸದನದಲ್ಲಿ ಇಲ್ಲ. ಆದರೆ ನಾನು ವಿಧಿಯಿಲ್ಲದೇ ಈ ಮಾತನ್ನು ಹೇಳಬೇಕಾಗಿದೆ. ನಾವು ಗಿಳಿಪಾಠ ಕೇಳಲು ವಿಧಾನ ಪರಿಷತ್ತಿಗೆ ಬಂದಿದ್ದೇವೆಯೇ? ಮಾನ್ಯ ಮುಖ್ಯಮಂತ್ರಿಗಳು '೮೦ ವರ್ಷಗಳಿಂದ pending ಇದ್ದು, ಇದನ್ನು ನಾವು ತರುತ್ತೇವೆ' ಎಂದು ವೀರಾವೇಶದ ಭಾಷಣ ಮಾಡುತ್ತಾರೆ. ಹಿಂದುಳಿದವರದ್ದೇ champion ಎಂದೆಲ್ಲಾ ಹೇಳಿ, ಈಗ ಸಚ್ಚಾ champion ಯಾರು ಮತ್ತು ಜೂಟಾ champion ಯಾರು ಎಂದು ತೀರ್ಮಾನವಾಗುತ್ತಿದೆ. ಮಾನ್ಯ ನರೇಂದ್ರ ಮೋದಿಯವರು ಶಾಶ್ವತ ಹಿಂದುಳಿದ ವರ್ಗಗಳಿಗೆ ಸಂವಿಧಾನಬದ್ಧವಾದ ಹಕ್ಕನ್ನು ತಂದರೆ ಎಂದು ಹೇಳಿದೆ. ಅವರು ಸಚ್ಚಾ ಹಿಂದುಳಿದ ವರ್ಗದ ನಾಯಕರು. ಇವರು ಜೂಟಾ ನಾಯಕ. 5 ವರ್ಷಗಳಿಂದ ಮಾಡುತ್ತೇವೆ ಎಂದು ಹೇಳುತ್ತಾ ಹಿಂದುಳಿದವರು ಮತ್ತು ದಲಿತರಿಗೆ ಮೋಸ ಮಾಡುತ್ತಿದ್ದಾರೆ. ರಾಜ್ಯದ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿಂದುಳಿದವರು ಮತ್ತು ದಲಿತ ವರ್ಗದವರ ಬಳಿ ಮಾಡುವುದಕ್ಕೆ ಆಗಲಿಲ್ಲ, ಮೋಸ ಮಾಡಿದ್ದೇನೆ ಎಂದು ಕ್ಷಮೆ ಕೇಳಲಿ. ನಾನು ಇದನ್ನು ತುಂಬಾ ನೊಂದು ಹೇಳುತ್ತಿದ್ದೇನೆ. ನಾನು ಈ ವಿಚಾರ ಏಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಇನ್ನು ಇದು ಕೊನೆಯ ಅಧಿವೇಶನ. ಜನರ ಹತ್ತಿರ ಅವರು ಹೋಗುತ್ತಾರೆ, ನಾನೂ ಹೋಗುತ್ತೇನೆ. ಅವರು ಹಿಂದುಳಿದ ಮತ್ತು ದಲಿತ ವರ್ಗಗಳ ನಾಯಕರು ಎಂದು ಹೇಳಿಕೊಳ್ಳಲಿ. 25 ವರ್ಷಗಳ ಕಾಲ ತಪಸ್ಸು ಮಾಡಿದ್ದು ಇದಕ್ಕಾಗಿಯೇ? ಬರೀ ಮುಖ್ಯಮಂತ್ರಿ ಸ್ಥಾನ ಕುರ್ಚಿಗಾಗಿಯೇ? ಆ ಕುರ್ಚಿಯಿಂದ ಎಲ್ಲಾ ಸುಖದ ಅನುಭವವನ್ನು ಪಡೆದ ನಂತರ ಹಿಂದುಳಿದ ಮತ್ತು ದಲಿತ ವರ್ಗಗಳನ್ನು ತೆಗೆದುಕೊಂಡು ಅವರೇನು ಮಾಡುತ್ತಾರೆ? ಹಿಂದುಳಿದ ಮತ್ತು ದಲಿತ ವರ್ಗಗಳ ನಾಯಕರು ಎಂದು ನಾಟಕಕ್ಕೋಸ್ಕರ ಈ ಪದಗಳನ್ನು ಬಳಸುತ್ತಿದ್ದೇನೆ ಎಂದು ಹೇಳಬೇಕಾಗಿತ್ತು. ಆ ವರ್ಗಗಳ ಓಟು ತೆಗೆದುಕೊಳ್ಳುವುದಕ್ಕಾಗಿ ಪದಗಳನ್ನು ಬಳಸುತ್ತಿದ್ದೇನೆ ಎಂದು ಹೇಳಬೇಕಾಗಿತ್ತು. ಅವರು ಹೇಳುತ್ತಾರೋ, ಬಿಡುತ್ತಾರೋ, ಆದರೆ ರಾಜ್ಯದ ಜನರು ಅದನ್ನು ತೀರ್ಮಾನ ಮಾಡುತ್ತಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹಿರಿಯರಿದ್ದು, ನಾನು ಅವರಿಗೆ ಮನವಿ ಮಾಡುವುದೇನೆಂದರೆ, ಅಧಿವೇಶನದಲ್ಲಿಯೇ ವರದಿಯನ್ನು ಬಿಡುಗಡೆ ಮಾಡಬೇಕೆಂದು ಇಲ್ಲ. ಇನ್ನೂ 2 ತಿಂಗಳು ಅವಕಾಶವಿದ್ದು, ನಾನು ಶ್ರೀ ಕಾಂತರಾಜು ರವರ ಬಳಿ ಮಾತನಾಡಿದಂತೆ ವರದಿಯು ready ಇದೆ. ಈ ವಿಚಾರವನ್ನು ಅವರೂ ಕೇಳಿಕೊಳ್ಳಲಿ. ಅವರ ಕೈಯನ್ನು ಯಾರು ಹಿಡಿಯುತ್ತಿದ್ದಾರೆ?

ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):- ಮಾನ್ಯ ಸಭಾಪತಿಯವರೇ, ವರದಿ ready ಯಾಗಿದ್ದರೆ ಬಿಡುಗಡೆ ಮಾಡುವುದಕ್ಕೆ ಏನೂ ತೊಂದರೆ ಇಲ್ಲ. ಏಕೆಂದರೆ ನಾನಿದ್ದ ಸಂದರ್ಭದಲ್ಲಿ Commission ಗೆ ಒಂದು ಕಾನೂನು ಮಾಡಿದ್ದು, ಅದಕ್ಕೊಂದು ಅವಧಿ ಇದ್ದು, ಜವಾಬ್ದಾರಿಯನ್ನು ವಹಿಸಿಕೊಂಡ ಮೇಲೆ ಆ ಪ್ರಕಾರ ಮಾಡಿಕೊಡಬೇಕು. ಆ ರೀತಿ ಏಕೆ ಇಟ್ಟುಕೊಂಡಿದ್ದಾರೋ, ಗೊತ್ತಿಲ್ಲ, ನಾನು ಸರ್ಕಾರದ ಮೂಲಕ ಕೇಳುತ್ತೇನೆ.

ಶ್ರೀ ಬಿ.ಜೆ. ಪುಟ್ಟಸ್ವಾಮಿ:- ಮಾನ್ಯ ಸಭಾಪತಿಯವರೇ, ಸರ್ವೆ ಕಾರ್ಯ ಜುಲೈ 15ಕ್ಕೆ ಮುಗಿದಿದ್ದು, ಸರ್ಕಾರದಿಂದ ಉತ್ತರ ರೂಪದಲ್ಲಿ ಹೇಳಿದ್ದಾರೆ. ಈ ಕಾರ್ಯ ಮುಗಿದು 3 ವರ್ಷಗಳು ಕಳೆದಿವೆ. 3 ವರ್ಷಗಳಿಂದಲೂ ಸುಮ್ಮನೆ ಹೇಳಿಕೊಂಡು ಬರುತ್ತಿದ್ದಾರೆಯೇ ವಿನಃ ವರದಿಯನ್ನು ರಿಟಚಿಚಿಜ ಮಾಡುತ್ತಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ:- ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವುದು ತಮಗೆ ಗೊತ್ತಿದೆ. ಆ ವರದಿಯ ಸೋರಿಕೆಯೂ ಆಯಿತು. ಪತ್ರಿಕೆಗಳಲ್ಲಿ 'ನಮ್ಮ ಸಮುದಾಯದ ಜನಸಂಖ್ಯೆ ಹೆಚ್ಚಿದೆ ಎಂಬ ಮಾತುಗಳು ಕೇಳಿಬಂದಿದ್ದು, ವರದಿ ಸೋರಿಕೆಯ ವಿರುದ್ಧ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯನವರು ಗರಂ ಕೂಡ ಆಗಿದ್ದರು' ಎಂದು ಬಂದಿದೆ. ವರದಿ ಸೋರಿಕೆಯ ವಿರುದ್ಧ ಗರಂ ಆದರು, ಆದರೆ ವರದಿ ಬಿಡುಗಡೆ ಮಾಡದಿರುವುದಕ್ಕೆ ರಾಜ್ಯದ ಜನರು ಎಷ್ಟು ಗರಂ ಆಗಬೇಕು? ಮಾನ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಗೋಡು ತಿಮ್ಮಪ್ಪನವರಷ್ಟು ಮುಗ್ಧರು ಇಲ್ಲ. ಏಕೆಂದರೆ ವರದಿ ready ಇದೆ. ನಮಗೆ, ಅವರಿಗೆ ಎಲ್ಲಾ ಹಿಂದುಳಿದವರು ಹಾಗೂ ದಲಿತರಿಗೆ ದ್ರೋಹ ಮಾಡುತ್ತಿದ್ದಾರೆ. ಇದಕ್ಕೆ ನಾವು ಸುಮ್ಮನೆ ಕುಳಿತುಕೊಳ್ಳಬೇಕೆ? ಆದ್ದರಿಂದ ಹಿಂದುಳಿದ ವರ್ಗದ ಶಾಶ್ವತ ಆಯೋಗದ ವತಿಯಿಂದ ಎಲ್ಲಾ ಜಾತಿಗಳ ಸಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಮಾಡುತ್ತೇವೆ ಎಂದು ಪ್ರತಿ ಬಜೆಟ್‌ನಲ್ಲಿಯೂ ಹೇಳಿಕೊಂಡು ಬಂದಿದ್ದರು. ಇನ್ನೂ ಎರಡು ತಿಂಗಳು ಸಮಯ ಇರುವುದರಿಂದ ದಯಮಾಡಿ ನಕಲಿ ಹಿಂದುಳಿದ ವರ್ಗಗಳ ನಾಯಕರಾಗಬಾರದು, ಅಸಲಿ ಹಿಂದುಳಿದ ವರ್ಗಗಳ ನಾಯಕರಾಗುವ ದಿಕ್ಕಿನಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಪ್ರಯತ್ನ ಮಾಡಲಿ. ಇಲ್ಲವೆಂದರೆ ನಕಲಿ ಹಿಂದುಳಿದ ವರ್ಗಗಳ ನಾಯಕ ಎಂದು ಒಪ್ಪಿಕೊಳ್ಳಲಿ. ಮಾನ್ಯ ನರೇಂದ್ರ ಮೋದಿಯವರನ್ನು ಟೀಕೆ ಮಾಡುವುದನ್ನು ಬಿಟ್ಟು, ಅವರನ್ನು ಅಸಲಿ ಹಿಂದುಳಿದ ವರ್ಗಗಳ ನಾಯಕ ಎಂದು ಒಪ್ಪಿಕೊಳ್ಳಲಿ. ಈ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಾ, ಮಾನ್ಯ ಕಾಗೋಡು ತಿಮ್ಮಪ್ಪನವರಲ್ಲಿ ಮನವಿ ಮಾಡುವುದೇನೆಂದರೆ, ಇನ್ನೂ ಎರಡು ತಿಂಗಳ ಅವಕಾಶ ಇದ್ದು, ವರದಿ ಬಿಡುಗಡೆ ಮಾಡುವ ದಿಕ್ಕಿನಲ್ಲಿ ಪ್ರಯತ್ನ ಮಾಡಬೇಕು ಎನ್ನುವ ಮಾತನ್ನು ಹೇಳಬಯಸುತ್ತೇನೆ. ಈ ಸರ್ಕಾರವು ಎಷ್ಟರಮಟ್ಟಿಗೆ ಹಿಂದುಳಿದ ವರ್ಗಗಳಿಗೆ ದ್ರೋಹ ಮಾಡುತ್ತಿದೆ ಎನ್ನುವ ಬಗ್ಗೆ ಒಂದು ಉದಾಹರಣೆ ಹೇಳುತ್ತೇನೆ. ಬೆಂಗಳೂರು ನಗರ ಜಿಲ್ಲೆಯ ದಾಸನಪುರ ಹೋಬಳಿಯ ಮಾಚೋಹಳ್ಳಿ ಗ್ರಾಮದ ಸರ್ವೆ ನಂ.81ರಲ್ಲಿ ಸರ್ಕಾರದಿಂದ 36 ಸಂಘ-ಸಂಸ್ಥೆಗಳಿಗೆ ಜಮೀನನ್ನು ಕೊಟ್ಟಿದ್ದಾರೆ. ಇದರಲ್ಲಿ ದಲಿತ ಸಂಘರ್ಷ ಸಮಿತಿಯಿಂದ ಹಿಡಿದು ಕುರುಬರ ಸಂಘ, ಈಡಿಗರ ಸಂಘ, ವಿಶ್ವಕರ್ಮ ಸಮಾಜ, ಕುರುಹೀನ ಶೆಟ್ಟಿ ಸಮಾಜ, ಪದ್ಮಶಾಲಿ ಸಂಘ, ಮಡಿವಾಳ ಸಂಘ, ವಾಲ್ಮೀಕಿ, ಗಾಣಿಕರು, ಕುಂಚಿಟಿಗರು, ದೇವಾಡಿಗ, ಕಾಗಿನೆಲೆ, ದೇವಾಂಗ, ಸವಿತಾ ಸಮಾಜ, ಆರ್ಯ ಈಡಿಗರ ಸಂಘ, ಉಪ್ಪಾರ ಸಂಘ, ದೊಂಬಿದಾಸರ ಕ್ಷೇಮಾಭಿವೃದ್ಧಿ ಸಂಘ, ಹಿಂದೂ ಸಾದರ ಕ್ಷೇಮಾಭಿವೃದ್ಧಿ ಸಂಘ, The Muslim Orphanage, Bangalore, ತಿಗಳರು, ವೀರಶೈವ ಮಹಾಸಭೆ, ಬಂಜಾರ ಮಹಿಳಾ ಸೇವಾ ಸಂಘ, ರೇವಣ ಸಿದ್ದೇಶ್ವರ ವಿದ್ಯಾಪೀಠ, ಗೊಲ್ಲರು, ಕೊರಮ ಜನಾಂಗ, ಗಂಗಾಮತಸ್ಥರ ಸಂಘ ಮತ್ತು ಒಕ್ಕಲಿಗರ ಸಂಘಗಳು ಇವೆ.

188/21.02.2018/5.50/ಹೆಚ್‌ವಿಃಆರ್‌ಎನ್

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ರೇವಣ ಸಿದ್ದೇಶ್ವರ ವಿದ್ಯಾಪೀಠ, ಗೊಲ್ಲರ ಸಂಘ, ಕೊರಮ ಜನಾಂಗ ಸಂಘ, ಗಂಗಾಮತಸ್ಥ ಸಂಘ ಮತ್ತು ಒಕ್ಕಲಿಗರ ಸಂಘ ಹೀಗೆ ವಿವಿಧ ಸಂಘಗಳಿಗೆ ಜಮೀನನ್ನು ಕೊಡುತ್ತೇವೆಂದು ಮೂಗಿಗೆ ತುಪ್ಪವನ್ನು ಹಚ್ಚಿದ್ದಾರೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಹಂಚಿಕೆಗೆ ಬೇಕಾಗಿರುವ ತಯಾರಿಗಳು ನಡೆದಿವೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ತಯಾರಿಗಳು ಆಗಿಲ್ಲ ಎನ್ನುವ ಮಾತನ್ನು ನಾನು ಹೇಳಲ್ಲ. ಸುಮಾರು 36 ದಲಿತ, ಹಿಂದುಳಿದ ಮತ್ತು ಇನ್ನಿತರ ಸಂಘಸಂಸ್ಥೆಗಳಿಗೆ ಆ ಜಾಗವನ್ನು ತಲುಪಿಸಬೇಕಾದರೆ, ಸರ್ಕಾರ ಏನು ಮಾಡಬೇಕು? “ಖಾಸಗಿಯವರಿಗೆ ಗೋಮಾಳ ಜಮೀನನ್ನು ಹಂಚಿಕೆ ಅಥವಾ ನೀಡುವ ಮೊದಲು ಭೂ ಕಂದಾಯ ಕಾಯಿದೆ ನಿಯಮ 97(4)ರ ಪ್ರಕಾರ ಗೋಮಾಳ ಶೀರ್ಷಿಕೆಯನ್ನು ತಗ್ಗಿಸಬೇಕು. ಖರಾಬು ಜಮೀನು ಆಗಿದ್ದಲ್ಲಿ ಸಾರ್ವಜನಿಕ ಹಕ್ಕಿನಿಂದ ಕೈಬಿಡಲು ನಿಯಮಾನುಸಾರ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ನಿಗದಿತ ಸಮಯ ಮುಗಿದ ನಂತರ ಜಮೀನು ಹಂಚಿಕೆಗೆ ಅಗತ್ಯ ಕ್ರಮವನ್ನು ವಹಿಸಬೇಕು” ಇದಕ್ಕೆ 90 ದಿನಗಳ ಸಮಯಾವಕಾಶ ಬೇಕಾಗುತ್ತದೆ. ಸರ್ಕಾರ ಈ ಬಗ್ಗೆ ನೋಟಿಫಿಕೇಶನ್ ಹೊರಡಿಸಿತು. ಎಲ್ಲರೂ ನಮಗೆ ಜಮೀನು ಸಿಕ್ಕಿತು ಎಂದು ಆನಂದವಾಗಿದ್ದರು. ಹಿಂದುಳಿದವರು ಮತ್ತು ದಲಿತರು ಇವರಿಗೆ ಓಟು ಒತ್ತುವುದೇ ಬಾಕಿಯಿತ್ತು. ಇದರ ಮಧ್ಯೆ ಯಾರೋ ಒಬ್ಬರು ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದರು. ಸರ್ಕಾರದ ಪರ ವಕೀಲರು ಕೋರ್ಟ್‌ನಲ್ಲಿ ಸರಿಯಾಗಿ ವಾದವನ್ನು ಮುಂಡಿಸಬೇಕಾಗಿತ್ತು. ಮಾನ್ಯ ಕಾಗೋಡು ತಿಮ್ಮಪ್ಪನವರ ಪ್ರಾಮಾಣಿಕತೆಯನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಸರ್ಕಾರ ಹಿಂದುಳಿದವರು ಮತ್ತು ದಲಿತರಿಗೆ ಯಾವ ರೀತಿಯಲ್ಲಿ ಮೋಸ ಮಾಡುತ್ತಿದೆ ಎನ್ನುವುದನ್ನು ಮಾತ್ರ ನಾನು ಸದನದ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಕೋರ್ಟಿನಲ್ಲಿ ತಡೆಯಾಜ್ಞೆಯನ್ನು ನೀಡಲಾಗುತ್ತದೆ. ತಡೆಯಾಜ್ಞೆಯನ್ನು ತೆರವುಗೊಳಿಸುವುದಕ್ಕೆ ತಕ್ಷಣ ಕ್ರಮ ವಹಿಸುವುದಕ್ಕೆ ಬದಲಾಗಿ ಸರ್ಕಾರಿ ವಕೀಲರು ಎರಡು ವಾರಗಳ ಕಾಲಾವಕಾಶವನ್ನು ಕೇಳುತ್ತಾರೆ. ಈ ರೀತಿಯಾದರೆ ಸರ್ಕಾರಕ್ಕೆ ಇಚ್ಛಾಶಕ್ತಿ ಎಲ್ಲಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಕಾನೂನು ಬದ್ಧವಾಗಿ ಆ ಭೂಮಿಯನ್ನು ಸಂಬಂಧಪಟ್ಟ ಸಂಘಸಂಸ್ಥೆಗಳಿಗೆ ಯಾವ ರೀತಿಯಲ್ಲಿ ತಲುಪಿಸಬೇಕಾಗಿತ್ತೋ ಆ ದಿಕ್ಕಿನಲ್ಲಿ ಪ್ರಯತ್ನ ಮಾಡಿ, ಒಂದು ಎಕರೆ ಅಥವಾ ಎರಡು ಎಕರೆ ಎಷ್ಟಾಗುತ್ತದೆ ಅಷ್ಟು ಭೂಮಿಯನ್ನು ಸರ್ಕಾರ ಅವುಗಳಿಗೆ ನೀಡಬೇಕಾಗಿತ್ತು. ಆದರೆ, ಸರ್ಕಾರ ಈ ನಿಟ್ಟಿನಲ್ಲಿ ಯಾವುದೇ ಪ್ರಯತ್ನಗಳನ್ನು ಮಾಡಿಲ್ಲ. ಆದ್ದರಿಂದಲೇ ಸಧ್ಯಕ್ಕೆ ಆ ಸಂಘಸಂಸ್ಥೆಗಳಿಗೆ ಜಮೀನು ಸಿಗುವುದಿಲ್ಲವೆಂದು ನಾನು ಹೇಳುತ್ತಿರುವುದು. ಕೋರ್ಟ್‌ನಲ್ಲಿ ನ್ಯಾಯ ಸಿಗುವುದಿಲ್ಲ, date ಸಿಗುತ್ತಾ ಹೋಗುತ್ತದೆ. ಅದಕ್ಕಾಗಿಯೇ ಕೋರ್ಟಿಗೆ ಹೋಗಿರುವುದು ಹೆಣವಾಗುತ್ತದೆಂದು ಹೇಳುತ್ತಾರೆ. ಕೊನೆಯ ಪಕ್ಷ ನಮ್ಮ ಸರ್ಕಾರ ಹಿಂದುಳಿದ ವರ್ಗ ಮತ್ತು ದಲಿತರಿಗೆ ಯಾವ ಸೌಲಭ್ಯಗಳನ್ನು ನೀಡಿತ್ತು ಅದನ್ನಾದರೂ ಈ ಸರ್ಕಾರದವರು ನೀಡಬೇಕಾಗುತ್ತದೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸನ್ಮಾನ್ಯ ಸಭಾಪತಿಯವರೇ, 36 ಹಿಂದುಳಿದ ಮತ್ತು ದಲಿತ ಸಮಾಜದವರಿಗೆ 5 ಕೋಟಿ ರೂಪಾಯಿಗಳವರೆಗೆ ಹಣವನ್ನು ನೀಡಲಾಗಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಪ್ರತಿದಿನ ಸಾಗರದಿಂದ ಚಿತ್ರದುರ್ಗಕ್ಕೆ ಓಡಾಡುತ್ತಿರುತ್ತಾರೆ. ಅಲ್ಲಿ ವಾಲ್ಮಿಕಿ ಪೀಠಕ್ಕೆ 5 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಅದೇ ರೀತಿಯಲ್ಲಿ ಮಾದಾರ ಚೆನ್ನಯ್ಯ ಸ್ವಾಮಿ ಪೀಠಕ್ಕೆ 5 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ಮಡಿವಾಳರು, ಕುಂಬಾರರು ಇನ್ನಿತರ ಜನಾಂಗದ ಸಂಘಗಳಿಗೆ 2 ಕೋಟಿ 3 ಕೋಟಿ ರೂಪಾಯಿಗಳನ್ನು ನೀಡಲಾಗಿದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ನಮ್ಮ ಜನಾಂಗಕ್ಕೆ 8 ಎಕರೆ ಜಮೀನು ಹಾಗೂ 5 ಕೋಟಿ ರೂಪಾಯಿಗಳನ್ನು ನೀಡಲಾಗಿತ್ತು. ನಾವು ಕಟ್ಟಡಗಳನ್ನು ಕಟ್ಟಿದ್ದೇವೆ. ಸಂಸ್ಥೆಗಳು ಪ್ರಾರಂಭವಾಗಿವೆ.

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರ ಹಿಂದುಳಿದ ಮತ್ತು ದಲಿತ ಸಮಾಜದವರನ್ನು ದುರುಪಯೋಗ ಮಾಡಿಕೊಳ್ಳುವುದನ್ನು ಬಿಡಬೇಕು. ಆಗಿರುವುದು ಆಗಿ ಹೋಗಿದೆ. ಸಧ್ಯಕ್ಕೆ ಆ ಸಂಘಸಂಸ್ಥೆಗಳಿಗೆ ಜಮೀನು ಸಿಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ನಮ್ಮ ಸರ್ಕಾರದಲ್ಲಿ ಸಾವಿರಾರು ಕೋಟಿ ರೂಪಾಯಿಗಳವೆ ಎನ್ನುವ ಮಾತನ್ನು ಹೇಳುತ್ತಾರೆ. ದುಡ್ಡಿನ ಕೊರತೆ ಇಲ್ಲದಿರುವಾಗ ಸರ್ಕಾರ ಕನಿಷ್ಠ ಈ 36 ಸಂಘಸಂಸ್ಥೆಗಳಿಗೆ 5 ಕೋಟಿ ರೂಪಾಯಿಗಳನ್ನು ಕೊಟ್ಟುಬಿಟ್ಟರೆ ಅವರು ಜಮೀನನ್ನು ತೆಗೆದುಕೊಳ್ಳುತ್ತಾರೆ.

**ಶ್ರೀ ಕಾಗೋಡು ತಿಮ್ಮಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಆ ಸಂಘಸಂಸ್ಥೆಗಳಿಗೆ ಸರ್ಕಾರದಿಂದ ಜಮೀನು ಕೊಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಎಲ್ಲಿದೆ ಭೂಮಿ? ಖಂಡಿತ ಅವರುಗಳಿಗೆ ಭೂಮಿ ಸಿಗುವುದಿಲ್ಲ.

**ಶ್ರೀ ಕಾಗೋಡು ತಿಮ್ಮಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಅವರುಗಳಿಗೆ ಭೂಮಿ ಕೊಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಮುಂಬರುವ ಚುನಾವಣೆಯೊಳಗಾಗಿ ಸರ್ಕಾರ ಅವರುಗಳಿಗೆ ಭೂಮಿ ಕೊಡುತ್ತದೆಯೇ? ಕೊಡದಿದ್ದರೆ ನಾವು ಏನು ಮಾಡಬೇಕು?

**ಶ್ರೀ ಕಾಗೋಡು ತಿಮ್ಮಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಅಷ್ಟರಲ್ಲಿ ಭೂಮಿ ಕೊಡದಿದ್ದರೆ ನೇಣು ಹಾಕಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಪಾಪ ಕಾಗೋಡು ತಿಮ್ಮಪ್ಪನವರು ಯಾಕೆ ನೇಣು ಹಾಕಿಕೊಳ್ಳಬೇಕು? ಅವರು ಹಿರಿಯರು ಅವರ ಮಾರ್ಗದರ್ಶನ ನಮಗೆ ಬೇಕಾಗಿದೆ. ಅದಕ್ಕಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ಮಾತನಾಡುವುದಕ್ಕೂ ಮೊದಲು ಸದನದಿಂದ ಹೊರಟಿದ್ದ ಅವರನ್ನು 'ಹೋಗಬೇಡಿ ಬಂದು ಕುಳಿತುಕೊಳ್ಳಿ' ಎಂದು ಮನವಿ ಮಾಡಿದ್ದೆ. ಏಕೆಂದರೆ ಅವರು ನಮ್ಮ ಮಾತುಗಳನ್ನು ಕೇಳುತ್ತಾರೆ. ಅವರಂಥವರ ಅವಶ್ಯಕತೆ ನಮಗಿದೆ.

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಭೂಮಿ ಕೊಡದಿದ್ದರೆ ಏನು ಮಾಡಬೇಕೆಂದು ತಾವು ಕಡ್ಡಾಯಗೊಳಿಸಿದರೆ ಅವರು ಮತ್ತೇನು ಹೇಳುವುದಕ್ಕೆ ಸಾಧ್ಯವಿದೆ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಹಣಕಾಸು ಸಚಿವರಾಗಿದ್ದಾರೆ. ಅವರ ಬಳಿ ಹೋಗಿ ಹೇಳಲಿ.

**ಶ್ರೀ ಕಾಗೋಡು ತಿಮ್ಮಪ್ಪ:-** ಸನ್ಮಾನ್ಯ ಸಭಾಪತಿಯವರೇ, ಭೂಮಿಯನ್ನು ಆದಷ್ಟು ಬೇಗ ಹಂಚಿಕೆ ಮಾಡುವುದಕ್ಕೆ ಎಲ್ಲ ರೀತಿಯ ಸಿದ್ಧತೆಗಳನ್ನು ನಾವು ಮಾಡಿದ್ದೇವೆ. ಅಷ್ಟೂ ಜಾಗ ಬೇರೆಯವರು ಸ್ವಾಧೀನಪಡಿಸಿಕೊಂಡಿದ್ದರು. ಅದನ್ನು ಅವರಿಂದ ಬಿಡಿಸಿಕೊಂಡು, ಈ ಸಂಘಸಂಸ್ಥೆಗಳಿಗೆ ಕೊಡಬೇಕೆನ್ನುವ ನಿರ್ಧಾರವನ್ನು ಮಾಡಿದ್ದೇವೆ. ಇತ್ತೀಚೆಗೆ ಕೆಲವರಿಗೆ ಕೋರ್ಟಿಗೆ ಹೋಗಿ ಸ್ಟೇ ತರುವುದೇ ಒಂದು ದೊಡ್ಡ ಹವ್ಯಾಸವಾಗಿದೆ. ಉದಾಹರಣೆಗೆ ಹೇಳಬೇಕಾದರೆ, ಬಗರ್‌ಹುಕುಂ ಅರ್ಜಿಗಳ ಬಗ್ಗೆ ಹೇಳಬೇಕಾದರೆ, ಗೋಮಾಳದ ವಿಸ್ತೀರ್ಣ ಇಷ್ಟಿರಬೇಕು ಎನ್ನುವುದು ಭೂ ಕಂದಾಯ ಕಾಯಿದೆಯಲ್ಲಿ ಉಲ್ಲೇಖವಾಗಿದೆ. ಆದರೆ, ಆ ಪ್ರಮಾಣದಲ್ಲಿ ಗೋಮಾಳವನ್ನು ಕೊಡುವುದಕ್ಕೆ ಆಗುವುದಿಲ್ಲ ಎನ್ನುವ ಕೂಗು ಕೇಳಿ ಬಂದಾಗ, ನಾನು ನಿಯಮಕ್ಕೆ ತಿದ್ದುಪಡಿಯನ್ನು ತಂದು ಪೆಂಡಿಂಗ್ ಇದ್ದಂತಹ ಅರ್ಜಿಗಳನ್ನು ಇತ್ಯರ್ಥಗೊಳಿಸುವಂತಹ ಪ್ರಯತ್ನವನ್ನು ಮಾಡಿದಾಗ, ಯಾರೋ ಒಬ್ಬ ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದ, ಹಲವಾರು ಪ್ರಯತ್ನಗಳ ನಂತರ ಆ ಅರ್ಜಿಯೇ ವಜಾಗೊಂಡಿತು. ಈಗ ಪೆಂಡಿಂಗ್ ಇರುವ ಅರ್ಜಿಗಳನ್ನು ಇತ್ಯರ್ಥಗೊಳಿಸುತ್ತಿದ್ದೇವೆ ಅದು ಬೇರೆ ಮಾತು. ಆದರೆ, ಕೆಲವರಿಗೆ ಕೋರ್ಟಿಗೆ ಹೋಗಿ ಸ್ಟೇ ತರುವಂತಹ ಒಂದು ರೋಗವೇ ಹರಡಿಬಿಟ್ಟಿದೆ. ಕೋರ್ಟಿನವರು ಕಣ್ಮುಚ್ಚಿಕೊಂಡು ಸ್ಟೇ ಕೊಡುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಸನ್ಮಾನ್ಯ ಸಭಾಪತಿಯವರೇ, ನಾನು ಹೇಳುತ್ತಿರುವ ಪ್ರಕರಣಗಳಲ್ಲಿ ಕೋರ್ಟಿಗೆ ಹೋಗಬೇಕೆಂದೇ ಆ ರೀತಿ ಮಾಡಿರುವುದು. ಆ ಸಂಘಸಂಸ್ಥೆಗಳಿಗೆ ಭೂಮಿ ಸಿಕ್ಕಿದರೆ ಅವು ಶ್ರೀಮಂತವಾಗುತ್ತವೆ. ನನಗೆ ತಿಳಿದ ಮಟ್ಟಿಗೆ ಆ 36 ಸಂಘಸಂಸ್ಥೆಗಳಿಗೆ ಈ ಜಮೀನು ಸಿಗುವುದಿಲ್ಲ. ಆದ್ದರಿಂದ ಅದರ ಬಗ್ಗೆ ಚರ್ಚೆ ಮಾಡುವುದು ಬೇಡ. ಕೋರ್ಟಿನಿಂದ ತಡೆಯಾಜ್ಞೆಯನ್ನು ತಂದರೆ, ಅದನ್ನು ತೆರವುಗೊಳಿಸುವುದಕ್ಕೆ ಸರ್ಕಾರಿ ವಕೀಲರು ಎರಡು ವಾರಗಳ ಕಾಲಾವಕಾಶವನ್ನು ಕೇಳುತ್ತಾರೆ. ಆ ಅಂಶವನ್ನೇ ನಾನು ಇಲ್ಲಿ ಪ್ರಮುಖವಾಗಿ ಉಲ್ಲೇಖ ಮಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕಾಗೋಡು ತಿಮ್ಮಪ್ಪ:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರಿ ವಕೀಲರು ಆಕ್ಷೇಪಣೆಗಳನ್ನು ಸಲ್ಲಿಸಬೇಕಾದರೆ ಅವರಿಗೆ ಸೂಕ್ತ ದಾಖಲೆಗಳು ಬೇಕಾಗುತ್ತದೆ. ಆದ್ದರಿಂದ ಅವರು ಸರ್ಕಾರವನ್ನು ಕೇಳದೇ 'ನಮಗೆ 15 ದಿನಗಳ ಕಾಲಾವಕಾಶ ಬೇಕಾಗುತ್ತದೆ' ಎಂದು ಹೇಳಿ ಸಮಯವನ್ನು ತೆಗೆದುಕೊಳ್ಳುತ್ತಾರೆ. ಸರ್ಕಾರದ ಹತ್ತಿರ ಎಲ್ಲ ದಾಖಲೆಗಳು ಇರುತ್ತವೆ. ಸರ್ಕಾರದ ಸೂಚನೆಯ ಮೇರೆಗೆ ಕಾಲಾವಕಾಶವನ್ನು ತೆಗೆದುಕೊಳ್ಳುವುದಿಲ್ಲ. ಸರ್ಕಾರಿ ವಕೀಲರೇ ಸ್ವಯಂ ಪ್ರೇರಣೆಯಿಂದ ಕೋರ್ಟಿನಲ್ಲಿ ಕಾಲಾವಕಾಶವನ್ನು ತೆಗೆದುಕೊಂಡಿರುತ್ತಾರೆ. ನಾವು ತಕ್ಷಣವೇ ಆಕ್ಷೇಪಣೆಗಳನ್ನು ಸಲ್ಲಿಸಿ ತಡೆಯಾಜ್ಞೆಯನ್ನು ತೆರವುಗೊಳಿಸುವುದಕ್ಕೆ ಎಲ್ಲ ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಸರ್ಕಾರದಿಂದ ಕಾನೂನು ಪ್ರಕಾರವಾಗಿ ಆ ಸಂಘಗಳಿಗೆ ಜಮೀನು ಕೊಡುವಂತಹ ವ್ಯವಸ್ಥೆ ಆಗಿದ್ದರೆ ಕೋರ್ಟಿನಲ್ಲಿ ಸ್ಟೇ ಸಿಗುತ್ತಿರಲಿಲ್ಲ.

**ಶ್ರೀ ಕಾಗೋಡು ತಿಮ್ಮಪ್ಪ:–** ಸನ್ಮಾನ್ಯ ಸಭಾಪತಿಯವರೇ, ಕಾನೂನು ಬದ್ಧವಾಗಿಯೇ ಇದೆ. ಆದರೆ, ಯಾರೋ ಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ತಂದಿದ್ದಾರೆ. ಅದನ್ನು ತೆರವುಗೊಳಿಸಬೇಕಾಗಿದೆ. ನಾನು ಒಂದು ಉದಾಹರಣೆಯನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಮಾನ್ಯ ದೇವರಾಜ ಅರಸುರವರ ಕಾಲದಲ್ಲಿ ಭೂ ಸುಧಾರಣಾ ಕಾಯಿದೆಯನ್ನು ಜಾರಿಗೆ ತರಲಾಯಿತು. ಆಗ ಅದರ ಮೇಲೆ ಸುಪ್ರೀಂ ಕೋರ್ಟಿನಲ್ಲಿ ಸ್ಟೇ ತರಲಾಯಿತು. ಕೊನೆಗೆ ಈ ವಿಚಾರ ಷೆಡ್ಯೂಲ್ 7ಕ್ಕೆ ಸೇರಿದ ಮೇಲೆ ಆ ರಿಟ್ ಅರ್ಜಿಯನ್ನು ವಜಾಗೊಳಿಸಲಾಯಿತು. ನಂತರ ಭೂಮಿಯನ್ನು ಹಂಚಿಕೆ ಮಾಡಲಾಯಿತು. ಈ ರೀತಿ ಆದರೆ ಏನು ಮಾಡುವುದಕ್ಕೆ ಸಾಧ್ಯ?

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾನು ಈಗಾಗಲೇ ಭೂ ಕಂದಾಯ ಕಾಯಿದೆ ನಿಯಮ 97(4) ಅನ್ನು ಓದಿ ಹೇಳಿದ್ದೇನೆ. ಅದರ ಪ್ರಕಾರ ಈ ಜಮೀನನ್ನು ಗೋಮಾಳ ಶೀರ್ಷಿಕೆಯಿಂದ ತೆಗೆಯಬೇಕಾಗಿತ್ತು. ನಂತರ ಆಕ್ಷೇಪಣೆಗಳನ್ನು ಆಹ್ವಾನಿಸಬೇಕಾಗಿತ್ತು. ಆದರೆ, ಇವರು ಆ ಕೆಲಸಗಳನ್ನು ಮಾಡಲೇ ಇಲ್ಲ. ಈ ರೀತಿ ಆದರೆ, ಸರ್ಕಾರ ಕಾನೂನುಬದ್ಧವಾಗಿ ಕ್ರಮ ತೆಗೆದುಕೊಂಡಿಲ್ಲವೆಂದು ಯಾರಾದರು ಕೋರ್ಟಿಗೆ ಹೋಗಿಯೇ ಹೋಗುತ್ತಾರೆ. ಕೋರ್ಟಿಗೆ ಹೋಗಿರುವವರ ಬಗ್ಗೆ ನನಗೆ ಅನುಕಂಪವಿಲ್ಲ. ದಲಿತ ಮತ್ತು ಹಿಂದುಳಿದ ವರ್ಗಗಳ ಸಂಘಸಂಸ್ಥೆಗಳಿಗೆ ಅನ್ಯಾಯವಾಗಿದೆ ಎನ್ನುವುದೇ ನಮ್ಮ ಕಳಕಳಿಯಾಗಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಮುಂದಿನ 2 ತಿಂಗಳುಗಳಲ್ಲಿ ಅವರುಗಳಿಗೆ ಭೂಮಿಯನ್ನು ಹಂಚಿಕೆ ಮಾಡುವ ತಯಾರಿ ಆಗುತ್ತಿದೆ ಎಂದು ಹೇಳುತ್ತಿದ್ದಾರೆ. ಏನಾದರೂ ಮಾಡಿ ಸರ್ಕಾರ ಆ ಕೆಲಸವನ್ನು ಮಾಡಬೇಕಾಗಿದೆ. ಆ ಕೆಲಸ ಮಾಡದಿದ್ದರೆ ನೇಣು ಹಾಕಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಬಾರದು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕಾಗೋಡು ತಿಮ್ಮಪ್ಪಃ-** ಸನ್ಮಾನ್ಯ ಸಭಾಪತಿಯವರೇ, ಖಂಡಿತವಾಗಿಯೂ ನಾಳೆಯೇ ಈ ಬಗ್ಗೆ ಉತ್ತರವನ್ನು ಕೊಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರ ಕಡೆಯವರದ್ದು ಯಾರದ್ದಾದರು ಬಿಟ್ಟು ಹೋಗಿದ್ದರೆ, ಹೇಳಲಿ ಅದನ್ನೂ ಸೇರಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪಃ-** ಸನ್ಮಾನ್ಯ ಸಭಾಪತಿಯವರೇ, ಯಾರನ್ನಾದರು ಸೇರಿಸಿದರೆ ಅವರಿಂದ ನಾನು ಬೈಯಿಸಿಕೊಳ್ಳಬೇಕಾಗುತ್ತದೆ. ಈಗ 36 ಸಂಘಸಂಸ್ಥೆಗಳಿಂದ ಇವರು ಬೈಯಿಸಿಕೊಳ್ಳುತ್ತಿದ್ದಾರೆ. ನಾನೊಂದು ಸೇರಿಸಿ ನಾನು ಬೈಯಿಸಿಕೊಳ್ಳಬೇಕಾಗುತ್ತದೆ. ನನಗೆ ಆ ಸಹವಾಸವೇ ಬೇಡ. ಅವರೇ ಬೈಯಿಸಿಕೊಳ್ಳಲಿ.

ಮಾನ್ಯ ಕಾಗೋಡು ತಿಮ್ಮಪ್ಪನವರ ಕಳಕಳಿ ನಮಗೆ ಇಷ್ಟವಾಗುತ್ತದೆ. ಆದರೆ ಅದು ಉಪಯೋಗವಾಗುತ್ತಿಲ್ಲ ಎನ್ನುವುದು ಬೇಸರ ತರುತ್ತಿದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಕಂದಾಯ ಸಚಿವರಾಗಿ ಬಗರ್‌ಹುಕುಂ ಮತ್ತು ಹಕ್ಕುಪತ್ರಗಳ ಹಂಚಿಕೆಯ ಬಗ್ಗೆ ಈ ಸದನದಲ್ಲಿ ಉತ್ತರವನ್ನು ನೀಡುವಂತಹ ಸಂದರ್ಭದಲ್ಲಿ, 'ಶಾಸಕರು ದಯವಿಟ್ಟು ಮೀಟಿಂಗ್ ಮಾಡಿ, ನಾನು ಕಾಲಿಗೆ ಬೀಳುತ್ತೇನೆ' ಎನ್ನುವ ಮಾತುಗಳನ್ನು ಹೇಳಿದ್ದರು. ಭೀಷ್ಮನ ರೂಪದಲ್ಲಿರುವ ಮಾನ್ಯ ಕಾಗೋಡು ತಿಮ್ಮಪ್ಪನವರು ಕಾಲಿಗೆ ಬೀಳುತ್ತೇನೆ ಎಂದು ಹೇಳಿದರೆ, ಅದು ಎಷ್ಟರ ಮಟ್ಟಿಗೆ ಸರಿ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗುತ್ತದೆ.

**ಶ್ರೀ ಕಾಗೋಡು ತಿಮ್ಮಪ್ಪಃ-** ಸನ್ಮಾನ್ಯ ಸಭಾಪತಿಯವರೇ, ಅವರು ಹೇಳುತ್ತಿರುವುದು ಸರಿಯಾಗಿದೆ. ಮೊದಲು ಬಗರ್‌ಹುಕುಂ ಅರ್ಜಿಯನ್ನು 1991ರಲ್ಲಿ ಹಾಕಲಾಯಿತು, ನಂತರ ಎರಡನೆಯ ಬಾರಿ 1995ರಲ್ಲಿ ಹಾಕಲಾಯಿತು. ಸುಮಾರು 23 ವರ್ಷಗಳಾದರೂ ಆ ಅರ್ಜಿಗಳನ್ನು ಹಾಗೆಯೇ ಇಟ್ಟುಕೊಂಡರೆ ಸರ್ಕಾರಕ್ಕೆ ಗೌರವ ಬರುತ್ತದೆಯೇ? ಇದನ್ನು ಆಡಳಿತವೆಂದು ಹೇಳುವುದಕ್ಕೆ ಸಾಧ್ಯವಿದೆಯೇ? ಯಾವ ರೀತಿಯಲ್ಲಿ ಇವುಗಳನ್ನು ಬೇಗನೆ ಇತ್ಯರ್ಥಗೊಳಿಸಬೇಕೆನ್ನುವುದರ ಬಗ್ಗೆ ನಾನು ಸೂಚನೆ ನೀಡಿದ್ದೇನೆ. ವಾರಕ್ಕೊಮ್ಮೆ ಮೀಟಿಂಗ್ ಕರೆಯಬೇಕು; ಇಬ್ಬರು ಸದಸ್ಯರು ಬಂದರೂ ಸಾಕು ಮೀಟಿಂಗ್ ನಡೆಸಬೇಕು, ಎರಡನೆಯ ಮೀಟಿಂಗ್ ಆದ ಕೂಡಲೇ ಹಕ್ಕುಪತ್ರಗಳನ್ನು ಕೊಡಿ. ಹಕ್ಕುಪತ್ರಗಳನ್ನು ಹಂಚಿಕೆ ಮಾಡಿದ ಕೂಡಲೇ ಆರ್.ಟಿ.ಸಿ.ಯಲ್ಲಿ ನಮೂದು ಮಾಡಬೇಕೆಂದು ಹೇಳಿದ್ದೇನೆ. ಅಧಿಕಾರಿಗಳನ್ನು ತಿದ್ದುವುದು ಸಾಮಾನ್ಯದ ಕೆಲಸವಲ್ಲ. ಅನೇಕ ಕಡೆಗಳಲ್ಲಿ ಹಕ್ಕುಪತ್ರಗಳ ಹಂಚಿಕೆಗೆ ನಮ್ಮ ಶಾಸಕರೇ ಅಡ್ಡಗಾಲು ಹಾಕುತ್ತಿದ್ದಾರೆ. ಈಗಷ್ಟೇ ಹುಣಸೂರಿನ ಒಬ್ಬ ಶಾಸಕರು ಬಂದು 'ಇನ್ನೂ 8 ಸಾವಿರ ಅರ್ಜಿಗಳು ಪೆಂಡಿಂಗ್ ಇವೆ, ಜಿಲ್ಲಾಧಿಕಾರಿಗಳು ಏನೂ ಮಾಡುತ್ತಿಲ್ಲ' ಎಂದು ಹೇಳಿದರು. ಜಿಲ್ಲಾಧಿಕಾರಿಗಳಿಗೂ ಇದಕ್ಕೂ ಏನೂ ಸಂಬಂಧವಿಲ್ಲ.

189/21.2.2018/ಪಿಕೆ/ಆರ್‌ಎನ್/6.00

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಶ್ರೀ ಕಾಗೋಡು ತಿಮ್ಮಪ್ಪ(ಮುಂದುವರೆದಿದೆ)

ಅನೇಕ ಕಡೆ ನಮ್ಮ ಶಾಸಕರೇ ಅಡ್ಡಗಾಲು ಹಾಕುತ್ತಾರೆ. ಕೆಲವರು ನನ್ನ ಹತ್ತಿರ ಬಂದು, ಸದರಿ ಪ್ರಕ್ರಿಯೆಗೆ ಡಿಸಿ ಯವರು ಸಹಕರಿಸುತ್ತಿಲ್ಲ ಎಂದು ಹೇಳುತ್ತಾರೆ. ಡಿ.ಸಿ.ಗೂ ಇದಕ್ಕೂ ಏನೂ ಸಂಬಂಧವಿಲ್ಲ. ಸ್ಥಳೀಯ ಶಾಸಕರು ಯಾರಿರುತ್ತಾರೋ ಅವರನ್ನು ಕಂಡು ಮಾತನಾಡಿ, ಸಮಸ್ಯೆ ಬಗೆಹರಿಸಿಕೊಳ್ಳಿ ಎಂದು ಹೇಳುತ್ತೇನೆ. ಆ ಜನರ ಪರಿಸ್ಥಿತಿ ಹೀಗಿದೆ ಎಂದು ಕೆಲವು ಕಡೆ ನಾನೇ ಹೋಗಿ ನೋಡಿದ್ದೇನೆ. ಶಾಸಕರು ಈ ನಿಟ್ಟಿನಲ್ಲಿ ಫಲಾನುಭವಿಗಳಿಗೆ ಸಹಕಾರ ನೀಡದೇ ಹೋದರೆ ನಮಗೆ ಮರ್ಯಾದೆ ಇರುವುದಿಲ್ಲ. ನಾನು ಕೆಲವು ಕಡೆ ಹೋದಾಗ, ಅರ್ಜಿ ಕೊಡುವ ಸಮಯವನ್ನು ವಿಸ್ತಾರ ಮಾಡಿ ಎಂದು ಬೇಡಿಕೆ ಬಂತು. ಆ ಹಿನ್ನೆಲೆಯಲ್ಲಿ ತಿದ್ದುಪಡಿಗೊಂಡ ಮಸೂದೆ ಸದನದ ಮುಂದೆ ಬರಲಿದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ**:-ಮಾನ್ಯ ಸಭಾಪತಿಯವರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಮಂತ್ರಿ ಸ್ಥಾನದ ಬದ್ಧತೆ ಬಗ್ಗೆ ಹೇಳಿದರು. ಕೆಲಸ ಮಾಡದೇ ಇದ್ದರೆ ಕೆಟ್ಟ ಹೆಸರು ಬರುತ್ತದೆ ಎಂದು ನೀವೇನು ಹೇಳಿದಿರೋ ಅದೇ ಬದ್ಧತೆಯನ್ನು ಇತರ ಮಂತ್ರಿಗಳು ತೋರಿಸಿದರೆ ನಮ್ಮ ರಾಜ್ಯ ರಾಮರಾಜ್ಯ ಆಗಿಬಿಡುತ್ತದೆ. ಆದರೆ ಅವರು ಹಾಗೆ ಮಾಡುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ**:- ಮಾನ್ಯ ಕಾಗೋಡು ತಿಮ್ಮಪ್ಪನವರು ಶಿವಮೊಗ್ಗ ಜಿಲ್ಲಾ ಪಂಚಾಯತ್ ಕಚೇರಿಗೆ ಬಂದಾಗ ಮತ್ತು ಇಲ್ಲೂ ಕೂಡ ಸರ್ಕಾರದ ಆಡಳಿತ ವೈಫಲ್ಯದ ಬಗ್ಗೆ ಹೇಳಿದರು. ಮಾನ್ಯ ಕಂದಾಯ ಮಂತ್ರಿಗಳೇ, ಕೆಲಸಗಳಾಗಬೇಕೆಂದು ಅಧಿಕಾರಿಗಳನ್ನು ಕೂರಿಸಿಕೊಂಡು ಆ ಕುರಿತು ಸೂಕ್ತ ಪದಗಳನ್ನು ಬಳಸಿ ಹೇಳುತ್ತೀರಿ. ಇದು ಅಧಿಕಾರಿಗಳಿಗಾಯಿತು. ಈ ರೀತಿ ಶಾಸಕರುಗಳಿಗೂ ಹೇಳಬೇಕಾಗುತ್ತದೆ. ಅದುಬಿಟ್ಟು, ಕೈಮುಗಿಯುತ್ತೇನೆ, ಕಾಲಿಗೆ ಬೀಳುತ್ತೇನೆ ಎಂದು ಹೇಳುವ ಪರಿಸ್ಥಿತಿ ಬಂದರೆ ಹೇಗೇ? ಬಗರ್ ಹುಕುಂ ಜಾಗದಲ್ಲಿ ಹೆಚ್ಚಾಗಿ ದಲಿತರು, ಹಿಂದುಳಿದವರು ಕೂಲಿ ಮಾಡಿಕೊಂಡಿರುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳು ಅವರ ಶಾಸಕರನ್ನು ಕೂರಿಸಿಕೊಂಡು, ಯಾರು ಬಗರ್ ಹುಕುಂ ಪ್ರಕ್ರಿಯೆ ಪೂರ್ಣಗೊಳ್ಳುವ ನಿಟ್ಟಿನಲ್ಲಿ ಸಭೆಗಳನ್ನು ಮಾಡಿ ಫೈನಲ್ ಮಾಡುವುದಿಲ್ಲವೋ ಅಂಥವರಿಗೆ ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ಕೊಡುವುದಿಲ್ಲ ಎಂದು 6 ತಿಂಗಳ ಕೆಳಗೆ ಹೇಳುವಂಥ ದಿಟ್ಟ ನಿರ್ಧಾರ ತೆಗೆದುಕೊಳ್ಳಬೇಕಾಗಿತ್ತು. ಆಗ ನಿಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತಿತ್ತು. ಹಿಂದುಳಿದವರು-ದಲಿತರು ಎನ್ನುವ ಪದಗಳನ್ನು ಬಳಸುವುದಕ್ಕಷ್ಟೇ ಈ ಸರ್ಕಾರ ಸೀಮಿತವಾಗಿದೆ.

**ಶ್ರೀ ಕಾಗೋಡು ತಿಮ್ಮಪ್ಪ**:- ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪ್ರವೇಶ ಎಲ್ಲೂ ಆಗಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ**:- ಮುಖ್ಯಮಂತ್ರಿಗಳು ಪ್ರವೇಶ ಮಾಡಿಲ್ಲದೇ ಇರುವುದರಿಂದ ಈ ಪರಿಸ್ಥಿತಿ ಉಂಟಾಗಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ಸ್ವತಂತ್ರವಾಗಿ, ನಿರ್ಭಯವಾಗಿ ತೀರ್ಮಾನ ತೆಗೆದುಕೊಳ್ಳುವ ನಿಟ್ಟಿನಲ್ಲಿ ಯಾವ ಕ್ರಮಗಳನ್ನು ಕೈಗೊಳ್ಳಬೇಕೋ ಆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಯಾವುದೇ ಕಾರಣಕ್ಕೂ ಈ ವಿಚಾರದಲ್ಲಿ ಪ್ರವೇಶ ಮಾಡಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ 224 ಕಡೆ ಹೋಗಿ ಮೀಟಿಂಗ್ ಮಾಡಿ ಬಗರ್ ಹುಕುಂ ಜಾಗವನ್ನು ಬಡವರಿಗೆ ಕೊಡುವಂತಹ ಅಧಿಕಾರ ಇದೆಯೇ? ಆ ಕೆಲಸವನ್ನು ಶಾಸಕರು ಮಾಡಬೇಕು ಅಲ್ಲವೇ? ಶಾಸಕಾಂಗ ಪಕ್ಷದ ನಾಯಕರು ಯಾರು? ಮುಖ್ಯ ಮಂತ್ರಿಗಳು. ಅಷ್ಟೂ ಜನ ಕಾಂಗ್ರೆಸ್ ಶಾಸಕರನ್ನು ಕರೆದು, 3 ಅಥವಾ 6 ತಿಂಗಳ ಒಳಗೆ ಮೀಟಿಂಗ್ ಮಾಡಿ ಬಗರ್ ಹುಕುಂ ಸಂಬಂಧ ಕ್ಲಿಯರ್ ಮಾಡುವ ವ್ಯವಸ್ಥೆ ಮಾಡದೇ ಇದ್ದರೆ ನೀವು ಚುನಾವಣೆಗೆ ಹೇಗೆ ಟಿಕೆಟ್ ತೆಗೆದುಕೊಳ್ಳುತ್ತೀರಿ ನೋಡುತ್ತೇನೆ ಎಂದು ಹೇಳಬೇಕಾಗಿತ್ತು. ಮಾನ್ಯ ಸಭಾಪತಿಯವರೇ, ನಾನು ಕಂದಾಯ ಇಲಾಖೆಯ ಮಂತ್ರಿಯಾಗಿದ್ದಾಗ 94 ಸಿ ಸಂಬಂಧ ವಿಧೇಯಕ ಪಾಸ್ ಆಯಿತು. ಆಗ ಮಾನ್ಯ ಕಾಗೋಡು ತಿಮ್ಮಪ್ಪನವರು, ಏನಪ್ಪ ಈ ಹುಡುಗ ಏನೋ ಒಂದು ಕೆಲಸ ಮಾಡಿದ್ದಾನೆ ಎಂಬ ಮಾತನ್ನು ಹೇಳಿದ್ದರು. ನನಗೆ ಅಭಿನಂದನೆ ಸಲ್ಲಿಸಿದರು. ನಮ್ಮಿಂದ ಈ ಕೆಲಸ ಶುರುವಾಯಿತು. ಅದಕ್ಕೂ ಕೆಲವರು ರಾಜ್ಯಪಾಲರ ಹತ್ತಿರ ಹೋಗಿ, 94ಸಿ, 94ಸಿಸಿ ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಡಿ, ಒಪ್ಪಿಗೆ ಕೊಟ್ಟರೆ ಬಿಜೆಪಿಗೆ ಒಳ್ಳೆಯ ಹೆಸರು ಬಂದುಬಿಡುತ್ತದೆ ಎಂದು ಕಲ್ಲು ಹಾಕಿದರು. ಆ ವಿಧೇಯಕವನ್ನು ಅಲ್ಲೇ ಇರಿಸಿಬಿಟ್ಟರು. ಮಾನ್ಯ ಸಭಾಪತಿಯವರೇ, ಮಾನ್ಯ ಕಾಗೋಡು ತಿಮ್ಮಪ್ಪನವರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರ ಕುರಿತು ಮಾತನಾಡಿದರೆ ಬಾಯಿಗೆ ಹುಳ ಬೀಳುತ್ತದೆ. ಈಗಿರುವುದನ್ನು ಸರ್ಕಾರ ಎಂದು ಕರೆಯಬೇಕೇ? ಸರ್ಕಾರ ಯಾರಿಗೋಸ್ಕರ ಇದೆ? ಹಿಂದುಳಿದವರಿಗೆ, ದಲಿತರಿಗೆ ನಾವು ಎಲ್ಲದರಲ್ಲೂ ಅವಕಾಶ ಮಾಡಿಕೊಡುತ್ತೇವೆ, ಅವರ ಅಭಿವೃದ್ಧಿ ಮಾಡುತ್ತೇವೆ ಎಂದು ಕೇವಲ ಹೇಳುವುದೇ ಆಗಿಹೋಯಿತು. ಇವರ ಅಭಿವೃದ್ಧಿಯನ್ನು ಯಾವಾಗ ಮಾಡುತ್ತೀರಿ? ಸರ್ಕಾರದ ಅವಧಿ ಮುಗಿದ ಮೇಲೆ ಮಾಡುತ್ತೀರಾ? ಇನ್ನು 2 ತಿಂಗಳಲ್ಲಿ ಸರ್ಕಾರದ ಅವಧಿ ಮುಗಿಯುತ್ತದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ, ನೇಣು ಹಾಕಿಕೊಂಡರೂ ಬಗರ್ ಜಮೀನನ್ನು ಕೊಡುವುದಕ್ಕೆ ಬರುವುದಿಲ್ಲ. ಮಾನ್ಯ ಸಭಾನಾಯಕರೇ ನಾನು ಹೇಳುತ್ತಿರುವುದು ಸರಿಯಾಗಿದೆ ಅಲ್ಲವೇ? ಎಷ್ಟು ಅನ್ಯಾಯ ಮಾಡುತ್ತೀರಿ, ಎಷ್ಟು ಮೋಸ ಮಾಡುತ್ತೀರಿ? ಕಳಕಳಿ ಇರುವಂತಹ ಒಬ್ಬ ಮಂತ್ರಿ ಕಾಂಗ್ರೆಸ್‌ನಲ್ಲಿ ಇದ್ದರೂ ಹಿಂದುಳಿದವರಿಗೆ, ದಲಿತರಿಗೆ, ಅಲ್ಪಸಂಖ್ಯಾತರಿಗೆ ನ್ಯಾಯ ಸಿಗಲಿಲ್ಲ ಎಂದರೆ ಇನ್ಯಾರು ಇವರಿಗೆ ನ್ಯಾಯ ಒದಗಿಸಿ ಕೊಡುತ್ತಾರೆ? ಮಾನ್ಯ ಕಾಗೋಡು ತಿಮ್ಮಪ್ಪನವರ, ಮಾನ್ಯ ಬಂಗಾರಪ್ಪನವರ ಹೋರಾಟಗಳನ್ನು ನೋಡಿಯೇ ನಾನು ಅನೇಕ ವಿಷಯಗಳನ್ನು ಕಲಿತುಕೊಂಡೆ. ಮೊದಲು ನನಗೆ ಬಗರ್ ಹುಕುಂ ಎಂದರೇನು ಎಂಬುದು ಗೊತ್ತೇ ಇರಲಿಲ್ಲ. ನಾನು ಇದನ್ನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನಂತರ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಂದು ಸಲ ಇದರ ಬಗ್ಗೆ ನಾನು ಮಾನ್ಯ ಯಡಿಯೂರಪ್ಪನವರನ್ನೂ ಕೇಳಿದ್ದೆ. ಅವರು ಆ ಕುರಿತು ಹೇಳಲಿ, ಆ ಜನರ ಋಣವನ್ನು ನಾವು ತೀರಿಸಬೇಕಾಗಿದೆ ಎಂಬ ಸಲಹೆ ಕೊಟ್ಟರು. ಅದನ್ನು ಗಮನದಲ್ಲಿಟ್ಟುಕೊಂಡು, ನಾನು ಮಂತ್ರಿಯಾದಾಗ 94ಸಿ ಸಂಬಂಧ ವಿಧೇಯಕ ತಂದೆ. ಅದು ಪಾಸಾಯಿತು. ಎಲ್ಲಾ ಪಕ್ಷಗಳಲ್ಲೂ ಉತ್ತಮ ಶಾಸಕರಿರುತ್ತಾರೆ. ಅಂಥವರ ಕನಸು ಯಾವಾಗ ನನಸಾಗುತ್ತದೆ? ಅಧಿಕಾರಿಗಳಿಗೆ ಬೈದರೆ, ಶಾಸಕರ ಕೈ-ಕಾಲು ಹಿಡಿದುಕೊಂಡರೂ ಕೆಲಸ ಆಗುವುದಿಲ್ಲ. ಕೆಲಸ ಮಾಡಬೇಕು ಎನ್ನುವ ಇಚ್ಛಾಶಕ್ತಿ ಸಂಬಂಧಪಟ್ಟವರಿಗೆ ಇರಬೇಕು. ಈ ಸರ್ಕಾರದಲ್ಲಿ ಇಚ್ಛಾಶಕ್ತಿಯ ಕೊರತೆ ಇದೆ. ಇದನ್ನು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ.

ಮಾನ್ಯ ಸಭಾಪತಿಯವರೇ, ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವವರಿಗೆ ಹಕ್ಕು ಪತ್ರ ಕೊಡುವುದರ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆ ಆಯಿತು. ಮುಖ್ಯಮಂತ್ರಿಗಳು ಸದನದಲ್ಲಿದ್ದ ಸಂದರ್ಭದಲ್ಲೇ ಮಾನ್ಯ ಕಾಗೋಡು ತಿಮ್ಮಪ್ಪನವರು, 24 ಗಂಟೆಯೊಳಗೆ ಹಕ್ಕುಪತ್ರ ಕೊಡಿಸುವ ವ್ಯವಸ್ಥೆ ಮಾಡಿಸುತ್ತೇನೆ ಎಂದು ಹೇಳಿದರು. ಮಹಾತ್ಮ ಗಾಂಧೀಯವರ ಪ್ರತಿಮೆ ಬಳಿ ನೆರೆದಿದ್ದ ಜನರ ಜೊತೆ ಭಾವಚಿತ್ರ ತೆಗೆಸಿಕೊಂಡು, ಕಟ್ಟಿರುವ ಮನೆಗಳಲ್ಲಿ ಏನು ಸಮಸ್ಯೆ ಇದೆಯೋ ಅವುಗಳನ್ನು ಬಗೆಹರಿಸುತ್ತೇವೆ, ಮನೆ ಇಲ್ಲದವರಿಗೆ ಮನೆ ಕೊಡುತ್ತೇವೆ, ಈ ಕುರಿತು ಚರ್ಚೆ ಮಾಡಲು ಇಂತಹ ದಿನಾಂಕದಂದು ಬರುತ್ತೇನೆ ಎಂದು ವಸತಿ ಸಚಿವರಾದ ಮಾನ್ಯ ಕೃಷ್ಣಪ್ಪನವರು ಹೇಳಿದರೇ ಹೊರತು ಆ ನಂತರ ಅವರ ಪತ್ತೆಯೇ ಇಲ್ಲ. ಮೊದಲು, ನಾನು ದೂರವಾಣಿ ಮಾಡಿದರೆ ಸ್ವೀಕಾರ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಇಲ್ಲದೇ ಇದ್ದಿದ್ದರೆ ಬಂದ ಮೇಲೆ ನನಗೆ ದೂರವಾಣಿ ಮಾಡುತ್ತಿದ್ದರು. ಯಾವಾಗ ನಾನು ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಬೆನ್ನು ಹತ್ತಿದೆನೋ ಆವತ್ತಿನಿಂದ ನನ್ನ ದೂರವಾಣಿ ಕರೆಯನ್ನು ಸ್ವೀಕರಿಸಲೂ ಇಲ್ಲ, ವಾಪಸ್ಸು ದೂರವಾಣಿ ಕರೆ ಮಾಡಲೂ ಇಲ್ಲ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮನೆಗಳನ್ನು ನೀಡುವ ಕಾರ್ಯಕ್ರಮ ಕೇಂದ್ರ ಸರ್ಕಾರದ ಕೆಲವು ಯೋಜನೆಗಳ ಅಡಿಯೂ ಬರುತ್ತದೆ, ರಾಜ್ಯ ಸರ್ಕಾರದ ಯೋಜನೆಗಳೂ ಇವೆ. ಈ ಯೋಜನೆಗಳ ಅಡಿ ಮನೆಗಳ ಹಕ್ಕುಪತ್ರಗಳನ್ನು ವಿತರಿಸಿದ್ದಾರೆ. ಮಾನ್ಯ ವಸತಿ ಸಚಿವರು ನಿರ್ದಿಷ್ಟ ದಿನಾಂಕದಂದು ಬರುತ್ತಾರೆ ಎಂದು ಹೇಳಿ, ನಂತರ ಬರದೇ ಇದ್ದರೆ ಅದಕ್ಕೆ ಬೇರೆ ಕಾರಣಗಳು ಇರುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರುಗಳಿಗೆ ಬೇರೆ ಕಾರಣ ಇರುತ್ತದೆ ಎಂದು ಮಾನ್ಯ ಕಾಗೋಡು ತಿಮ್ಮಪ್ಪನವರು ಸಮರ್ಥನೆ ಮಾಡಲೇ ಬೇಕಾಗುತ್ತದೆ. ಬೇರೆ ಬೇರೆಯವರ ಕೈ-ಕಾಲು ಹಿಡಿಯುವುದು ಇವರೇ, ಬೇರೆಯವರ ಪರವಾಗಿ ಸದನದಲ್ಲಿ ವಾದ ಮಾಡುವವರೂ ಇವರೇ ಮತ್ತು ಮುಖ್ಯಮಂತ್ರಿಗಳ ಪರವಾಗಿ ಮಾತನಾಡುವವರೂ ಇವರೇ ಆಗಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಉಪ ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಹಿರಿಯರು, ಪ್ರಾಮಾಣಿಕರು ಎಂದು ನೀವೇ ಅವರಿಗೆ ಹೇಳುತ್ತೀರಿ. ಹಾಗಾಗಿ ಅವರೇ ಉತ್ತರ ಕೊಡಬೇಕಾಗುತ್ತದೆ ಅಲ್ಲವೇ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಅವರಿಗೆ ಉತ್ತರ ಕೊಡದೇ ಬೇರೆ ವಿಧಿ ಇಲ್ಲ. ಈ ಸರ್ಕಾರದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಇಂತಹ ಸ್ಥಿತಿ ಬಂತಲ್ಲ ಎನ್ನುವ ನೋವು ನನಗೆ ಕಾಡುತ್ತಿದೆ. ದಲಿತರ, ಹಿಂದುಳಿದವರ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿಯ ಪ್ರಶ್ನೆ ಬಂದಾಗ ಅದರಲ್ಲಿ ಪಕ್ಷಗಳು ಭಿನ್ನ ಧೋರಣೆ ತಾಳುವುದಕ್ಕಾಗುವುದಿಲ್ಲ. ಒಬ್ಬ ಮಂತ್ರಿ ಬಡವರಿಗೆ ಅನುಕೂಲವಾಗಬೇಕು ಎನ್ನುವ ದೃಷ್ಟಿಯನ್ನಿಟ್ಟುಕೊಂಡು ಕಾಲಿಗಾದರೂ ಬೀಳುತ್ತೇನೆ, ಕೆಲಸ ಮಾಡಿ ಎಂದು ಹೇಳಿದಾಗ ಎಷ್ಟು ನೋವಾಗುತ್ತದೆ ಎಂಬುದನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಈ ಅಧಿವೇಶನದ ಮುಗಿದ ಮೇಲೆ ಈ ವಿಚಾರವಾಗಿ ನಾವು ಎಲ್ಲಿ ಹೋಗಿ ಹೇಳಬೇಕು? ಹೇಳುವುದಕ್ಕೂ ನಮಗೆ ಜಾಗ ಸಿಗುವುದಿಲ್ಲ. ಜನರ ಹತ್ತಿರ ಹೋಗಿ ಹೇಳಬೇಕಾಗುತ್ತದೆ ಅಷ್ಟೆ. ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಎಂದು ಹೇಳಿ ಹೇಳಿ 5 ವರ್ಷ ಹಾಳು ಮಾಡಿಬಿಟ್ಟರು. ಮುಖ್ಯಮಂತ್ರಿಗಳ ಭಾಷಣ, ಹಾವ-ಭಾವಗಳನ್ನು ಟಿವಿಗಳಲ್ಲಿ ನೋಡಿದರೆ ಭೀಮಾ-ಅರ್ಜುನ ಎರಡೂ ಇವರೇ ಏನೋ ಎಂದು ಭಾಸವಾಗಿಬಿಡುತ್ತದೆ. ಹಿಂದುಳಿದವರಿಗೆ, ದಲಿತರಿಗೆ, ಅಲ್ಪಸಂಖ್ಯಾತರಿಗೆ ಇಷ್ಟೊಂದು ದ್ರೋಹ ಮಾಡಿರುವ ಮುಖ್ಯಮಂತ್ರಿ ಎಂದರೆ ಅವರು ಮಾನ್ಯ ಸಿದ್ಧರಾಮಯ್ಯನವರು. ಇದರಲ್ಲಿ ಅನುಮಾನ ಇಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಇಷ್ಟಾದರೂ ನಿಮ್ಮಿಬ್ಬರದೂ ಸಂಬಂಧ ಚೆನ್ನಾಗಿದೆ.

(ಸದನದಲ್ಲಿ ನಗು)

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಹೊರಟ್ಟಿಯವರೇ, ನಿಮ್ಮದು ಮತ್ತು ಮುಖ್ಯಮಂತ್ರಿಗಳ ಸಂಬಂಧ ಕೂಡ ಹಾಗೆಯೇ ಇದೆ. ಮಾನ್ಯ ಸಭಾಪತಿಯವರೇ, ಮಾನ್ಯ ಕಾಗೋಡು ತಿಮ್ಮಪ್ಪನವರನ್ನು ನೇರವಾಗಿ ಹೊಗಳುತ್ತಿದ್ದರೆ ಅವರ ಬಗ್ಗೆ ಯಾವುದೇ ಸಂಶಯ ಬರುವುದಿಲ್ಲ. ನನಗೂ ಮಾನ್ಯ ಸಿದ್ಧರಾಮಯ್ಯನವರಿಗೆ ಸ್ನೇಹ ಇದೆ, ನನಗೂ ಮಾನ್ಯ ಹೊರಟ್ಟಿಯವರಿಗೂ ಸ್ನೇಹ ಇದೆ, ಅದೇರೀತಿ ಮಾನ್ಯ ಕುಮಾರಸ್ವಾಮಿಯವರ ಜೊತೆ ಕೂಡ ಸ್ನೇಹ ಇದೆ.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ನಾವು ಮೊದಲಿನಿಂದಲೂ ಹಿಂದುಳಿದ ವರ್ಗಗಳ ಪರವಾಗಿ ಹೋರಾಟ ಮಾಡಿಕೊಂಡು ಬಂದಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಹಿಂದುಳಿದವರ ಸಂಖ್ಯೆ ಇರುವುದು ಕುರುಬ ಜನಾಂಗದಲ್ಲಿ ಎನ್ನುವುದು ಎಲ್ಲರಿಗೂ ಗೊತ್ತಿದೆ. ಮಾನ್ಯ ದೇವರಾಜ್ ಅರಸು ಅವರಂಥವರು ಮುಖ್ಯಮಂತ್ರಿಗಳಾದರು, ಮಾನ್ಯ ಬಂಗಾರಪ್ಪನಂಥವರು ಮುಖ್ಯಮಂತ್ರಿಗಳಾದರು, ಮಾನ್ಯ ಧರ್ಮಸಿಂಗ್ ಅವರಂಥವರು ಮುಖ್ಯಮಂತ್ರಿಗಳಾದರು. ಆದರೆ ಹೆಚ್ಚು ಜನಸಂಖ್ಯೆ ಇರುವ ಕುರುಬ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನಾಂಗದಿಂದ ಮುಖ್ಯಮಂತ್ರಿಗಳು ಆಗಿರಲಿಲ್ಲ. ಈಗ ಆಗಿದ್ದಾರೆ. ಅದಕ್ಕೆ ಸಂತೋಷ ಪಡಬೇಕು, ಆಶೀರ್ವಾದ ಮಾಡಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಿದ್ಧರಾಮಯ್ಯನವರು ಸದನಕ್ಕೆ ಬಂದು ಕುಳಿತುಕೊಳ್ಳುವಾಗ, ಈ ಕಡೆಯಿಂದ ಮಾನ್ಯ ವಿರೋಧ ಪಕ್ಷದ ನಾಯಕರು ಸನ್ನೆಯಲ್ಲೇ ಮಾತನಾಡುತ್ತಿರುತ್ತಾರೆ. ಅದು ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಗೊತ್ತಾಗುವುದಿಲ್ಲ.

(ಮುಂದು . . . )

190/21-2-2018/ಡಿಎಸ್-ವಿಕೆ/6.10

**ಶ್ರೀ ಕೆ.ಎಸ್.ಈಶ್ವರಪ್ಪ:-** ನಾವಾದರೂ ಹೀಗೆ ಹಾಗೆ ಮಾಡುತ್ತೇವೆ, ಇವರು ಅಲ್ಲಿ ಹೋಗಿ ಪಕ್ಕದಲ್ಲಿ ಕಿವಿಯಲ್ಲಿ ಹೇಳುತ್ತಾರೆ. ಅದೇನು ಕೆಲಸ ಮಾಡಿಸಿಕೊಳ್ಳುತ್ತಾರೆಯೋ ನನಗೆ ಗೊತ್ತಿಲ್ಲ. ನಾನು ಕೆಲಸ ಮಾಡಿಸಿಕೊಳ್ಳುವುದಿಲ್ಲ ಎಂದು ಹೇಳುವುದಿಲ್ಲ. ಯಾವ ಪಕ್ಷದಲ್ಲಾದರೂ ಇರಲಿ, ಸ್ನೇಹಕ್ಕೆ ಏನು ತೊಂದರೆ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಬಸವರಾಜ ಹೊರಟ್ಟಿಯವರು ಏನು ಹೇಳಿದರೂ ಕೆಲಸ ಆಗುತ್ತದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಕುಳಿತಿರುತ್ತಾರೆ, ಬಿಜೆಪಿ ಯವರು ಅಲ್ಲಿಗೆ ಹೋಗಿ ಕಿವಿಯಲ್ಲಿ ಹೇಳುತ್ತಾರೆ, ನಾನು ಹೋಗಿ ಹೇಳುತ್ತೇನೆ. ನಾನು ಹೇಳುವುದೇನೆಂದರೆ, ನೂರಕ್ಕೆ ನೂರರಷ್ಟು ಅವರ ನಮ್ಮ ಸ್ನೇಹ ಇದೆ. ಅದರಲ್ಲಿ ಎರಡು ಮಾತಿಲ್ಲ. ಅದರಲ್ಲೇನಿದೆ, ಅವರು ಮುಖ್ಯಮಂತ್ರಿಯಾಗಿರುವುದರಿಂದ ಅವರ ಹತ್ತಿರ ಕೆಲಸ ಮಾಡಿಸಿಕೊಳ್ಳುತ್ತೇವೆ. ನಾನು ಮಂತ್ರಿಯಾಗಿದ್ದಾಗ ಅವರು ಹೇಳಿರುವ ಎಲ್ಲಾ ಕೆಲಸವನ್ನು ಮಾಡಿದ್ದೇನೆ. ಸ್ನೇಹ ಬೇರೆ, ಪಕ್ಷ ಬೇರೆ. ನಾನೇನಾದರೂ ಕಾಂಗ್ರೆಸ್ ಪಕ್ಷಕ್ಕೆ ಹೋಗಿದ್ದೇನೆಯೇ, ಇಲ್ಲ. ಚೆನ್ನಾಗಿ ಕೆಲಸ ಮಾಡಿದ್ದರೆ, ಚೆನ್ನಾಗಿ ಮಾಡಿದ್ದಾರೆ ಎಂದು ಹೇಳುತ್ತೇವೆ. ಚೆನ್ನಾಗಿ ಕೆಲಸ ಮಾಡದಿದ್ದರೆ ಟೀಕೆ ಮಾಡುತ್ತೇವೆ. ನಾನು ಮತ್ತು ಮುಖ್ಯಮಂತ್ರಿಗಳು ದೋಸ್ತಿ ಎಂದು ಮಾನ್ಯ ಈಶ್ವರಪ್ಪನವರು ಹೇಳಿದರು. ನಾವಿಬ್ಬರು ಬಹಳ ಆತ್ಮೀಯರು, ಮುಖ್ಯಮಂತ್ರಿಯಾಗಿ ಅವರು ಕೆಲಸ ಮಾಡುತ್ತಾರೆ, ನಾನು ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡುತ್ತೇನೆಂದು ಮಾನ್ಯ ಈಶ್ವರಪ್ಪನವರು ಹೇಳಿದರು. ನಾನು ಹಾಗೆ ಮಾಡಿಲ್ಲ. ನಾನು ವಿರೋಧವನ್ನೂ ಮಾಡಿಲ್ಲ, ದೋಸ್ತಿಯೊಳಗೆ ದೋಸ್ತಿ, ಸರ್ಕಾರದಲ್ಲಿ ಸರ್ಕಾರ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅವರೇನು ಹೇಳಿದ್ದಾರೆಯೋ ಅದನ್ನೇ ನಾನು ಹೇಳಿದ್ದೇನೆ. ನಮ್ಮಿಬ್ಬರದು ಸ್ನೇಹ, ದೋಸ್ತಿ ಎಂದು ಹೇಳಿದರು. ಹಿಂದಿ, ಕನ್ನಡಕ್ಕೆ ವ್ಯತ್ಯಾಸ ಏನಾದರೂ ಇದ್ದರೆ ಹೇಳಿ? ನಾನು ಹೇಳುತ್ತಿರುವುದೇನೆಂದರೆ, ಎಲ್ಲರೂ ರಾಜಕಾರಣ ಮಾಡಬೇಕಾದರೆ ಅವರವರ ಪಕ್ಷಕ್ಕೆ ಬದ್ಧತೆ ಇರಬೇಕು. ಇಲ್ಲಿ ಇದ್ದ ಹಾಗೆ ಮಾಡಿ ಅಲ್ಲಿ ನಾಟಕ ಮಾಡಬಾರದು. Double game ಮಾಡಬಾರದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ನಮ್ಮ ಪಕ್ಷಕ್ಕೆ ನಾನು ಬಹಳ ಬದ್ಧತೆಯಿಂದ ಇದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನಾನು ನಿಮ್ಮ ಬಗ್ಗೆ ಖಂಡಿತವಾಗಿಯೂ ಹೇಳಲಿಲ್ಲ. ನೀವು ಏಕೆ ಗಂಭೀರವಾಗಿ ತೆಗೆದುಕೊಳ್ಳುತ್ತಿದ್ದೀರಿ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ನೀವು ಮಾತನಾಡುತ್ತಿರುವುದು ನನ್ನ ಬಗ್ಗೆ ಎಂದು ನಾನು ತಿಳಿದುಕೊಂಡಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ನೀವು ಆ ರೀತಿ ತಿಳಿದುಕೊಳ್ಳಬೇಡಿ. ನೀವು double game ಮಾಡುವಂತಹ ರಾಜಕಾರಣಿ ಅಲ್ಲ. ನಾನು ಇನ್ನು ಯಾವ ಭಾಷೆಯಲ್ಲಿ ಹೇಳಲಿ?

ಮಾನ್ಯ ಸಭಾಪತಿಯವರೇ, ಅನೇಕರು ಇಲ್ಲೂ ಇದ್ದ ಹಾಗೆ ಮಾಡುತ್ತಾರೆ, ಅಲ್ಲೂ ಇದ್ದ ಹಾಗೆ ಮಾಡುತ್ತಾರೆ. ಕೆಲವು ಹಳ್ಳಿಯಲ್ಲಿ ನೀವು ನೋಡಿರಬೇಕು, ಬ್ಯಾಡ್ಜ್ ಹಾಕಿಕೊಂಡಿರುತ್ತಾರೆ, ಆ ಅಭ್ಯರ್ಥಿ ಬರುತ್ತಿದ್ದ ಹಾಗೆ ಈ ಬ್ಯಾಡ್ಜ್, ಇನ್ನೊಬ್ಬ ಅಭ್ಯರ್ಥಿ ಬರುತ್ತಿದ್ದ ಹಾಗೆ ಈ ಬ್ಯಾಡ್ಜ್ ತೆಗೆದು ಇನ್ನೊಂದು ಬ್ಯಾಡ್ಜ್ ಹಾಕಿಕೊಳ್ಳುತ್ತಾನೆ. ಫ್ಲ್ಯಾಗ್ ಬದಲಾವಣೆ ಮಾಡುತ್ತಾನೆ. ನಾನು ಸ್ಪಷ್ಟವಾಗಿ ಹೇಳುವುದೇನೆಂದರೆ, ಸ್ನೇಹಕ್ಕೂ ರಾಜಕೀಯಕ್ಕೂ ಜೋಡಿಸುವುದು ಇದೆಯಲ್ಲಾ ಇದು ಬಹಳ ತಪ್ಪು. ನಾನು ಅನೇಕ ಸಲ ಮಾನ್ಯ ಬಸವರಾಜ ಹೊರಟ್ಟಿಯವರ ಜೊತೆಯಲ್ಲಿ ಮಾನ್ಯ ಕುಮಾರಸ್ವಾಮಿಯವರನ್ನು ಭೇಟಿ ಮಾಡಿದ್ದೇನೆ. ಮಾನ್ಯ ಸಿದ್ದರಾಮಯ್ಯರವರನ್ನು ನಾನು ಬಹಳ ಸಲ ಭೇಟಿ ಮಾಡಿದ್ದೇನೆ. ಹಾಗೆ ಹೇಳಿದ ತಕ್ಷಣ ಕಾಂಗ್ರೆಸ್‌ನವರು, ಬಿಜೆಪಿಯವರು, ಜೆಡಿಎಸ್‌ನವರು ಇಂಡಿಯಾ ಪಾಕಿಸ್ತಾನವೇ? ಅದು ಸಾಧ್ಯವೇ ಇಲ್ಲ.

**ಶ್ರೀ ಕಾಗೋಡು ತಿಮ್ಮಪ್ಪ:-** ಸ್ನೇಹಕ್ಕೂ ರಾಜಕಾರಣಕ್ಕೂ ಬಹಳ ವ್ಯತ್ಯಾಸ ಇದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಕಾಗೋಡು ತಿಮ್ಮಪ್ಪನವರೇ, ನೀವು ಸಭಾನಾಯಕರಾಗಿದ್ದಿರಿ. ಆವಾಗಿನಿಂದಲೂ ನಾನು ಇದ್ದೇನೆ. ನಾನು ಮತ್ತು ಸಿದ್ದರಾಮಯ್ಯನವರು 30 ವರ್ಷಗಳಿಂದಲೂ ಆತ್ಮೀಯವಾಗಿ ಬಂದಿದ್ದೇವೆ. ಆತ್ಮೀಯವಾಗಿ ಬಂದಾಗ ಪಕ್ಷಗಳು ಬೇರೆ ಬೇರೆ ಇವೆ. ಅವರು ಕಾಂಗ್ರೆಸ್ ಪಕ್ಷಕ್ಕೆ ಹೋದರು, ನಾನು ಹೋಗಿಲ್ಲ. ಅವರ ವಿಚಾರ ಬೇರೆ ನನ್ನ ವಿಚಾರ ಬೇರೆ. ಆದರೆ ಸ್ನೇಹಕ್ಕೂ ರಾಜಕಾರಣಕ್ಕೂ ಬಹಳ ವ್ಯತ್ಯಾಸ ಇದೆ. ಏನೇನೋ ಹೇಳುತ್ತಿರುತ್ತೇವೆ. ನಮ್ಮ ಸ್ನೇಹಿತರೇ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಯಾಗಿದ್ದಾರೆ, ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಎಂದು ಹೇಳುತ್ತೇವೆ. ಒಳ್ಳೆಯ ಕೆಲಸ ಮಾಡಿದಾಗ appreciate ಮಾಡುವುದು ತಪ್ಪೇ? ಒಂದೊಂದು ಸಲ ಅಪ್ರಿಶಿಯೇಟ್ ಮಾಡುತ್ತೇವೆ. ನೀವು appreciate ಮಾಡುತ್ತೀರಿ, ನಾನು ಮಾಡುತ್ತೇನೆ. ಇವತ್ತಿಗೂ ಕೆಲವರು ತತ್ವಗಳನ್ನಿಟ್ಟುಕೊಂಡಿದ್ದಾರೆ. ಮಾನ್ಯ ಈಶ್ವರಪ್ಪನವರು ಹೇಳುವುದನ್ನು ನಾನು ಒಪ್ಪುತ್ತೇನೆ, ಈಗಿನ ರಾಜಕಾರಣ ಯಾವ ರೀತಿ ಇದೆ ಎಂಬುದನ್ನು ಹೇಳಬಾರದು. ಈಗಿನ ರಾಜಕಾರಣ ಮುಂಜಾನೆ ಒಂದು ಇರುತ್ತದೆ, ಸಂಜೆ ಒಂದು ಇರುತ್ತದೆ. ಅದನ್ನು ನಾವು ನೋಡಿದ್ದೇವೆ. ಅಂತಹ ರಾಜಕಾರಣ ಮಾಡಿ ಈ ರಾಜ್ಯದಲ್ಲಿ ಸತ್ಯ ನಾಶವಾಗುವ ಸ್ಥಿತಿ ಬಂದಿದೆ. ಆದರೆ ತತ್ವಗಳೆಲ್ಲಾ ಕಡಿಮೆಯಾಗಿವೆ. ಮೊದಲಿನ ಹಾಗೆ ಇಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ನನಗೆ ಎಲ್ಲರೂ ಅವರ ಜೊತೆ ಹೋಗಿ ಎಂದು ಹೇಳಿದರೂ ಕೂಡ ನಾನು ಹೋಗಿಲ್ಲ. ನಾನು ಹೇಳಬಾರದು, ಆದರೂ ಹೇಳುತ್ತಿದ್ದೇನೆ. ನನ್ನ ಕಡೆ ಯಾರ್ಯಾರು ಬಂದಿದ್ದರು, ಏನೇನು ಹೇಳಿದರೂ ಕೂಡ ನಾನು ಪಕ್ಷ ಬಿಟ್ಟು ಹೋಗಿಲ್ಲ. ರಾಮಕೃಷ್ಣ ಹೆಗ್ಗಡೆಯವರು ಇರುವವರೆಗೆ ಅಲ್ಲೇ ಇದ್ದೆ. ತದನಂತರ ಕಾಂಗ್ರೆಸ್, ಬಿಜೆಪಿಗೆ ಹೋಗಲಿಲ್ಲ. ಜನತಾ ಪರಿವಾರದಲ್ಲೇ ಉಳಿದುಕೊಂಡಿದ್ದೇನೆ. ಮಾನ್ಯ ಈಶ್ವರಪ್ಪನವರ ಪಕ್ಷಕ್ಕೂ ಬಂದಿಲ್ಲ, ಅಲ್ಲಿಯೂ ಹೋಗಿಲ್ಲ. ಮುಂದೆ ಹೋಗುವುದೂ ಇಲ್ಲ. ಅದನ್ನು ಹೇಳಿಬಿಡುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಅವರು ಯಾವ ಪಕ್ಷಕ್ಕೆ ಹೋಗುತ್ತಾರೆಯೋ ಬಿಡುತ್ತಾರೆಯೋ ಅವರಿಗೆ ಬಿಟ್ಟದ್ದು.

ಮಾನ್ಯ ಸಭಾಪತಿಯವರೇ, ದಲಿತರು, ಹಿಂದುಳಿದವರು, ಕಡುಬಡವರು ಬಗರ್‌ಹುಕುಂ ಮಾಡುತ್ತಿರುವವರಿಗೆ ಈ ಸರ್ಕಾರದಲ್ಲಿ ಬಗರ್‌ಹುಕುಂ ಸಿಗುತ್ತದೆಯೋ ಇಲ್ಲವೋ ಎಂಬುದನ್ನು ಸ್ಪಷ್ಟವಾಗಿ ಹೇಳಿ. ನಾನು ಸುಮ್ಮನೆ ಇದನ್ನು ಎಳೆದುಕೊಂಡು ಹೋಗುವುದಿಲ್ಲ. ನಾನು ಎಷ್ಟೇ ಕೂಗಿದರೂ ಕೂಡ ನಾಳೆ ಅವರಿಗೆ ಬಗರ್‌ಹುಕುಂ ಹಕ್ಕು ಸಿಗುವುದಿಲ್ಲ. ಅದಕೋಸ್ಕರ ಈ ಎರಡು ತಿಂಗಳಿನಲ್ಲಿ ಮಾಡುವುದಕ್ಕಾಗುತ್ತದೆಯೋ ಇಲ್ಲವೋ?

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಇನ್ನು ಇಪ್ಪತ್ತು ದಿವಸ ಅಷ್ಟೆ. ಮಾರ್ಚ್ 15 ರೊಳಗೆ ನೀತಿ ಸಂಹಿತೆ ಜಾರಿಗೆ ಬರುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಅವರು ಮಾಡದಿದ್ದರೆ ಈ ರಾಜ್ಯದ ಜನರ ಮುಂದೆ ನೇರವಾಗಿ ಕ್ಷಮೆಯನ್ನು ಕೇಳಲಿ. ನಾವು ದಲಿತರಿಗೆ, ಹಿಂದುಳಿದವರಿಗೆ, ಬಡವರು ಯಾರು ಕೂಲಿ ಕೆಲಸ ಮಾಡಿಕೊಂಡು ಬಗರ್‌ಹುಕುಂ ಮಾಡಿ ಅರ್ಧ ಎಕರೆ, ಒಂದು ಎಕರೆಯಲ್ಲಿ ಗಿಡಗಂಟೆ ಕಿತ್ತುಕೊಂಡು, ಹಾವು, ಚೇಳು ಇರುವ ಕಡೆ ನೀವು ಉಳುಮೆ ಮಾಡಿಕೊಂಡು ಬಂದಿದ್ದೀರಿ, ನಿಮಗೆ ಹಕ್ಕುಪತ್ರ ಕೊಡಬೇಕೆಂದು ನನಗೆ ಬಹಳ ಆಸೆ ಇತ್ತು, ಈ ಕಾಂಗ್ರೆಸ್ ಸರ್ಕಾರದಲ್ಲಿ ಆಗಲಿಲ್ಲ. ರಾಜ್ಯದ ಜನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕ್ಷಮಿಸಿಬಿಡಿ ಎಂದು ಕ್ಷಮೆ ಕೇಳಲಿ ಬೇರೆ ದಾರಿ ಇಲ್ಲ. ಹಿಂದುಳಿದವರಿಗೆ, ದಲಿತರಿಗೆ ದ್ರೋಹ ಮಾಡಿಬಿಟ್ಟೆವು ಎಂದು ಹೇಳಿಬಿಡಲಿ.

ಇನ್ನು ಈ ಕೂಲಿ ಕಾರ್ಮಿಕರ ಕತೆಗಳು ಸರ್ಕಾರಕ್ಕೆ ಗೊತ್ತಿದೆ, ಹಿಂದೆ ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಕೂಲಿ ಕಾರ್ಮಿಕರೆಲ್ಲರೂ ಆನಂದವಾಗಿ ಕೆಲಸ ಮಾಡಿಕೊಂಡು ಇದ್ದರು. ಲಾರಿಗಳಿಗೆ ಮರಳು ಏರಿಸುವುದು, ತೆಗೆಯುವುದು, ಈ ಎಲ್ಲಾ ಕೆಲಸ ಮಾಡಿಕೊಂಡು ಇದ್ದರು. ಅದೇ ರೀತಿ ಜೆಲ್ಲಿ, ಎಲ್ಲಾ ಕ್ರಶರ್‌ಗಳಲ್ಲೂ ಕೂಡ ಜೆಲಿ ಸಿಗುತಿತ್ತು. ಅಭಿವೃದ್ಧಿ ಕೆಲಸಗಳು ಸಾಕಷ್ಟು ಆಯಿತು. ಮರಳು ಅಷ್ಟೆ, ಈಗಿನ ಕತೆ ಏನು?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಕಾಂಗ್ರೆಸ್‌ನಲ್ಲಿ ಬಹಳಷ್ಟು ಜನ ಶಾಸಕರು ಅಧಿಕಾರದಲ್ಲಿದ್ದಾರಲ್ಲಾ ಅವರ ಮಕ್ಕಳೆಲ್ಲಾ ನಮ್ಮ ಕಡೆಯಲ್ಲಿ ಮರಳು ದಂಧೆ ಮಾಡುತ್ತಿದ್ದಾರೆ. ಅವರು ಬಿಟ್ಟು ಬೇರೆಯವರು ಮಾಡುವ ಹಾಗಿಲ್ಲ. ಬಹಳ ದೊಡ್ಡ ಹರಿಶ್ಚಂದ್ರರು ಯಾರಿದ್ದಾರೆ ಅವರೆಲ್ಲಾ ಮಾಡುತ್ತಿದ್ದಾರೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಲೈಸೆನ್ಸ್ ನವೀಕರಣ ಮಾಡಿಲ್ಲ. ಮರಳು ದಂಧೆ ನಡೆಯುತ್ತಿರುವುದು ಗೊತ್ತಿದ್ದರೂ ಕೂಡ ಮರಳು ನೀತಿಯನ್ನು ಮಾಡಿಲ್ಲ. CRZ (Coastal Regulation Zone) ಕೂಡ ಮಾಡಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ royalty ಮೂಲಕ ಸಂಗ್ರಹವಾಗಿರುವ ಹತ್ತು ಪಟ್ಟು ಹಣ penalty ಯಿಂದ ಸಂಗ್ರಹವಾಗಿದೆ ಎಂದರೆ ಅನಧಿಕೃತವಾಗಿ ಮರಳು ಲಾರಿ ಸಾಗಿಸಿದ್ದಾರೆ ಎಂಬುದು ಗೊತ್ತಾಗುತ್ತದೆ. ಇವತ್ತು 6,000-8000 ಕ್ಕೆ ಒಂದು ಲೋಡ್ ಇದ್ದದ್ದು 50,000-60,000 ರೂಪಾಯಿ ಆಗಿದೆ. ಹೊರಗಡೆಗೆ export ಮಾಡುತ್ತಾರೆ. ನಿಲ್ಲಿಸಿ ಎಂದು ಹೇಳಿದರೆ ಕೇಳುವುದಿಲ್ಲ. ನೀತಿಯನ್ನು ಮಾಡುವುದಿಲ್ಲ. ಅಧಿಕಾರಿಗಳ ಮೇಲೆ ಗಾಡಿ ಚಲಾಯಿಸುತ್ತಾರೆ. ಸರ್ಕಾರ ನೀತಿಯನ್ನು ಮಾಡಿದೆಯೇ? ಲೈಸೆನ್ಸ್ ನವೀಕರಣ ಮಾಡಿದ್ದಾರೆಯೇ? ಹೊಸ ಲೈಸೆನ್ಸ್ ಕೊಟ್ಟಿದ್ದಾರೆಯೇ? ಈಗ ಏಕೆ 60,000 ರೂಪಾಯಿ ಆಯಿತು? ಏಕೆ ಅಧಿಕಾರಿಗಳ ಮೇಲೆ ಗಾಡಿ ಚಲಾಯಿಸುವ ಪ್ರವೃತ್ತಿ ಪ್ರಾರಂಭವಾಯಿತು? ಇದರಿಂದ ಸಾಮಾನ್ಯ ಜನರು ಮನೆ ಕಟ್ಟುವುದಕ್ಕೆ ಬಹಳಷ್ಟು ಅನಾನುಕೂಲವಾಗಿದೆ. ಇದರ ಬಗ್ಗೆ ಸರ್ಕಾರಕ್ಕೆ ಜವಾಬ್ದಾರಿಯಿಲ್ಲವೆ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಜಿಲ್ಲಾ ಪಂಚಾಯಿತಿ ಸಭೆಯಲ್ಲಿ ಉಸ್ತುವಾರಿ ಸಚಿವರಾದ ಕಾಗೋಡು ತಿಮ್ಮಪ್ಪನವರು ಎಂತಹ ಪದ ಬಳಸಿದರು ಎಂದರೆ ಡಿಸಿ, ಎಸ್‌ಪಿ ಯವರ inefficiency ಯಿಂದಲೇ ಈ ರೀತಿಯೆಲ್ಲಾ ಆಗುತ್ತಿರುವುದು ಎಂದು ನೇರವಾಗಿ ಹೇಳಿರುವುದು ಪತ್ರಿಕೆಗಳಲ್ಲೂ ಬಂತು. ಲೂಟಿ ಆಗುತ್ತಿರುವುದು ಲೆಕ್ಕವಿಲ್ಲ. ನಮ್ಮ ಸರ್ಕಾರವಿದ್ದಾಗ ಮರಳು, ಜೆಲ್ಲಿ ಸಿಗುತಿತ್ತು. ಈಗ ಐದು ವರ್ಷದಲ್ಲಿ ಏಕೆ ಸಿಗುತ್ತಿಲ್ಲ? ಆ ಕೆಲಸ ಮಾಡುತ್ತಿದ್ದಂಥವರಿಗೆ, ಕೂಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಂಥವರಿಗೆ ಕೂಲಿ ಇಲ್ಲ, ತಿನ್ನುವುದಕ್ಕೆ ಅನ್ನ ಇಲ್ಲ, ಅಭಿವೃದ್ಧಿ ಕೆಲಸಗಳು ಯಾವುದೂ ಆಗುತ್ತಿಲ್ಲ. ಯಾರಾದರೂ ಒಂದು ಮನೆ ಕಟ್ಟಿಕೊಳ್ಳಬೇಕೆಂದರೆ ನಾವು bank loan ಕೊಡಿಸಬಬಹುದು. ಮರಳು ಕೊಡಿಸುವುದಕ್ಕಾಗುವುದಿಲ್ಲ. ಐದು ವರ್ಷಗಳಲ್ಲಿ ಒಂದು ನೀತಿಯನ್ನು ತರುವುದಕ್ಕಾಗಲಿಲ್ಲವೇ? ನೀತಿ ತರುವುದಕ್ಕಾಗಲಿಲ್ಲ ಅಲ್ಲ, ನೀತಿ ತಂದರೆ ನನಗೆ ಸಿಗಬೇಕಾಗಿರುವ ಲಂಚ ಸಿಗುವುದಿಲ್ಲ, ಮಾನ್ಯ ಬಸವರಾಜ ಹೊರಟ್ಟಿಯವರು ನೇರವಾಗಿ ಹೇಳಿದರು. ಅವರ ಮಕ್ಕಳು ಮರಿ ಉದ್ಧಾರವಾಗುತ್ತಾರೆಯೇ? ಬಡವರು ಮನೆ ಕಟ್ಟಿಕೊಳ್ಳಬೇಕೆಂದರೆ ಫೋನ್ ಮಾಡುತ್ತಾರೆ. ಸರ್, ಮರಳಿಗೆ 40,000 ರೂಪಾಯಿ ಕೇಳುತ್ತಿದ್ದಾರೆ, ಹಣ ಎಲ್ಲಿಂದ ತರಲಿ ಎಂದು ಹೇಳುತ್ತಾರೆ. ಹೀಗೆ ಲೂಟಿ ಆಗುತ್ತಿರುವಂತಹ ಸಂದರ್ಭದಲ್ಲಿ, ಕೆಲವು ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆ. ಉಡುಪಿ ಜಿಲ್ಲೆಯ ಡಿಸಿ ಮಹಿಳೆ, ಎಸಿ ಮಹಿಳೆ. ಇವರಿಬ್ಬರು ರೈಡ್ ಮಾಡುವುದಕ್ಕೆ ಹೋದರೆ ಅವರ ಮೇಲೆ ಹಲ್ಲೆ ಮಾಡುತ್ತಾರೆ. ಎಸಿ ಮತ್ತು ಡಿಸಿ ಯಾವುದಾದರೂ ಸರ್ಕಾರದಲ್ಲಿ ಪೋಲೀಸ್ ಠಾಣೆಗೆ ಹೋಗಿ ನನ್ನ ಮೇಲೆ ಹಲ್ಲೆ ನಡೆದಿದೆ ಎಂದು ದೂರು ಕೊಟ್ಟಿರುವುದನ್ನು ಕೇಳಿದ್ದೀರಾ? ಇಲ್ಲಿ ಸರ್ಕಾರ ಇದೆಯೇ?

191/21-02-2018/bkp/vk/6-30

**ಶ್ರೀ ಕೆ.ಎಸ್.ಈಶ್ವರಪ್ಪ(ಮುಂದು. . .)**

ನಾನು ಏತಕ್ಕೆ ಈ ಎಲ್ಲಾ ಅಂಶಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಬಡವರಿಗೆ, ಹಿಂದುಳಿದವರಿಗೆ, ಅಲ್ಪಸಂಖ್ಯಾತ ವರ್ಗದವರಿಗೆ ಅನ್ಯಾಯವಾಗುತ್ತಿದೆ. ನಾವು ಬಡವರಿಗೆ, ಹಿಂದುಳಿದವರಿಗೆ, ಅಲ್ಪಸಂಖ್ಯಾತ ವರ್ಗದವರಿಗೆ ನ್ಯಾಯ ಕೊಡಿಸುತ್ತೇನೆಂದು ಹೇಳಿ ಸುಮಾರು 25 ವರ್ಷಗಳಿಂದ ಶ್ರೀಯುತ ಸಿದ್ಧರಾಮಯ್ಯನವರು ಹೇಳಿಕೊಂಡು ಬಂದರು. ನಾವೆಲ್ಲರೂ ನಿಜಕ್ಕೂ ಸಹ ಅವರು ಪ್ರಮಾಣಿಕ ಪ್ರಯತ್ನವನ್ನು ಮಾಡುತ್ತಾರೆಂದು ತಿಳಿದುಕೊಂಡರೆ 25 ವರ್ಷಗಳ ಕಾಲ ಹೇಳಿಕೊಂಡು ಬಂದಿದ್ದು ಡ್ರಾಮ, ಆ ದಲಿತರಿಗೆ, ಹಿಂದುಳಿದವರಿಗೆ ಮಾಡಲಾದ ಮೋಸ. ಕೊಳಚೆ ಪ್ರದೇಶದ ಬಗ್ಗೆ ಈಗ ಸದನದಲ್ಲಿ ಪ್ರಸ್ತಾಪ ಮಾಡಿದರು. ನಾವು ಹಕ್ಕು ಪತ್ರ ಕೊಡುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಕ್ಲಿಯರ್ ಆಗಿ ಹೇಳಲಿ. ಈಗ 5 ಲಕ್ಷ ರೂಪಾಯಿಗಳ ಒಂದೊಂದು ಮನೆ ಬಂದಿದೆ. ಒಂದು ಮನೆಗೆ ಕೇಂದ್ರ ಸರ್ಕಾರದ ಸಬ್ಸಿಡಿ ಮತ್ತು ರಾಜ್ಯ ಸರ್ಕಾರದ ಸಬ್ಸಿಡಿ ಇರುತ್ತದೆ.

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಕೊಳಚೆ ಪ್ರದೇಶದಲ್ಲಿ 94C and 94CC ಪ್ರಕಾರ ಹಕ್ಕುಪತ್ರ ಕೊಡಲಿಕ್ಕೆ ನಾವು ಅವಕಾಶ ಮಾಡಿಕೊಟ್ಟಿದ್ದೇವೆ. ಸಮಯ ಆಗಿತ್ತು. ಮತ್ತೆ, 6 ತಿಂಗಳ ಕಾಲಾವಕಾಶವನ್ನೂ ಸಹ ಕೊಟ್ಟಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಸರ್ಕಾರಿ ಭೂಮಿ, ಖಾಸಗಿ ಭೂಮಿ. . ಎಲ್ಲಾ ಭೂಮಿಯ ಹಣೆಬರಹವೂ ಇಷ್ಟೆ. ಶಿವಮೊಗ್ಗ ನಗರದಲ್ಲಿ ಮತ್ತು ಬೇರೆ ಬೇರೆ ಜಿಲ್ಲೆಗಳಿಗೆ ಹೋಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನೋಡಿದಂತಹ ಸಂದರ್ಭದಲ್ಲಿ ನನಗೆ ಈ ವಿಚಾರದಲ್ಲಿ ಸಾಕಾಗಿ ಹೋಗಿದೆ. ಅಲ್ಲಿ ಹೋದಂತಹ ಸಂದರ್ಭದಲ್ಲಿ ಅವರು ಏನು ಹೇಳುತ್ತಾರೆಂದರೆ " ನಮಗೆ ಒಂದು ಹಕ್ಕುಪತ್ರ ಕೊಡಿಸಿ ಸಾಕು" ಎಂದು ಹೇಳುತ್ತಾರೆ. ಸರ್ವೆ ಮಾಡಲಿಕ್ಕೆ ಜನರಿಲ್ಲದೇ ಸರ್ವೆ ಮಾಡಲಿಕ್ಕೆ ಆಗುವುದಿಲ್ಲ. ಅಲ್ಲಿ ಸಂಬಂಧಪಟ್ಟ ಎಂಎಲ್ಎ ರವರೇ ಮೀಟಿಂಗ್ ಮಾಡಬೇಕು. ಯಾರು ಹಕ್ಕುಪತ್ರ ಕೊಡಬೇಕು? ಬರಿ ಕಾನೂನು ಮಾಡಿಕೊಂಡು ಕುಳಿತರೆ ಎಲ್ಲಾ ಕೆಲಸ ಆಗುತ್ತದೆಯೇ? ಈ ಬಗ್ಗೆ ಮೀಟಿಂಗ್ ಮಾಡುತ್ತೇವೆಂದು ಸಚಿವರು ಹೇಳಿದರು.

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಈ ನಿಟ್ಟಿನಲ್ಲಿ ನಾವು ಆಶ್ರಯ ಸಮಿತಿಯನ್ನು ಮಾಡಿದ್ದೇವೆ. ಹಿಂದೆ ಮಾನ್ಯ ವಿರೋಧ ಪಕ್ಷದ ನಾಯಕರ ಸರ್ಕಾರ ಇದ್ದಂತಹ ಸಮಯದಲ್ಲೂ ಆಶ್ರಯ ಸಮಿತಿ ಇತ್ತು, ಈಗಲೂ ಇದೆ. ಆಶ್ರಯ ಸಮಿತಿಗೆ ವಿಧಾನಸಭಾ ಸದಸ್ಯರು ಅಧ್ಯಕ್ಷರು ಇರುತ್ತಾರೆ. ಅವರು ಬೇಡವೆಂದರೆ, ಅವರ ಪರವಾಗಿ ಬೇರೆಯವರು ಅಧ್ಯಕ್ಷರಾಗಿ ಕೆಲಸ ಮಾಡುತ್ತಾರೆ. ಇದು ಇರುವಂತಹ ವ್ಯವಸ್ಥೆ. ಈ ಸಂಬಂಧ ಅವರೇ ಅರ್ಜಿಗಳನ್ನು ಕರೆಯುತ್ತಾರೆ. ಅವರೇ ನಿವೇಶನಗಳನ್ನು ಹಂಚಿಕೆ ಮಾಡುತ್ತಾರೆ. ಜಿಲ್ಲಾಧಿಕಾರಿಯವರಿಗೆ 10 ಎಕರೆಯವರೆಗೆ ಜಮೀನು ತೆಗೆದುಕೊಂಡು ನಿವೇಶನಗಳನ್ನು ಕೊಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ನಮ್ಮ ಸಾಗರದಲ್ಲಿಯೇ ಸುಮಾರು 15 ಎಕರೆ ಜಮೀನು ತೆಗೆದುಕೊಂಡು 200-300 ನಿವೇಶನಗಳನ್ನು ಹಂಚಿಕೆ ಮಾಡಿದ್ದೇನೆ. ಈ ನಿಟ್ಟಿನಲ್ಲಿ ಎಲ್ಲರೂ ಕೆಲಸ ಮಾಡಿದರೆ ಆಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಕೆಲಸ ಮಾಡಿದರೆ ಆಗುತ್ತದೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದು, ಕೆಲಸ ಮಾಡಿದರೆ ಆಗುತ್ತದೆ ಎಂದು ನಾನು ಸಹ ಹೇಳುತ್ತೇನೆ. ಇಲ್ಲಿ ಸಂಭಾಷಣೆ ಮಾಡಿದರೆ ಸರಿ ಹೋಗುವುದಿಲ್ಲ. ಗೋಡೆ ಮೇಲೆ ಬರೆದಿಟ್ಟರೆ ಉಪಯೋಗವಿಲ್ಲ. ಶಾಸಕರು ಮೀಟಿಂಗ್ ಮಾಡುವುದಿಲ್ಲ. ಅದನ್ನು ಬಿಟ್ಟು ಚುನಾವಣೆ ಬಂದಾಗ 50-100-200 ರೂಪಾಯಿಗಳನ್ನು ಕೊಟ್ಟರೆ ಸಾಕು, ಏತಕ್ಕೆ ಹಕ್ಕುಪತ್ರಗಳನ್ನು ಕೊಡಬೇಕೆನ್ನುವುದಾಗಿದೆ. ಇವರು ಬಡತನದಲ್ಲಿ ಬಿದ್ದು ಸಾಯಲಿ ಎಂದು ಈ ರೀತಿಯಲ್ಲಿ ಮಾಡುತ್ತಿದ್ದಾರೆ. ಕಂದಾಯ ಸಚಿವರು ಸಾಗರದಲ್ಲಿ ಕೊಟ್ಟಿದ್ದಾರೆ, ನಿಜ. ಆದರೆ, 224 ಕ್ಷೇತ್ರಗಳ ಪೈಕಿ ಎಷ್ಟು ಕ್ಷೇತ್ರಗಳಲ್ಲಿ ನಿವೇಶನಗಳನ್ನು ಕೊಟ್ಟಿದ್ದಾರೆಂದು ಸಚಿವರು ನೋಡಿದ್ದಾರೆಯೇ, ಅದರ ಬಗ್ಗೆ ಅಂಕಿ-ಅಂಶಗಳು ಇದೆಯೇ? ಎಲ್ಲರೂ ಏತಕ್ಕೆ ನಿವೇಶನಗಳನ್ನು ಕೊಡುತ್ತಿಲ್ಲ? ನಾನು ಶಿವಮೊಗ್ಗಕ್ಕೆ ಬರುತ್ತೇನೆ, ಕಾರ್ಪೋರೇಷನ್ ಮೀಟಿಂಗ್ ಮಾಡುತ್ತೇನೆ, ವಿಶೇಷ ಸಭೆ ಮಾಡುತ್ತೇನೆ, ಆ ಕೊಳಚೆ ಪ್ರದೇಶವನ್ನು ನೋಡುತ್ತೇನೆ, ಮರಳು ವಿಚಾರವನ್ನು ನೋಡುತ್ತೇನೆಂದು ಸಚಿವರು ಹೇಳಿದರು. ಆದರೆ, ಸಚಿವರು ಬರಲಿಕ್ಕೆ ಆಗಲಿಲ್ಲ. ಈ ಎಲ್ಲಾ ವಿಷಯಗಳನ್ನು ತಮ್ಮ ಗಮನಕ್ಕೆ ಏತಕ್ಕೆ ತರುತ್ತಿದ್ದೇನೆಂದರೆ, ನಾಳೆ ಮತ್ತೆ ಚುನಾವಣೆ ಬಂದಾಗ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರ ಎನ್ನುವಂತಹ ಪದಗಳನ್ನು ನೀವು ಬಳಸಬೇಡಿ ಎಂದು ಹೇಳಲಿಕ್ಕೆ ಬಯಸುತ್ತೇನೆ. ಈಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿರುವಂತಹ ಮೋಸ ಸಾಕು. ಈ ವಿಚಾರದಲ್ಲಿ ಸರ್ಕಾರದವರು ಮಾಡಿರುವಂತಹ ಮೋಸಕ್ಕೆ ದೇವರು ಸಹ ಕ್ಷಮಿಸುವುದಿಲ್ಲ. 5 ವರ್ಷಗಳಲ್ಲಿ ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಎಂದು ಹೇಳಿ ಪ್ರತಿಯೊಂದು ವರ್ಷದ ಬಜೆಟ್‌ನಲ್ಲಿಯೂ ಹಾಕಿದ್ದಾರೆ. ಇವರುಗಳಿಗೆ ಅಷ್ಟು ಕೆಲಸ ಮಾಡುತ್ತೇವೆ, ಇಷ್ಟು ಕೆಲಸ ಮಾಡುತ್ತೇವೆಂದು ಹೇಳಲಾಯಿತು. ಎಷ್ಟು ಕೆಲಸ ಮಾಡಲಾಗಿದೆ? ಒಂದು ಹಕ್ಕುಪತ್ರ ಕೊಡಲಿಲ್ಲ, ಮರಳು ಕೊಡಲಿಲ್ಲ, ಒಂದು ರಿಪೋರ್ಟ್ ಸಹಿತ ಕೊಡಲಿಲ್ಲ. ಇವತ್ತು ಈ ಸದನದಲ್ಲಿ ಇವತ್ತು ಸದನದಲ್ಲಿ ಶ್ರೀಯುತ ಸಿದ್ಧರಾಮಯ್ಯನವರು ಇರುತ್ತಾರೆಂದು ತಿಳಿದುಕೊಂಡಿದ್ದೆ. ಇದ್ದಿದ್ದರೆ ಚೆನ್ನಾಗಿತ್ತು. ಏಕೆಂದರೆ, ಶ್ರೀಯುತ ಸಿದ್ಧರಾಮಯ್ಯನವರು ಎಲ್ಲರಿಗಿಂತಲೂ ಜಾಸ್ತಿಯಾಗಿ ಸುಮಾರು 25 ವರ್ಷಗಳಿಂದ ಹೇಳಿಕೊಂಡು ಬಂದಿರುತ್ತಾರೆ. ಬಾಯಿಯಿಂದ ನಾಲಿಗೆ ತುದಿ ಬಿಟ್ಟರೆ ಸಾಕು, ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಎಂದು ಹೇಳಿಕೊಂಡು ಬಂದಿದ್ದಾರೆ. 5 ವರ್ಷಗಳ ಕಾಲ ನಿಮ್ಮ ಕೈಗೆ ಅಧಿಕಾರವನ್ನು ಕೊಟ್ಟಿದ್ದು, ಏನು ಕಡಿದು ಕಟ್ಟೆ ಹಾಕಿದ್ದೀರಿ ಎಂದವರನ್ನು ಕೇಳಬಹುದಿತ್ತು. ಆಗ ಅವರು ಉತ್ತರ ಕೊಡಬೇಕಾಗಿತ್ತು ಅಲ್ಲವೇ?

**ಶ್ರೀ ಕಾಗೋಡು ತಿಮ್ಮಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಂತಹ ಸಮಯದಲ್ಲಿ ಕಂದಾಯ ಸಚಿವರು ಸಹ ಸದನದಲ್ಲಿ ಇರುತ್ತಾರೆ, ನೋಡೋಣ. ಅವರು ಏನು ಉತ್ತರ ಕೊಡುತ್ತಾರೆಂದು ನೋಡಿ, ಉಡಾಫೆಯಾಗಿ... ಓ ನೀವು ಮಾಡಲಿಲ್ಲವೇ, ನೀವು ಮಾಡಿದ್ದು ನಮಗೆ ಗೊತ್ತಿಲ್ಲವೇ? ಯಡಿಯೂರಪ್ಪ ಜೈಲಿಗೆ ಹೋಗಲಿಲ್ಲವೇ? ಈ ರೀತಿಯಾಗಿ ಉತ್ತರ ಕೊಡುತ್ತಾರೆ.

**ಶ್ರೀ ಶ್ರೀನಿವಾಸ ಮಾನೆ:-** ಅವರು ಮಾತನಾಡುವುದನ್ನು ನೀವು ಹೇಳುತ್ತಿದ್ದೀರಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಅದೇ ಶೈಲಿ, ಅದೇ ಉತ್ತರ. ಬೇಕಾದರೆ ನಾಳೆ ನೋಡಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಹೈಕೋರ್ಟ್‌ನವರು ಅದನ್ನು ಹೇಳಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು 5 ವರ್ಷಗಳ ಕಾಲ ಇದನ್ನೇ ಹೇಳಿಕೊಂಡು ಬಂದಿದ್ದಾರೆ, ಮರಳು ಕೊಡಿ, ಭ್ರಷ್ಟಾಚಾರವನ್ನು ನೀವು ಮಾಡಲಿಲ್ಲವೇ, ನೀವು ಜೈಲಿಗೆ ಹೋಗಲಿಲ್ಲವೇ? ಅದಕ್ಕೋಸ್ಕರ ನಾನು ಇಷ್ಟೇ ಹೇಳಲಿಕ್ಕೆ ಬಯಸುತ್ತೇನೆ. ಶ್ರೀಯುತ ಸಿದ್ಧರಾಮಯ್ಯನವರ ನೇತೃತ್ವದ ಈ ಸರ್ಕಾರದ ಬಗ್ಗೆ ಹೇಳುತ್ತಿದ್ದೇನೆ. ಹಿಂದೆ ಬಂಗಾರಪ್ಪನವರ ನೇತೃತ್ವದ ಸರ್ಕಾರದ ಅವಧಿಯಲ್ಲಾಗಲಿ, ಇನ್ನಿತರರ ನೇತೃತ್ವದ ಸರ್ಕಾರಗಳ ಅವಧಿಯಲ್ಲಿ ಆಗಲಿ, ಏನೇನು ಪ್ರಯತ್ನಗಳಾಗಿ ಜನರಿಗೆ ಸ್ವಲ್ಪ ಸಹಾಯ ಸಿಕ್ಕಿದೆ. ಸಣ್ಣ ಸಣ್ಣ ದೇವಸ್ಥಾನಗಳಿಗೆ, ಅಂದರೆ ಮಾರಮ್ಮ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚೌಡಮ್ಮ ದೇವಸ್ಥಾನಗಳಿಗೆ ಅಧಿಕಾರಿಗಳು ಸ್ವಲ್ಪ ಸಹಾಯಧನವನ್ನು ಕೊಡುತ್ತಾ ಬಂದರು. ಆದರೆ, ಈ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಬಂದ ಮೇಲೆ ಅವೆಲ್ಲದಕ್ಕೂ ತಿಲಾಂಜಲಿ ಕೊಟ್ಟರು. ಆದ್ದರಿಂದ, ನಾನು ಈ ವಿಚಾರದಲ್ಲಿ ತುಂಬಾ ನೊಂದು ಹೇಳುತ್ತಿದ್ದೇನೆ. ಈಗ ನಾನು ಸರ್ಕಾರಕ್ಕೆ ಏನು demand ಮಾಡಲಿ? ಏಕೆಂದರೆ, ಸರ್ಕಾರದ ಅವಧಿ ಮುಗಿದು ಹೋಗಿದೆ. ಇವರನ್ನು ನಾನು ಈಗ ಏನು ಕೇಳಬೇಕು? ಅದಕ್ಕೆ ಎರಡು ತಿಂಗಳ ಅವಧಿಗೆ ಬಜೆಟ್. ಸಾಲ ಮಾಡಿದ್ದು, ನಾನು ಮಾಡಬಾರದ ಸಾಲವನ್ನು ಮಾಡಿದ್ದೇನೆಂದು ಪಟ್ಟಿಯನ್ನು ತೋರಿಸಿದರು. ನಿಮಗೆ ಬಜೆಟ್ ಮಾಡುವಂತಹ ಯೋಗ್ಯತೆಯೂ ಇಲ್ಲ, ಹಕ್ಕು ಇಲ್ಲ. ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರ ಎನ್ನುವ ಪದವನ್ನು ಬಳಸಲಿಕ್ಕೆ ನಿಮಗೆ ಯೋಗ್ಯತೆಯೇ ಇಲ್ಲ. ಹೀಗಾಗಿ, ಈ ಸರ್ಕಾರ ರಾಜ್ಯಪಾಲರ ಮೂಲಕ ಸುಳ್ಳು ಹೇಳಿಸಿ, ಹಿಂದುಳಿದವರಿಗೆ, ದಲಿತರಿಗೆ, ಅಲ್ಪಸಂಖ್ಯಾತರಿಗೆ ಅತಿ ಹೆಚ್ಚು ಮೋಸ ಮಾಡಿರುವ ಸರ್ಕಾರ ಯಾವುದು ಎಂದರೆ ಶ್ರೀಯುತ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ. ನಾನು ಒಂದು ವಿಚಾರವನ್ನು ಒತ್ತಾಯ ಮಾಡಲಿಕ್ಕೆ ಬಯಸುತ್ತೇನೆ. ಇನ್ನು ಬೇರೆ ದಾರಿಯಿಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ 25 ವರ್ಷಗಳಿಂದ ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರ ಎಂದು ಹೇಳಿಕೊಂಡು ನಕಲಿ ನಾಟಕ ಮಾಡಿಕೊಂಡು ನಾನು ಬಂದೆ, ಶ್ರೀಯುತ ನರೇಂದ್ರ ಮೋದಿಯವರು ಬಂದ 3 ವರ್ಷಗಳಲ್ಲಿಯೇ ಶಾಶ್ವತ ಹಿಂದುಳಿದ ವರ್ಗದ ಆಯೋಗಕ್ಕೆ ಸಂವಿಧಾನ ಬದ್ಧವಾದ ಹಕ್ಕನ್ನು ಕೊಟ್ಟಿದ್ದಾರೆ, ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ, ಹಿಂದುಳಿದವರಿಗೆ, ದಲಿತರಿಗೆ, ಅಲ್ಪಸಂಖ್ಯಾತರಿಗೆ ಕರ್ನಾಟಕ ರಾಜ್ಯದಲ್ಲಿ ನಾನು ಮೋಸ ಮಾಡಿದ್ದೇನೆ, ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ನನ್ನನ್ನು ಕ್ಷಮಿಸಿ ಎಂದು ಕೇಳಬೇಕೆಂದು ಒತ್ತಾಯ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

**ಉಪಸಭಾಪತಿಯವರು:-** ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಪ್ರಸ್ತಾವಕ್ಕೆ ಸಂಬಂಧಪಟ್ಟಂತೆ ಸದಸ್ಯರಿಂದ ಚರ್ಚೆ ಮುಕ್ತಾಯಗೊಂಡಿದೆ. ನಾಳೆ ಮುಖ್ಯಮಂತ್ರಿಗಳಿಂದ ಉತ್ತರ. ಹಾಗೆಯೇ ಮಾನ್ಯ ಸದಸ್ಯರಾದ ಶ್ರೀಯುತ ಬಸವರಾಜ ಹೊರಟ್ಟಿಯವರ ಗಮನಕ್ಕೆ ಒಂದು ವಿಚಾರ. ಮಾನ್ಯ ಸಚಿವರು ಸದನಕ್ಕೆ ಬರಲಿಲ್ಲ. ನಾಳೆ ಮಾನ್ಯ ಸದಸ್ಯರ ವಿಷಯಕ್ಕೆ ಸಂಬಂಧಪಟ್ಟಂತೆ ಕಾಲಾವಕಾಶವನ್ನು ಕೊಡಲಾಗುವುದು.

<u>**10.ಪ್ರಕಟಣೆ**</u>

**ವಿಧಾನಸಭೆಯಿಂದ ಅಂಗೀಕೃತವಾಗಿರುವಂತಹ ವಿಧೇಯಕಗಳ ಮಂಡನೆ.**

ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಗಳ ನಿಯಮ 104 ರ ಮೇರೆಗೆ ವಿಧಾನಸಭೆಯು ದಿನಾಂಕ: 21-

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

02-2018 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆ ಎಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನಪರಿಷತ್ತಿನ ಸಹಮತಿಯನ್ನು ನೀಡಬೇಕೆಂದು ಕೋರಿರುತ್ತಾರೆ.

1. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2018
2. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ, 2018

ಸದನವನ್ನು ನಾಳೆ ಬೆಳಗ್ಗೆ 10-00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 28 ನಿಮಿಷಕ್ಕೆ ಮುಕ್ತಾಯವಾಗಿ ನಾಳೆ ಬೆಳಗ್ಗೆ 10-00 ಗಂಟೆಗೆ ಸೇರಲು ತೀರ್ಮಾನಿಸಿತು)**

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "